KA / BG-GPO /2515 / WPP-47 / 2009-2011



# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೪೪ | ಬೆಂಗಳೂರು, ಗುರುವಾರ, ಆಗಸ್ಟ್ ೨೦, ೨೦೦೯ ( ಶ್ರಾವಣ ೨೯, ಶಕವರ್ಷ ೧೯೩೧) | ಸಂಚಿಕೆ ೩೪ |
|---|---|---|

## ವಿಷಯಸೂಚಿ

## ವಿಶೇಷ ರಾಜ್ಯಪತ್ರಗಳು

| ಸಂಖ್ಯೆ | ದಿನಾಂಕ | ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ |
|---|---|---|
| 650 | 10.8.2009 | ಸಂ. ಆಇ 1001 ವೆಚ್ಚ-12/09, ದಿ. 1.8.2009 – ವೆಚ್ಚ ಸುಧಾರಣಾ ಆಯೋಗಕ್ಕೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 651 | 10.8.2009 | No. KLC/LGC/263/110th Session/2009, Dt. 30.7.2009 - ಕ.ವಿ.ಪ. 110ನೇ ಅಧಿವೇಶನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುವ ಬಗ್ಗೆ. |
| 652 | 10.8.2009 | No. HFW 80 MPS 2009, Dt. 18.5.2009 - Addl. Intake and Seat Matix of M.Sc Nursing and M.P.T. Courses. |
| 653 | 10.8.2009 | No. HFW 99 MPS 2009, Dt. 11.6.2009 - Seat Matrix of Post Graduate Super Speciality Courses. |
| 654 | 10.8.2009 | No. HFW 473 MPS 2009, Dt. 20.7.2009 - Intake of I MBBS Seats & distribution of Govt. Seats & Mgt. Seats. |
| 655 | 10.8.2009 | No. HFW 99 MPS 2009, Dt. 10.7.2009 - Addl. Seat Matrix of Post Graduate Super Speciality Courses 2009-10. |
| 656 | 10.8.2009 | No. HFW 74 MPS 2009, Dt. 16.6.2009 - Determination of intake & Publiccation of the revised seat matrix. |
| 657 | 10.8.2009 | ಸಂ. ಸಿಆಸುಇ 37 ಚುನಾಹ 2009, ದಿ. 10.8.2009 – ವಿ.ಉ.ಚು. 2009 – ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿ ಉಪಯೋಗಿಸು ಬಗ್ಗೆ. |
| 658 | 10.8.2009 | ಸಂ. ಸಿಐ 290 ಎಸ್‌ಪಿಕ್ಯೂ 2009, ದಿ. 7.8.2009 – ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಭೂಸ್ವಾಧೀನ ಕುರಿತು. |
| 659 | 10.8.2009 | ಸಂ. ಸಾರಿಇ 226 ಸಾಇಪ 2008, ದಿ. 6.8.2009 – ದ.ಕ.ಜಿಲ್ಲೆಯ ಮಂಗಳೂರು ವ್ಯಾಪ್ತಿಯಲ್ಲಿ ಮಜಲು ವಾಹನ ಸೇವೆ ಒದಗಿಸುವ ಕುರಿತು. |
| 660 | 10.8.2009 | ಸಂ. ಸಾರಿಇ 227 ಸಾಇಪ 2008, ದಿ. 6.8.2009 – ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಮಜಲು ವಾಹನ ಸೇವೆ ಒದಗಿಸುವ ಕುರಿತು. |
| 661 | 10.8.2009 | ಸಂ. ಆಇ 848 ವೆಚ್ಚ-12/09, ದಿ. 15.7.2009 – ಸಿ.ಆ.ಸು. (ಇ-ಆಡಳಿತ) ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 662 | 10.8.2009 | ಸಂ. ಆಇ 854 ವೆಚ್ಚ-12/09, ದಿ. 17.7.2009 – ಸಿ.ಆ.ಸು. (ಇ-ಆಡಳಿತ) ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 663 | 10.8.2009 | ಸಂ. ಆಇ 846 ವೆಚ್ಚ-12/09, ದಿ. 17.7.2009 – ಒಳಾಡಳಿತ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 664 | 10.8.2009 | ಸಂ. ಆಇ 801 ವೆಚ್ಚ-12/09, ದಿ. 17.7.2009 – ಶಿಕ್ಷಣ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 665 | 10.8.2009 | ಸಂ. ಆಇ 850 ವೆಚ್ಚ-12/09, ದಿ. 18.7.2009 – ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 666 | 10.8.2009 | ಸಂ. ಆಇ 841 ವೆಚ್ಚ-12/09, ದಿ. 18.7.2009 – ಯೋಜನಾ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 667 | 10.8.2009 | ಸಂ. ಆಇ 836 ವೆಚ್ಚ-12/09, ದಿ. 18.7.2009 – ಗ್ರಾ. ಪಂ. ರಾಜ್ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 668 | 10.8.2009 | ಸಂ. ಆಇ 723 ವೆಚ್ಚ-12/09, ದಿ. 24.7.2009 – ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 669 | 10.8.2009 | ಸಂ. ಆಇ 809 ವೆಚ್ಚ-12/09, ದಿ. 24.7.2009 – ಸಾರಿಗೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 670 | 10.8.2009 | ಸಂ. ಆಇ 832 ವೆಚ್ಚ-12/09, ದಿ. 24.7.2009 – ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |

. . .2

| ಸಂಖ್ಯೆ | ದಿನಾಂಕ | ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ |
|---|---|---|
| 671 | 10.8.2009 | ಸಂ. ಆಇ 911 ವೆಚ್ಚ-12/09, ದಿ. 24.7.2009 – ನಗರಾಭಿವೃದ್ಧಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 672 | 10.8.2009 | ಸಂ. ಆಇ 952 ವೆಚ್ಚ-12/09, ದಿ. 24.7.2009 – ಯೋಜನಾ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 673 | 10.8.2009 | ಸಂ. ಆಇ 894 ವೆಚ್ಚ-12/09, ದಿ. 18.7.2009 – ಶಿಕ್ಷಣ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 674 | 10.8.2009 | ಸಂ. ಆಇ 535 ವೆಚ್ಚ-12/09, ದಿ. 21.7.2009 – ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯತಿ ನೀಡುವ ಬಗ್ಗೆ. |
| 675 | 10.8.2009 | ಸಂ. ಸಿಆಸುಇ 20 ವಿಮಾಆ 2009(1), (2), (3), (4), ದಿ. 13.7.2009 – ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಸಂಗ್ರಹಿಸುವ ಕುರಿತು. |
| 676 | 10.8.2009 | ಸಂ. ನಅಇ 214 ಮೈಅಪ್ರಾ 2009, ದಿ. 13.7.2009 – ದ.ಕ.ಜಿಲ್ಲೆಯ ಬಂಟ್ವಾಳ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ. |
| 677 | 10.8.2009 | ಸಂ. ನಅಇ 173 ಬೆಮಪ್ರಾ 2009, ದಿ. 13.7.2009 – ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ. |
| 678 | 10.8.2009 | ಸಂ. ನಅಇ 126 ಬೆಮಪ್ರಾ 2009, ದಿ. 24.6.2009 – ಗದಗ್ ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಅಂತಿಮ ಅನುಮೋದನೆ ನೀಡುವ ಬಗ್ಗೆ. |
| 679 | 10.8.2009 | ಸಂ. ಕಾಇ 266 ಎಲ್ಇಟಿ 2008, ದಿ. 27.6.2009 – 1998ನೇ ಸಾಲಿನ ಪ್ರೋಬೇಷನರಿ ಕಾರ್ಮಿಕ ಅಧಿಕಾರಿಗಳು ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವ ಬಗ್ಗೆ. |
| 680 | 10.8.2009 | ಸಂ. ಆರ್‌ಡಿ 32 ಎಲ್‌ಜಿಎಂ 2007, ದಿ. 3.6.2009 – ಶ್ರೀ ವಾಗ್ದೇವಿ ಸದ್ವಿದ್ವಾವರ್ಧಿನಿ ಟ್ರಸ್ಟ್ (ರಿ), ಬೆಂಗಳೂರು ರವರಿಗೆ ಮೈಸೂರು ತಾಲ್ಲೂಕು ಇಲವಾಲ ಹೋಬಳಿ ಆನಂದೂರು ಗ್ರಾಮದ ಸರ್ವೆ ನಂಬರ್. 280 ರ ಪೈಕಿ 4.20 ಎಕರೆ ಜಮೀನನ್ನು ಗೋಶಾಲೆ ಮತ್ತು ಭಾರತೀಯ ಪ್ರಾಚೀನ ವಿದ್ಯಾ ಗುರುಕುಲ ಸ್ಥಾಪಿಸಲು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಬಗ್ಗೆ. |
| 681 | 10.8.2009 | ಸಂ. ಆರ್‌ಡಿ 83 ಎಲ್‌ಜಿಎ 2008, ದಿ. 24.7.2009 – ಮಂಗಳೂರು ತಾಲ್ಲೂಕಿನ ಸರ್ಕಾರಿ ಜಮೀನುಗಳನ್ನು ವಿಶೇಷ ಆರ್ಥಿಕ ವಲಯ ಯೋಜನೆಗಾಗಿ ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡುವ ಬಗ್ಗೆ. |
| 682 | 10.8.2009 | ಸಂ. ಆಕುಕ 41 ಎಂಎಸ್ಎ 2009, ದಿ. 8.6.2009 – ಡಾ. ರಮೇಶ್‌ರವರ ಸರ್ಕಾರಿ ಸೇವೆಯಿಂದ ವಜಾಗೊಳಿಸುವ ಬಗ್ಗೆ ಆದೇಶ. |
| 683 | 10.8.2009 | ಸಂ. ಆಕುಕ 479 ಎಂಎಸ್ಎ 2008, ದಿ. 17.7.2009 – ಡಾ. ನಾಯಕ್ ವಿನಿತಾ ಪ್ರಭಾಕರ್ – ಸೇವೆಯಿಂದ ವಜಾ ಮಾಡುವ ದಂಡನೆ ವಿಧಿಸುವ ಬಗ್ಗೆ. |
| 684 | 10.8.2009 | ಸಂ. ಆಕುಕ 119 ಎಂಎಸ್ಎ 2009, ದಿ. 9.7.2009 – ಡಾ. ಯೋಗಿತಾ ಜನಾರ್ಧನ್ – ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸುವ ಬಗ್ಗೆ ಆದೇಶ. |
| 685 | 11.8.2009 | ಸಂ. ಗ್ರಾಅಪ/83/ಜಿಪಸ/2009(ಭಾ-1), ದಿ. 11.8.2009 – ಗದಗ್ ಜಿಲ್ಲೆಯ ತಾ.ಪಂ.ಯ ಪರಿಷ್ಕರಿಸಿದ ಮೀಸಲಾತಿ ಪ್ರಕಟಿಸುವ ಬಗ್ಗೆ. |
| 686 | 11.8.2009 | No. PWD 1 EAP 2009, Dt. 7.3.2009 – Formulation of New Policies for the development of Road Infrastructure Projects of the State reg. |
| 687 | 11.8.2009 | ಸಂ. ನಅಇ 230 ಎಂಎಲ್ಆರ್ 2008, ದಿ. 10.8.2009 – ಸಂಗೂರು ಪಟ್ಟಣ ಪಂಚಾಯತಿಗೆ ಚುನಾವಣೆ ನಡೆಸುವ ಸಲುವಾಗಿ ವಾರ್ಡ್‌ಗಳಿಗೆ ಮೀಸಲಾತಿ ನಿಗಧಿಪಡಿಸುವ ಬಗ್ಗೆ. |
| 688 | 11.8.2009 | ಸಂ. ಸಿಆಸುಇ 38 ಶಿಸನೇ 2009, ದಿ. 2.7.2009 – ಶ್ರೀ ಶಿವಾನಂದ ನಾಯ್ಕ ಇವರನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಅಧ್ಯಕ್ಷರಾಗಿ ನೇಮಿಸುವ ಕುರಿತು. |
| 689 | 11.8.2009 | ಸಂ. ಸಿಆಸುಇ 57 ಶಿಸನೇ 2009, ದಿ. 2.7.2009 – ಶ್ರೀ ಸಿರಾಜ್ ಶೇಖ್ ಬಿನ್ ಎಸ್.ಎಂ.ಖಾಸಿಂ ಇವರನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರಾಗಿ ನೇಮಿಸುವ ಕುರಿತು. |
| 690 | 11.8.2009 | No. DPAR 65 GAM 2009, Dt. 8.7.2009 – Sri Bykere Nagesh, Addl. Spl. Representative of Karnataka – Accorded Status of Minister of State. |

....3

| ಸಂಖ್ಯೆ | ದಿನಾಂಕ | ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ |
|---|---|---|
| 691 | 11.8.2009 | ಸಂ. ಸಿಆಸುಇ 78 ಶಿಸನೇ 2009, ದಿ. 10.7.2009 – ಡಾ. ಎ.ರವೀಂದ್ರ, ಮುಖ್ಯಮಂತ್ರಿಯವರಿಗೆ ನಗರಾಭಿವೃದ್ಧಿ ವಿಷಯಗಳಿಗೆ ಸಲಹೆ ನೀಡಲು ಸಲಹೆಗಾರರನ್ನಾಗಿ ನೇಮಿಸುವ ಬಗ್ಗೆ. |
| 692 | 11.8.2009 | ಸಂ. ಸಿಆಸುಇ 68 ಶಿಸನೇ 2009, ದಿ. 14.7.2009 – ಶ್ರೀಮತಿ ಲಲಿತಾರಾಣಿ ಶ್ರೀರಂಗದೇವರಾಯಲು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷರಿಗೆ ರಾಜ್ಯ ಸಚಿವರ ಸ್ಥಾನಮಾನವನ್ನು ನೀಡುವ ಬಗ್ಗೆ. |
| 693 | 11.8.2009 | ಸಂ. ಸಿಆಸುಇ 74 ಶಿಸನೇ 2009, ದಿ. 18.7.2009 – ಶ್ರೀ ನಾಗರಾಜಪ್ಪ, ಅಧ್ಯಕ್ಷರು, ಮೈಸೂರು ಷುಗರ್ ಕಂಪನಿ ಇವರಿಗೆ ರಾಜ್ಯ ಸಚಿವರ ಸ್ಥಾನಮಾನವನ್ನು ನೀಡುವ ಬಗ್ಗೆ. |
| 694 | 11.8.2009 | ಸಂ. ಆರ್‌ಡಿ 37 ಎಲ್‌ಜಿಯು 2008, ದಿ. 9.7.2009 – ಸೇರ್ಪಡೆ – 11.6.2009ರ ಆದೇಶಕ್ಕೆ. |
| 695 | 11.8.2009 | ಸಂ. ಸಇ 113 ಎಂಆರ್‌ಇ 2009, ದಿ. 11.8.2009 – ಹುಳಿಯಾರು ಕೃ.ಉ.ಮಾ. ಸಮಿತಿಗೆ ನಾಮನಿರ್ದೇಶನ ಮಾಡುವ ಬಗ್ಗೆ. |
| 696 | 11.8.2009 | ಸಂ. ಸಇ 122 ಎಂಆರ್‌ಇ 2009, ದಿ. 10.7.2009 – ಶಿರಗುಪ್ಪ ಕೃ.ಉ.ಮಾ. ಸಮಿತಿಗೆ ನಾಮನಿರ್ದೇಶನ ಮಾಡುವ ಬಗ್ಗೆ. |
| 697 | 11.8.2009 | No. HFW 20 PIM 2009, Dt. 10.7.2009 – Karnataka State Civil Services (Absorption of persons appointed as Rural Medical Practitioners/Subsidised Medical Practitioner/Aided Medical Practitioners in the Indian Systems of Medicine and Homeopathy Department) (Special) (Amendment) Rules 2009. |
| 698 | 11.8.2009 | No. HD 170 SST 2009(P), Dt. 23.7.2009 – Karnataka Private Security Agencies Rules, 2008. |
| 699 | 11.8.2009 | No. HD 144 POP 2009, Dt. 28.7.2009 – Jurisdiction of the Police State – Sagar Sub-Division, Hosanagar Police Circle. |
| 700 | 11.8.2009 | No. HD 168 POP 2009, Dt. 3.8.2009 -- Jurisdiction of the Police State -- Kundapur Sub-Division, Kundapur Circle. |
| 701 | 11.8.2009 | ಸಂ. ಹೆಚ್‌ಡಿ 137 ಪಿಆರ್‌ಎ 2008, ದಿ. 3.8.2009 – ಕೇಂದ್ರ ಕಾರಾಗೃಹದ ವಿಸ್ತರಣೆಗೆ ಭೂಸ್ವಾಧೀನಗೊಳಿಸುವ ಬಗ್ಗೆ. |
| 702 | 12.8.2009 | No. UDD 126 MLR 2009, Dt. 12.8.2009 -- Karnataka Municipal Corporation (Election (Amendment) Rules, 2009. |
| 703 | 12.8.2009 | ಸಂ. ಸಾರಿಇ 10 ಸಾಇನಿ 2009, ದಿ. 5.8.2009 – ಕೆಲವು ಸಂಸ್ಥೆಗಳ ಮೋಟಾರು ವಾಹನಗಳಿಗೆ ತೆರಿಗೆ ಪಾವತಿಯಿಂದ ವಿನಾಯಿತಿ ನೀಡುವ ಬಗ್ಗೆ. |
| 704 | 13.8.2009 | No. ED 173 ETR 2007, Dt. 31.7.2009 -- Draft Rules - Karnataka State Civil Services (Regulation of Transfer of Teachers) (Amendment) Rules, 2009 |
| 705 | 13.8.2009 | No. HD 374 PMS 2008, Dt. 12.8.2009 - Authentication/attestation of original documents – Delegation of powers to the Regional Commissioners and Additional Regional Commissioner (Administration) and Additional Regional Commissioner (Development))of Gulbarga, Belgaum and Mysore and authorizing the Regional Commissioner, Bangalore, Additional Regional Commissioner (Administration) - regarding. |
| 706 | 14.8.2009 | No. TRD 01 TMR 2008, Dt. 14.8.2009 - Karnataka Motor Vehicles (Amendment) Rules, 2007. |
| 707 | 14.8.2009 | ಸಂ. ಸಾರಿಇ 139 ಸಾಇಪ 2009, ದಿ. 14.8.2009 – ವಾಹನದ ಮಾದರಿಯನ್ನು ಪರಿವರ್ತಿಸುವ ಬಗ್ಗೆ. |
| 708 | 14.8.2009 | No. TRD 196 SAEPA 2008, Dt. 14.8.2009 – Draft Rules - Karnataka Motor Vehicles Taxation (. . . . . . .Amendment) Rules, 2008. |
| 709 | 14.8.2009 | ಸಂ. ಸಿಐ 10 ಎಂಜಿಎಸ್ 2008, ದಿ. 10.8.2009 – ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿನ ಹಿರಿಯ ಭೂವಿಜ್ಞಾನಿ (ಹಿಂದಿನ ಭೂವಿಜ್ಞಾನಿ) ವೃಂದದ ದಿ:01–01–08 ರಂದಿನಂತೆ (ದಿ:31–12–07 ರವರೆಗೆ) ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು. |

KA / BG-GPO / 2515 / WPP-47 / 2009-2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೪೪ | ಬೆಂಗಳೂರು, ಗುರುವಾರ, ಆಗಸ್ಟ್ ೨೦, ೨೦೦೯ (ಶ್ರಾವಣ ೨೯, ಶಕ ವರ್ಷ ೧೯೩೧) | ಸಂಚಿಕೆ ೩೪ |
|---|---|---|

## ಭಾಗ – ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

### ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

**ವಿಷಯ:** ನ್ಯಾಯಾಂಗ ಅಧಿಕಾರಿಗಳ ಗೃಹಪರಿಚಾರಕ ಭತ್ಯೆಯನ್ನು ಪರಿಷ್ಕರಿಸುವ ಬಗ್ಗೆ

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ : ಲಾ 177 ಎಲ್‌ಎಂ 90 ದಿನಾಂಕ: 11.10.1991
2. ಸರ್ಕಾರದ ಆದೇಶ ಸಂಖ್ಯೆ : ಲಾ 230 ಎಲ್‌ಸಿಇ 91 ದಿನಾಂಕ: 09.04.1992
3. ಸರ್ಕಾರದ ಆದೇಶ ಸಂಖ್ಯೆ : ಲಾ 154 ಎಲ್‌ಎಸಿ 96 ದಿನಾಂಕ: 15.02.1997
4. ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಮನವಿಪತ್ರ ದಿನಾಂಕ : 18.6.2008

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರದ ಆದೇಶಗಳನ್ವಯ ನ್ಯಾಯಾಂಗ ಅಧಿಕಾರಿಗಳಿಗೆ ಗೃಹಪರಿಚಾರಕ ಭತ್ಯೆಯನ್ನು ನೀಡಲಾಗುತ್ತಿದ್ದು ಕ್ರ.ಸಂ. (3) ರಲ್ಲಿ ಓದಲಾದ ದಿನಾಂಕ: 15.2.1997ರ ಸರ್ಕಾರದ ಆದೇಶದಲ್ಲಿ ಸದರಿ ಭತ್ಯೆಯ ಮೊತ್ತವನ್ನು ಮಾಹೆಯಾನ ರೂ 300.00 ರಿಂದ ರೂ. 700.00 ಕ್ಕೆ ಹೆಚ್ಚಿಸಲಾಗಿದೆ. ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘವು ದಿನಾಂಕ: 18.6.2008 ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 196 ಸಿಎಸ್‌ಆರ್ 2006 ದಿನಾಂಕ:16.5.2006 ರಲ್ಲಿ ಗೃಹಪರಿಚಾರಕ ಭತ್ಯೆಗೆ ಗುರುತಿಸಿರುವ ಅಧಿಕಾರಿಗಳಿಗೆ ನೀಡಲಾಗುತ್ತಿದ್ದ ರೂ 700.00 ಮೊತ್ತದ ಭತ್ಯೆಯನ್ನು ಮಾಹೆಯಾನ ರೂ. 1500.00 ಕ್ಕೆ ಏರಿಕೆ ಮಾಡಿರುತ್ತದೆ. ಅದೇ ರೀತಿಯಲ್ಲಿ ಜೀವನ ನಿರ್ವಹಣಾ ವೆಚ್ಚ ಹಾಗೂ ದರಗಳಲ್ಲಿ ಉಂಟಾಗಿರುವ ಏರಿಕೆಗಳನ್ನು ಪರಿಗಣನೆಗೆ ತೆಗೆದುಕೊಂಡು ನ್ಯಾಯಾಂಗ ಅಧಿಕಾರಿಗಳಿಗೂ ಸಹ ಗೃಹಪರಿಚಾರಕ ಭತ್ಯೆಯನ್ನು ರೂ. 1500.00ರ ಮೊತ್ತಕ್ಕೆ ಏರಿಸಬೇಕೆಂಬ ಕೋರಿಕೆ ಮಾಡಿರುತ್ತದೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ಲಾ 135 ಎಲ್‌ಎಸಿ 2008, ಬೆಂಗಳೂರು, ದಿನಾಂಕ: 18ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ರಾಜ್ಯದಲ್ಲಿ ನ್ಯಾಯಾಂಗ ಅಧಿಕಾರಿಗಳಿಗೆ ನೀಡಲಾಗುತ್ತಿರುವ ಮಾಸಿಕ ಗೃಹಪರಿಚಾರಕ ಭತ್ಯೆಯನ್ನು ಏಪ್ರಿಲ್ 2009 ರಿಂದ ಜಾರಿಗೆ ಬರುವಂತೆ ರೂ. 700.00 ರಿಂದ ರೂ. 1500–00ಕ್ಕೆ (ಒಂದು ಸಾವಿರದ ಐದುನೂರು ರೂಪಾಯಿಗಳು ಮಾತ್ರ) ಹೆಚ್ಚಿಸಲು ಆದೇಶಿಸಲಾಗಿದೆ. ಈ ಸಂಬಂಧದಲ್ಲಿ ಮೇಲೆ ಓದಲಾದ ಆದೇಶಗಳಲ್ಲಿ ಈಗಾಗಲೇ ನಿಗಧಿಪಡಿಸಲಾಗಿರುವ ಷರತ್ತು ಹಾಗೂ ನಿಬಂಧನೆಗಳು ಹಾಗೆಯೇ ಮುಂದುವರಿಯುತ್ತವೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಎಫ್‌ಡಿ 88 ಎಸ್‌ಇಆರ್–2/2009 ದಿನಾಂಕ: 3.4.2009 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಸ್. ಸಿದ್ದಲಿಂಗೇಶ್**

ಸರ್ಕಾರದ ಕಾರ್ಯದರ್ಶಿ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 1318

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ತಿದ್ದುಪಡಿ (i)

**ಸಂಖ್ಯೆ ಆಕುಕ 184 ಎಂಎಸ್‌ಎಸ್ 2008, ಬೆಂಗಳೂರು, ದಿನಾಂಕ: 20ನೇ ಮೇ 2009**

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 184 ಎಂಎಸ್‌ಎಸ್ 2008 (i) ದಿನಾಂಕ 19/5/2009 ರಲ್ಲಿ "ಡಾ: ವಿ.ಡಿ.ಹಳಕಟ್ಟಿ" ಎಂದಿರುವುದನ್ನು "ಡಾ: ಆರ್.ವ್ಹಿ. ಹಳ್ಳಕಟ್ಟಿ" (Dr.R.V.Halakatti) ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪದ್ಮಾವತಿ

ಪಿ.ಆರ್. 1366

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

## URBAN DEVELOPMENT SECRETARIAT

**Sub:** Appointment of Mrs. Anantha lakshmi as transport planner –in the directorate of urban land transport....Reg.

**Read:** 1. Government Order No. UDD 134 BMR 2006(1), Bangalore, Dated 08.03.2007.

**Preamble :**

As per the recommendation for the National working group on urban transport for the 11th plan and the guidenlines of the National urban transport policy, the Government o Karnataka in its Government order read at (1) has created the state directorate of urban land transport (DULT) under the urban development department. The key objective of the DULT is to ensure integration and coordination of land-use planning and development of transport related infrastructure in urban areas.

The functions of DULT has been defined in G. O. read at (1) with jurisdictions of seven municipal corporations in the state, viz., Bangalore, Mysore, Mangalore, Hubli- Dharwad, belgaum, Gulbarga and Bellary. Accordingly, one of the key functions is to take up comprehensive traffic and transportation studies (CTTS) for six cities, excluding Bangalore. Also DULT will take up the CTTS for two tier cities like shimoga, Udipi, Tumkur, Davangere and Sky walk policies and not –motorized transport development in Bangalore Metropolitan region during 2009-10.

The team under the commissioner, DULT is required to address the above mentioned critical areas on priority. It is noted that addressing these tasks and challenges requires the active role of specialists with multidisciplinary approaches. The specialists should have an understanding of the planning, technology for planning, land-use changes, planning with focus on mobility related aspects and capacity building competencies.

Mrs. Ananthalakshmi who has a master degree in transportation engineering from Indian institute of technology, Delhi having sound academic knowledge of the subject and she has worked under the guidance o prof. geetham Tiwari for her thesis on the subject of BRT at pune. She has also an experience as a software Engineer in infosys Technologies private limited and with this technical knowledge she has found Suitable to work as a transport planner in DULT.

Therefore it is felt necessary to utilize services of Mrs. Ananthalakshmi as Transport planner in DULT. Hence the following Order.

**Government order No. UDD 4 CAR 2009, Bangalore, Dated: 16th May 2009**

Government are pleased to accord sanction to utilize the services of Mrs. Anathalakshmi Transport Planner- in the directorate of Urban Land Transport on contract basis under the sanctioned vacant post of Transport planner initially for a period of six months on the following conditions.

1. Production of master degree certificates
2. The candidate shall furnish a bond with an undertaking to serve DULT for a minimum period of six months.
3. In case of leaving the DULT service before six months she should bring to the notice of DULT one month earlier

Her services can be utilized in the following areas:-

1. preparation of comprehensive traffic and transportation plan for six city corporations.
2. Periodic assessment of travel demand in given Urban Area.
3. Determination of level or requirements to public transport and type of transport system on different corridors.
4. Setting of policy guidelines for development of total network in Urban Area
5. Road Network planning in the Urban Area.
6. Any other work assigned by the commissioner, DULT.

The services of Mrs. Ananthalakshmi will be utilized until such time the commissioner, DULT deems fit.

Mrs. Anathalakshmi would be paid a consolidated compensation of Rs. 18,000.00 per month.

By order and in the name of the Governor of Karnataka

P.R. 1334

**M.S. PREMACHANDRA**

Under secretary to Govt., Urban Development Department

**ಒಳಾಡಳಿತ ಸಚಿವಾಲಯ**

**ವಿಷಯ:** ಶ್ರೀ ಎ.ಹೆಚ್. ಹೊನಕೇರಿ, ಶಾಖಾಧೀಕ್ಷಕರು, ಪೊಲೀಸ್ ಆಯುಕ್ತರ ಕಛೇರಿ, ಹುಬ್ಬಳ್ಳಿ-ಧಾರವಾಡ ನಗರ ರವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಬಗ್ಗೆ.

**ಓದಲಾಗಿದೆ:** ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಕಚೇರಿ ಪತ್ರ ಸಂಖ್ಯೆ: ಅಪೀಲು (1)04/2006-07 ದಿನಾಂಕ 08-11-2008.

**ಪ್ರಸ್ತಾವನೆ:**

ಶ್ರೀಮತಿ ನಾಗವ್ವ ಕೋಂ ಶಾಂತಪ್ಪ, ಕುರುಂದವಾಡ ಸಾ// ಬಂಕಾಪುರ ಇವರು ಮಾನ್ಯ ಕೆಎಟಿ, ಬೆಂಗಳೂರಿನಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ 2292/99 ಸೇದ್ದು ದಿನಾಂಕ 24-05-1999 ರಂದು ಜಿಲ್ಲಾ ಪೊಲೀಸ್ ಕಾರ್ಯಾಲಯ, ಗದಗ ಇಲ್ಲಿ ಸ್ವೀಕೃತವಾಗಿರುತ್ತದೆ. ಆದರೆ ಸದರಿ ಅರ್ಜಿಗೆ ಕಂಡಿಕಾವಾರು ಷರಾ ವರದಿಯನ್ನು ಕೆಎಟಿಗೆ ದಿನಾಂಕ:01-02-2006 ರವರೆಗೆ ಸಲ್ಲಿಸದೇ 06 ವರ್ಷಗಳ ಕಾಲ ಬಾಕಿ ಇಡಲು ಕಾರಣೀಭೂತರಾಗಿರುವ ಎ.ಯು.ನಾಯಕ ಪ್ರದಸ, ಎಚ್.ಬಿ.ಟಕ್ಕಳಕಿ ಪ್ರದಸ ಜಿಲ್ಲಾ ಪೊಲೀಸ್ ಕಚೇರಿ, ಗದಗ ಹಾಗೂ ಎ.ಎಚ್. ಹೊನಕೇರಿ, ಶಾಖಾಧೀಕ್ಷಕರು, ಪೊಲೀಸ್ ಆಯುಕ್ತರವರ ಕಛೇರಿ ಹುಬ್ಬಳ್ಳಿ-ಧಾರವಾಡ ನಗರ ಆದ ತಾವುಗಳು ಕರ್ತವ್ಯದಲ್ಲಿ ನಿರ್ಲಕ್ಷತೆ ಬೇಜವಾಬ್ದಾರಿತನ ಮತ್ತು ಕರ್ತವ್ಯ ಲೋಪವೆಸಗಿರುತ್ತೀರಿ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಿ ಇವರ ಮೇಲಿನ ಆಪಾದನೆ ದೃಢಪಟ್ಟಿರುತ್ತದೆ ಎಂದು ತಿಳಿಸಿರುತ್ತಾರೆ. ಇಲಾಖಾ ವಿಚಾರಣೆಯ ವರದಿಯನ್ನು ಒಪ್ಪಿ ಡಿಜಿ ಮತ್ತು ಐಜಿಪಿ ರವರು ದಿನಾಂಕ 21-04-2008 ರಂದು ಶ್ರೀ ಎ.ಎಚ್. ಹೊನಕೇರಿ ಶಾಖಾಧೀಕ್ಷಕರು ಇವರ ವಿರುದ್ಧ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಒಂದು ವರ್ಷದ ಅವಧಿಗೆ ಮುಂದೂಡಲಾಗಿರುತ್ತದೆ.ಈ ಆದೇಶದ ವಿರುದ್ಧ ಸರ್ಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇವರ ವಿರುದ್ಧದ ಆರೋಪವು ಸಾಬೀತಾಗಿದ್ದು ಮೇಲ್ಮನವಿಯಲ್ಲಿ ಕರ್ತವ್ಯ ಚ್ಯುತಿ ಮಾಡದಿರುವುದಕ್ಕೆ ಕಾರಣಗಳಾಗಲಿ ಅಥವಾ ಹೊಸ ಸಮರ್ಥನೆಯನ್ನಾಗಲಿ ನೀಡಿರುವುದಿಲ್ಲ ಹಾಗೂ ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶವಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 98 ಪೊಶಿಲಿ 2008 ಬೆಂಗಳೂರು, ದಿನಾಂಕ: 22ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಎ.ಹೆಚ್. ಹೊನಕೇರಿ, ಶಾಖಾಧೀಕ್ಷಕರು, ಪೊಲೀಸ್ ಆಯುಕ್ತರ ಕಚೇರಿ, ಹುಬ್ಬಳ್ಳಿ-ಧಾರವಾಡ ನಗರ ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1335

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

**ಆರ್ಥಿಕ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ : ಆಇ 54 ಇಡಬ್ಲ್ಯೂಪಿ 2008, ಬೆಂಗಳೂರು, ದಿನಾಂಕ: 26ನೇ ಮೇ 2009**

ಸರ್ಕಾರದ ಆದೇಶ ಸಂಖ್ಯೆ: ಆಇ 54 ಇಡಬ್ಲ್ಯೂಪಿ 2008 ದಿನಾಂಕ:26/05/2009 ರಲ್ಲಿ ಅಮಾನತ್ತನ್ನು ರದ್ದುಪಡಿಸಿ ಸರ್ಕಾರದ ಸೇವೆಗೆ ಪುನರ್ ನೇಮಕ ಮಾಡಲಾಗಿರುವ ರಾಜ್ಯ ಅಬಕಾರಿ ಸೇವೆಗೆ ಸೇರಿದ ಶ್ರೀ ಆರ್. ರಾಜಣ್ಣ, ಅಬಕಾರಿ ಜಂಟಿ ಆಯುಕ್ತರು ಇವರನ್ನು ಖಾಲಿ ಇರುವ ಬಳ್ಳಾರಿ ಜಿಲ್ಲೆಯ ಹೊಸಪೇಟೆ ವಿಭಾಗದ ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಹುದ್ದೆಗೆ ತಕ್ಷಣದಿಂದ. ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1339

**ಬಿ.ಎನ್. ಜಗದೀಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆಬಕಾರಿ).

**ವಿಷಯ:** ಶ್ರೀ ಆರ್. ರಾಜಣ್ಣ, ಅಬಕಾರಿ ಜಂಟಿ ಆಯುಕ್ತರು ಇವರ ಅಮಾನತ್ತನ್ನು ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರಿ ಆದೇಶ ಸಂಖ್ಯೆ : ಆಇ 36 ಇಪಿಎಸ್ 2000 ದಿನಾಂಕ:17/04/008
2. ಕರ್ನಾಟಕ ಲೋಕಾಯುಕ್ತ ಪೊಲೀಸ್, ಬೆಂಗಳೂರು ಗ್ರಾಮಾಂತರ ರವರು ಲಂಚ ನಿರೋಧಕ ಕಾಯ್ದೆ 1988 ರ ಸೆಕ್ಷನ್ 13 (1)(ಇ)ಆರ್/ಡಬ್ಲ್ಯೂ ಸೆಕ್ಷನ್ 13(2)ರಲ್ಲಿ ಶ್ರೀ ಆರ್. ರಾಜಣ್ಣ ಅಬಕಾರಿ ಜಂಟಿ ಆಯುಕ್ತರವರ ವಿರುದ್ಧ ದಿನಾಂಕ: 22/01/2000 ರಂದು ದಾಖಲಿಸಿರುವ ಕ್ರಿಮಿನಲ್ ಕೇಸ್ ಸಂಖ್ಯೆ:ಸಿ.ಆರ್.1/2000
3. ಕರ್ನಾಟಕ ಲೋಕಾಯುಕ್ತ ಪೊಲೀಸ್ ರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಶೇಷ ನ್ಯಾಯಾಲಯ, ಬೆಂಗಳೂರು ಇಲ್ಲಿ ಶ್ರೀ ಆರ್. ರಾಜಣ್ಣ, ಅಬಕಾರಿ ಜಂಟಿ ಆಯುಕ್ತರವರ ವಿರುದ್ಧ ಜಾರ್ಜ್ ಶೀಟ್‌ನ್ನು ದಾಖಲಿಸಿರುವ ವಿಶೇಷ ಸಿಸಿ ಸಂಖ್ಯೆ :19/2008
4. ಅರ್ಜಿ ಸಂಖ್ಯೆ :2388/2008 ರಲ್ಲಿ ದಿನಾಂಕ :01/10/2008 ರಂದು ಕರ್ನಾಟಕ ಆಡಳಿತ ಮಂಡಳಿಯು ನೀಡಿದ ಆದೇಶ
5. ಅಬಕಾರಿ ಆಯುಕ್ತರ ಪತ್ರ ಸಂಖ್ಯೆ : ಇಸಿಇ/47/ಕೆಎಟಿ/2008 ದಿನಾಂಕ :25/03/2009

**ಪ್ರಸ್ತಾವನೆ:**

ಮೇಲೆ ಓದಲಾಗಿರುವ ಉಲ್ಲೇಖ (2) ರಲ್ಲಿ ತಿಳಿಸಿದ ಲೋಕಾಯುಕ್ತ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಆರ್. ರಾಜಣ್ಣ, ಅಬಕಾರಿ ಜಂಟಿ ಆಯುಕ್ತರು ಇವರನ್ನು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (1) ಆದೇಶದನ್ವಯ. ಅಮಾನತ್ತುಗೊಳಿಸಿಲಾಗಿತ್ತು. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (4) ರ ಆದೇಶದಲ್ಲಿ ಶ್ರೀ ಆರ್. ರಾಜಣ್ಣ, ಅಬಕಾರಿ ಜಂಟಿ ಆಯುಕ್ತರು ಇವರ ಅಮಾನತ್ತು ಆದೇಶವನ್ನು ರದ್ದು ಪಡಿಸಿರುತ್ತದೆ.

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿರುವ ಆದೇಶದನ್ವಯ ಶ್ರೀ ಆರ್. ರಾಜಣ್ಣ, ರವರ ಅಮಾನತ್ತನ್ನು ರದ್ದುಪಡಿಸಿ ಉಲ್ಲೇಖ (3) ರ ಪ್ರಕರಣದಲ್ಲಿನ ತೀರ್ಪಿಗೊಳಪಟ್ಟು ಅವರನ್ನು ಪುನಃ ಕರ್ತವ್ಯದ ಮೇಲೆ ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಆಇ 54 ಇಡಬ್ಲ್ಯೂಪಿ 2008, ಬೆಂಗಳೂರು, ದಿನಾಂಕ: 26ನೇ ಮೇ 2009**

ಸರ್ಕಾರವು, ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 10(5)(ಸಿ) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಆರ್. ರಾಜಣ್ಣ, ಅಬಕಾರಿ ಜಂಟಿ ಆಯುಕ್ತರು (ಪ್ರಸ್ತುತ ಅಮಾನತ್ತಿನಲ್ಲಿರುವವರು) ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಶೇಷ ನ್ಯಾಯಾಲಯದಲ್ಲಿ ದಾಖಲಿಸಿದ ಪ್ರಕರಣ ವಿಶೇಷ ಸಿ.ಸಿ.ಸಂಖ್ಯೆ:19/2008 ರಲ್ಲಿನ ಅಂತಿಮ ಆದೇಶಕ್ಕೆ ಒಳಪಟ್ಟು ಸದರಿಯವರ ಅಮಾನತ್ತನ್ನು ರದ್ದುಪಡಿಸಲು ಹಾಗೂ ಇವರನ್ನು ಸರ್ಕಾರದ ಸೇವೆಗೆ ಪುನರ್‌ನೇಮಕಗೊಳಿಸಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1340

**ಬಿ.ಎನ್. ಜಗದೀಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಅಬಕಾರಿ).

## ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

**ವಿಷಯ:** ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಗ್ರಾಮೀಣ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

**ಓದಲಾಗಿದೆ:** ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು, ಇವರ ಪತ್ರ ಸಂಖ್ಯೆ: ಮುಇಂ/ರಶಾ/ಸಿಇ4/2008-09, ದಿನಾಂಕ 13-02-2009.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರು **ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ 4.30 ಕಿ. ಮೀ ಉದ್ದದ ರಾ.ಹೆ. –48 ರಿಂದ ಎಡಿಯೂರು ದೇವಸ್ಥಾನ, ಕೊಡವತ್ತಿ ಮುಖಾಂತರ ರಾಜ್ಯ ಹೆದ್ದಾರಿ–84 ನ್ನು ಸಂಪರ್ಕಿಸುವ** ಗ್ರಾಮೀಣ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೆಲ್ದರ್ಜೆಗೇರಿಸುವ ಬಗ್ಗೆ ನಿಗದಿತ ನಮೂನೆಯಲ್ಲಿ ಅಗತ್ಯ ನಕ್ಷೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು, ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಲೋಇ 226 ಸಿ ಆರ್ ಎಂ 2009, ಬೆಂಗಳೂರು, ದಿನಾಂಕ: 22ನೇ ಮೇ 2009**

**ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ 4.30 ಕಿ. ಮೀ ಉದ್ದದ ರಾಹೆ. 48 ರಿಂದ ಎಡಿಯೂರು ದೇವಸ್ಥಾನ, ಕೊಡವತ್ತಿ ಮುಖಾಂತರ ರಾಜ್ಯ ಹೆದ್ದಾರಿ –84ನ್ನು ಸಂಪರ್ಕಿಸುವ** ಗ್ರಾಮೀಣ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಸ್.ಆರ್. ರೇವಣ್ಣ**

ಪಿ.ಆರ್. 1341 ಸರ್ಕಾರದ ಅಧೀನ ಕಾರ್ಯದರ್ಶಿ,

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

**ವಿಷಯ:** ಶ್ರೀ ವೆಂಕಟೇಶ್, ಹಿಂದಿನ ಅಧೀಕ್ಷಕರು, ಬಾಲಕರ ಬಾಲಮಂದಿರ. ಕೆ.ಜಿ.ಎಫ್., ಹಾಗೂ ಹಾಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಹೊನ್ನಾವರ ಇವರನ್ನು ಸೇವೆಯಿಂದ ಕಡ್ಡಾಯವಾಗಿ ನಿವೃತ್ತಿಗೊಳಿಸುವ ಬಗ್ಗೆ ಆದೇಶ.

**ಓದಲಾಗಿದೆ:**

1. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ನಿಸಿಶಿಪ/10/2006-07/ದಿ:19-9-2006. ಶ್ರೀ ವೆಂಕಟೇಶ್ ರವರಿಗೆ 1-4 ಆರೋಪ ಪಟ್ಟಿಗಳೊಂದಿಗೆ ಹೊರಡಿಸಿರುವ ನೋಟೀಸ್.
2. ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ ನಿಸಿಶಿಪ/10/2006-07/ದಿ:13-11-2006 ವಿಚಾರಣಾಧಿಕಾರಿಗಳನ್ನು ನೇಮಿಸಿರುವ ಬಗ್ಗೆ
3. ಶ್ರೀಮತಿ ಎಂ.ಎಂ. ಬಿಂದು ಯೋಜನಾ ನಿರ್ದೇಶಕರು (ಸ್ತ್ರೀಶಕ್ತಿ). ಇವರ ವಿಚಾರಣಾ ವರದಿ.
4. ಸರ್ಕಾರಿ ಪತ್ರ ಸಂಖ್ಯೆ ಮಮಇ/249/ಎಸ್‌ಜೆಡಿ/08/ದಿ:7-6-2008 ಶ್ರೀ ವೆಂಕಟೇಶ್ ರವರಿಗೆ ನೋಟೀಸ್ ನೀಡಿರುವುದು.
5. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆ ಪಿಎಸ್‌ಸಿ/79/ಸಿಎನ್‌ಎಸ್/08/ದಿ:6-10-2008.
6. ಸರ್ಕಾರಿ ಪತ್ರ ಸಂಖ್ಯೆ ಮಮಇ/249/ಎಸ್‌ಜೆಡಿ/08 ದಿ: 17-12-2008 2 ನೇ ಸೂಚನಾ ಪತ್ರ.
7. ಶ್ರೀ ವೆಂಕಟೇಶ್ ರವರ ದಿನಾಂಕ :13-1-2009 ರ ಹೇಳಿಕೆ.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ದಿನಾಂಕ: 19-9-2006 ರ ಪತ್ರದಲ್ಲಿ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರು ಶ್ರೀ ವೆಂಕಟೇಶ್. ಹಿಂದಿನ ಅಧೀಕ್ಷಕರು, ಬಾಲಮಂದಿರ, ಕೆ.ಜಿ.ಎಫ್. ಹಾಗೂ ಹಾಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಹೊನ್ನಾವರ ಇವರಿಗೆ ಆಪಾದನಾ ಪಟ್ಟಿಗಳೊಂದಿಗೆ (1-4)ನೋಟೀಸ್ ನೀಡಿ ಸದರಿಯವರ ವಿರುದ್ಧ ಕೆ. ಸಿ. ಎಸ್ ಆರ್. ಸಿ.ಸಿ.ಎ. 1957 ರ ನಿಯಮ 11 ರನ್ವಯ ಇಲಾಖಾ ವಿಚಾರಣೆಯನ್ನು [illegible] ಆದೇಶಿಸಿದ್ದಾರೆ. ಸದರಿ ಅಧಿಕಾರಿಯವರ ವಿರುದ್ಧ ಎರಡು ಆರೋಪಗಳಿರುತ್ತವೆ. ಮೊದಲನೆಯದಾಗಿ ಶ್ರೀಯುತ [illegible]

ಮಂಜೂರಾತಿ ಪಡೆಯದೆ ದಿ:7-1-2005 ರಿಂದ 14-4-2006ರ ಅವಧಿಯಲ್ಲಿ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಿಯಲ್ಲಿರುವುದು. ಹಾಗೂ ಎರಡನೆಯದಾಗಿ ಬಾಲಕರ ಬಾಲಮಂದಿರ, ಕೆ. ಜಿ. ಎಫ್. ಈ ಸಂಸ್ಥೆಯ ಕಬ್ಬಿಣದ ಒಲೆ ಅನುಪಯುಕ್ತ ಸಾಮಗ್ರಿಗಳನ್ನು ಅಕ್ರಮವಾಗಿ ಸಂಸ್ಥೆಯಿಂದ ಹೊರಗಡೆ ಸಾಗಾಣಿಕೆ ಮಾಡಿ ದಾಸ್ತಾನುವಹಿಯನ್ನು ನಾಶಪಡಿಸಿರುವುದು. ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಯೋಜನಾ ನಿರ್ದೇಶಕರು, ಸ್ತ್ರೀ ಶಕ್ತಿ, ಬೆಂಗಳೂರು ಇವರು ನಡೆಸಿ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಶ್ರೀಯುತರ ಮೇಲಿರುವ ಎರಡು ಆರೋಪಗಳು ಸಾಬೀತಾಗಿರುವುದಾಗಿ ವರದಿ ಮಾಡಿರುತ್ತಾರೆ. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರು ಇಲಾಖಾ ವಿಚಾರಣೆಯನ್ನು ಆಧಾರವಾಗಿಟ್ಟು ಕೊಂಡು ಸದರಿಯವರ ವಿರುದ್ಧ ಕಠಿಣ ದಂಡನೆಯಾದ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ. ಶ್ರೀ ವೆಂಕಟೇಶ್ ಇವರು ಕರ್ನಾಟಕ ಲೋಕಸೇವಾ ಆಯೋಗದಿಂದ ಪರಿವೀಕ್ಷಣಾಧಿಕಾರಿ ದರ್ಜೆ-2 ರ ಹುದ್ದೆಯಲ್ಲಿ ನೇಮಿತಗೊಂಡಿದ್ದರಿಂದ ಇವರ ವಿರುದ್ಧ ವಿಧಿಸಬಹುದಾದ ದಂಡನೆಯನ್ನು ಆಯೋಗಕ್ಕೆ ತಿಳಿಸಿ ಅವರ ಅಭಿಪ್ರಾಯವನ್ನು ಸರ್ಕಾರವು ಕೋರಿದ್ದು ಆಯೋಗವು ಮೇಲೆ ಓದಲಾದ (5) ರ ಪತ್ರದಲ್ಲಿ Annual Stock Verification ಸಂದರ್ಭದಲ್ಲಿ ಹಿರಿಯ ಅಧಿಕಾರಿಗಳು ತಯಾರಿಸಿದ ಪಟ್ಟಿಯನ್ವಯ ಅನುಪಯುಕ್ತ ಸಾಮಗ್ರಿಗಳ ಬೆಲೆಗಳನ್ನು ನಿಗಧಿಪಡಿಸಿ ಆ ಹಣವನ್ನು ಆಪಾದಿತ ನೌಕರರಿಂದ ವಸೂಲಿ ಮಾಡುವುದು ಹಾಗೂ 1 ವರ್ಷ, 3 ತಿಂಗಳು, 8 ದಿನಗಳ ಗೈರು ಹಾಜರಿಯನ್ನು ಅನಧಿಕೃತ ಗೈರುಹಾಜರಿಯೆಂದು ಪರಿಗಣಿಸಿ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳ ನಿಯಮ 8 (vi) ರಡಿಯಲ್ಲಿ ಕಡ್ಡಾಯ ನಿವೃತ್ತಿ ದಂಡನೆಯನ್ನು ವಿಧಿಸಬಹುದಾಗಿದೆಯೆಂದು ಅಭಿಪ್ರಾಯ ನೀಡಿರುತ್ತಾರೆ. ಈ ಅಭಿಪ್ರಾಯವನ್ನು ಆಧರಿಸಿ ಸರ್ಕಾರವು ಶ್ರೀಯುತರಿಗೆ ಎರಡನೇ ಸೂಚನಾ ಪತ್ರವನ್ನು ಹೊರಡಿಸಿ ಅವರ ವಿರುದ್ಧ ಜರುಗಿಸಲು ಉದ್ದೇಶಿಸಲಾದ ದಂಡನೆಯನ್ನು ತಿಳಿಸಿರುತ್ತದೆ. ಶ್ರೀಯುತರು ಈ ನೋಟೀಸ್‌ಗೆ ಉತ್ತರ ನೀಡಿ ತಾವು ದಿ:7-1-2005 ರಿಂದ 14-4-2006 ರ ಅವಧಿಯಲ್ಲಿ ಕರ್ತವ್ಯಕ್ಕೆ ಗೈರುಹಾಜರಾಗಿರುವುದು ನಿಜವೆಂದು, ಇದಕ್ಕೆ ತಮ್ಮ ತಾಯಿಯವರ ನಿಧನದಿಂದ ಉಂಟಾದ ಮಾನಸಿಕ ಕ್ಲೇಶವು ಕಾರಣವೆಂದು ತಿಳಿಸಿದ್ದಾರೆ. ಎರಡನೇ ಆರೋಪದ ಬಗ್ಗೆ ವಿಚಾರಣಾ ಸಂದರ್ಭದಲ್ಲಿ ತಮಗೆ ತಮ್ಮ ನಿಲುವನ್ನು ಹೇಳಲು ಅವಕಾಶವನ್ನೇ ನೀಡದೆ ಬರಿ ಸಾಕ್ಷಿಗಳ ಹೇಳಿಕೆಗಳ ಆಧಾರದ ಮೇಲೆ ಆರೋಪವು ರುಜುವಾತಾಗಿದೆಯೆಂದು ವಿಚಾರಣಾಧಿಕಾರಿಗಳು ತೀರ್ಮಾನಕ್ಕೆ ಬಂದಿರುವುದರಿಂದ ಈ ವಿಷಯದಲ್ಲಿ ತಮಗೆ ಅನ್ಯಾಯವಾಗಿದೆಯೆಂದು ದಿನಾಂಕ:2-7-2008 ರಂದು ನೀಡಿರುವ ತಮ್ಮ ಸಮಜಾಯಿಷಿಯನ್ನು ಪರಿಶೀಲಿಸಿ ಮತ್ತೆ ವಿಚಾರಣೆ ನಡೆಸಿ ತಮಗೆ ರಕ್ಷಣಾತ್ಮಕ ಹೇಳಿಕೆ ನೀಡಲು ಅವಕಾಶ ನೀಡಬೇಕೆಂದು ಕೋರಿದ್ದಾರೆ. ಶ್ರೀಯುತರ ಹೇಳಿಕೆಯನ್ನು ಪರಿಶೀಲಿಸಲಾಗಿ ಅಪಾದನೆಗಳನ್ನು ಅಲ್ಲಗಳೆಯುವಂತಹ ಯಾವುದೇ ಪುಷ್ಟೀಕರಣ ನೀಡುವ ಅಂಶಗಳು ಅವರ ವಿವರಣೆಯಲ್ಲಿ ಇಲ್ಲವಾದ್ದರಿಂದ ಶ್ರೀಯುತರ ವಿವರಣೆಯನ್ನು ಸರ್ಕಾರವು ಒಪ್ಪಿರುವುದಿಲ್ಲ. ವಿಚಾರಣಾ ವರದಿಯನ್ನು ಸರ್ಕಾರವು ಸಮಗ್ರವಾಗಿ ಪರಿಶೀಲಿಸಿದ್ದು ಈ ಬಗ್ಗೆ ಕರ್ನಾಟಕ ಲೋಕಸೇವಾ ಆಯೋಗ ನೀಡಿರುವ ಸಹಮತಿಯ ಹಿನ್ನೆಲೆಯಲ್ಲಿ ಸದರಿಯವರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಮಮಇ 249 ಎಸ್‌ಜೆಡಿ 2008 ಬೆಂಗಳೂರು, ದಿನಾಂಕ: 25ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿದ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಶ್ರೀ ವೆಂಕಟೇಶ್, ಹಿಂದಿನ ಅಧೀಕ್ಷಕರು, ಬಾಲಮಂದಿರ, ಕೆ.ಜಿ.ಎಫ್., ಹಾಗೂ ಹಾಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಹೊನ್ನಾವರ ಇವರ ವಿರುದ್ಧ ನಡೆದ ಇಲಾಖಾ ವಿಚಾರಣೆಯಲ್ಲಿ ದಿ: 07-01-2005 ರಿಂದ 14-4-2006 ರವರೆಗಿನ ಅನಧಿಕೃತ ಗೈರುಹಾಜರಿಯ ಬಗ್ಗೆ ಹಾಗೂ ಅನುಪಯುಕ್ತ ವಸ್ತುಗಳ ಕಬ್ಬಿಣದ ಒಲೆ ಅಕ್ರಮವಾಗಿ ಸಂಸ್ಥೆಯಿಂದ ಹೊರಗಡೆ ಸಾಗಾಣಿಕೆ ಮಾಡಿ ದಾಸ್ತಾನುವಹಿಯನ್ನು ನಾಶಪಡಿಸಿರುವುದು ಈ ಎರಡು ಆರೋಪಗಳು ಸಾಬೀತಾಗಿದ್ದು, ಇವರ ವಿರುದ್ಧ Annual stock verification ಸಂದರ್ಭದಲ್ಲಿ ಹಿರಿಯ ಅಧಿಕಾರಿಗಳು ತಯಾರಿಸಿದ ಪಟ್ಟಿಯನ್ವಯ ಅನುಪಯುಕ್ತ ಸಾಮಗ್ರಿಗಳ ಬೆಲೆಗಳನ್ನು ನಿಗಧಿಪಡಿಸಿ ಆ ಹಣವನ್ನು ಆಪಾದಿತ ನೌಕರರಿಂದ ವಸೂಲಿ ಮಾಡಲು ಹಾಗೂ ಸದರಿಯವರು ದಿ: 7-1-2005 ರಿಂದ 14-4-2006 ರ ಗೈರುಹಾಜರಿಯ ಅವಧಿಯನ್ನು ಅನಧಿಕೃತ ಗೈರುಹಾಜರಿಯೆಂದು ಪರಿಗಣಿಸಿ, ಕೆ.ಸಿ.ಎಸ್.ಆರ್. ನಿಯಮ (ಸಿಸಿಎ)ನಿಯಾಮವಳಿಗಳ ನಿಯಮ 8(vi) ರಡಿಯಲ್ಲಿ ಸದರಿಯವರನ್ನು ದಿನಾಂಕ:01-6-2009 ರಿಂದ ಅನ್ವಯವಾಗುವಂತೆ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಆರ್. ನರಸಿಂಹಯ್ಯ**

ಪಿ.ಆರ್. 1352

ಸರ್ಕಾರದ ಅಧೀನ ಕಾರ್ಯದರ್ಶಿ-2 (ಪ್ರಭಾರ),
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

**ಕಂದಾಯ ಸಚಿವಾಲಯ**

**ವಿಷಯ:** ಶ್ರೀ ಬಿ. ಹೆಚ್. ಶಿವಪ್ಪ, ವಿಶೇಷ ತಹಶೀಲ್ದಾರ್, ಬಬಲೇಶ್ವರ, ವಿಜಾಪುರ ಜಿಲ್ಲೆ ಇವರು ಕರ್ತಯಕ್ಕೆ ಗೈರು ಹಾಜರಾಗಿರುವುದರಿಂದ, ಸೇವೆಯಿಂದ ಅಮಾನತ್ತು ಮಾಡುವ ಬಗ್ಗೆ.

**ಓದಲಾಗಿದೆ:** ಜಿಲ್ಲಾಧಿಕಾರಿಗಳು, ವಿಜಾಪೂರ ಜಿಲ್ಲೆ ಇವರ ಪತ್ರದ ಸಂ:ಕವಿ:ಸಿಬ್ಬಂದಿ:2:ವಿವ:13/2008–09, ದಿನಾಂಕ: 08.08.2008, 14.11.2008 & 25.2.2009.

**ಪ್ರಸ್ತಾವನೆ:**

ಶ್ರೀ ಬಿ.ಹೆಚ್. ಶಿವಪ್ಪ, ವಿಶೇಷ ತಹಶೀಲ್ದಾರ್, ಬಬಲೇಶ್ವರ, ವಿಜಾಪೂರ ಜಿಲ್ಲೆ ಇವರು ದಿನಾಂಕ: 09–04–2008 ರಂದು ಸದರಿ ಹುದ್ದೆಗೆ ಕರ್ತವ್ಯಕ್ಕೆ ಹಾಜರಾಗಿ, ಕಾರ್ಯ ನಿರ್ವಹಿಸುತ್ತಿರುವಾಗ ದಿನಾಂಕ: 29–05–2008 ರಡಿ ಅರ್ಜಿ ಸಲ್ಲಿಸಿ, ವೈಯಕ್ತಿಕ ಆದಾರದ ಮೇಲೆ ದಿನಾಂಕ: 30–05–2008 ರಿಂದ ದಿನಾಂಕ: 10–06–2008 12 ದಿನಗಳ ಅವಧಿಗೆ ಗಳಿಕೆ ರಜೆ ಮಂಜೂರಿಸಲು ಕೋರಿದ್ದ ಮೇರೆಗೆ, ಜಿಲ್ಲಾಧಿಕಾರಿಗಳು ದಿನಾಂಕ: 29–05–2008 ರಲ್ಲಿ ರಜೆಯನ್ನು ಮಂಜೂರು ಮಾಡಿರುತ್ತಾರೆ.

ನಂತರ, ಶ್ರೀಯುತರು ದಿನಾಂಕ: 06–06–2008 ರಂದು ಅರ್ಜಿ ಸಲ್ಲಿಸಿ, ಅನಾರೋಗ್ಯದ ನಿಮಿತ್ತ ರಜೆಯನ್ನು ಮಂಜೂರು ಮುಂದುವರೆಸಲು ವೈಧ್ಯಾಧಿಕಾರಿಗಳ ನಿರ್ದೇಶನದಂತೆ, ದಿನಾಂಕ:06–06–2008 ರಿಂದ 30–06–2008 ವರೆಗೆ ಪರಿವರ್ತಿತ ರಜೆ ಕೋರಿ ರಜೆ ಮುಂದುವರಿಸಿರುತ್ತಾರೆ. ಆದರೆ ಅವರು ರಜೆ ನಂತರ ಕರ್ತವ್ಯಕ್ಕೆ ಹಾಜರಾಗದೆ ಇರುವುದರಿಂದ ಈ ಕಚೇರಿ ಸಮ ಸಂಖ್ಯೆಯ ದಿನಾಂಕ: 08–08–2008 ರಿಂದ ದಿನಾಂಕ:01–07–008 ರಿಂದ ಅನಧಿಕೃತ ಗೈರು ಹಾಜರು ಉಳಿದ ಬಗ್ಗೆ ವಿವರಣೆ ಕೇಳಿ ಕಾರಣ ಕೇಳುವ ನೋಟೀಸು ನೀಡಲಾಗಿದೆ. ಆದರೂ ಅವರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ ಮತ್ತು ನೋಟೀಸಿಗೆ ಉತ್ತರ ಸಹ ನೀಡದೆ ಇರುವುದರಿಂದ, ಅವರಿಗೆ ಮತ್ತೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ದಿನಾಂಕ:14.11.2008 ರಡಿ 2ನೇ ಕಾರಣ ಕೇಳುವ ನೋಟೀಸು ನೀಡಲಾಗಿ, ಅವರು ತಮ್ಮ ಹೇಳಿಕೆಯನ್ನು ನೀಡದೆ ದಿನಾಂಕ:01–07–2008 ರಿಂದ ಈವತ್ತಿನವರೆಗೂ ಕರ್ತವ್ಯಕ್ಕೆ ಹಾಜರಾಗದೆ ಅನಧಿಕೃತ ಗೈರು ಹಾಜರಾಗಿ ಉಳಿದಿರುತ್ತಾರೆ. ಆದ್ದರಿಂದ ಜಿಲ್ಲಾಧಿಕಾರಿಗಳು, ವಿಜಾಪೂರ ಜಿಲ್ಲೆ, ವಿಜಾಪೂರ ಇವರು ದಿನಾಂಕ:25–02–2009 ರಂದು ಈ ಕುರಿತು ವರದಿ ಸಲ್ಲಿಸಿ, ಶ್ರೀ ಬಿ. ಹೆಚ್. ಶಿವಪ್ಪ, ವಿಶೇಷ ತಹಶೀಲ್ದಾರ್, ಬಬಲೇಶ್ವರ, ವಿಜಾಪೂರ ತಾಲ್ಲೂಕು ಇವರು ದಿನಾಂಕ:01–07–2008 ರಿಂದ ಕಚೇರಿಗೆ ಅನಧಿಕೃತ ಗೈರು ಹಾಜರಾಗಿ ಉಳಿದಿದ್ದರಿಂದ, ಈ ಕುರಿತು ಸೂಕ್ತ ಕ್ರಮ ಜರುಗಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳು, ವಿಜಾಪೂರ ಜಿಲ್ಲೆ ಇವರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಶ್ರೀ ಬಿ.ಹೆಚ್. ಶಿವಪ್ಪ ಇವರು ಕಚೇರಿಗೆ ಗೈರು ಹಾಜರಾಗಿರುವ ಕುರಿತು, ಕಾರಣ ಕೇಳುವ ನೋಟೀಸನ್ನು ಹಾಗೂ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿದ್ದರೂ, ಇದಕ್ಕೂ ಸಹ ಉತ್ತರ ನೀಡದೇ, ಶ್ರೀ ಬಿ.ಹೆಚ್. ಶಿವಪ್ಪ, ವಿಶೇಷ ತಹಶೀಲ್ದಾರ್ ಇವರು ಕರ್ತವ್ಯ ಚ್ಯುತಿ ಎಸಗಿದ್ದರಿಂದ, ಅವರನ್ನು ಇಲಾಖಾ ವಿಚಾರಣೆ ಬಾಕಿಯಿರಿಸಿ, ಆಮಾನತ್ತಿನಲ್ಲಿಡಲು ತೀರ್ಮಾನಿಸಿರುತ್ತದೆ ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂ: ಆರ್‌ಡಿ 04 ಎಡಿಇ 2009, ಬೆಂಗಳೂರು, ದಿನಾಂಕ: 21ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀ ಬಿ.ಹೆಚ್. ಶಿವಪ್ಪ, ವಿಶೇಷ ತಹಶೀಲ್ದಾರ್, ಬಬಲೇಶ್ವರ, ವಿಜಾಪೂರ ಜಿಲ್ಲೆ ಇವರು ದಿನಾಂಕ:01–07–2008 ರಿಂದ ಕಚೇರಿಗೆ ಅನಧಿಕೃತವಾಗಿ ಗೈರು ಹಾಜರಾಗಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿಯಿರಿಸಿ, ಈ ಕೂಡಲೇ ಜಾರಿಗೆ ಬರುವಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 10(1) (ಡಿ) ರನ್ವಯ, ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.

ಸದರಿ ಅಧಿಕಾರಿಗಳು ಅಮಾನತ್ತಿನ ಅವಧಿಯಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 98 ರನ್ವಯ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಅಮಾನತ್ತಿನ ಅವಧಿಯಲ್ಲಿ ಜಿಲ್ಲಾಧಿಕಾರಿಗಳು ವಿಜಾಪೂರ ಜಿಲ್ಲೆ, ವಿಜಾಪೂರ ಇವರ ಅನುಮತಿಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1353

**ಬಿ.ವಿ. ಚೌಕಿಮಠ**

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು–3)

**ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ**

**ವಿಷಯ:** ಬೆಂಗಳೂರು ಬಯೋ 2009 ರ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ : ವಿಯಇ 55 ವಿತ್ರಮ 2009, ದಿನಾಂಕ: 16-04-2009

2. ಸದಸ್ಯ – ಕಾರ್ಯದರ್ಶಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು. ಇವರ ಏಕ ಕಡತ ಸಂಖ್ಯೆ ವಿತಂಇ/18/ಬಯೋ/2009, ದಿನಾಂಕ: 17/04/2009

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿನ ಆದೇಶದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು ಮುಂದುವರೆಸಿ, 2009-10ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3425-60-200-0-01(101)(ಯೋ) ವೈಜ್ಞಾನಿಕ ಸಂಸ್ಥೆಗಳಿಗೆ ಸಹಯಾನುದಾನವಾಗಿ ಒಟ್ಟು ರೂ. 340.00 ಲಕ್ಷಗಳ ಅನುದಾನವನ್ನು ಕಲ್ಪಿಸಲಾಗಿದೆ.

ಮೆ: ಎಂ. ಎಂ. ಆಕ್ಟಿವ್, ನಂ.9, ಯುಎನ್ಐ ಬಿಲ್ಡಿಂಗ್, ಮೊದಲನೇ ಮಹಡಿ ವಸಂತನಗರ ಬೆಂಗಳೂರು. ಇವರು ಬೆಂಗಳೂರು ಬಯೋ 2009 ರ ಕಾರ್ಯಕ್ರಮವನ್ನು 2009ರ ಜೂನ್ 8 ರಿಂದ 20 ರವರೆಗೆ ದಿ ಲಲಿತ್ ಅಶೋಕ, ಬೆಂಗಳೂರು. ಇಲ್ಲಿ ನಡೆಸಲು ರೂ. 10.00 ಲಕ್ಷಗಳ ಸಹಾಯಾನುದಾನಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಕಾರ್ಯಕ್ರಮ ಹಮ್ಮಿಕೊಳ್ಳಲು ರೂ. 5.00 ಲಕ್ಷಗಳನ್ನು ಮಂಜೂರು ಮಾಡುವಂತೆ ಮೇಲೆ ಓದಲಾದ (2) ರಲ್ಲಿನ ಏಕ ಕಡತದಲ್ಲಿ ಸದಸ್ಯ-ಕಾರ್ಯದರ್ಶಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು ಇವರು ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಿಯಇ 63 ವಿತ್ರಮ 2009, ಬೆಂಗಳೂರು, ದಿನಾಂಕ: 12ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಪ್ರಾಯೋಜಕರು, ಮೆ: ಎಂ.ಎಂ. ಆಕ್ಟಿವ್, ನಂ.9, ಯು.ಎನ್.ಐ ಬಿಲ್ಡಿಂಗ್. ಮೊದಲನೇ ಮಹಡಿ, ವಸಂತನಗರ, ಬೆಂಗಳೂರು ಇವರು ಬೆಂಗಳೂರು ಬಯೋ 2009ರ ಕಾರ್ಯಕ್ರಮವನ್ನು 2009ರ ಜೂನ್ 18 ರಿಂದ 20ರ ವರೆಗೆ ಬೆಂಗಳೂರಿನಲ್ಲಿ ನಡೆಸಲು **ಸದಸ್ಯ- ಕಾರ್ಯದರ್ಶಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು** ಇವರಿಗೆ ರೂ. 5.00 ಲಕ್ಷ (ರೂಪಾಯಿ ಐದು ಲಕ್ಷಗಳು ಮಾತ್ರ) ಗಳನ್ನು ಈ ಕೆಳಕಂಡ ನಿಬಂಧನೆ ಮತ್ತು ಷರತ್ತುಗಳಿಗೊಳಪಟ್ಟು ಮಂಜೂರು ಮಾಡಿದೆ.

1. ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದಲ್ಲಿನ ಲೆಕ್ಕ ಶೀರ್ಷಿಕೆ 3425-60-200-0-01(101) (ಯೋ) ವೈಜ್ಞಾನಿಕ ಸಂಸ್ಥೆಗಳಿಗೆ ಸಹಾಯಾನುದಾನ ಇದರ ಅಡಿಯಲ್ಲಿ ಭರಿಸತಕ್ಕದ್ದು.
2. ಈ ಮೊತ್ತವನ್ನು ಸದಸ್ಯ-ಕಾರ್ಯದರ್ಶಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು ಇವರು ಖಜಾನೆಯಿಂದ ಪಡೆದು ಮೇಲ್ಕಾಣಿಸಿದ ಕಾರ್ಯಕ್ರಮಕ್ಕಾಗಿ ಮೆ: ಎಂ. ಎಂ. ಆಕ್ಟಿವ್ ಸಂಸ್ಥೆಗೆ ಪಾವತಿಸತಕ್ಕದ್ದು.
3. ಈ ಮೇಲಿನ ಅನುದಾನವನ್ನು ಖರ್ಚು ಮಾಡಿದ ಬಗ್ಗೆ ಸಂಸ್ಥೆಯು ಉಪಯೋಗತಾ ಪ್ರಮಾಣ ಪತ್ರ ಹಾಗೂ ಆಡಿಟ್ ಆದ ಲೆಕ್ಕ ಪತ್ರಗಳನ್ನು ಕಾರ್ಯಕ್ರಮ ಮುಗಿದ ತಕ್ಷಣ ಸಲ್ಲಿಸತಕ್ಕದ್ದು.
4. ಬಿಡಗಡೆ ಮಾಡಿದ ಹಣವನ್ನು ಉದ್ದೇಶಿತ ಕಾರ್ಯಕ್ರಮಕ್ಕೆ ಮಾತ್ರ ಉಪಯೋಗಿಸತಕ್ಕದ್ದು, ಹಾಗೂ ಈ ಹಣವನ್ನು ಬೇರೆ ಯೋಜನೆಗೆ / ಕಾರ್ಯಕ್ರಮಗಳಿಗೆ ಸರ್ಕಾರದ ಅನುಮತಿ ಇಲ್ಲದೆ ವರ್ಗಾಯಿಸಬಾರದು.
5. ಉದ್ದೇಶಿತ ಕಾರ್ಯಕ್ರಮಕ್ಕೆ ಖರ್ಚಾಗದ ಬಾಬ್ತು ಅನುದಾನವನ್ನು ಉಳಿಸಿಕೊಂಡು ಅದನ್ನು ಸರ್ಕಾರದ ಗಮನಕ್ಕೆ ತರದೇ ಇದ್ದದ್ದು ಕಂಡು ಬಂದಲ್ಲಿ ಸದರಿ ಮೊತ್ತಕ್ಕೆ ಬ್ಯಾಂಕ್ ನೀಡುವ ಸರಳ ಬಡ್ಡಿಯೊಂದಿಗೆ ಸರ್ಕಾರಕ್ಕೆ ಪಾವತಿಸಿಕೊಳ್ಳಲು ಕ್ರಮಕೈಗೊಳ್ಳಲಾಗುವುದು.
6. ಅನುದಾನವನ್ನು ಬಳಸದೇ ಬ್ಯಾಂಕಿನಲ್ಲಿ ಠೇವಣಿ ಮಾಡಿದ ಪಕ್ಷದಲ್ಲಿ ಅದನ್ನು ಸರ್ಕಾರದ ಗಮನಕ್ಕೆ ತರತಕ್ಕದ್ದು ಮತ್ತು ಅಂತಹ ಠೇವಣಿ ಮೊತ್ತಕ್ಕೆ ದೊರೆಯುವ ಬಡ್ಡಿಯನ್ನು ಹಿಂತೆಗೆದುಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.
7. ಉದ್ದೇಶಿತ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದಂತಹ ಅನುದಾನದ ಲೆಕ್ಕಪತ್ರಗಳನ್ನು ಮಂಜೂರು ಮಾಡುವ ಅಧಿಕಾರಿಯು ಸಮೀಕ್ಷೆಗಾಗಿ ಕೋರಿದ್ದಲ್ಲಿ ತಪ್ಪದೇ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ 16/5/2008 ರ ಅಡಿಯಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ಬೋರಲಿಂಗಯ್ಯ**

ಪಿ.ಆರ್. 1354

ಸರ್ಕಾರದ ಅಧೀನ ಕಾರ್ಯದರ್ಶಿ,

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

**ಒಳಾಡಳಿತ ಸಚಿವಾಲಯ**

**ವಿಷಯ:** 12ನೇ ಹಣಕಾಸು ಯೋಜನೆ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** ಮಹಾ ನಿರ್ದೇಶಕರು ಮತ್ತು ಅರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: ಟಿಟಿಎಂ/ಹ.ಹ.ಕಾ.ಆಯೋಗ/2009 ದಿನಾಂಕ:02/05/2009

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ 02/05/2009 ರ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, 2009-10 ನೇ ಸಾಲಿಗೆ 12 ನೇ ಆರ್ಥಿಕ ಹಣಕಾಸು ಯೋಜನೆ ಅಡಿಯಲ್ಲಿ ಅನುಮೋದಿಸಲಾಗಿರುವ ಒಟ್ಟು ರೂ 25.00 ಕೋಟಿಗಳನ್ನು ಪೊಲೀಸ್ ಆಡಳಿತ ಸುಧಾರಣೆಗಾಗಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ನಿರೀಕ್ಷಕರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರೀಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ:07:ಪಿಎಫ್‌ಎಸ್:2009(ಭಾಗ), ಬೆಂಗಳೂರು, ದಿನಾಂಕ: 27ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 12ನೇ ಹಣಕಾಸು ಯೋಜನೆ ಅಡಿಯಲ್ಲಿ ಪೊಲೀಸ್ ಆಡಳಿತದ ಸುಧಾರಣೆಗಾಗಿ 2009-10ನೇ ಸಾಲಿಗೆ ರೂ 25.00 ಕೋಟಿಗಳನ್ನು (ಇಪ್ಪತ್ತೈದು ಕೋಟಿ ರೂಪಾಯಿಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಉಪಯೋಗಿಸಿಕೊಳ್ಳಲು ಸರ್ಕಾರವು ಈ ಮೂಲಕ ಮಂಜೂರಾತಿಯನ್ನು ನೀಡಿದೆ.

1. ಈ ಮೊತ್ತವನ್ನು ಕ್ರಿಯಾ ಯೋಜನೆಯಲ್ಲಿನ ಅನುಮೋದಿತ ಅಂಶಗಳಿಗೆ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು.
2. ಸದರಿ ಅನುದಾನದ ಬಳಕೆ ಕುರಿತು ಕಾಲಮಿತಿ ಅವಧಿಯಲ್ಲಿ ತ್ರೈಮಾಸಿಕ ಪ್ರಗತಿ ಪ್ರಮಾಣ ಪತ್ರಗಳನ್ನು ಆರ್ಥಿಕ ಇಲಾಖೆಯ ಆರ್ಥಿಕ ಆಯೋಗ ಕೋಶಕ್ಕೆ ಸಲ್ಲಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಲೆಕ್ಕ ಶೀರ್ಷಿಕೆ 2055-00-800-0-11-ಯೋಜನೇತರ ಇದರಡಿಯಲ್ಲಿ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:28:ಆಆಕೋ:09 ದಿನಾಂಕ:20/05/2009ರ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1364 **ಬಿ.ಎಂ. ಲಕ್ಷ್ಮಿನಾರಾಯಣ**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ವೆಚ್ಚ)

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ**

**ತಿದುಪಡ್ಡಿ**

**ಸಂಖ್ಯೆ ಆಕುಕ 184 ಎಂಎಸ್‌ಎಸ್ 2008, ಬೆಂಗಳೂರು, ದಿನಾಂಕ: 20ನೇ ಮೇ 2009**

ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ 184 ಎಂಎಸ್‌ಎಸ್ 2008, ದಿನಾಂಕ 19-05-2009ರ 7ನೇ ಸಾಲಿನಲ್ಲಿ "ಅಪರ ನಿರ್ದೇಶಕರು, (ಉಪ ಯೋಜನಾಡಳಿತಾಧಿಕಾರಿ), ಕೆ.ಹೆಚ್.ಎಸ್.ಡಿ.ಆರ್.ಪಿ. ಬೆಂಗಳೂರು, ಈ ಹುದ್ದೆಗೆ ನೇಮಿಸಿದೆ" ಎಂದಿರುವುದನ್ನು "ಡಾ.ವಿ.ಡಿ.ಹಳಕಟ್ಟಿ, ಜಂಟಿ ನಿರ್ದೇಶಕರು, ಕೆ.ಹೆಚ್.ಎಸ್.ಡಿಆರ್.ಪಿ., ಬೆಂಗಳೂರು, ಇವರು ಕಾರ್ಯನಿರ್ವಹಿಸುತ್ತಿರುವ ಹುದ್ದೆಯನ್ನು ಅಪರ ನಿರ್ದೇಶಕರು (ಉಪ ಯೋಜನಾಡಳಿತಾಧಿಕಾರಿ) ಕೆ.ಹೆಚ್.ಎಸ್.ಡಿ.ಆರ್.ಪಿ., ಬೆಂಗಳೂರು, ಎಂದು ಗುರುತಿಸಿ ಈ ಹುದ್ದೆಗೆ ನೇಮಿಸಿದೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಪದ್ಮಾವತಿ**

ಪಿ.ಆರ್. 1332 ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

**ಕಂದಾಯ ಸಚಿವಾಲಯ**

**ವಿಷಯ:** ಕೋಲಾರದಲ್ಲಿ ವಿಓಡಿ 179 ನ್ನು ಸ್ಥಳಾಂತರಿಸುವ ಸಂಬಂಧ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ವರವು ಮತ್ತು ಖುದಾಪುರ ಕಾವಲುಗಳಲ್ಲಿ 4290 ಎಕರೆ ಸರ್ಕಾರಿ ಜಮೀನನ್ನು ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:** ಜಿಲ್ಲಾಧಿಕಾರಿಗಳು ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ರವರ ಪತ್ರ ಸಂಖ್ಯೆ: ಎಲ್‌ಎನ್‌ಡಿ:ಸಿಆರ್:178:07-08 ದಿನಾಂಕ:6/15/12-2008.

ಪ್ರಸ್ತಾವನೆ:

ನಾಗರೀಕ ವಿಮಾನಯಾನ ಮತ್ತು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ರಕ್ಷಣಾ ಸಚಿವಾಲಯ ಭಾರತ ಸರ್ಕಾರವು ಬೆಂಗಳೂರಿನಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾರಂಭವಾದ ಹಿನ್ನೆಲೆಯಲ್ಲಿ 179 ವಿಓಡಿಸ್ನು ಕೋಲಾರದಿಂದ ಹೊಸ ಪ್ರದೇಶಕ್ಕೆ ಸ್ಥಳಾಂತರಿಸಲು ತೀರ್ಮಾನಿಸಿರುತ್ತದೆ ಅಲ್ಲದೆ ಬೃಹತ್ ಸಂಶೋಧನಾ ಮತ್ತು ರಕ್ಷಣಾ ಕೇಂದ್ರ ಹಾಗೂ 3 ಕಿ. ಲೋಮೀಟರ್ ಉದ್ದದ ವಿಮಾನ ಹಾರಾಟದ ವ್ಯವಸ್ಥೆಯನ್ನು ರೂ.850 ರಿಂದ ರೂ 900 ಕೋಟಿ ಬಂಡವಾಳ ಹೂಡಿಕೆಯೊಂದಿಗೆ ಪ್ರಾರಂಭಿಸಲಿದ್ದು ಇದಕ್ಕೆ ಸುಮಾರು 4300 ಎಕರೆ ಜಮೀನಿನ ಅವಶ್ಯಕತೆ ಇರುತ್ತದೆ. ಈ ಬೃಹತ್ ಯೋಜನೆಯ ಅನುಷ್ಠಾನದ ಸಂಬಂಧ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು ವಿಮಾನ ನಿಲ್ದಾಣ ಪ್ರಾಧಿಕಾರದ ಸಹಾಯೋಗದೊಂದಿಗೆ ಮತ್ತು ಮಹಾ ನಿರ್ದೇಶಕರು ವಿಮಾನಯಾನ ಮಂತ್ರಾಲಯದೊಂದಿಗೆ ಮೇಲ್ಕಂಡ ಯೋಜನೆಯ ಅನುಷ್ಠಾನದ ಸಂಬಂಧ ಸೂಕ್ತ ಜಮೀನಿನ ಸಮೀಕ್ಷೆ ನಡೆಸಿದೆ. ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲೂಕಿನ ವರವು ಹಾಗೂ ಖುದಾಪುರ ಕಾವಲುಗಳಲ್ಲಿ 4200 ಎಕರೆ ಜಮೀನನ್ನು ಜಂಟಿ ಮೋಜಿಣಿ ಮಾಡಿ ಗುರುತಿಸಲಾಗಿದೆ.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕು ಕುರಿ ಸಾಕಾಣಿಕೆ ಸಂವರ್ಧನಾ ಕೇಂದ್ರವು ಕುರಿ ಮತ್ತು ಉಣ್ಣೆ ಕೈ ಮಗ್ಗ ಅಭಿವೃದ್ಧಿ ನಿಗಮ ಬೆಂಗಳೂರಿನ ಆಡಳಿತಾತ್ಮಕ ನಿಯಂತ್ರಣದಲ್ಲಿರುತ್ತದೆ. ವರವು ಕಾವಲ್ ಗ್ರಾಮದ ಸ.ನಂ.343 ರಲ್ಲಿ ಒಟ್ಟು 6893.13 ಎಕರೆ ಹಾಗೂ ಕುದಾಪುರ ಕಾವಲ್‌ನ ಸ. ನಂ. 47 ರಲ್ಲಿ ಒಟ್ಟು 2819.23 ಎಕರೆ ಇರುತ್ತದೆ ಈ ಪೈಕಿ ವರವು ಕಾವಲ್‌ನಲ್ಲಿ 4000 ಎಕರೆ ಹಾಗೂ ಖುದಾಪುರ ಕಾವಲ್‌ನಲ್ಲಿ 200 ಎಕರೆ ಜಮೀನನ್ನು ಉದ್ದೇಶಿತ ಯೋಜನೆಗೆ ಗುರ್ತಿಸಲಾಗಿದೆ. ಯೋಜಿತ ಉದ್ದೇಶಕ್ಕೆ ಜಮೀನು ಮಂಜೂರಾತಿಗೆ ಗ್ರಾಮಸ್ಥರ ಸಹಮತವಿರುತ್ತದೆ ಮುಂದುವರಿದು ಪ್ರಸ್ತಾಪಿತ ಜಮೀನಿಗೆ ಕೂಡು ರಸ್ತೆಯ ಅವಶ್ಯಕತೆ ಇರುವ ಕಾರಣ 50 ಮೀಟರ್ ಅಗಲದ ಜಮೀನನ್ನು ಖುದಾಪುರ ಕಾವಲ್‌ನ ಸ.ನಂ. 47 ರಲ್ಲಿ ಒದಗಿಸಲು ಡಿಆರ್‌ಡಿಓ ರವರು ಕೋರಿದ್ದು ಈ ಉದ್ದೇಶಕ್ಕೆ ಹೆಚ್ಚುವರಿಯಾಗಿ ಅಂದಾಜು 90 ಎಕರೆ ಜಮೀನಿನ ಅವಶ್ಯಕತೆ ಇರುತ್ತದೆ ಎಂಬುದಾಗಿ ಜಿಲ್ಲಾಧಿಕಾರಿಗಳು ಮೇಲೆ ಓದಲಾದ ಪತ್ರದಲ್ಲಿ ವರದಿ ಮಾಡಿದ್ದಾರೆ.

ಉಪ ನಿರ್ದೇಶಕರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಚಿತ್ರದುರ್ಗ ರವರ ವರದಿಯಂತೆ ಕಾವಲ್‌ನ ಸುತ್ತಮುತ್ತಲಿನ ಗ್ರಾಮದ ಜಾನುವಾರುಗಳು ಕಾವಲಿನಲ್ಲಿ ಮೇಯಲು ಅವಕಾಶವಿರುವುದಿಲ್ಲ ಪಾಶುಪಾಲಕರು ಅವರ ರಾಸುಗಳನ್ನು ಅವರದೇ ಜಮೀನಿನಲ್ಲಿ, ಗೋಮಾಳಗಳಲ್ಲಿ ಮತ್ತು ಅರಣ್ಯ ಪ್ರದೇಶಗಳಲ್ಲಿ ಮೇಯಿಸಿಕೊಳ್ಳುತ್ತಿದ್ದು ಕುರಿ ಸಂವರ್ಧನಾ ಕೇಂದ್ರಕ್ಕೆ ಸೇರಿರುವ 823 ಜಾನುವಾರುಗಳಿಗೆ 177 ಎಕರೆ ಜಮೀನಿನ ಅವಶ್ಯಕತೆ ಇರುವುದಾಗಿ ತಿಳಿಯಬರುತ್ತದೆ. ಅಮೃತ್ ಮಹಲ್ ಕಾವಲ್ ಜಮೀನುಗಳಲ್ಲಿ ಮೇವು ಅಭಿವೃದ್ಧಿಯ ಯಾವುದೇ ಯೋಜನೆಗಳು/ ಕಾರ್ಯಗಳು ನಡೆಯುತ್ತಿರುವುದಿಲ್ಲ ಪ್ರಸ್ತುತ ಕಾವಲ್ ಜಮೀನುಗಳು ಪಶುಸಂಗೋಪನಾ ಇಲಾಖೆಯ ರಕ್ಷಣೆಯಲ್ಲಿದ್ದಾಗ್ಯೂ ಯೋಜಿತ ಉದ್ದೇಶಕ್ಕೆ ಬಹುತೇಕ ಜಮೀನುಗಳ ಬಳಕೆಯಾಗುತ್ತಿಲ್ಲ ಹಾಗೂ ಈ ಜಮೀನುಗಳಲ್ಲಿ ಅನಧಿಕೃತ ಸಾಗುವಳಿ ಅನಧಿಕೃತ ಗಣಿಗಾರಿಕೆ ಹಾಗೂ ಒತ್ತುವರಿ ತಡೆಯಲು ಯೋಜಿತ ಯೋಜನೆಗೆ ಪ್ರಸ್ತಾಪಿತ ಜಮೀನನ್ನು ಶಿಫಾರಸ್ಸು ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ಚಿತ್ರದುರ್ಗ ರವರು ಅಭಿಪ್ರಾಯ ನೀಡಿರುತ್ತಾರೆ.

ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ: 14 ಎಲ್‌ಜಿಹಿ:2008, ಬೆಂಗಳೂರು ದಿನಾಂಕ: 21ನೇ ಮೇ 2009**

ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರ ಅಧಿಕಾರ ಚಲಾಯಿಸಿ, ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು ವರವು ಕಾವಲ್ ಸ.ನಂ. 343 ರಲ್ಲಿನ 400 ಎಕರೆ ಮತ್ತು ಖುದಾಪುರ ಕಾವಲ್ ಸ.ನಂ.47ರಲ್ಲಿ 290 ಎಕರೆ ಒಟ್ಟಾರೆ 4290 ಎಕರೆ ಜಮೀನನ್ನು ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮ 97(4)ರಲ್ಲಿನ ಅವಕಾಶದಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಸದರಿ ಜಮೀನಿನ ಮಾರ್ಗಸೂಚಿ ಬೆಲೆ ಎಕರೆ ಒಂದಕ್ಕೆ ರೂ. 30,000/- (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ವಿಧಿಸಿ, ಡಿಆರ್‌ಡಿಓ ರಕ್ಷಣಾ ಸಂಸ್ಥೆಯು ಎರಡು ವರ್ಷದೊಳಗಾಗಿ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ರಗತಿ ಸಾಧಿಸುವ ಷರತ್ತಿಗೊಳಪಟ್ಟು ಡಿಆರ್‌ಡಿಓ ರಕ್ಷಣಾ ಮಂತ್ರಾಲಯ ಕೇಂದ್ರ ಸರ್ಕಾರ ರವರಿಗೆ ಮಂಜೂರು ಮಾಡಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಪಶುಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆ(ಪಶುಸಂಗೋಪನೆ) ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಪಸಂಮಿ:29ಕಕಮ:2008 ದಿನಾಂಕ:19-12-2008 ಮತ್ತು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಎಫ್‌ಡಿ:1630: ಇಎಕ್ಸ್‌ಪಿ-7:2008 ದಿನಾಂಕ:3-12-2008ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1370

**ಎಂ.ಕೆ. ನರಸಿಂಹಲು**

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಮಂಜೂರಾತಿ-3)

**ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ**

**ವಿಷಯ:** 2008-09 ನೇ ಸಾಲಿಗೆ ಕೆಬಿಟ್ಸ್ ಸಂಸ್ಥೆಯ ಆಡಳಿತ ನಿರ್ವಹಣೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 30 ಅಡವಿ 2009 ದಿನಾಂಕ 12-05-09,

2. ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು ಇವರ ಪತ್ರ ಸಂಖ್ಯೆ ಕೆಬಿಟ್ಸ್ /ಎಸಿಟಿ/2009-10,ದಿ:21-5-2009.

**ಪ್ರಸ್ತಾವನೆ:**

2009-10ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ "3451-00-090-2-01ಮಾಹಿತಿ ತಂತ್ರಜ್ಞಾನ-ಉನ್ನತೀಕರಣ ಮತ್ತು ಅಭಿವೃದ್ಧಿ 059 ಇತರೆ ಖರ್ಚು [ಯೋಜನೆ]" ರಡಿಯಲ್ಲಿ ರೂ. 920.00 ಲಕ್ಷಗಳ ಅನುದಾನವು ಒದಗಣೆಯಾಗಿದ್ದು, ಅದರಲ್ಲಿ ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು [ಕೆಬಿಟ್ಸ್] ಸಂಸ್ಥೆಯ ಆಡಳಿತ ನಿರ್ವಹಣೆಗಾಗಿ ರೂ. 80.00 ಲಕ್ಷ [ರೂ. ಎಂಬತ್ತು ಲಕ್ಷಗಳು ಮಾತ್ರ] ಗಳ ಅನುದಾನವನ್ನು ಮೇಲೆ [1] ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಹಂಚಿಕೆ ಮಾಡಲಾಗಿದೆ.

ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು ಇವರು ಮೇಲೆ (2) ರಲ್ಲಿ ಓದಲಾದ ದಿನಾಂಕ 21-5-2009ರ ಪತ್ರದಲ್ಲಿ ಕೆಬಿಟ್ಸ್ ಸಂಸ್ಥೆಯಲ್ಲಿನ ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ಸಂಬಳ, ಇಂಧನ ವೆಚ್ಚ, ಅತಿಥ್ಯ ವೆಚ್ಚಗಳು, ಕಛೇರಿಯ ಉಪಕರಣಗಳು, ಕಾಗದ ಇತ್ಯಾದಿ ಖರ್ಚುಗಳು ನಿರ್ವಹಿಸುವ ಸಂಬಂಧ ರೂ. 40.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಪ್ರಸ್ತುತ ರೂ. 40.00 ಲಕ್ಷಗಳ ಅನುದಾನವನ್ನು ಮೊದಲನೆಯ ಕಂತಾಗಿ ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಮಾತಂಇ37 ಅಡವಿ 2007, ಬೆಂಗಳೂರು, ದಿನಾಂಕ: 30ನೇ ಮೇ 2009.**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕೆಬಿಟ್ಸ್ ಸಂಸ್ಥೆಯ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ. 40.00 ಲಕ್ಷಗಳ ಅನುದಾನವನ್ನು 2009-10ನೇ ಸಾಲಿನ ಮೊದಲನೆಯ ಕಂತಾಗಿ, ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು [ಕೆಬಿಟ್ಸ್] ಸಂಸ್ಥೆಗೆ ನೀಡಲು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ವಿತರಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **'3451-00-090-2-01 ಮಾಹಿತಿ ತಂತ್ರಜ್ಞಾನದ ಉನ್ನತೀಕರಣ ಮತ್ತು ಅಭಿವೃದ್ಧಿ-059-ಇತರೆ ವೆಚ್ಚ (ಯೋಜನೆ)'** ಇದರ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಅನುದಾನದ ಬಳಕೆಯ ಬಗ್ಗೆ ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು [ಕೆಬಿಟ್ಸ್] ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳ ಜೊತೆಗೆ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ 16-05-2008 ರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ.ವಿ. ಕೃಷ್ಣಮೂರ್ತಿ**

ಪಿ.ಆರ್. 1371 ಸರ್ಕಾರದ ಅಧೀನ ಕಾರ್ಯದರ್ಶಿ,

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

**ಸಹಕಾರ ಸಚಿವಾಲಯ**

**ವಿಷಯ:** ಐ.ಟಿ.ಐ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದರ 2007-08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಕಾಲಾವಧಿ ವಿಸ್ತರಿಸುವ ಬಗ್ಗೆ.

**ಓದಲಾಗಿದೆ:** ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಹೆಚ್‌ಎಸ್‌ಜಿ-2/260/ಹೆಚ್‌ಹೆಚ್‌ಎಸ್/2008-09 ದಿನಾಂಕ:31-03-2009.

ಪ್ರಸ್ತಾವನೆ:

ಐ.ಟಿ.ಐ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದರ 2007–08 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸುವ ಅವಧಿಯನ್ನು ದಿನಾಂಕ:31-03-2009 ರವರೆಗೆ ಇಲಾಖಾ ಸಕ್ಷಮ ಪ್ರಾಧಿಕಾರವಾದ ಸಹಕಾರ ಸಂಘಗಳ ಜಂಟಿ ನಿಬಂಧಕರು ವಿಸ್ತರಿಸಿದ್ದು 15ನೇ ಲೋಕಸಭಾ ಚುನಾವಣೆಗಳನ್ನು ನಡೆಸುವ ಅಧಿಸೂಚನೆ ಹೊರಬಿದ್ದ ಕಾರಣ ಹಾಗೂ ಮಾರ್ಚ್ ಮಾಹೆಯ ಅಂತ್ಯವು ಐ.ಟಿ.ಐ ಕಾರ್ಖಾನೆಯ ಉತ್ಪಾದನಾ ಅವಧಿಯಾದ ಕಾರಣ ಸಂಘದ ಸದಸ್ಯರೆಲ್ಲರೂ ಪೂರ್ಣ ಮಟ್ಟದಲ್ಲಿ ಮಹಾಸಭೆಯಲ್ಲಿ ಪಾಲ್ಗೊಳ್ಳಲು ಅನುಕೂಲ ಕಲ್ಪಿಸುವ ಹಿತ ದೃಷ್ಟಿಯಿಂದ ಸಂಘದ 2007–08 ನೇ ಸಾಲಿನ ಮಹಾಸಭೆಯನ್ನು ನಡೆಸಲು ದಿನಾಂಕ:01–04–2009 ರಿಂದ 3 ತಿಂಗಳು ಅವಧಿಯನ್ನು ವಿಸ್ತರಿಸಲು ಆದೇಶ ಹೊರಡಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಶಿಫಾರಸ್ಸು ಮಾಡಿದ್ದಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಒ 68 ಸಿಎಲ್ಎಂ 2009, ಬೆಂಗಳೂರು, ದಿನಾಂಕ: 19ನೇ ಮೇ 2009**

ಪ್ರಸ್ತಾವನೆಯಲ್ಲಿ ವಿಸರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 12 ರಡಿಯಲ್ಲಿ ಪ್ರದತತವಾಗಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಐ.ಟಿ.ಐ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದರ 2007–08 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ:30.06.2009 ರವರೆಗೆ ಕಾಲಾವಕಾಶ ನೀಡಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 27 ಸದರಿ ಸಂಸ್ಥೆಗೆ ಕೆಳಗಿನ ಮಾರ್ಪಾಟಿನೊಂದಿಗೆ ಅನ್ವಯವಾಗುತ್ತದೆಂದು ನಿದೇಶಿಸುತ್ತದೆ ಎಂದರೆ:

**27ರ ಪ್ರಕರಣದಲ್ಲಿ,**

27ನೇ ಪ್ರಕರಣ ಉಪಪ್ರಕರಣ(1)ರ ಪರಂತುಕದಲ್ಲಿನ **"ಆರು ತಿಂಗಳು"** ಎಂಬ ಪದಗಳಿಗೆ ಬದಲಾಗಿ **"ಒಂಬತ್ತು ತಿಂಗಳು"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**ಸೂಚನೆ:** ಪ್ರಕರಣ 27(1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ:30.06.2009 ವರೆಗೆ ಜಾರಿಯಲ್ಲಿರತಕ್ಕದ್ದು, ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 27(1) ರ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಆರ್.ಎಸ್. ಹುಚ್ಚಾಚಾರಿ**

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

**ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.**

ಪಿ.ಆರ್. 1372

**ವಿಷಯ:** ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದರ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಕಾಲಾವಧಿ ವಿಸ್ತರಿಸುವ ಬಗ್ಗೆ.

**ಓದಲಾಗಿದೆ:** ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ & ಇತರೆ) ಇವರ ಪತ್ರ ಸಂಖ್ಯೆ: ಹೆಚ್ಎಸ್ಜಿ–2/244/ಹೆಚ್ಹೆಚ್ಎಸ್/2008–09, ದಿನಾಂಕ:19.03.2009.

**ಪ್ರಸ್ತಾವನೆ:**

ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದರ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸುವ ಅವಧಿಯನ್ನು ದಿನಾಂಕ:31.03.2009 ರವರೆಗೆ ಇಲಾಖಾ ಸಕ್ಷಮ ಪ್ರಾಧಿಕಾರವಾದ ಸಹಕಾರ ಸಂಘಗಳ ಜಂಟಿ ನಿಬಂಧಕರು ವಿಸ್ತರಿಸಿರುತ್ತಾರೆ. ಸಂಘದಲ್ಲಿ ತೀವ್ರತರವಾದ ಹಣದ ಮುಗ್ಗಟ್ಟು ಇರುವ ಕಾರಣ ನಿಗದಿತ ಅವಧಿಯೊಳಗೆ ಮಹಾಸಭೆಯನ್ನು ನಡೆಸಲು ತೊಂದರೆ ಉಂಟಾಗಿರುವುದರಿಂದ ಸದರಿ ಸಂಘಕ್ಕೆ 2007–08 ನೇ ಸಾಲಿನ ಮಹಾಸಭೆಯನ್ನು ನಡೆಸಲು ದಿನಾಂಕ:30.09.2009 ರವರೆಗೆ ಅವಧಿ ವಿಸ್ತರಿಸಲು ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು ಶಿಫಾರಸು ಮಾಡಿದ್ದಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ:

**ಸರ್ಕಾರಿ ಆದೇಶ ಸಂಖ್ಯೆ: ಸಿಒ64 ಸಿಎಲ್ಎಂ 2009, ಬೆಂಗಳೂರು, ದಿನಾಂಕ: 19ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121 ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದರ 2007–08 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ:30.09.2009 ವರೆಗೆ ಕಾಲಾವಕಾಶ ನೀಡಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ [illegible] ಸಂಸ್ಥೆಗೆ ಕೆಳಗಿನ ಮಾರ್ಪಾಟಿನೊಂದಿಗೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ ಎಂದರೆ:

**27ರ ಪ್ರಕರಣದಲ್ಲಿ,**

27ನೇ ಪ್ರಕರಣ ಉಪಪ್ರಕರಣ (1)ರ ಪರಂತುಕದಲ್ಲಿನ **"ಆರು ತಿಂಗಳು"** ಎಂಬ ಪದಗಳಿಗೆ ಬದಲಾಗಿ **"ಹನ್ನೆರಡು ತಿಂಗಳು"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**ಸೂಚನೆ:** ಪ್ರಕರಣ 27(1) ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 30.09.2009 ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 27(1)ರ ಉಪಬಂಧಗಳು ಪುನ: ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 1373

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

**ವಿಷಯ:** ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ತಳಗವಾದಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಇದರ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಕಾಲಾವಧಿ ವಿಸ್ತರಿಸುವ ಬಗ್ಗೆ.

**ಓದಲಾಗಿದೆ:** 1. ಅಧ್ಯಕ್ಷರು, ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ತಳಗವಾಡಿ, ಮಳವಳ್ಳಿ ತಾಲ್ಲೂಕು. ಇವರ ಪತ್ರ ದಿನಾಂಕ:11.03.2009.

2. ಸಹಕಾರ ಸಂಘಗಳ ಜಂಟಿ ನಿಬಂಧಕರು (ಪತ್ತು) ಇವರ ಪತ್ರ ಸಂಖ್ಯೆ: ಸಿ. ಆರ್ ಡಿ/172/ಕೆಎಂಈ–5/2008–09, ದಿನಾಂಕ: 31.03.2009.

**ಪ್ರಸ್ತಾವನೆ:**

ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ತಳಗವಾದಿ ಇದರ 2007–08 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ:31.03.2009 ರವರೆಗೆ ಮುಂದೂಡಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪವಿಭಾಗ ಇವರು ಅನುಮತಿ ನೀಡಿದ್ದು ಕೇಂದ್ರ ಚುನಾವಣಾ ಆಯೋಗವು ಲೋಕಸಭಾ ಚುನಾವಣಾ ವೇಳಾ ಪಟ್ಟಿಯನ್ನು ಬಿಡುಗಡೆ ಮಾಡಿರುವುದರಿಂದ ಸಂಘದ ವ್ಯಾಪ್ತಿಯ ಗ್ರಾಮಗಳ ಸದಸ್ಯರು ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ ಸದರಿ ಸಾಲಿನ ಮಹಾಸಭೆಯನ್ನು ಮುಂದೂಡಲು ಅನುಮತಿಯನ್ನು ನೀಡುವಂತೆ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ತಳಗವಾದಿ ಇದರ ಅಧ್ಯಕ್ಷರು ಮೇಲೆ ಓದಲಾದ (1)ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ. ಮೇಲೆ ಓದಲಾದ (2)ರ ಪತ್ರದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು (ಪತ್ತು) ಇವರು ಸಂಘದ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಸೆಪ್ಟೆಂಬರ್ 2009 ರೊಳಗೆ ನಡೆಸಲು ಅನುಮತಿ ನೀಡುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಂಕಂಡ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಒ67 ಸಿಎಲ್ಎಂ 2009, ಬೆಂಗಳೂರು, ದಿನಾಂಕ: 19ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಮಯ 1959 ಪ್ರಕರಣ 121 ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ತಳಗವಾದಿ ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಇದರ 2007–08ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ:30–09–2009 ರವರೆಗೆ ಕಾಲಾವಕಾಶ ನೀಡಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಮಯ 1959 ರ ಪ್ರಕರಣ 27 ಸದರಿ ಸಂಸ್ಥೆಗೆ ಕೆಳಗಿನ ಮಾರ್ಪಾಟಿನೊಂದಿಗೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ ಎಂದರೆ:

**27ರ ಪ್ರಕರಣದಲ್ಲಿ,**

27ನೇ ಪ್ರಕರಣ ಉಪಪ್ರಕರಣ (1)ರ ಪರಂತುದಲ್ಲಿನ **"ಆರು ತಿಂಗಳು"** ಎಂಬ ಪದಗಳಿಗೆ ಬದಲಾಗಿ **"ಹನ್ನೆರಡು ತಿಂಗಳು"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**ಸೂಚನೆ:** ಪ್ರಕರಣ 27(1) ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ:30.09.2009 ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 27(1)ರ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 1374

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

**ಕೃಷಿ ಸಚಿವಾಲಯ**

ವಿಷಯ: ಕರ್ನಾಟಕ ರಾಜ್ಯ ಬೀಜ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಕೃಷಿ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಿ ಭರ್ತಿ ಮಾಡುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ : ಕೃತೋಇ 268 ಕೃಪಸೇ 2008, ದಿನಾಂಕ: 2–1–2009

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಬೀಜ ನಿಗಮವು ರಾಜ್ಯ ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜವನ್ನು ಒದಗಿಸುವಲ್ಲಿ ಅತ್ಯಂತ ಪ್ರಮುಖ ಸಾರ್ವಜನಿಕ ಸಂಸ್ಥೆಯಾಗಿರುತ್ತದೆ. ಕೇಂದ್ರ ಪುರಸ್ಕೃತ ಯೋಜನೆಗಳಾದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ಪ್ರಧಾನ ಮಂತ್ರಿಗಳ ಪುನರ್ವಸತಿ ಪ್ಯಾಕೇಜ್, ಐಸೋಪಾಮ್ (ISOPOM), ಇತ್ಯಾದಿ ಯೋಜನೆಗಳಲ್ಲಿ ಉತ್ತಮ ಗುಣ ಮಟ್ಟದ ಬಿತ್ತನೆ ಬೀಜದ ಸರಬರಾಜಿಗೆ ಅತಿ ಪ್ರಾಮುಖ್ಯತೆಯನ್ನು ನೀಡಿರುವುದಲ್ಲದೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪ್ರಾಮಾಣೀಕರಿಸಿದ ಬಿತ್ತನೆ ಬೀಜ ಸರಬರಾಜಿಗೆ ಹಾಗೂ ಬೀಜೋತ್ಪಾದನೆಗೆ ಹೆಚ್ಚಿನ ಒತ್ತು ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಕೃಷಿ ನಿರ್ದೇಶಕರ ಸ್ಥಾನಮಾನಕ್ಕೆ ಉನ್ನತ್ತೀಕರಿಸಿ ಕೃಷಿ ನಿರ್ದೇಶಕರ ಸ್ಥಾನಮಾನದ ಅಧಿಕಾರಿಯನ್ನು ನೇಮಿಸುವುದು ಅತ್ಯಂತ ಅವಶ್ಯಕವಿರುವುದಾಗಿ ಮನಗಂಡು ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ರಾಜ್ಯ ಬೀಜ ನಿಗಮದ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಕೃಷಿ ನಿರ್ದೇಶಕರ ಸ್ಥಾನಮಾನಕ್ಕೆ ಉನ್ನತ್ತೀಕರಿಸಿ ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 32 ಎಸ್‌ಆರ್‌ಇ 98, ದಿನಾಂಕ:01–01–2000 ರನ್ವಯ ಕರ್ನಾಟಕ ಕೃಷಿ ಸೇವೆಗಳ (ನೇಮಕಾತಿ) ನಿಯಮಗಳು 1999ರನ್ವಯ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಕೃಷಿ ನಿರ್ದೇಶಕ ವೃಂದ ಬಲಕ್ಕೆ ಸೇರ್ಪಡೆ ಮಾಡುವ ಬಗ್ಗೆ ಪರಿಶೀಲಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ಕೃತೋಇ 268 ಕೃಪಸೇ 2008, ಬೆಂಗಳೂರು, ದಿನಾಂಕ: 29ನೇ ಮೇ 2009**

ಮೇಲೆ ಓದಲಾದ ಸರ್ಕಾರದ ಆದೇಶ ಸಂಖ್ಯೆ:ಕೃತೋಇ 268 ಕೃಪಸೇ 2008, ದಿನಾಂಕ:2–1–2009ರಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಕೃಷಿ ನಿರ್ದೇಶಕರ ಸ್ಥಾನಮಾನಕ್ಕೆ ಉನ್ನತ್ತೀಕರಿಸಲಾಗಿದೆ. ಈ ಹುದ್ದೆಯನ್ನು ಕೃಷಿ ನಿರ್ದೇಶಕರ ಹುದ್ದೆಯಿಂದ ನಿಯೋಜನೆ ಮೇಲೆ ಭರ್ತಿ ಮಾಡಲು ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 35 ಎಆರ್‌ಆರ್ 90, ದಿನಾಂಕ: 1–10–1990ರ ಅನುಸಾರ ಕೃಷಿ ನಿರ್ದೇಶಕರ ಹುದ್ದೆಗೆ ಸಮಾನವಾದ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಕೃಷಿ ಇಲಾಖೆಯ ಕೃಷಿ ನಿರ್ದೇಶಕರ ವೃಂದಕ್ಕೆ ತಾತ್ಕಾಲಿಕ ಸೇರ್ಪಡೆಯೆಂದು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1377

**ಜಿ.ಕೆ. ಗುರಾಣಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ

**ವಿಷಯ:** ಶ್ರೀ ಎನ್.ಕೆ.ಮುರಳಿ, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಆಯುಕ್ತರ ಕಚೇರಿ, ಬೆಂಗಳೂರು ಇವರು ಸ್ವಇಚ್ಛಾ ನಿವೃತ್ತಿ ಹೊಂದಲು ಅನುಮತಿ.

**ಓದಲಾಗಿದೆ:** 1) ಕೃಷಿ ಆಯುಕ್ತರ ಪತ್ರ ಸಂ: ಕೃಷಿಪ–1/61/2008–09 ದಿನಾಂಕ:06–04–2009

**ಪ್ರಸ್ತಾವನೆ:**

ಮೇಲೆ ಓದಲಾದ–(1)ರ ಕೃಷಿ ಆಯುಕ್ತರ ಪ್ರಸ್ತಾವನೆಯಲ್ಲಿ ಶ್ರೀ ಎನ್.ಕೆ.ಮುರಳಿ, ಸಹಾಯಕ ಕೃಷಿ ನಿರ್ದೇಶಕರು, ರಾಜ್ಯ ಭೂ ಬಳಕೆ ಮಂಡಳಿ, (ಕಾರ್ಯನಿರ್ವಹಣೆ ಆಧಾರ), ಕೃಷಿ ಆಯುಕ್ತರ ಕಚೇರಿ, ಬೆಂಗಳೂರು ಇವರು ಕೌಟುಂಬಿಕ ಕಾರಣಗಳಿಂದಾಗಿ ದಿನಾಂಕ:31–5–2009ರಿಂದ ಜಾರಿಗೆ ಬರುವಂತೆ ಸ್ವ ಇಚ್ಛಾ ನಿವೃತ್ತಿ ಕೋರಿ ಸಲ್ಲಿಸಿರುವ ದಿನಾಂಕ:01.12.2008ರ ಮನವಿಯೊಂದಿಗೆ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವಂತೆ ಕೋರಿರುತ್ತಾರೆ ಹಾಗೂ ಸದರಿ ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆಗಳು ಬಾಕಿ ಇರುವುದಿಲ್ಲವಾದ್ದರಿಂದ ಬಾಕಿ/ಬೇಬಾಕಿ ಪತ್ರಗಳ ನಿರೀಕ್ಷಣ ಷರತ್ತುಗಳಿಗೊಳಪಟ್ಟು ಸ್ವ–ಇಚ್ಛಾ ನಿವೃತ್ತಿಗೆ ಅನುಮತಿ ನೀಡಿ ಆದೇಶ ಹೊರಡಿಸುವಂತೆ ಕೋರಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 117 ಕೃಪಸೇ 2009, ಬೆಂಗಳೂರು, ದಿನಾಂಕ: 30ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಎನ್.ಕೆ.ಮುರಳಿ, ಸಹಾಯಕ ಕೃಷಿ ನಿರ್ದೇಶಕರು, ರಾಜ್ಯ ಭೂ ಬಳಕೆ ಮಂಡಳಿ (ಕಾರ್ಯನಿರ್ವಹಣೆ ಆಧಾರ), ಕೃಷಿ ಆಯುಕ್ತರ ಕಚೇರಿ, ಬೆಂಗಳೂರು ರವರಿಗೆ ಅಪರಿಂದ

ಸರ್ಕಾರಕ್ಕೆ ಬರಬೇಕಾದ ಬಾಕಿ ಏನಾದರೂ ಇದ್ದರೆ ಅದನ್ನು ಅವರಿಗೆ ನೀಡಬೇಕಾದ ನಿವೃತ್ತಿ ಸವಲತ್ತುಗಳಿಂದ ವಸೂಲಿ ಮಾಡುವ ಷರತ್ತಿಗೊಳಪಟ್ಟು ದಿನಾಂಕ:31-05-2009 ರಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮ 285(1)(ಎ) ಅನ್ವಯ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1378

**ಜಿ.ಕೆ. ಗುರಾಣಿ**

ಸರ್ಕಾರದ ಅಧೀನ ಕಾರ್ಯದರ್ಶಿ ಕೃಷಿ ಇಲಾಖೆ

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

**ವಿಷಯ:** ಶ್ರೀ ಡಿ.ಬಿ.ನಾಯಕ್, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ ಹಿಂದಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್, ಬೆಳಗಾಂ ಇವರಿಗೆ ಜೀವನಾಧಾರ ಭತ್ಯೆ ಪಾವತಿ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರಿ ಆದೇಶ ಸಂ: ಸಿಆಸುಇ 68 ಕೆಇವಿ 08 ದಿ: 28-10-2008
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಬೆಳಗಾಂ ರವರ ಪತ್ರ ಸಂ:ಜಿಪ/ಸಿಬ್ಬಂದಿ/ವಿವ-64/08-09 ದಿ:30-12-2008

**ಪ್ರಸ್ತಾವನೆ:**

ಶ್ರೀ ಡಿ.ಬಿ.ನಾಯಕ್ ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ. ಹಿಂದಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜಿಲ್ಲಾ ಪಂಚಾಯತ್, ಬೆಳಗಾಂ, ಬೆಳಗಾಂ ಜಿಲ್ಲೆ ಇವರು ತಮ್ಮ ಬಲ್ಲ ಮೂಲಗಳಿಗಿಂತ ಅಧಿಕ ಆಸ್ತಿಯನ್ನು ಹೊಂದಿದ್ದಾರೆಂದು ತಿಳಿದು ಬಂದ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೋಲಿಸರು ಬೆಂಗಳೂರು ಗ್ರಾಮಾಂತರ ಜಿಲ್ಲೆ ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ಸಂ:27/2008 ಅನ್ನು ದಾಖಲಿಸಿಕೊಂಡು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988ರ ಕಲಂ 13(1)(ಇ) ಹಾಗೂ 13(2) ರಡಿ ಶ್ರೀ ಡಿ.ಬಿ.ನಾಯಕ್, ಕೆ.ಎ.ಎಸ್. ಇವರ ಮನೆ ಮತ್ತು ಕಛೇರಿಗಳ ಮೇಲೆ ದಿ:11-09-08ರಂದು ದಾಳಿ ನಡೆಸಿ ಇವರ ವಿರುದ್ಧ ಪ್ರಕರಣ ದಾಖಲಿಸಿ ಇವರು ತಮ್ಮ ಸ್ಥಾನದಲ್ಲಿಯೇ ಮುಂದುವರೆದರೆ ತಮ್ಮ ಪ್ರಭಾವವನ್ನು ಬೀರುವುದರ ಮೂಲಕ ಸಾಕ್ಷಾಧಾರಗಳನ್ನು ನಾಶಪಡಿಸಿ ತನಿಖೆಗೆ ಅಡ್ಡಿ ಅಡಚಣೆ ಉಂಟು ಮಾಡುವ ಸಾಧ್ಯತೆಗಳಿರುವುದರಿಂದ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಅವರ ಸ್ಥಾನವನ್ನು ಪಲ್ಲಟಗೊಳಿಸಲು ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಶಿಫಾರಸ್ಸು ಮಾಡಿದ್ದರು. ಅದರಂತೆ ಮೇಲೆ ಓದಲಾದ ಕ್ರಮ ಸಂ:(1)ರ ಆದೇಶದಲ್ಲಿ ಸದರಿ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿ ರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 98ರ ನಿಯಮದನ್ವಯ ಜೀವನಾಧಾರದ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ ಎಂದು ಆದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮೇಲೆ ಓದಲಾದ ಕ್ರಮ ಸಂ:(2)ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾಂ ರವರು ಸರ್ಕಾರಕ್ಕೆ ಪತ್ರ ಬರೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾಂ ಹುದ್ದೆಗೆ ಇನ್ನೊಬ್ಬ ಅಧಿಕಾರಿಯನ್ನು ನೇಮಿಸಿರುವುದರಿಂದ ಶ್ರೀ ಡಿ.ಬಿ.ನಾಯಕ್ ಕೆ.ಎ.ಎಸ್. ಇವರ ಜೀವನಾಧಾರ ಭತ್ಯೆಯನ್ನು ಯಾವ ಕಚೇರಿಯಿಂದ ಡ್ರಾ ಮಾಡಿ ಬಟವಾಡೆ ಮಾಡುವ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಿಆಸುಇ 6 ಕೆಇವಿ 2009, ಬೆಂಗಳೂರು, ದಿನಾಂಕ: 26ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಶ್ರೀ ಡಿ.ಬಿ.ನಾಯಕ್, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ಹಿಂದಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜಿಲ್ಲಾ ಪಂಚಾಯತ್, ಬೆಳಗಾಂ, ಬೆಳಗಾಂ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 98ರ ಪ್ರಕಾರ ಇವರ ಅಮಾನತ್ತಿನ ಆದೇಶ ದಿ:28-10-2008 ರಿಂದ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆಗೆ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಮಹಾಲೇಖಪಾಲರಿಂದ authorization ಪಡೆದು ಸಿ.ಆ.ಸು. ಇಲಾಖೆ (ಲೆಕ್ಕಪತ್ರ-ಐಆರ್‌ಎಲ್‌ಎ) ಯಿಂದ ಡ್ರಾ ಮಾಡಿ ಬಟವಾಡೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಂ:ಆಇ 306 ವೆಚ್ಚ 12 2009 ದಿ:16-04-2009 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಚ್.ಆರ್. ನಾಗೇಂದ್ರ**

ಪಿ.ಆರ್. 1379

ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ವಿಷಯ: ಶ್ರೀ ಆರ್.ನಾರಾಯಣ್ ಕೆ.ಎ.ಎಸ್. ಅಧಿಕಾರಿ ಹಾಗೂ ಇತರೆ 08 ಜನ ಆರೋಪಿತರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಶ್ರೀ ಆರ್.ನಾರಾಯಣ್ ಕೆ.ಎ.ಎಸ್. ಅಧಿಕಾರಿ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂ:ಸಿಆಸುಇ 43 ಎಸ್‌ಇಎನ್ 06 (ಸಿಆಸುಇ 75 ಕೆಇಪಿ 07) ದಿ:28-9-2007.

2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ರವರ ಪತ್ರ ಸಂ: ಪ್ರಾಆಕ/ಸಿಸಿಎ(ಇ.ವಿ)/ಸಿ.ಆರ್3/07-08 ದಿ:30-01-09

ಪ್ರಸ್ತಾವನೆ:

ಶ್ರೀ ಆರ್.ನಾರಾಯಣ್ ಕೆ.ಎ.ಎಸ್. ಅಧಿಕಾರಿ ಹಾಗೂ ಇತರೆ ಸಿಬ್ಬಂದಿಗಳು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ಕ್ರಮವಾಗಿ ತಹಸೀಲ್ದಾರ್ ರಾಜಸ್ವ ನಿರೀಕ್ಷಕ ಗ್ರಾಮ ಲೆಕ್ಕಿಗರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಸರ್ಕಾರಿ ಜಮೀನುಗಳನ್ನು ಕಾನೂನು ಬಾಹಿರವಾಗಿ ಮಂಜೂರು ಮಾಡಿರುವರೆಂಬ ಆರೋಪದ ಸಂಬಂಧ ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಾದೇಶಿಕ ಆಯುಕ್ತರು, ಬೆಂಗಳೂರು ಇವರನ್ನು ಮೇಲೆ ಕ್ರಮ ಸಂ(1)ರಲ್ಲಿ ಓದಲಾದ ಆದೇಶದಲ್ಲಿ ವಿಚಾರಣಾಧಿಕಾರಿಯನ್ನು ನೇಮಿಸಲಾಗಿತ್ತು. ಈ ಮಧ್ಯೆ ವಿಚಾರಣಾಧಿಕಾರಿಗಳಾದ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ರವರು ಮೇಲೆ ಓದಲಾದ ಕ್ರಮ ಸಂ:(2)ರ ಪತ್ರದಲ್ಲಿ ಶ್ರೀ ಆರ್.ನಾರಾಯಣ್, ಕೆ.ಎ.ಎಸ್. ಅಧಿಕಾರಿ ರವರು ದಿ:03-09-2008ರಂದು ನಿಧನ ಹೊಂದಿರುವುದಾಗಿ ತಿಳಿಸುತ್ತಾ ವಿಚಾರಣೆ ಬಗ್ಗೆ ಮುಂದಿನ ನಿರ್ಣಯ ಕೈಗೊಂಡು ತಿಳಿಸುವಂತೆ ಕೋರಿದ್ದಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಆರೋಪಿಯಾದ ಶ್ರೀ ಆರ್.ನಾರಾಯಣ್ ಕೆ.ಎ.ಎಸ್. ಅಧಿಕಾರಿ ರವರು ದಿ:3.09.2008ರಂದು ನಿಧನ ಹೊಂದಿರುವುದರಿಂದ ಹಾಗೂ ಇವರಿಂದ ಈ ಪ್ರಕರಣದಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗದ ಕಾರಣ ಸರ್ಕಾರದ ಸುತ್ತೋಲೆ ಸಂ: ಸಿಆಸುಇ 10 ಸೇಇವಿ 03 ದಿ:12-11-03 ರಲ್ಲಿ ನೀಡಲಾದ ಸ್ಪಷ್ಟೀಕರಣದ ಮೇರೆಗೆ ಪ್ರಕರಣದಲ್ಲಿನ ಆರೋಪಿಯಾದ ಶ್ರೀ ಆರ್.ನಾರಾಯಣ್ ಕೆ.ಎ.ಎಸ್. ಅಧಿಕಾರಿ ಇವರನ್ನು ಮಾನವೀಯತೆ ಆಧಾರದ ಮೇಲೆ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಮಾತ್ರ ಕೈ ಬಿಡಲು ನಿರ್ವಹಿಸಲಾಗಿದೆ. ಆದುದರಿಂದ ಈ ಆದೇಶ:

**ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 45 ಎಸ್‌ಇಎನ್ 2005(ಸಿಆಸುಇ 75 ಕೆಇವಿ 2007), ಬೆಂಗಳೂರು, ದಿನಾಂಕ: 26ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(iv) ರನ್ವಯ ಸರ್ಕಾರವು ದಿ: ಶ್ರೀ ಆರ್.ನಾರಾಯಣ್ ಕೆ.ಎ.ಎಸ್. ಅಧಿಕಾರಿ ಹಿಂದಿನ ತಹಸೀಲ್ದಾರ್ ಚಿಕ್ಕನಾಯಕನಹಳ್ಳಿ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈ ಬಿಡಲು ಆದೇಶಿಸಿದೆ. ಮುಂದುವರೆದು ಪ್ರಕರಣದಲ್ಲಿನ ಇತರೇ ಆರೋಪಿಗಳಾದ ಶ್ರೀ ಕೆ.ನಾರಾಯಣಸ್ವಾಮಿ. ಹಿಂದಿನ ಪ್ರಥಮ ದರ್ಜೆ ಸಹಾಯಕ, ಶ್ರೀ ಎನ್.ಹೆಚ್.ಸದಾಶಿವರಾವ್, ಹಿಂದಿನ ರಾಜಸ್ವ ನಿರೀಕ್ಷಕ, ಶ್ರೀ ಮಾಹಿಮುದ್ದೀನ್, ಹಿಂದಿನ ರಾಜಸ್ವನಿರೀಕ್ಷಕ, ಶ್ರೀ ಮಹ್ಮದ್‌ಅಲ್ತಫ್‌ಪಾಷಾ, ಹಿಂದಿನ ರಾಜಸ್ವ ನಿರೀಕ್ಷಕ, ಶ್ರೀ ಸಿ. ದೇವೆಗೌಡ, ಹಿಂದಿನ ಗ್ರಾಮ ಲೆಕ್ಕಿಗ, ಶ್ರೀ ಕೆ. ಯಲ್ಲಯ್ಯ, ಹಿಂದಿನ ಗ್ರಾಮ ಲೆಕ್ಕಿಗ, ಶ್ರೀ ಚಿಂತಾಮಣಿ, ಹಿಂದಿನ ಗ್ರಾಮ ಲೆಕ್ಕಿಗ, ಶ್ರೀ ಡಿ.ಶಿವರಾಮಯ್ಯ, ಹಿಂದಿನ ಗ್ರಾಮ ಲೆಕ್ಕಿಗ ತಾಲ್ಲೂಕು ಕಛೇರಿ, ಚಿಕ್ಕನಾಯಕನಹಳ್ಳಿ ಅವರುಗಳ ವಿರುದ್ಧ ಮಾಡಲಾದ ಆರೋಪಗಳ ಕುರಿತು ಜಂಟಿ ಇಲಾಖಾ ವಿಚಾರಣೆಯು ಮುಂದುವರೆಯುತ್ತದೆ. ವಿಚಾರಣೆಯನ್ನು ಶೀಘ್ರವಾಗಿ ಮುಕ್ತಾಯಗೊಳಿಸಿ ವರದಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಹಾಗೂ ಅವರ ಹೆಸರಿನಲ್ಲಿ

**ಎಚ್.ಆರ್. ನಾಗೇಂದ್ರ**

ಪಿ.ಆರ್. 1380

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

**ತಿದ್ದೋಲೆ**

**ಸಂಖ್ಯೆ: ಸಿಆಸುಇ 31 ಸಆಸೇ 2009, ಬೆಂಗಳೂರು, ದಿನಾಂಕ: 2ನೇ ಜೂನ್ 2009.**

ಶ್ರೀ ಸುರೇಶ್ ಕಲ್ಲಪ್ಪ ಅಳಗುಂಡಿ, ಮಾನ್ಯ ತೋಟಗಾರಿಕೆ ಹಾಗೂ ಬಂಧೀಖಾನೆ ಸಚಿವರ ಆಪ್ತ ಕಾರ್ಯದರ್ಶಿ ಇವರ ಗುತ್ತಿಗೆ ಆಧಾರದ ನೇಮಕಾತಿಯ ಸೇವಾ ಷರತ್ತು ಮತ್ತು ನಿಬಂಧನೆಗಳನ್ನು ನಿಗಧಿಪಡಿಸಿ ಹೊರಡಿಸಲಾದ ಆದೇಶ ಸಂಖ್ಯೆ ಸಿಆಸುಇ 31 ಸಅಸೇ 2009, ದಿನಾಂಕ 16-5-2009ರ ಆದೇಶ ಭಾಗದ ಕಂಡಿಕೆ 3ನ್ನು ದಿನಾಂಕ 16-5-2009ರಿಂದಲೇ ಜಾರಿಗೆ ಬರುವಂತೆ ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

**ವೇತನ ಮತ್ತು ಇತರೆ ಭತ್ಯೆಗಳು** : ಶ್ರೀ ಸುರೇಶ್ ಕಲ್ಲಪ್ಪ ಅಳಗುಂಡಿ ಇವರು ಒಪ್ಪಂದದ ನೇಮಕಾತಿಯ ಅವಧಿಯಲ್ಲಿ ಅವರ ಮಾತೃ ಇಲಾಖೆಯಲ್ಲಿ ಪಡೆಯುತ್ತಿದ್ದ ವೇತನ, ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ

ಹಾಗೂ ಸಚಿವರ ಆಪ್ತ ಶಾಖೆಯಲ್ಲಿ ಸದರಿ ಹುದ್ದೆಗೆ ನಿಗಧಿಪಡಿಸಿರುವ ವಿಶೇಷ ವೇತನವನ್ನು ಪಡೆಯಲು ಅರ್ಹರಿರುತ್ತಾರೆ, ಆದರೆ ನೌಕರರು ನಿಯೋಜನೆಯ ಭತ್ಯೆ, ನಗರ ಪರಿಹಾರ ಭತ್ಯೆ, ಅನ್ಯ ಸೇವಾ ಭತ್ಯೆ ಅಥವಾ ಇನ್ನಾವುದೇ ಊಟದ ಭತ್ಯೆ, ಹೆಚ್ಚಿನ ಕಾಲದ ಭತ್ಯೆ, ಬೋನಸ್, ಅನುಗ್ರಹಪೂರ್ವ ಭತ್ಯೆ ಪಡೆಯಲು ಅರ್ಹರಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ.ಎಸ್. ಶಿವರಾಮ್**

ಪಿ.ಆರ್. 1387

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

## ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

### ತಿದ್ದುಪಡಿ

**ಸಂಖ್ಯೆ:ಯೋಇ 33 ಹೈಕಮಂ 2009, ಬೆಂಗಳೂರು, ದಿನಾಂಕ: 2ನೇ ಜೂನ್ 2009.**

ಸರ್ಕಾರಿ ಆದೇಶ ಸಂಖ್ಯೆ: ಯೋಇ 33 ಹೈಕಮಂ 2009 ದಿನಾಂಕ: 30–05–2009ರ ಸರ್ಕಾರದ ನಡುವಳಿಯ ಆದೇಶ ಭಾಗದ ಮೊದಲ ಸಾಲಿನಲ್ಲಿ **"ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ"**ಗೆ ಬದಲಾಗಿ **"ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

**ಬಿ. ಚಿಕ್ಕರಾಜು**

ಪಿ.ಆರ್. 1388

ಸರ್ಕಾರದ ಅಧೀನ ಕಾರ್ಯದರ್ಶಿ 1 & 2,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

**ವಿಷಯ:** ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 2009–10ನೇ ಸಾಲಿನಲ್ಲಿ ಮೊದಲನೇ ಕಂತಾಗಿ ರೂ.300.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಇವರ ಪತ್ರ ಸಂಖ್ಯೆ: ಮಪ್ರಮಂ:ಶಿ:ನಗದು:ಹ:ಬಿ: 2009–10:98 ದಿನಾಂಕ 18–05–2009.

**ಪ್ರಸ್ತಾವನೆ:**

2009–10ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "2515–00–800–0–05 (ಯೋಜನೆ)" ಅಡಿಯಲ್ಲಿ ರೂ.1600.00 ಲಕ್ಷಗಳನ್ನು ಒದಗಿಸಿದ್ದು, ಮೇಲೆ ಓದಲಾದ ಪತ್ರದಲ್ಲಿ ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಬಾಕಿ ಇರುವ ಬಿಲ್ಲುಗಳನ್ನು ಇತ್ಯರ್ಥ ಪಡಿಸಲು ಅನುಕೂಲವಾಗುವಂತೆ ಮಂಡಳಿಗೆ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಆದುದರಿಂದ ಮಂಡಳಿಗೆ ಮೊದಲನೇ ಕಂತಾಗಿ ರೂ.300.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಯೋಇ 8 ಮಪ್ರಮಂ 2009 ಬೆಂಗಳೂರು, ದಿನಾಂಕ: 30ನೇ ಮೇ 2009**

2009–10ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಮೊದಲನೇ ಕಂತಾಗಿ ಲೆಕ್ಕಶೀರ್ಷಿಕೆ "2515–00–800–0–05–101 (ಸಹಾಯಾನುದಾನ)(ಯೋಜನೆ)" ಅಡಿಯಲ್ಲಿ ರೂ.300.00 ಲಕ್ಷಗಳನ್ನು (ಮುನ್ನೂರು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

ಬಿಡುಗಡೆಯಾದ ಮೊತ್ತವನ್ನು ಮಂಡಳಿಯ ವೈಯಕ್ತಿಕ ಖಾತೆಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು. ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು 2009–10ರ ಸಾಲಿನಲ್ಲಿ ಮಂಡಳಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್ 1 ಟಿಎಫ್‌ಪಿ 2008 ದಿನಾಂಕ 16–5–2008ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಬಿ. ಚಿಕ್ಕರಾಜು**

ಪಿ.ಆರ್. 1389

ಸರ್ಕಾರದ ಅಧೀನ ಕಾರ್ಯದರ್ಶಿ 1 & 2,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

**ವಿಷಯ:** ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2009–10ನೇ ಸಾಲಿನಲ್ಲಿ ಮೊದಲನೇ ಕಂತಾಗಿ ರೂ 400.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** ಕಾರ್ಯದರ್ಶಿ, ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಇವರ ಪತ್ರ ಸಂಖ್ಯೆ: ಹೆಚ್‌ಕೆಡಿಬಿ: ಲೇಶಾ/2009-10, ದಿನಾಂಕ: 29–05–2009.

ಪ್ರಸ್ತಾವನೆ:

2009–10ನೇ ಸಾಲಿನಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "2515–00–800–0–01–(ಯೋಜನೆ)" ಅಡಿಯಲ್ಲಿ ರೂ.2100.00 ಲಕ್ಷಗಳನ್ನು ಒದಗಿಸಿದ್ದು, ಮೇಲೆ ಓದಲಾದ ಪತ್ರದಲ್ಲಿ ಕಾರ್ಯದರ್ಶಿ, ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಮೊದಲನೇ ಕಂತಿನ ಹಣವನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಆದುದರಿಂದ, ಮಂಡಳಿಗೆ ಮೊದಲನೇ ಕಂತಾಗಿ ರೂ.400.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಯೋಇ 33 ಹೈಕಮಂ 2009, ಬೆಂಗಳೂರು, ದಿನಾಂಕ: 30ನೇ ಮೇ 2009**

2009–10ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಮೊದಲನೇ ಕಂತಾಗಿ ಲೆಕ್ಕಶೀರ್ಷಿಕೆ "2515–00–800–0–01–101(ಸಹಾಯಾನುದಾನ)(ಯೋಜನೆ)" ಅಡಿಯಲ್ಲಿ ರೂ.400.00 ಲಕ್ಷಗಳನ್ನು (ನಾನ್ನೂರು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

ಬಿಡುಗಡೆಯಾದ ಮೊತ್ತವನ್ನು ಮಂಡಳಿಯ ವೈಯಕ್ತಿಕ ಖಾತೆಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು. ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು 2009–10ರ ಸಾಲಿನಲ್ಲಿ ಮಂಡಳಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16–05–2008ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಬಿ. ಚಿಕ್ಕರಾಜು**

ಪಿ.ಆರ್. 1390 ಸರ್ಕಾರದ ಅಧೀನ ಕಾರ್ಯದರ್ಶಿ 1 & 2,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

## ಸಹಕಾರ ಸಚಿವಾಲಯ

**ವಿಷಯ:** ಕುಮಾರಿ ಎಲ್.ಮೀನಾಕ್ಷಮ್ಮ, ಸಹಕಾರ ಸಂಘಗಳ ಲೆಕ್ಕಪರಿಶೋಧಕರು, ಸಹಾಯಕ ನಿರ್ದೇಶಕರ ಕಛೇರಿ, ಮೈಸೂರು ಇವರ ಜನ್ಮ ದಿನಾಂಕದ ತಿದ್ದುಪಡಿಗಾಗಿ ಮಂಡನಾಧಿಕಾರಿಯ ನೇಮಕ ಹಾಗೂ ಪ್ರಕರಣದ ವಿಚಾರಣೆಗೆ ಆದೇಶಿಸುವ ಕುರಿತು.

**ಓದಲಾಗಿದೆ:** ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಬೆಂಗಳೂರು ರವರ ಪತ್ರ ಸಂಖ್ಯೆ: ಲೆಕ್ಕ 1/ಎಲ್.ಮೀ./ಜ.ದಿ.ಬ. 249/2008–09, ದಿನಾಂಕ:27–01–2009.

**ಪ್ರಸ್ತಾವನೆ:**

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಮೇಲೆ ಓದಲಾದ ತಮ್ಮ ಪ್ರಸ್ತಾವನೆಯಲ್ಲಿ ಕುಮಾರಿ ಎಲ್.ಮೀನಾಕ್ಷಮ್ಮ ಇವರು ಇಲಾಖೆಯ ಲೆಕ್ಕಪರಿಶೋಧಕರ ಹುದ್ದೆಗೆ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಗೊಂಡು ಅವರ ಕಚೇರಿ ಆದೇಶ ಸಂಖ್ಯೆ 4: ಸಿಬ್ಬಂದಿ–2/ನೇಮಕಾತಿ/43/2007–08 ದಿನಾಂಕ 19–05–2008 ರನ್ವಯ ಮೈಸೂರು ಉಪ ವಿಭಾಗ, ಮೈಸೂರು ಕಛೇರಿಗೆ ನಿಯುಕ್ತಿ ಹೊಂದಿ ದಿನಾಂಕ 23–05–2008 ರ ಪೂರ್ವಾಹ್ನ ಕರ್ತವ್ಯಕ್ಕೆ ಹಾಜರಾಗಿದ್ದು, ದಿನಾಂಕ 08–09–2008 ರ ಮನವಿಯಲ್ಲಿ ಅವರ ಜನ್ಮ ದಿನಾಂಕ ಬದಲಾವಣೆಗೆ ಮನವಿಯನ್ನು ಸಲ್ಲಿಸಿರುತ್ತಾರೆ.

The Karnataka State Servants (Determination of Age) Act 1974ರ ಕಲಂ3(2) ರಂತೆ ಕುಮಾರಿ ಎಲ್.ಮೀನಾಕ್ಷಮ್ಮ ಇವರ ಎಸ್.ಎಸ್.ಎಲ್.ಸಿ. ಅಂಕ ಪಟ್ಟಿಯಲ್ಲಿನ ಜನ್ಮ ದಿನಾಂಕವನ್ನಾಧರಿಸಿ ಇವರು ಕೆಸಲಕ್ಕೆ ಸೇರಿದಾಗ ಸೇವಾ ಪುಸ್ತಕದಲ್ಲಿ ಇವರ ಜನ್ಮ ದಿನಾಂಕವನ್ನು ದಿನಾಂಕ 1–9–1971 ಎಂದು ದಾಖಲಿಸಿ ಅಂಗೀಕರಿಸಿದೆ. ಆದರೆ ಕುಮಾರಿ ಎಲ್.ಮೀನಾಕ್ಷಮ್ಮ ರವರು ದಿನಾಂಕ 8–9–2008 ರ ಮನವಿಯೊಂದಿಗೆ ಸಲ್ಲಿಸಿರುವ CSI Worth Memorial Hospital, Mysore ಇವರ ದಿನಾಂಕ 24–10–2008 ರ ಪತ್ರ ಹಾಗೂ ಜನನ ಪ್ರಮಾಣ ಪತ್ರದ ದೃಢೀಕೃತ ಪ್ರತಿ ಮತ್ತು ಮೈಸೂರು ಮಹಾ ನಗರ ಪಾಲಿಕೆ ಇವರ ದಿನಾಂಕ 3–8–2007ಕ್ಕೆ ಇತ್ತಿರುವ ಜನನ ಪ್ರಮಾಣ ಪತ್ರ ಇವುಗಳಿಂದ ಇವರ ಜನ್ಮ ದಿನಾಂಕ 14–12–1973 ರಂದು ಇರುತ್ತದೆ. ಮೇಲ್ಕಂಡ ಕಾಯ್ದೆಯ ಕಲಂ 5 ರಂತೆ ಸೇವೆಗೆ ಸೇರಿದ ಮೂರು ವರ್ಷಗಳ ಒಳಗೆ ಸರ್ಕಾರಿ ನೌಕರರು ಸೇವಾ ಪುಸ್ತಕದಲ್ಲಿ ದಾಖಲಿಸಿ ಅಂಗೀಕೃತಗೊಂಡ ಜನ್ಮ ದಿನಾಂಕದ ಬದಲಾವಣೆಗೆ ಮನವಿ ಸಲ್ಲಿಸಬಹುದೆಂದು ಈ ಕಲಂನ ಉಪ ಕಲಂ(3) ರಂತೆ ಸರ್ಕಾರವು ಈ ಕುರಿತು ಪರಿಶೀಲಿಸಿ ತಪಾಸಣೆ ಕೈಗೊಳ್ಳಲು ಅಧಿಕಾರಿಯನ್ನು ನೇಮಿಸಿ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂತಲೂ ಹಾಗೂ ಉಪ ಕಲಂ (4) ರಂತೆ ಈ ರೀತಿ ನೇಮಕಗೊಂಡ ಅಧಿಕಾರಿಗೆ ಸಿವಿಲ್

ನ್ಯಾಯಾಲಯದ ಅಧಿಕಾರ ಇರುತ್ತದೆಂದು ಹಾಗೂ ಸಂಬಂಧಪಟ್ಟ ಸರ್ಕಾರಿ ನೌಕರರು ಈ ಅಧಿಕಾರಿಗಳು ಸೂಚಿಸಿದ ದಾಖಲೆಗಳನ್ನು ಪರಿಶೀಲನೆಗೆ ಒದಗಿಸಬೇಕೆಂದಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಪರಿಶೀಲನೆಗೆ ಸಲ್ಲಿಸಲಾಗಿ, ಸದರಿ ಅಂಶದ ಬಗ್ಗೆ ಸುದೀರ್ಘವಾದ ವಿಚಾರಣೆಯನ್ನು ವಾದೇಕ್ಷಕರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು ಕಾನೂನು ಇಲಾಖೆ ಇವರು The Karnataka State Servants (Determination of Age) Act 1975 ರನ್ವಯ ಮಾಡಬೇಕಾಗಿರುವುದರಿಂದ ಸಹಕಾರ ಇಲಾಖೆಯ ಪರವಾಗಿ ಪ್ರಕರಣವನ್ನು ಮಂಡಿಸಲು ಮತ್ತು ವಾದ ಮಾಡಲು ಶ್ರೀ ರುಡಾಲ್ಫ್ ಪೆರ್ರೈರಿಯಾ (Rudalf Periera) ಸರ್ಕಾರದ ಅಧೀನ ಕಾರ್ಯದರ್ಶಿ (ವ್ಯಾಜ್ಯಗಳು) ಕಾನೂನು ಇಲಾಖೆ ಇವರನ್ನು ಮಂಡನಾಧಿಕಾರಿಗಳನ್ನಾಗಿ ನೇಮಿಸಿ ಆದೇಶ ಹೊರಡಿಸಲು ಸೂಚಿಸಿದೆ.

ಆದ್ದರಿಂದ ಪ್ರಕರಣದ ವಿಚಾರಣೆಗೆ ಹಾಗೂ ಸಹಕಾರ ಇಲಾಖೆಯ ಪರವಾಗಿ ವಾದ ಮಂಡಿಸುವ ಸಲುವಾಗಿ ಮಂಡನಾಧಿಕಾರಿಯನ್ನು ನೇಮಕ ಮಾಡಲು ಈ ಬಗ್ಗೆ ಕಾನೂನು ಇಲಾಖೆಯೊಡನೆ ಸಮಾಲೋಚಿಸಿ, ಈ ಮುಂದಿನಂತೆ ಸರ್ಕಾರವು ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಸಇ 32 ಎಲೆಸೇ 2009 ಬೆಂಗಳೂರು, ದಿನಾಂಕ: 26ನೇ ಮೇ 2009**

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಕುಮಾರಿ ಎಲ್.ಮೀನಾಕ್ಷಮ್ಮ, ಸಹಕಾರ ಸಂಘಗಳ ಲೆಕ್ಕಪರಿಶೋಧಕರು, ಸಹಾಯಕ ನಿರ್ದೇಶಕರ ಕಛೇರಿ, ಮೈಸೂರು ಇವರ ಜನ್ಮ ದಿನಾಂಕವನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ನಿಯಮ 5 ರ ಉಪನಿಯಮ 1 ರನ್ವಯ ತಿದ್ದುಪಡಿ ಮಾಡುವ ಸಲುವಾಗಿ ಸದರಿ ಅಧಿನಿಯಮದ 5 ರ ಉಪನಿಯಮ 3 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಕರಣದ ವಿಚಾರಣಾಧಿಕಾರಿಗಳ ಮುಂದೆ ಸಹಕಾರ ಇಲಾಖೆಯ ಪರವಾಗಿ ಪ್ರಕರಣವನ್ನು ಮಂಡಿಸಲು ಮತ್ತು ವಾದ ಮಾಡಲು ಶ್ರೀ ರುಡಾಲ್ಫ್ ಪೆರ್ರೈರಿಯಾ (Rudalf Periera) ಅಧೀನ ಕಾರ್ಯದರ್ಶಿ (ವ್ಯಾಜ್ಯಗಳು) ಕಾನೂನು ಇಲಾಖೆ ಇವರನ್ನು ಮಂಡನಾಧಿಕಾರಿಗಳನ್ನಾಗಿ ನೇಮಿಸಿ ಪ್ರಕರಣದ ವಿಚಾರಣೆಗೆ ಆದೇಶಿಸಿದೆ.

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅ.ಟಿ.ಸಂಖ್ಯೆ: ಲಾ 129 ಅ.ಬಿ/2009 ದಿನಾಂಕ 20.03.2009 ಹಾಗೂ ಲಾ: 09 ಜದಿವಿ 2009 ದಿನಾಂಕ 20-04-2009 ರನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1391

**ನಂಜುಂಡಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

## INFRASTRUCTURE DEVELOPMENT SECRETARIAT

**Sub:** Release of State share towards Bidar Gulbarga New Railway Line Project.

**Read:**
1. G.O.No. IDD 12 NSW 2004 dated 5.06.2007
2. G.O.No. IDD 12 NSW 2004 dated 28.09.2007
3. G.O.No. IDD 12 NSW 2004 dated 21.01.2008
4. G.O.No. IDD 12 NSW 2004 dated 13.05.2008
5. Letter No. W.Con/338/C/90 Vol.V dated 21.4.09 from the CE (Con.,I) SCR, Secunderabad.

**Preamble:**

In the Government Order read at Sl. No.(1) above, the State Government has accorded Sanction for taking up Bidar-Gulbarga new railway poject on50:50 cost sharing basis between the Ministry of Railway and Government of Karnataka and for releasing 50% of the cost required for completion of the project within a period of 3 years.

2. In the G.O. read at Sl.No. (2) (3) and (4) above the State Government has released so far an amount of Rs. 40.00 crore towards the share of the State Government for Bidar - Gulbarga New railway project.

3. The south Central Railway vide their letter read at Sl.No. (5) above, has stated that an amount of Rs. 134.51 crore has been spent for project upto 31.3.2009 by railway and the state Government has released so far an amount of Rs. 40.00 crore, and have requested to take up these works at a fast pace, it

is necessary that Government of Karnataka deposits at least Rs. 50.00 crore more in the current year to meet the current liabilities and to call for additional tenders.

4. The request has been examined in detail and hence this order.

**Government Order No.IDD 13 NSW 2008, Bangalore, Dated: 26th June 2009**

After careful examination of the request of railway, Government of Karnataka is pleased to release an amount of Rs.25.00 crores (Twenty Five crores only) towards the share of the State Government for the Bidar-Gulbarga new railway project.

1. The expenditure shall be met under the Head of Account 5465-01-190-3-10 (P)-Bidar-Gulbarga Railway line project during 2009-10.

2. The Chief Executive Officer, K-RIDE is authorized to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), south Central Railway, Secunderabad.

3. This order is issued in accordance with the concurrence of Finance Department given vide U.O.Note.No.FD 1030 Exp-I/09 dated 23.06.2009.

By Order and in the name of Governor of Karnataka,

**K.S. VENUGOPAL**

P.R. 1411

Under Secretary to Government (I/c),

Infrastructure Development Department

## ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

**ವಿಷಯ:** ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಮೀನುಗಾರಿಕೆ ಯಾಂತ್ರಿಕ ದೋಣಿಗಳನ್ನು ನಿರ್ಮಿಸಲು ಸಾಧ್ಯತಾ ಪ್ರಮಾಣ ಪತ್ರವನ್ನು ನೀಡುವ ಸಮಿತಿಯನ್ನು ಪರಿಷ್ಕರಿಸಿ ಪುನರ್‌ರಚಿಸುವಿಕೆ.

**ಓದಲಾಗಿದೆ:** ಪತ್ರ ಸಂಖ್ಯೆ:ಎಂಇಎಫ್/9/2009–10 ದಿನಾಂಕ:08–06–2009.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆ ಯಾಂತ್ರಿಕ ದೋಣಿಗಳನ್ನು ನಿರ್ಮಿಸಲು ಇಲಾಖಾ ವತಿಯಿಂದ ಸಾಧ್ಯತಾ ಪ್ರಮಾಣ ಪತ್ರ ನೀಡಲು ದಿನಾಂಕ :21–12–1988ರ ಆದೇಶದಲ್ಲಿ ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಜಿಲ್ಲೆ ಇದರ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಒಂದನ್ನು ರಚಿಸಲಾಗಿದ್ದು, ಸದರಿ ಸಮಿತಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಅಧ್ಯಕ್ಷರಾಗಿದ್ದು, ಪ್ರತೀ ವರ್ಷ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳನ್ನು ನಿರ್ಮಿಸಲು ಅನುವಾಗುವಂತೆ ಸಾಧ್ಯತಾ ಪ್ರಮಾಣ ಪತ್ರ ಬಯಸಿ ಬರುವ ಬೋಟು ಮಾಲೀಕರಿಗೆ, ಸಾಧ್ಯತಾ ಪ್ರಮಾಣ ಪತ್ರ ನೀಡುತ್ತಿರುವ ರೀತಿಯಲ್ಲಿಯೇ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳನ್ನು ನಿರ್ಮಿಸಲು ಅನುವಾಗುವಂತೆ ಸಾಧ್ಯತಾ ಪ್ರಮಾಣ ಪತ್ರಗಳನ್ನು ನೀಡಲು ಸಮಿತಿ ಒಂದನ್ನು ರಚಿಸಿರುವಂತೆ ಉತ್ತರ ಕನ್ನಡ ಜಿಲ್ಲೆಗೂ ರಚಿಸಬೇಕೆಂದು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 113 ಮೀಇಯೋ 2009, ಬೆಂಗಳೂರು, ದಿನಾಂಕ: 27ನೇ ಜೂನ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳನ್ನು ನಿರ್ಮಿಸಲು ಅನುವಾಗುವಂತೆ ಸಾಧ್ಯತಾ ಪ್ರಮಾಣ ಪತ್ರಗಳನ್ನು ನೀಡಲು ಈ ಕೆಳಕಂಡಂತೆ ಯೋಜನಾ ಸಮನ್ವಯಾಧಿಕಾರಿ, ಮಲ್ಪೆ ಮತ್ತು ಹೊನ್ನಾವರ ಮೀನುಗಾರಿಕಾ ಬಂದರು ಯೋಜನೆ, ಮಲ್ಪೆ, ಉಡುಪಿ ಇವರ ಅಧ್ಯಕ್ಷತೆಯಲ್ಲಿ ಸಮಿತಿ ಒಂದನ್ನು ರಚಿಸಿ ಆದೇಶಿಸಿದೆ.

1) ಯೋಜನಾ ಸಮನ್ವಯಾಧಿಕಾರಿ ಮಲ್ಪೆ ಮತ್ತು ಹೊನ್ನಾವರ ಮೀನುಗಾರಿಕಾ ಬಂದರು ಯೋಜನೆ, ಮಲ್ಪೆ, ಉಡುಪಿ – ಅಧ್ಯಕ್ಷರು
2) ಪ್ರಧಾನ ವ್ಯವಸ್ಥಾಪಕರು, ಉತ್ತರ ಕನ್ನಡ ಜಿಲ್ಲಾ ಸಹಕಾರಿ ಮೀನು ಮಾರಾಟ ಫೆಡರೇಶನ್ (ನಿ), ಕಾರವಾರ – ಸದಸ್ಯರು
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ (ನಿ), ಮಂಗಳೂರು – ಸದಸ್ಯರು

4) ಲೀಡ್ ಬ್ಯಾಂಕ್ ಮೇನೇಜರ್, ಕಾರವಾರ – ಸದಸ್ಯರು

5) ಮೀನುಗಾರಿಕಾ ಉಪ ನಿರ್ದೇಶಕರು, ಕಾರವಾರ – ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಿ.ಎಂ. ರಾಜಣ್ಣ**

ಪಿ.ಆರ್. 1425 ಸರ್ಕಾರದ ಅಧೀನ ಕಾರ್ಯದರ್ಶಿ,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

## ಒಳಾಡಳಿತ ಸಚಿವಾಲಯ

**ವಿಷಯ:** ಚಾಮರಾಜನಗರದ ಹಳೆಯ ಉಪ ಕಾರಾಗೃಹ ಕಟ್ಟಡವನ್ನು ತಾತ್ಕಾಲಿಕವಾಗಿ ಪೊಲೀಸ್ ಠಾಣೆ ನಡೆಸಲು ಪೊಲೀಸ್ ಇಲಾಖೆಗೆ ವಹಿಸಿಕೊಡುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 257 ಪಿಓಪಿ 2008 ದಿನಾಂಕ: 13–2–2009

2. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಎಡಿಎಂ1:ಸಿಆರ್–6/2007–08, ದಿನಾಂಕ 21.5.2009.

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ, ಸರ್ಕಾರವು ಚಾಮರಾಜನಗರದಲ್ಲಿ ವಿಶೇಷ ಪೊಲೀಸ್ ಠಾಣೆಯನ್ನು ಘೋಷಣೆ ಮಾಡಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು, ಚಾಮರಾಜನಗರದಲ್ಲಿ ವಿಶೇಷ ಪೊಲೀಸ್ ಠಾಣೆಯನ್ನು ಘೋಷಿಸಿದ್ದು, ಸದರಿ ಠಾಣೆಯನ್ನು ಪ್ರಾರಂಭಿಸಲು ಚಾಮರಾಜನಗರದಲ್ಲಿ ಸರ್ಕಾರಿ ಕಟ್ಟಡ ಲಭ್ಯವಿಲ್ಲದಿರುವುದರಿಂದ, ಕಾರಾಗೃಹ ಇಲಾಖೆಯ ವಶದಲ್ಲಿರುವ ಚಾಮರಾಜನಗರದಲ್ಲಿನ ಖಾಲಿ ಇರುವ ಹಳೆಯ ಉಪ ಕಾರಾಗೃಹ ಕಟ್ಟಡವನ್ನು ಹಂಚಿಕೆ ಮಾಡಬೇಕೆಂದು ಪೊಲೀಸ್ ಮಹಾನಿರ್ದೇಶಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬೆಂಗಳೂರು ಇವರು ದಿ:16–5–2009ರಂದು ಬರೆದ ಪತ್ರದಲ್ಲಿ ಕೋರಿರುತ್ತಾರೆಂದು ತಿಳಿಸಿರುತ್ತಾರೆ.

ಸದರಿ ಹಳೆಯ ಉಪ ಕಾರಾಗೃಹ ಕಟ್ಟಡದ ನಿವೇಶನದಲ್ಲಿ ಕಾರಾಗೃಹ ಸಿಬ್ಬಂದಿಗಳಿಗೆ ವಸತಿ ಗೃಹವನ್ನು ನಿರ್ಮಿಸಲು ಉದ್ದೇಶಿಸಿದ್ದು, 2009–10ನೇ ಸಾಲಿಗೆ ಅನುದಾನ ಕೋರಿಕೆ ಸಲ್ಲಿಸಲಾಗಿದೆ ಮತ್ತು ಪರ್ಸ್ಪೆಕ್ಟೀವ್ ಪ್ಲಾನ್ (2ನೇ ಹಂತ) ಅಡಿಯಲ್ಲಿಯೂ ಸದರಿ ಕಾಮಗಾರಿಗೆ ಕೇಂದ್ರ ಸರ್ಕಾರಕ್ಕೂ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುದಾನ ಮಂಜೂರಾಗುವವರೆಗೆ ಸದರಿ ಹಳೆಯ ಕಾರಾಗೃಹ ಕಟ್ಟಡವನ್ನು ಪೊಲೀಸ್ ಮಹಾನಿರ್ದೇಶಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬೆಂಗಳೂರು ಇವರು ಪ್ರಸ್ತಾಪಿಸಿರುವ ಪೊಲೀಸ್ ಠಾಣೆ ಪ್ರಾರಂಭಿಸಲು ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ಧರಿಸಲ್ಪಡುವ ಬಾಡಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ಮೇಲೆ ಪ್ರಸ್ತಾಪಿಸಿದ ಕಾಮಗಾರಿಗಳಿಗೆ ಅನುದಾನ ಮಂಜೂರಾದ ತಕ್ಷಣ ಸದರಿ ಕಟ್ಟಡವನ್ನು ತೆರವುಗೊಳಿಸಿಕೊಡುವ ಷರತ್ತಿಗೆ ಒಳಪಟ್ಟಂತೆ ವಹಿಸಿಕೊಡಬಹುದೆಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರು ತಿಳಿಸಿ, ತತ್ಸಂಬಂಧ ಆದೇಶ ಹೊರಡಿಸುವಂತೆ ಕೋರಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 141 ಪಿಆರ್‌ಎ 2009; ಬೆಂಗಳೂರು, ದಿನಾಂಕ: 20ನೇ ಜೂನ್ 2009.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಕಾರಾಗೃಹ ಇಲಾಖೆಯ ವಶದಲ್ಲಿರುವ ಚಾಮರಾಜನಗರ ಪಟ್ಟಣ ರಥದ ಬೀದಿಯಲ್ಲಿನ ಖಾಲಿ ಇರುವ ಹಳೆಯ ಉಪ ಕಾರಾಗೃಹ ಕಟ್ಟಡದಲ್ಲಿ ಚಾಮರಾಜನಗರ ವಿಶೇಷ ಪೊಲೀಸ್ ಠಾಣೆಯನ್ನು ಪ್ರಾರಂಭಿಸುವ ಸಲುವಾಗಿ, ಪೊಲೀಸ್ ಮಹಾನಿರ್ದೇಶಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬೆಂಗಳೂರು ಇವರಿಗೆ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ ಹಂಚಿಕೆ ಮಾಡಿ ಸರ್ಕಾರವು ಆದೇಶಿಸಿದೆ.

**ಷರತ್ತುಗಳು:**

1. ಲೋಕೋಪಯೋಗಿ ಇಲಾಖೆಯು ನಿರ್ಧರಿಸಲ್ಪಡುವ ಬಾಡಿಗೆಯನ್ನು ನೀಡತಕ್ಕದ್ದು.
2. ಈ ಕಟ್ಟಡ ನಿವೇಶನದಲ್ಲಿ ಉದ್ದೇಶಿತ ಕಾರಾಗೃಹ ಸಿಬ್ಬಂದಿಗಳಿಗೆ ವಸತಿಗೃಹಗಳನ್ನು ನಿರ್ಮಿಸಲು ಅನುದಾನ ಮಂಜೂರಾದ ಕೂಡಲೇ, ಕಾಮಗಾರಿ ಕೈಗೊಳ್ಳಲು ಅನುಕೂಲವಾಗುವಂತೆ ಕಟ್ಟಡವನ್ನು ತೆರವುಗೊಳಿಸತಕ್ಕದ್ದು.

3. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು, ಬೆಂಗಳೂರು ಇವರು ಪೊಲೀಸ್ ಮಹಾನಿರ್ದೇಶಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬೆಂಗಳೂರು ಇವರೊಡನೆ ಸೂಕ್ತ ಕರಾರು ಮಾಡಿಕೊಳ್ಳತಕ್ಕದ್ದು.

4. ಸರ್ಕಾರದ ಆದೇಶದಂತೆ ಕ್ರಮ ಕೈಗೊಂಡ ಬಗ್ಗೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಟಿ. ಕೃಷ್ಣಮೂರ್ತಿ**

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ, (ಸೆರೆಮನೆ ಮತ್ತು ಸಿನಿಮಾ)

ಪಿ.ಆರ್. 1445

## ಕೃಷಿ ಸಚಿವಾಲಯ

**ವಿಷಯ:** ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಕೃಷಿಕರಿಗೆ ಮತ್ತು ಕೃಷಿಕರ ಮಕ್ಕಳಿಗೆ 2007–08ನೇ ಸಾಲಿನ ಪ್ರವೇಶದಲ್ಲಿ ಮೀಸಲಿಟ್ಟಿರುವ ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಸಮಿತಿ ರಚನೆ ಬಗ್ಗೆ.

**ಓದಲಾಗಿದೆ:** ಕುಲಸಚಿವರು ಕೃಷಿ ವಿಶ್ವವಿದ್ಯಾಲಯ, ಧಾರವಾಡರವರ ಪತ್ರ ಸಂಖ್ಯೆ:ಕುಸ:ಸ್ನಾ:ಪ್ರವೇಶ:ಎ–3/2009, ದಿನಾಂಕ 14–5–2009

**ಪ್ರಸ್ತಾವನೆ:**

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಸಚಿವರು ಮೇಲೆ ಓದಲಾದ ಪತ್ರದಲ್ಲಿ 2009–10ನೇ ಸಾಲಿನಲ್ಲಿ ಕೃಷಿಕರ ಮತ್ತು ಕೃಷಿಕರ ಮಕ್ಕಳಿಗೆ ಪ್ರವೇಶದಲ್ಲಿ ಮೀಸಲಿಟ್ಟಿರುವ ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಆಯ್ಕೆ ಸಮಿತಿಯನ್ನು ರಚಿಸುವಂತೆ ಕೋರಿರುತ್ತಾರೆ:

1) ಡೀನ್ (ಗೃಹ, ವಿಜ್ಞಾನ) ಗೃಹ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
2) ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಧಾರವಾಡ.
3) ಜಂಟಿ ನಿರ್ದೇಶಕರು (ಅಭಿವೃದ್ಧಿ), ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು.

ಸದರಿ ಪ್ರಸ್ತಾವನೆ ಪರಿಶೀಲಿಸಿದ ಸರ್ಕಾರ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 116 ಕೃವಿವಿ 2009, ಬೆಂಗಳೂರು, ದಿನಾಂಕ: 30ನೇ ಮೇ 2009.**

ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೃಷಿಕರಿಗೆ ಮತ್ತು ಕೃಷಿಕರ ಮಕ್ಕಳಿಗೆ 2009–10ನೇ ಸಾಲಿನ ಸ್ನಾತಕ ಕೋರ್ಸ್‌ಗಳಿಗೆ ಪ್ರವೇಶದಲ್ಲಿ ಮೀಸಲಿಟ್ಟಿರುವ ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದಕ್ಕೆ ಈ ಕೆಳಕಂಡಂತೆ ಸಮಿತಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಲಾಗಿದೆ:

1) ಡೀನ್ (ಗೃಹ ವಿಜ್ಞಾನ) ಗೃಹ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
2) ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಧಾರವಾಡ.
3) ಜಂಟಿ ನಿರ್ದೇಶಕರು (ಅಭಿವೃದ್ಧಿ), ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಅವರ ಹೆಸರಿನಲ್ಲಿ,

**ಜಿ.ಕೆ. ಗುರಾಣಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ.

ಪಿ.ಆರ್. 1446

## ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

**ವಿಷಯ:** ಬೆಳಗಾವಿಯಲ್ಲಿ ಶ್ರೀ ರಾಮಕೃಷ್ಣ ಮಿಷನ್‌ಗೆ ಲೀಸ್ ಮೇಲೆ ನೀಡಿರುವ ಜಮೀನನ್ನು ಮಂಜೂರು ಮಾಡುವ ಕುರಿತು.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ: ಲೋಇ 104 ಬಿಎಂಎಸ್ 2001, ದಿ: 24–10–2001.
2) ಸರ್ಕಾರದ ಆದೇಶ ಸಂಖ್ಯೆ: ಲೋಇ 104 ಬಿಎಂಎಸ್ 2001 ದಿ: 30.01.2002.
3) ಸರ್ಕಾರದ ಆದೇಶ ಸಂಖ್ಯೆ: ಲೋಇ 104 ಬಿಎಂಎಸ್ 2001 ದಿ: 28.10.2003.
4) ಕಾರ್ಯದರ್ಶಿಗಳು, ಶ್ರೀ ರಾಮಕೃಷ್ಣ ಆಶ್ರಮ, ಬೆಳಗಾಂ ಇವರ ಮನವಿ ಪತ್ರ ದಿ:8.2.2004

5) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ಉತ್ತರ) ಧಾರವಾಡ ಇವರ ಪತ್ರ ಸಂಖ್ಯೆ: ಸಿಇಎನ್/ಸಿ-16/ಕಸಮ-39/01-02/3229 ದಿ: 26.7.2004

6) ಸರ್ಕಾರದ ಆದೇಶ ಸಂಖ್ಯೆ: ಲೋಇ ಬಿಎಂಎಸ್ 2005 ದಿ: 28.06.2006.

7) ಕಾರ್ಯದರ್ಶಿಗಳು, ಶ್ರೀ ರಾಮಕೃಷ್ಣ ಆಶ್ರಮ, ಬೆಳಗಾಂ ಇವರ ಮನವಿ ಪತ್ರದ ದಿ: 30.06.2008.

**ಪ್ರಸ್ತಾವನೆ:**

ಬೆಳಗಾವಿ ನಗರದ ಕೋಟೆ ಪ್ರದೇಶದ ಸರ್ವೇ ನಂ: 345 ರಲ್ಲಿ 3642 ಚ.ಮೀ (36 ಗುಂಟೆ) ಜಾಗವನ್ನು ಶ್ರೀ ರಾಮಕೃಷ್ಣ ಮಿಷನ್ ಆಶ್ರಮ ಬೇಲೂರು ಮಠ ಪಶ್ಚಿಮ ಬಂಗಾಳ ಇವರಿಗೆ ವಾರ್ಷಿಕ ರೂ. 1,00,000/- ಗಳ ನೆಲ ಬಾಡಿಗೆಯನ್ನು ನಿಗದಿಪಡಿಸಿ 30 ವರ್ಷಗಳ ಅವಧಿಗೆ ಕೆಲವು ಷರತ್ತುಗಳೊಂದಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಆದೇಶದನ್ವಯ ಗುತ್ತಿಗೆಗೆ ನೀಡಿ ಆದೇಶ ಹೊರಡಿಸಲಾಗಿದೆ.

ಶ್ರೀ ರಾಮಕೃಷ್ಣ ಮಿಷನ್ ಆಶ್ರಮ ಇವರಿಗೆ ಗುತ್ತಿಗೆ ನೀಡಲಾದ ಸದರಿ 36 ಗುಂಟೆ ಜಮೀನಿಗೆ ನಿಗಧಿಪಡಿಸಲಾದ ರೂ.1,00,000/- ಗಳ ನೆಲ ಬಾಡಿಗೆಯನ್ನು ರೂ.25,000 ಗಳಿಗೆ ಕಡಿಮೆಗೊಳಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ: (2)ರಲ್ಲಿ ಮಾರ್ಪಡಿಸಿ ಆದೇಶ ಹೊರಡಿಸಲಾಗಿದೆ.

ಶ್ರೀ ರಾಮಕೃಷ್ಣ ಮಿಷನ್ ಇವರಿಗೆ ಈಗಾಗಲೇ ನೀಡಿರುವ 36 ಗುಂಟೆ ಜಾಗಕ್ಕೆ ಹೊಂದಿಕೊಂಡಂತೆ ಇರುವ 1.63 ಎಕರೆ ಜಮೀನು ಮತ್ತು ಅದರಲ್ಲಿರುವ ಕಾಡಾ ಬಂಗಲೆಯನ್ನು ಒಳಗೊಂಡಂತೆ ವಾರ್ಷಿಕ ರೂ. 60,000/- ಗಳ ನೆಲ ಬಾಡಿಗೆಯನ್ನು ನಿಗದಿಪಡಿಸಿ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಅನ್ವಯ ಕ್ರಮ ಸಂಖ್ಯೆ: 1ರ ಸರ್ಕಾರಿ ಆದೇಶದಲ್ಲಿ ವಿಧಿಸಿರುವ ಷರತ್ತುಗಳೊಂದಿಗೆ ಆದೇಶ ಹೊರಡಿಸಲಾಗಿದೆ.

ಬೆಳಗಾಂ ನಗರದ ಕೋಟೆ ಪ್ರದೇಶದ ಸರ್ವೆ ನಂಬರ್ 345ರಲ್ಲಿನ 2.62 ಎಕರೆ ಜಾಗವನ್ನು ಉಚಿತವಾಗಿ ಸರ್ಕಾರಕ್ಕೆ ನೀಡಬೇಕೆಂದು ಮೇಲೆ ಓದಲಾದ ಕ್ರಮ ಸಂಖ್ಯೆ(4) ರಲ್ಲಿ ಕಾರ್ಯದರ್ಶಿಗಳು, ಶ್ರೀ ರಾಮಕೃಷ್ಣ ಆಶ್ರಮ, ಬೆಳಗಾಂ ಇವರು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ: (5) ರಲ್ಲಿ ಮುಖ್ಯ ಇಂಜಿನಿಯರ್. ಸಂಕ(ಉ) ಧಾರವಾಡ ಇವರು ಶ್ರೀ ರಾಮಕೃಷ್ಣ ಮಿಷನ್ ಆಶ್ರಮ ಇವರು ಕೋರಿರುವ ಪ್ರಸ್ತಾವನೆಗೆ ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ರಾಮಕೃಷ್ಣ ಮಿಷನ್ ಆಶ್ರಮ ಬೇಲೂರು ಮಠ ಪಶ್ಚಿಮ ಬಂಗಾಳ ಇವರಿಗೆ ಬೆಳಗಾಂ ಕೋಟೆ ಪ್ರದೇಶದ ಸರ್ವೆ ನಂಬರ್ 345 ರಲ್ಲಿನ 3642 ಚ.ಮೀ(36 ಗುಂಟೆ) ಜಾಗವನ್ನು ಹಾಗೂ ಇದಕ್ಕೆ ಹೊಂದಿಕೊಂಡಿರುವ 1.63 ಎಕರೆ ಜಾಗವನ್ನು ಸಹ ಅದರಲ್ಲಿರುವ ಕಾಡಾ ಬಂಗಲೆ ಸಮೇತ ಈಗಾಗಲೇ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ಹೆಚ್ಚುವರಿಯಾಗಿ ಇದಕ್ಕೆ ಹೊಂದಿಕೊಂಡಂತೆ ಇದೇ ಸರ್ವೆ ನಂಬರ್ 345ರಲ್ಲಿ ಪುನಃ 2.62 ಜಮೀನನ್ನು ಸೇರಿಸಿಕೊಂಡು ಒಟ್ಟಾರೆ ಈ ಆಶ್ರಮಕ್ಕೆ 5.15 ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಪ್ರತಿ ಎಕರೆ ಪ್ರತಿ ವರ್ಷಕ್ಕೆ ರೂ. 1,000/-ಗಳು ನೆಲ ಬಾಡಿಗೆ ವಿಧಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ: (6)ರ ಸರ್ಕಾರಿ ಆದೇಶನ್ವಯ ಷರತ್ತುಗಳೊಂದಿಗೆ ಗುತ್ತಿಗೆಗೆ ನೀಡಿ ಆದೇಶ ಹೊರಡಿಸಲಾಗಿದೆ.

ಶ್ರೀ ರಾಮಕೃಷ್ಣ ಮಿಷನ್ ಆಶ್ರಮದವರು ಮೇಲೆ ಓದಲಾದ ಕ್ರಮ ಸಂಖ್ಯೆ: (7)ರಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ ಪ್ರಸ್ತುತ ಜಮೀನು ಆಶ್ರಮ ಸ್ವಂತ ಜಮೀನಗಿರದೆ ಲೀಸ್ ಮೇಲೆ ಪಡೆದಿರುವುದರಿಂದ ಆಶ್ರಮವನ್ನು ತಮ್ಮ ಇಚ್ಛೆಯಂತೆ ಅಭಿವೃದ್ಧಿಪಡಿಸಲು ಸಾಧ್ಯವಾಗುವುದಿಲ್ಲ ಹಾಗೂ ಸೇವಾ ಚಟುವಟಿಕೆಗಳನ್ನು ವಿಸ್ತರಿಸಲಾಗುವುದಿಲ್ಲವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಈಗಾಗಲೇ ಲೀಸ್ ಮೇಲೆ ನೀಡಿರುವ ಒಟ್ಟು 5.15 ಎಕರೆ ಜಮೀನನ್ನು ಖಾಯಂ ಆಗಿ ಆಶ್ರಮಕ್ಕೆ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸರ್ಕಾರ ಅದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಲೋಇ 172 ಬಿಎಂಎಸ್ 2008, ಬೆಂಗಳೂರು, ದಿನಾಂಕ: 2ನೇ ಜೂನ್ 2009**

ಶ್ರೀ ರಾಮಕೃಷ್ಣ ಮಿಷನ್ ಆಶ್ರಮ ಬೇಲೂರು ಮಠ, ಪಶ್ಚಿಮ ಬಂಗಾಳ ಇವರಿಗೆ ಬೆಳಗಾವಿ ನಗರದ ಕೋಟೆ ಪ್ರದೇಶದ ಸರ್ವೆ ನಂಬರ್ 345ರಲ್ಲಿನ 5.15 ಎಕರೆ ಜಮೀನನ್ನು ಲೀಸ್ ಮೇಲೆ ನೀಡಲಾಗಿದ್ದು, ಸದರಿ ಜಮೀನನಲ್ಲಿರುವ ಹಳೆ ಕಟ್ಟಡದಲ್ಲಿ ಸ್ವಾಮಿ ವಿವೇಕಾನಂದರು ವಾಸವಾಗಿದ್ದ ವೈಶಿಷ್ಟ್ಯವನ್ನು ಪ್ರತಿ ಎಕರೆಗೆ ರೂ. 50,000/-ದಂತೆ (ರೂಪಾಯಿ ಐವತ್ತು ಸಾವಿರಗಳು ಮಾತ್ರ) ಶ್ರೀ ರಾಮಕೃಷ್ಣ ಮಿಷನ್ ಆಶ್ರಮ ಬೆಳಗಾವಿ ಇವರಿಗೆ ಖಾಯಂ ಆಗಿ ಮಂಜೂರು ಮಾಡಲಾಗಿದ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ರೆಹಮತ್ ಉಲ್ಲಾ**

ಪಿ.ಆರ್. 1455

ಸರ್ಕಾರದ ಅಧೀನ ಕಾರ್ಯದರ್ಶಿ,

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಕಟ್ಟಡಗಳು)

## ಆರ್ಥಿಕ ಸಚಿವಾಲಯ

ವಿಷಯ: ಶ್ರೀ ಹೆಚ್.ಪಿ.ಹಬೀಬುಲ್ಲಾ ಬೇಗ್, ವಾಣಿಜ್ಯ ತೆರಿಗೆ ಅಧಿಕಾರಿ, (ಗುಪ್ತವಾರ್ತೆ), ಚಿಕ್ಕಮಗಳೂರು, ಇವರ ವಿರುದ್ಧದ ಅಭಿಯೋಜನಾ ಆದೇಶದ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ ಎಂ–1/ ಸಿಆರ್–1/2008/ಚಿಕ್ಕಮಗಳೂರು, ದಿನಾಂಕ 10–10–2008.
2) ಸರ್ಕಾರಿ ಆದೇಶ ಸಂಖ್ಯೆ: ಆಇ 4 ವಾತೆತ 2008 ದಿನಾಂಕ 03–03–2008.
3) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ ಎಂ–1/ಸಿಆರ್–1/2008/ಚಿಕ್ಕಮಗಳೂರು ದಿನಾಂಕ: 4–10–2008.
4) ತನಿಖಾಧಿಕಾರಿಯವರ ವರದಿ ಸಂಖ್ಯೆ: ಪೊವಿ/ಕಲೋ/ಚಿಮ/ ಮೊ.ಸಂ.1/2008 ದಿನಾಂಕ:28.8.2008.
5) ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರಿವೀಕ್ಷಕರ ವರದಿ, ಸಾಕ್ಷಿಧಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.
6) ಸರ್ಕಾರಿ ಆದೇಶ ಸಂಖ್ಯೆ: ಸರ್ಕಾರಿ ಆದೇಶ ಸಂಖ್ಯೆ: ಆಇ 4 ವಾತೆತ 2008 ದಿನಾಂಕ:22.11.2008.
7) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ ಎಂ–1/ಸಿಆರ್–1/2008/ಚಿಕ್ಕಮಗಳೂರು ದಿನಾಂಕ: 6–12–2008 ಮತ್ತು 08–04–2009.

**ಪ್ರಸ್ತಾವನೆ:**

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ:(1) ರಲ್ಲಿನ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಶಿಫಾರಸ್ಸಿನ ಮೇರೆಗೆ ಮೇಲೆ ಓದಲಾಗಿರುವ ಕ್ರಮ ಸಂಖ್ಯೆ :(2)ರ ಆದೇಶದನ್ವಯ ಶ್ರೀ ಹೆಚ್.ಪಿ.ಹಬೀಬುಲ್ಲಾ ಬೇಗ್, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ಅಮಾನತ್ತಿನಲ್ಲಿಡಲಾಗಿದೆ.

ಶ್ರೀ ಹೆಚ್.ಪಿ.ಹಬೀಬುಲ್ಲಾ ಬೆಗ್, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧ ಗುನ್ನೆ ಸಂಖ್ಯೆ:1/2008 ರಲ್ಲಿ ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯವರ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ:(3) ರ ಪತ್ರ ದಿನಾಂಕ: 4–10–2008 ರೊಡನೆ ಕಳುಹಿಸುತ್ತಾ, ಆಪಾದಿತ ಅಧಿಕಾರಿಯವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ 19ನೇ ಕಲಂನ ಅಡಿಯಲ್ಲಿ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರವಾದ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಆಪಾದಿತ ಅಧಿಕಾರಿಯನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ ಕಲಂ 7,13(1)(ಡಿ)ರ ಜೊತೆಯಲ್ಲಿ ಓದಲಾದ 13(2)ರ ಅಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಉಲ್ಲೇಖಿತ ಕಾಯ್ದೆಯ 19ನೆಯ ಕಲಂ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿದ್ದರು. ಮೇಲೆ ಓದಲಾಗಿರುವ ಕ್ರಮ ಸಂಖ್ಯೆ:(6)ರ ಸರ್ಕಾರಿ ಆದೇಶದಲ್ಲಿ ಈ ಅಧಿಕಾರಿಯನ್ನು ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿಯನ್ನು ನೀಡಲಾಗಿತ್ತು. ಆದರೆ ತದನಂತರದ ಬೆಳವಣಿಗೆಯ ಹಿನ್ನೆಲೆಯಲ್ಲಿ ಪ್ರಕರಣವನ್ನು ಮತ್ತೊಮ್ಮೆ ಪರಿಶೀಲಿಸಲಾಗಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಅಪರ ಪೊಲೀಸ್ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ:(3)ರ ಪತ್ರ ದಿನಾಂಕ: 4–10–2008 ರೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1) ಶ್ರೀ ಎ.ವಿ.ಸುರೇಶ್, ಬಿನ್. ವೆಂಕಟಾಚಲ, ವ್ಯಾಪಾರಿ, ಕನ್ನಿಕಾ ಪ್ಲಾಸ್ಟಿಕ್, ನಾಯ್ಡು ಬೀದಿ, ಚಿಕ್ಕಮಗಳೂರು, ದಿನಾಂಕ: 7–1–2008.
2) ಪ್ರಥಮ ವರ್ತಮಾನ ವರದಿ: ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:1/2008 ದಿನಾಂಕ: 07–01–2008.
3) ಪ್ರಾಯೋಗಿಕ ಪಂಚನಾಮೆ ದಿನಾಂಕ: 07–01–2008 ರಂದು ಠಾಣೆಯಲ್ಲಿ ಜರುಗಿಸಿದ ವಹಿಸುವಿಕೆ ಪಂಚನಾಮೆ.

4) ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: ಪಿಹೆಚ್ಐ/ಸಿಎಂಇ/ಲೋಕ್/138/07-08 ದಿನಾಂಕ:09.01.2009

5) ಕೃತ್ಯ ನಡೆದ ಸ್ಥಳದ ನಕಾಶೆ: ಸಹಾಕಯ ಕಾರ್ಯನಿರ್ವಾಹಕ ಇಂಜಿನಿಯರ್, ನಂ.1, ಉಪ ವಿಭಾಗ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ರವರ ಪತ್ರ ಸಂಖ್ಯೆ: ಸಕಾಇಂ./ನಂ.1/ಉವಿ/ಲೋಇ/ಚಿಮ/ಎನ್ನೆಲ್/ಲೋಕಾಯುಕ್ತ/ನಕ್ಷೆ/2007-08/926 ದಿನಾಂಕ: 14-01-2008.

6) ಲಂಚ ಕೇಳಲು ಆಧಾರವಾದ ಕಡತ ಹಾಗೂ ದಾಖಲೆಗಳು

7) **ಆಪಾದಿತರ ಸಮಜಾಯಿಷಿ ಹೇಳಿಕೆಗಳು**

ಶ್ರೀ ಹೆಚ್.ಬಿ.ಹಬೀಬುಲ್ಲಾ ಬೇಗ್, ವಾಣಿಜ್ಯ ತೆರಿಗೆ ಅಧಿಕಾರಿಯವರ ಹೇಳಿಕೆ ದಿನಾಂಕ: 7-1-2008.

8) **ಸಾಕ್ಷಿಗಳ ಪಟ್ಟಿ:**

1) ಹೆಚ್.ವಿ.ದಶರಥರಾಜು, ರವರ ಹೇಳಿಕೆ ದಿನಾಂಕ: 7-1-2008.
2) ಶ್ರಿ ಎ.ವಿ.ಸುರೇಶ್, ಫಿರ್ಯಾದಿರವರ ಹೇಳಿಕೆ ದಿನಾಂಕ: 8-1-2008.
3) ಶ್ರೀ ಎಂ.ಓಂಕಾರಪ್ಪ. ಪಂಚ ಸಾಕ್ಷಿ ದಿನಾಂಕ: 8-1-2008.
4) ಶ್ರೀ ನರಹರಿ ಗಜಾನನ ಹೆಗಡೆ, ನೆರಳು ಮತ್ತು ಪಂಚ ಸಾಕ್ಷಿ ದಿನಾಂಕ: 8-1-2008.
5) ಶ್ರೀ ಎನ್.ಲೋಕೇಶ್, ಜ್ಯೂನಿಯರ್ ಇಂಜಿನಿಯರ್‌ರವರ ಹೇಳಿಕೆ ದಿ:8-1-2008.
6) ಶ್ರೀ ಸಿ.ಆನಂದ್, ಸಿ.ಹೆಚ್.ಸಿ, ದಿನಾಂಕ: 7-1-2008.
7) ಶ್ರೀ ಜೆ.ರಂಗೇಗೌಡ, ಸಿ.ಹೆಚ್.ಸಿ, ದಿನಾಂಕ 7-1-2008.
8) ಶ್ರೀ ಬಿ.ಕೆ.ಪುಟ್ಟಸ್ವಾಮಾಚಾರ್, ಸಿ.ಹೆಚ್.ಸಿ.ರವರ ಹೇಳಿಕೆ ದಿನಾಂಕ:8-1-2008.

ತನಿಖಾಧಿಕಾರಿಯಾದ ಶ್ರೀ ಹೆಚ್.ಎನ್.ಪಂಚಾಕ್ಷರಪ್ಪ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಪೊಲೀಸ್ ವಿಭಾಗ, ಚಿಕ್ಕಮಗಳೂರು, ಇವರು ಶ್ರೀ ಹೆಚ್.ಬಿ.ಹಬೀಬುಲ್ಲಾಬೇಗ್, ವಾಣಿಜ್ಯ ತೆರಿಗೆ ಅಧಿಕಾರಿ, ರವರ ವಿರುದ್ಧ ದಂಡನಾರ್ಹ ಪ್ರಕರಣವನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ 13(2) ರಡಿಯಲ್ಲಿ ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ: 1/2008 ರಲ್ಲಿ ದಾಖಲಿಸಿಕೊಂಡಿರುತ್ತಾರೆ.

ಆಪಾದಿತರು ಶ್ರೀ ಹೆಚ್.ಹಬೀಬುಲ್ಲಾಬೇಗ್, ವಾಣಿಜ್ಯ ತೆರಿಗೆ ಅಧಿಕಾರಿ, ರವರು ಫಿರ್ಯಾದಿಯಾದ ಶ್ರೀ ಎ.ವಿ.ಸುರೇಶ್, ಬಿನ್.ವೆಂಕಟಾಚಲ, ವ್ಯಾಪಾರಿ, ಕನ್ನಿಕಾ ಪ್ಲಾಸ್ಟಿಕ್, ನಾಯ್ಡು ಬೀದಿ, ಚಿಕ್ಕಮಗಳೂರು, ಇವರ ಅಂಗಡಿಗೆ ಭೇಟಿ ನೀಡಿ, ಸದರಿ ಅಂಗಡಿ ತಪಾಸಣೆ ಮಾಡದಿರಲು ರೂ. 15,000/- ಗಳ ಅಕ್ರಮ ಸಂಭಾವನೆಯನ್ನು ಕೊಡುವಂತೆಯೂ ಇಲ್ಲದಿದ್ದರೆ ದಂಡ ಹಾಕುವುದಾಗಿಯೂ ತಿಳಿಸಿ, ಅಕ್ರಮ ಸಂಭಾವನೆಗೆ ಒತ್ತಾಯಿಸಿರುತ್ತಾರೆ. ಫಿರ್ಯಾದಿರವರಿಗೆ ಲಂಚ ಕೊಡಲು ಇಷ್ಟವಿಲ್ಲದ್ದರಿಂದ ಸದರಿ ಆರೋಪಿತರ ಮೇಲೆ ಸೂಕ್ತ ಕಾನೂನು ಕ್ರಮ ಕೋರಿರುತ್ತಾರೆ.

ಮೇಲ್ಕಂಡ ಲಿಖಿತ ದೂರನ್ನು ಆಧರಿಸಿ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರುರವರು ಸದರಿ ಆರೋಪಿತ ಅಧಿಕಾರಿಯವರ ಮೇಲೆ ಭ್ರಷ್ಟಾಚಾರ ನಿರೋಧ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ 13(2) ರಡಿಯಲ್ಲಿ ಮೊಕದ್ದಮೆ ಸಂಖ್ಯೆ: 1/2008ರ ಪ್ರಕಾರ ಪ್ರಕರಣವನ್ನು ದಿನಾಂಕ: 07-01-2008 ರಂದು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ.

ಪಂಚ ಸಾಕ್ಷಿಗಳೊಡನೆ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿ ವರ್ಗದವರು ದಿನಾಂಕ: 07-01-2008 ರಂದು ಕನ್ನಿಕಾ ಪ್ಲಾಸ್ಟಿಕ್, ನಾಯ್ಡು ಬೀದಿ, ಚಿಕ್ಕಮಗಳೂರು, ಇಲ್ಲಿ ಬೀಸಿದ ಟ್ರ್ಯಾಪ್ ಯಶಸ್ವಿಯಾಗಿ, ಶ್ರೀ ಹೆಚ್.ಬಿ.ಹಬೀಬುಲ್ಲಾ ಬೇಗ್, ವಾಣಿಜ್ಯ ತೆರಿಗೆ ಅಧಿಕಾರಿಯವರು ಅಕ್ರಮ ಸಂಭಾವನೆಯಾದ ರೂ.15,000/-ಗಳ ಲಂಚದ ಹಣವನ್ನು ಪಡೆಯುತ್ತಿರುವಾಗ ಲಂಚದ ಹಣದೊಡನೆ ಸಿಕ್ಕಿಹಾಕಿಕೊಂಡಿರುತ್ತಾರೆ. ಆಪಾದಿತ ಅಧಿಕಾರಿಯ ಬಲಗೈ ಮತ್ತು ಎಡಗೈ ಬೆರಳುಗಳನ್ನು ಫಿನಾಪ್ತಲಿನ್ ಪರೀಕ್ಷೆಗೆ ಒಳಪಡಿಸಲು ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿದಾಗ ದ್ರಾವಣವು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಗೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಫಿರ್ಯಾದಿ ಹಾಗೂ ಆಪಾದಿತ ಅಧಿಕಾರಿ/ನೌಕರರ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ ಮತ್ತು ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ.15,000/-ಗಳನ್ನು ಶ್ರೀ ಹೆಚ್.ಬಿ.ಹಬೀಬುಲ್ಲಾ ಬೇಗ್, ವಾಣಿಜ್ಯ ತೆರಿಗೆ ಅಧಿಕಾರಿಯವರಿಂದ ಕನ್ನಿಕಾ ಪ್ಲಾಸ್ಟಿಕ್, ನಾಯ್ಡು ಬೀದಿ, ಚಿಕ್ಕಮಗಳೂರು, ಈ ಸ್ಥಳದಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿಧಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳನ್ನು

ಪರಿಶೀಲಿಸಲಾಗಿದೆ. ಇದರಿಂದಾಗಿ ಶ್ರೀ ಹೆಚ್.ಬಿ.ಹಬೀಬುಲ್ಲಾ ಬೇಗ್, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ಮೇಲಿನ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬರುತ್ತದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಂ 7,13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ 7,13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯಕವೆಂದು ಸರ್ಕಾರಕ್ಕೆ ಮನವರಿಕೆಯಾಗಿರುತ್ತದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾಧಿತ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಲಂಚ ನಿರೋಧ ಕಾಯ್ದೆ 1988ರ ಕಲಂ 19(ಸಿ) ರಡಿಯಲ್ಲಿ ಆಪಾದಿತ ಅಧಿಕಾರಿಯಾದ ಶ್ರೀ ಹೆಚ್.ಬಿ.ಹಬೀಬುಲ್ಲಾ ಬೇಗ್, ವಾಣಿಜ್ಯ ತೆರಿಗೆ ಅಧಿಕಾರಿಯವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7 ಮತ್ತು 13(1)(ಡಿ) ಜೊತೆಗೆ 13(2) ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಆಇ 4 ವಾತೆತ 2008 ಬೆಂಗಳೂರು, ದಿನಾಂಕ: 18ನೇ ಜೂನ್ 2009.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಆಪಾದಿತ ಅಧಿಕಾರಿಯಾದ ಶ್ರೀ ಹೆಚ್.ಬಿ.ಹಬೀಬುಲ್ಲಾ ಬೇಗ್, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2)ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜಿಸಲು ಈ ಮೂಲಕ ಪರಿಷ್ಕೃತ ಮಂಜೂರಾತಿಯನ್ನು ನೀಡುತ್ತಿದೆ.
ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ಮೇಲ್ಕಂಡ ನಿಯಮಗಳನ್ವಯ ಈ ಆದೇಶವನ್ನು ನನ್ನ ಕಚೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ: 18-06-2009 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1503

**ಎಲ್.ಎಸ್. ವಾಸನ್**

ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ-2)

**ವಿಷಯ:** ಶ್ರೀ ಓ.ಎನ್.ಚಂದ್ರಶೇಖರಯ್ಯ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧದ ಅಭಿಯೋಜನಾ ಆದೇಶದ ಮಂಜೂರಾತಿ ನೀಡುವ ಬಗ್ಗೆ.

**ಓದಲಾಗಿದೆ:**
1) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಬಿಡಿ-27/ಸಿಆರ್-16/2008ಬಿಎಲ್‌ಆರ್ ದಿನಾಂಕ 14-05-2008.
2) ಸರ್ಕಾರಿ ಆದೇಶ ಸಂಖ್ಯೆ: ಆಇ 17 ವಾತೆತ 2008 ದಿನಾಂಕ 2-7-2008.
3) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಬಿಡಿ-27/ಸಿಆರ್-16/2008/ಬಿಎಲ್‌ಆರ್ ದಿನಾಂಕ 26-02-2009
4) ತನಿಖಾಧಿಕಾರಿಯವರ ವರದಿ ದಿನಾಂಕ: 16-1-2009.
5) ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿಧಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

**ಪ್ರಸ್ತಾವನೆ:**

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ:(1) ರಲ್ಲಿನ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರ ಶಿಫಾರಸ್ಸಿನ ಮೇರೆಗೆ ಮೇಲೆ ಓದಲಾಗಿರುವ ಕ್ರಮ ಸಂಖ್ಯೆ:(2)ರ ಆದೇಶದನ್ವಯ ಶ್ರೀ ಓ.ಎನ್.ಚಂದ್ರಶೇಖರಯ್ಯ, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ಅಮಾನತ್ತಿನಲ್ಲಿಡಲಾಗಿದೆ.

ಶ್ರೀ ಓ.ಎನ್.ಚಂದ್ರಶೇಖರಯ್ಯ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧ ಗುನ್ನೆ ಸಂಖ್ಯೆ:16/2008 ರಲ್ಲಿ ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯವರ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಉಲ್ಲೇಖ (3)ರ ಪತ್ರ ದಿನಾಂಕ: 26-2-2009 ರೊಡನೆ ಕಳುಹಿಸುತ್ತಾ, ಆಪಾದಿತ ಅಧಿಕಾರಿಯವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ 19ನೇ ಕಲಂನ ಅಡಿಯಲ್ಲಿ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರವಾದ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಉಲ್ಲೇಖ (3)ರ ಪತ್ರದೊಡನೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ.

1) ಶ್ರೀ ವಾಸುದೇವ ಆಚಾರ್ಯ ಬಿನ್ ಲೇಟ್ ಜಿ.ಕೃಷ್ಣಾಚಾರ್ಯ, ವ್ಯಾಪಾರಿ ಮನೆ ನಂ. 50/1, ನಂದಾದೀಪ್, ಸುಬ್ಬಣ್ಣ ಲೇಔಟ್, ಹರಿನಗರ ಕ್ರಾಸ್, ಅಂಜನಾಪುರ ಅಂಚೆ, ಬೆಂಗಳೂರು – 560062.
2) ಪ್ರಾಯೋಗಿಕ ಪಂಚನಾಮೆ ದಿನಾಂಕ: 17–04–2008
3) ಟ್ರ್ಯಾಪ್‌ನ ಮಹಜರ್ ದಿನಾಂಕ: 17–04–2008
4) ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: ಪಿಹೆಚ್‌ಐ/ಸಿಎಂಇ/ಲೋಕ್–09/08–09 ದಿನಾಂಕ: 03.07.2008.
5) ಕೃತ್ಯ ನಡೆದ ಸ್ಥಳದ ನಕಾಶೆ: ಸಂಖ್ಯೆ: ಸಕಾಅ/ಲೋಉವಿ/ನೆ.ಲ/ಸಿ–1/ನಕ್ಷೆ/08–09 ದಿನಾಂಕ: 12–06–2008.
6) **ಸಾಕ್ಷಿ ಹೇಳಿಕೆಗಳ ಪಟ್ಟಿ:**
   1. ಶ್ರೀ ಜಿ.ವಾಸುದೇವ ಆಚಾರ್ಯ, ಫಿರ್ಯಾದಿ
   2. ಶ್ರೀ ಕೆ.ಕೆ.ಸೈಬೊ, ನೆರಳು ಸಾಕ್ಷಿದಾರರು.
   3. ಶ್ರೀ ನರೇಶ್,
   4. ಶ್ರೀ ಬಿ.ಮಹಮದ್ ಯೂಸುಫ್, ವಾಣಿಜ್ಯ ತೆರಿಗೆ ಪರಿವೀಕ್ಷಕರು.
   5. ಶ್ರೀ ನಟರಾಜ್, ವಾಣಿಜ್ಯ ತೆರಿಗೆ ಪರಿವೀಕ್ಷಕರು.
   6. ಶ್ರೀ ಟಿ.ಸಿ.ರವಿಕುಮಾರ್, ಎ.ಇ., ಪಿಡಬ್ಲ್ಯೂಡಿ ಸಬ್ ಡಿವಿಜನ್, ನೆಲಮಂಗಲ.
   7. ಶ್ರೀ ಜಿ.ಸಿ.ನಾಗಪ್ಪ, ಹೆಚ್.ಸಿ.
   8. ಶ್ರೀ ಎನ್.ಮಂಜುನಾಥ್
   9. ಶ್ರೀ ಎಸ್.ಬಿ.ಚಂದ್ರಶೇಖರ್ (ಪೇದೆ)
   10. ಶ್ರೀ ಬಿ.ಕೆ.ಮಂಜುನಾಥ್,
   11. ಶ್ರೀ ಗೋವಿಂದ್ರಪ್ಪ ಸಿಂದ್ರಪ್ಪ
   12. ಶ್ರೀ ಜಿ.ಪ್ರಕಾಶ್
   13. ಶ್ರೀ ಪಿ.ಬಿ.ಸಂಪತ್
   14. ಶ್ರೀ ಡಿ.ನರಸಿಂಹಮೂರ್ತಿ
7) ಆಪಾದಿತರ ಸಮಜಾಯಿಷಿ/ಹೇಳಿಕೆಗಳು:
   ಶ್ರೀ ಓ.ಎನ್.ಚಂದ್ರಶೇಖರಯ್ಯ ವಾಣಿಜ್ಯ ತೆರಿಗೆ ಅಧಿಕಾರಿ, ಬೆಂಗಳೂರು.

ತನಿಖಾಧಿಕಾರಿಯಾದ ಶ್ರೀ ಎಸ್.ಮಹಾದೇವಯ್ಯ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಪೊಲೀಸ್ ವಿಂಗ್, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ಇವರು ಶ್ರೀ ಓ.ಎನ್.ಚಂದ್ರಶೇಖರಯ್ಯ ವಾಣಿಜ್ಯ ತೆರಿಗೆ ಅಧಿಕಾರಿರವರ ವಿರುದ್ಧ ದಂಡನಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ, ಪೊಲೀಸ್ ವಿಂಗ್, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ: 16/2008 ರಲ್ಲಿ ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ 13(2) ರಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಶ್ರೀ ಓ.ಎನ್.ಚಂದ್ರಶೇಖರಯ್ಯ ವಾಣಿಜ್ಯ ತೆರಿಗೆ ಅಧಿಕಾರಿ, ಫಿರ್ಯಾದಿಯಾದ ಶ್ರೀ ವಾಸುದೇವ ಬಿನ್ ಲೇಟ್ ಜಿ.ಕೃಷ್ಣಾಚಾರ್ಯ, ವ್ಯಾಪಾರಿ, ಮನೆ ನಂ.50/1, ನಂದಾದೀಪ್, ಸುಬ್ಬಣ್ಣ ಲೇಔಟ್, ಹರಿನಗರ ಕ್ರಾಸ್, ಅಂಜನಾಪುರ ಅಂಚೆ, ಬೆಂಗಳೂರು–560 062, ಇವರು ಗಿಫ್ಟ್ ರ್‍ಯಾಪಡ್‌ಗೆ ಆಡಳಿತ ನೋಡಿಕೊಳ್ಳುವ ವ್ಯವಸ್ಥಾಪಕರಾಗಿದ್ದು, ಈ ಕಂಪೆನಿಯಿಂದ ದೆಹಲಿಗೆ ಲೋಗೋ ಇಡಿಜಿಇ–2008 ಎನ್ನುವ ಮುದ್ರೆಯುಳ್ಳ 2,16,000/– ರೂ.ಗಳ ಮೌಲ್ಯದ ಸುಮಾರು 400 ಟ್ರಾವೆಲ್ಸ್ ಬ್ಯಾಗ್‌ಗಳನ್ನು ಮತ್ತು ಅಷ್ಟೇ ಮೊತ್ತದ ಪೆನ್‌ಗಳನ್ನು ದಿನಾಂಕ: 27–2–2008 ರಂದು ವಿ.ಆರ್.ಎಲ್. ಸಾರಿಗೆ ಮುಖಾಂತರದಿಂದ ಸಂಬಂಧಪಟ್ಟ ಬಿಲ್‌ಗಳೊಂದಿಗೆ ಅವರ ಡಕೇಟ್ ನಂ.600020970 ಅನ್ವಯ ಕಳುಹಿಸಿದ್ದು, ಸದರಿ ಮಾಲು ದೆಹಲಿಗೆ ತಲುಪುವ ಮುಂಚೆ ಕಾರ್ಯಕ್ರಮ ಮುಗಿದು ಹೋಗಿದ್ದ ಕಾರಣ, ಸದರಿ ಮಾಲುಗಳನ್ನು ಸ್ವೀಕರಿಸದೇ ತಿರಸ್ಕರಿಸಿದ್ದು, ಈ ಮಾಲುಗಳು ಮತ್ತೆ ಅಲ್ಲಿಂದ ಹಿಂದಿರುಗಿಸುವಂತೆ ಫಿರ್ಯಾದುದಾರರು ಕೋರಿದ್ದರ ಅನ್ವಯ ಸರ್ಕಾರಿ ಕೆಲಸವನ್ನು ಮಾಡಲು ರೂ.7,500/– ರೂ.ಗಳ ಅಕ್ರಮ ಸಂಭಾವನೆಯನ್ನು ಕೇಳಿರುತ್ತಾರೆ. ಫಿರ್ಯಾದಿಯು ಲಂಚವನ್ನು ಕೊಡಲು ಬಯಸದ ಕಾರಣ, ಸದರಿ ಸಾರ್ವಜನಿಕ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿಂತೆ ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ವ ಕಾರ್ಯಕ್ರಮಗಳನ್ನು ನೆರವೇರಿಸಿದ

ನಂತರ ದಿನಾಂಕ: 17-04-2008ರಂದು ತುಮಕೂರು ರಸ್ತೆ (ಒಳ) ತನಿಖಾ ಠಾಣೆ, ನೆಲಮಂಗಲದಲ್ಲಿ ಜೀಸಿದ ಟ್ರ್ಯಾಪ್ ಯಶಸ್ವಿಯಾಗಿ ಶ್ರೀ ಓ.ಎನ್.ಚಂದ್ರಶೇಖರಯ್ಯ, ವಾಣಿಜ್ಯ ತೆರಿಗೆ ಅಧಿಕಾರಿರವರು ಅಕ್ರಮ ಸಂಭಾವನೆಯಾದ ರೂ.7,500/- ಗಳನ್ನು ಸದರಿ ಸರ್ಕಾರಿ ಕೆಲಸವನ್ನು ಮಾಡಲು ಕೇಳಿ ಪಡೆಯುತ್ತಿದ್ದಾಗ ಸಿಕ್ಕಿಹಾಕಿಕೊಂಡಿರುತ್ತಾರೆ. ಆಪಾದಿತ ಅಧಿಕಾರಿಯ ಬಲಗೈ ಮತ್ತು ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಮಾರ್ಜನೆ ಮಾಡಿ, ಫಿನಾಪ್ತಲಿನ್ ಪರೀಕ್ಷೆಗೆ ಒಳಪಡಿಸಿದಾಗ ಅದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಫಿರ್ಯಾದಿ ಹಾಗೂ ಆಪಾದಿತ ಸಾರ್ವಜನಿಕ ಅಧಿಕಾರಿ ಹಾಗೂ ನೌಕರರ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ ಮತ್ತು ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ.7,500/- ಗಳನ್ನು ಶ್ರೀ ಓ.ಎನ್.ಚಂದ್ರಶೇಖರಯ್ಯ, ವಾಣಿಜ್ಯ ತೆರಿಗೆ ಅಧಿಕಾರಿರವರಿಂದ ತುಮಕೂರು ರಸ್ತೆ (ಒಳ) ತನಿಖಾ ಠಾಣೆ, ನೆಲಮಂಗಲದಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂದಪಟ್ಟ ಕಡತಗಳನ್ನು ಪರಿಶೀಲಿಸಲಾಗಿದೆ. ಇದರಿಂದಾಗಿ ಶ್ರೀ ಓ.ಎನ್.ಚಂದ್ರಶೇಖರಯ್ಯ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ಮೇಲಿನ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬರುತ್ತದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಂ7,13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ 7,13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯಕವೆಂದು ಸರ್ಕಾರಕ್ಕೆ ಮನವರಿಕೆಯಾಗಿರುತ್ತದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾಧಿತ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಲಂಚ ನಿರೋಧ ಕಾಯ್ದೆ 1988ರ ಕಲಂ 19(ಸಿ) ರಡಿಯಲ್ಲಿ ಆಪಾದಿತ ಅಧಿಕಾರಿಯಾದ ಶ್ರೀ ಓ.ಎನ್.ಚಂದ್ರಶೇಖರಯ್ಯ, ವಾಣಿಜ್ಯ ತೆರಿಗ ಅಧಿಕಾರಿರವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7 ಮತ್ತು 13(1)(ಡಿ) ಜೊತೆಗೆ 13(2) ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಆಇ 17 ವಾತೆತ 2008 ಬೆಂಗಳೂರು, ದಿನಾಂಕ: 9ನೇ ಜೂನ್ 2009.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಆಪಾದಿತ ಅಧಿಕಾರಿಯಾದ ಶ್ರೀ ಓ.ಎನ್.ಚಂದ್ರಶೇಖರಯ್ಯ, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2)ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜಿಸಲು ಲೋಕಾಯುಕ್ತ ಪೊಲೀಸರಿಗೆ ಈ ಮೂಲಕ ಅನುಮತಿ ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ಮೇಲ್ಕಂಡ ನಿಯಮಗಳನ್ವಯ ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ: 09-06-2009 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1504

**ಎಲ್.ಎಸ್. ವಾಸನ್**

ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ-2)

## ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

**ವಿಷಯ:** ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಹಳೆ ಕಾರು ಕೆಎ 01 ಸಿ 4702 ಬದಲಿಗೆ ಒಂದು ಹೊಸ ಕಾರನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ ಲಾ 56 ಎಲ್ಎಡಿ 2008 ದಿನಾಂಕ 01.01.2009

2. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ ಕರಾಕಾಸೇಪ್ರಾ 20 ಎಡಿಎಂ 2009 ದಿನಾಂಕ 21.10.2008

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ದಿನಾಂಕ 01.01.2009ರ ಸರ್ಕಾರಿ ಆದೇಶದಲ್ಲಿ ಕಾನೂನನ್ನು ಜನ ಸಾಮಾನ್ಯರ ಹತ್ತಿರಕ್ಕೆ ತರಲು ಸಂಚಾರಿ ಜನತಾ ನ್ಯಾಯಾಲಯ (ಮೊಬೈಲ್ ಲೋಕ್ ಅದಾಲತ್) ಮತ್ತು ಕಾನೂನು ಸಾಕ್ಷರತಾ ರಥ ಯಾತ್ರೆಯ

(legal literacy chariot) ಮೂಲಕ ಜಾರಿಗೊಳಿಸಲು ಅನುವಾಗುವಂತೆ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಉಪಯೋಗಕ್ಕೆ 2 ಬಸ್ಸುಗಳನ್ನು ಪಾರದರ್ಶಕ ಆಯ್ದೆಯನ್ನು ಪಾಲಿಸಿ, ನಿಯಮಾನುಸಾರ ಖರೀದಿಸಲು ಅನುಮತಿ ನೀಡಲಾಗಿತ್ತು. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ 22ನೇ ಸರ್ವ ಸದಸ್ಯರ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಸದರಿ ಬಸ್ಸುಗಳನ್ನು ಖರೀದಿಸಲು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ಪಡೆಯಲು ಮತ್ತು ಪ್ರಾಧಿಕಾರದಲ್ಲಿ 1996ರ ಜೂನ್‌ನಲ್ಲಿ ಖರೀದಿಸಿರುವ ಹಳೆಯ ಅಂಬಾಸಿಡರ್ ಕಾರು ಸಂಖ್ಯೆ ಕೆಎ 01 ಸಿ 4702 ಸುಮಾರು 1,49,980 ಕಿ.ಮಿ. ಓಡಿದ್ದು ಪದೇ ಪದೇ ರಿಪೇರಿಗೆ ಬರುತ್ತಿರುವುದರಿಂದ ಆ ಹಳೆಯ ಕಾರನ್ನು ಮಾರಿ ಹೊಸ ಟಾಟಾ ಇಂಡಿಗೊ ಜಿಎಲ್‌ಎಕ್ಸ್ (ಪೆಟ್ರೋಲ್) ಯುರೋ–3 ಕಾರನ್ನು (ರೂ.4,58,413 ಅಂದಾಜು ವೆಚ್ಚದಲ್ಲಿ) ಖರೀದಿಸಲು ಅನುಮತಿ ಕೋರಿ ಉಲ್ಲೇಖಿತ (2)ರ ದಿನಾಂಕ 25.02.2009ರ ಪತ್ರದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಪ್ರಸ್ತಾವನೆ ಸಲ್ಲಿಸಿದ್ದಾರೆ. ಅದನ್ನು ಪರಿಗಣಿಸಿ ಆರ್ಥಿಕ ಇಲಾಖೆಯು ಅಧಿಸೂಚನೆ ಸಂಖ್ಯೆ ಆಇ 482 ವೆಚ್ಚ–12/09 ದಿನಾಂಕ 19.05.2009ರಲ್ಲಿ 2 ಬಸ್ಸುಗಳನ್ನು ಖರೀದಿಸಲು ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ನೀಡಿದೆ ಮತ್ತು ಕಾರನ್ನು DGSD ದರದಲ್ಲಿ ಖರೀದಿಸಲು ತಿಳಿಸಿದೆ. ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ ಲಾ 10 ಎಲ್‌ಎಡಿ 2009, ಬೆಂಗಳೂರು, ದಿನಾಂಕ: 27ನೇ ಜೂನ್ 2009**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಹಳೆಯ ಅಂಬಾಸಿಡರ್ ಕಾರು ಕೆಎ–01 ಪಿ 4702ನ್ನು ನಿಯಮಾನುಸಾರ ಮಾರಾಟ ಮಾಡಿ ಅದರ ಬದಲಿಗೆ ಒಂದು ಹೊಸ ಟಾಟಾ ಇಂಡಿಗೊ ಜಿಎಲ್‌ಎಕ್ಸ್ (ಪೆಟ್ರೋಲ್) ಯುರೋ–3 ಕಾರನ್ನು ನಿಯಮಾನುಸಾರ DGSD ದರದಲ್ಲಿ ಖರೀದಿಸಲು ಅನುಮತಿಯನ್ನು ನೀಡಲಾಗಿದೆ.

ಇದಕ್ಕೆ ತಗಲುವ ವೆಚ್ಚವನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ 2009–10ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2235–60–200–5–01–(101 ಸಹಾಯಾನುದಾನ)ರಲ್ಲಿ ಒದಗಿಸಿರುವ ಸಹಾಯಾನುದಾನದ ಹಣದಿಂದ ಭರಿಸತಕ್ಕದ್ದು.

ಇದನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಎಫ್‌ಡಿ 168 ವೆಚ್ಚ–10/09 ದಿನಾಂಕ 03.04.2009ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಶಕುಂತಲಾ ಹೆಚ್.ಆರ್.**
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 1505

## ಸಹಕಾರ ಸಚಿವಾಲಯ

**ವಿಷಯ:** ಸಹಕಾರಿ ಸಂಸ್ಥೆಗಳು ಮೀನುಗಾರರಿಗೆ ನೀಡಿರುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸುಸ್ತಿ ಸಾಲಗಳ ಮೇಲಿನ ಬಡ್ಡಿ ದಂಡದ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರಿ ಆದೇಶ ಸಂಖ್ಯೆ: ಸಿಒ 186 ಸಿಎಲ್‌ಎಸ್ 2005 ದಿನಾಂಕ: 27.09.2005.
2. ಸರ್ಕಾರಿ ಆದೇಶ ಸಂಖ್ಯೆ: ಸಿಒ 186 ಸಿಎಲ್‌ಎಸ್ 2005 ದಿನಾಂಕ: 29.11.2005.
3. ಸರ್ಕಾರಿ ಆದೇಶ ಸಂಖ್ಯೆ: ಸಿಒ 39 ಸಿಎಲ್‌ಎಸ್ 2006 ದಿನಾಂಕ 17.04.2006.
4. ಸರ್ಕಾರಿ ಆದೇಶ ಸಂಖ್ಯೆ: ಸಿಒ 39 ಸಿಎಲ್‌ಎಸ್ 2006 ದಿನಾಂಕ 09.05.2006.
5. ಸರ್ಕಾರಿ ಆದೇಶ ಸಂಖ್ಯೆ: ಸಿಒ 186 ಸಿಎಲ್‌ಎಸ್ 2005 ದಿನಾಂಕ: 19.07.2006.
6. ಸರ್ಕಾರಿ ಆದೇಶ ಸಂಖ್ಯೆ: ಸಿಒ 39 ಸಿಎಲ್‌ಎಸ್ 2006, ದಿನಾಂಕ: 05.12.2006.
7. ಸಹಕಾರ ಸಂಘಗಳ ನಿಬಂಧಕರ ಪತ್ರಸಂಖ್ಯೆ: ಯುಬಿ1/67/ಮೀ.ಬಮನ್ನಾ/2007–08 ದಿನಾಂಕ:21.04.2009.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ ಮೀನುಗಾರರ ಸಹಕಾರ ಸಂಘಗಳಿಂದ/ ಸಹಕಾರ ಬ್ಯಾಂಕುಗಳಿಂದ (ಪಿಕಾರ್ಡ್ ಮತ್ತು ಡಿ.ಸಿ.ಸಿ ಬ್ಯಾಂಕುಗಳಿಂದ) ಮೀನುಗಾರಿಕೆ ಉದ್ದೇಶಗಳಿಗೆ ಪಡೆದು ದಿನಾಂಕ: 31.03.2004ಕ್ಕೆ ಹೊರಬಾಕಿಯಿರುವ ಸಾಲಗಳ ಅಸಲನ್ನು ಮೀನುಗಾರರು ದಿನಾಂಕ: 30.09.2005 ರೊಳಗೆ ಮರುಪಾವತಿ ಮಾಡಿದಲ್ಲಿ ಸದರಿ ಸಾಲಗಳ ಮೇಲಿನ ದಿನಾಂಕ: 30.09.2005 ರವರೆಗೆ ಬಾಕಿ ಇರುವ ಬಡ್ಡಿ ದಂಡದ ಬಡ್ಡಿಯನ್ನು ಮನ್ನಾ ಮಾಡಲಾಗಿದೆ. ಮೇಲೆ ಓದಲಾದ (2)ರ ಆದೇಶದಲ್ಲಿ ಮೀನುಗಾರರು ಮೀನುಗಾರರ ಸಹಕಾರ ಸಂಘಗಳಿಗೆ/ ಸಹಕಾರ ಬ್ಯಾಂಕುಗಳಿಗೆ (ಪಿಕಾರ್ಡ್ ಮತ್ತು ಡಿ.ಸಿ.ಸಿ

ಬ್ಯಾಂಕುಗಳಿಂದ) ಸಾಲಗಳ ಅಸಲನ್ನು ಮರುಪಾವತಿಸಲು ನಿಗದಿಪಡಿಸಿರುವ ಅವಧಿಯನ್ನು ದಿನಾಂಕ: 30.09.2005ರ ಬದಲಾಗಿ ದಿನಾಂಕ: 31.12.2005ರವರೆಗೆ ವಿಸ್ತರಿಸಲು ಹಾಗೂ ದಿನಾಂಕ: 01.03.2005 ರಿಂದ ದಿನಾಂಕ: 30.09.2005 ರವರೆಗಿನ ಬಡ್ಡಿ ದಂಡದ ಬಡ್ಡಿಯನ್ನು ಸರ್ಕಾರದ ವತಿಯಿಂದ ಭರಿಸಲು ಮಂಜೂರಾತಿ ನೀಡಲಾಗಿದೆ. ಮೇಲೆ ಓದಲಾದ (3)ರ ಆದೇಶದಲ್ಲಿ ಮೀನುಗಾರರು ಮೀನುಗಾರ ಸಹಕಾರ ಸಂಘಗಳಿಂದ / ಸಹಕಾರ ಬ್ಯಾಂಕುಗಳಿಂದ (ಪಿಕಾರ್ಡ್ ಮತ್ತು ಡಿ.ಸಿ.ಸಿ ಬ್ಯಾಂಕುಗಳಿಂದ) ಮೀನುಗಾರಿಕೆ ಉದ್ದೇಶಗಳಿಗಾಗಿ ತೆಗೆದುಕೊಂಡ ಸಾಲಗಳ ಅಸಲನ್ನು ಮರುಪಾವತಿಸಲು ನಿಗದಿಪಡಿಸಿರುವ ಅವಧಿಯನ್ನು ದಿನಾಂಕ : 31.12.2005ರ ಬದಲಾಗಿ ದಿನಾಂಕ: 30.04.2006 ರವರೆಗೆ ವಿಸ್ತರಿಸಲು ಹಾಗೂ ದಿನಾಂಕ: 01.03.2005 ರಿಂದ ದಿನಾಂಕ 30.04.2006 ರವರೆಗಿನ ಬಡ್ಡಿ ಮತ್ತು ದಂಡದ ಬಡ್ಡಿಯನ್ನು ಸರ್ಕಾರದ ವತಿಯಿಂದಲೇ ಭರಿಸಲು ಮಂಜೂರಾತಿ ನೀಡಲಾಗಿದೆ. ಮೇಲೆ ಓದಲಾದ (4)ರ ಆದೇಶದಲ್ಲಿ ಮೀನುಗಾರರು ಮೀನುಗಾರರ ಸಹಕಾರ ಸಂಘಗಳಿಂದ / ಸಹಕಾರ ಬ್ಯಾಂಕುಗಳಿಂದ (ಪಿಕಾರ್ಡ್ ಮತ್ತು ಡಿ.ಸಿ.ಸಿ ಬ್ಯಾಂಕುಗಳಿಂದ) ಮೀನುಗಾರಿಕೆ ಉದ್ದೇಶಗಳಿಗಾಗಿ ತೆಗೆದುಕೊಂಡ ಸಾಲಗಳ ಅಸಲನ್ನು ಮರುಪಾವತಿಸಲು ನಿಗದಿಪಡಿಸಿರುವ ಅವಧಿಯನ್ನು ದಿನಾಂಕ: 31.05.2006 ರವರೆಗೆ ವಿಸ್ತರಿಸಲಾಗಿದೆ. ಮೇಲೆ ಓದಲಾದ (5)ರ ಆದೇಶದಲ್ಲಿ ಬಡ್ಡಿ ದಂಡದ ಬಡ್ಡಿ ಮನ್ನಾ ಯೋಜನೆಯನ್ನು ಮೀನುಗಾರರು ಪಟ್ಟಣ ಸಹಕಾರ ಬ್ಯಾಂಕುಗಳಿಂದ ಮೀನುಗಾರಿಕೆ ಉದ್ದೇಶಗಳಿಗಾಗಿ ತೆಗೆದುಕೊಂಡ ಸಾಲಗಳಿಗೂ ವಿಸ್ತರಿಸಲು ಹಾಗೂ ಈ ಸಾಲಗಳಿಗೆ ಸಂಬಂಧಿಸಿದಂತೆ ಮಾತ್ರ ಅಸಲನ್ನು ಮರುಪಾವತಿಸಲು ನಿಗದಿಪಡಿಸಿರುವ ಅವಧಿಯನ್ನು ದಿನಾಂಕ: 31.08.2006 ರವರೆಗೆ ವಿಸ್ತರಿಸಲು ಹಾಗೂ ದಿನಾಂಕ: 01.03.2005 ರಿಂದ ಸಾಲ ಮರುಪಾವತಿ ದಿನಾಂಕದವರೆಗಿನ ಅಂದರೆ ದಿನಾಂಕ: 31.08.2006ರವರೆಗಿನ ಬಡ್ಡಿ ಮತ್ತು ದಂಡದ ಬಡ್ಡಿಯನ್ನು ಸರ್ಕಾರದ ವತಿಯಿಂದಲೇ ಭರಿಸಲು ಮಂಜೂರಾತಿ ನೀಡಲಾಗಿದೆ. ಮೇಲೆ ಓದಲಾದ (6)ರ ಆದೇಶದಲ್ಲಿ ಮೀನುಗಾರರು ಮೀನುಗಾರರ ಸಹಕಾರ ಸಂಘಗಳಿಂದ/ ಸಹಕಾರ ಬ್ಯಾಂಕುಗಳಿಂದ (ಪಿಕಾರ್ಡ್ ಮತ್ತು ಡಿ.ಸಿ.ಸಿ ಬ್ಯಾಂಕುಗಳಿಂದ) / ಪಟ್ಟಣ ಸಹಕಾರ ಬ್ಯಾಂಕುಗಳಿಂದ ಮೀನುಗಾರಿಕೆ ಉದ್ದೇಶಗಳಿಗಾಗಿ ತೆಗೆದುಕೊಂಡ ಸಾಲಗಳ ಅಸಲನ್ನು ಮರುಪಾವತಿಸಲು ನಿಗದಿಪಡಿಸಿರುವ ಅವಧಿಯನ್ನು ದಿನಾಂಕ: 31.08.2006ರ ಬದಲಾಗಿ ದಿನಾಂಕ: 31.12.2006 ರವರೆಗೆ ವಿಸ್ತರಿಸಲು ಹಾಗೂ ಈ ಸೌಲಭ್ಯವನ್ನು ಮೀನುಗಾರರು ಮೀನುಗಾರಿಕೆ ಉದ್ದೇಶಗಳಿಗಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಪಡದ ಸಾಲಗಳಿಗೂ ವಿಸ್ತರಿಸಲು ಹಾಗೂ ದಿನಾಂಕ: 01.03.2005 ರಿಂದ ಸಾಲ ಮರುಪಾವತಿ ದಿನಾಂಕದವರೆಗಿನ ಅಂದರೆ ದಿನಾಂಕ: 31.12.2006 ರವರೆಗಿನ ಬಡ್ಡಿ ಮತ್ತು ದಂಡದ ಬಡ್ಡಿಯನ್ನು ಸರ್ಕಾರದ ವತಿಯಿಂದಲೇ ಭರಿಸಲು ಮಂಜೂರಾತಿ ನೀಡಲಾಗಿದೆ. ಮೇಲೆ ಓದಲಾದ (7)ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಮೀನುಗಾರರು ಮೀನುಗಾರಿಕೆ ಉದ್ದೇಶಗಳಿಗಾಗಿ ಅಂಕೋಲಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಅಂಕೋಲಾ ಹಾಗೂ ಶ್ರೀ ಯೋಧ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಕುಮಟಾ ಈ ಸಂಸ್ಥೆಗಳಿಂದ ಪಡೆದ ಸಾಲಗಳ ಮೇಲಿನ ಬಡ್ಡಿ ಮತ್ತು ದಂಡದ ಬಡ್ಡಿ ಮನ್ನಾ ಮೊಬಲಗು ರೂ.3,14,986.00 ಗಳನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಬಿಡುಗಡೆ ಮಾಡುವಂತೆ ಕೋರಿದ್ದಾರೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಗಣಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 62 ಸಿಎಲ್‌ಎಸ್ 2007, ಬೆಂಗಳೂರು, ದಿನಾಂಕ: 29ನೇ ಜೂನ್ 2009**

ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಬಡ್ಡಿ ದಂಡದ ಬಡ್ಡಿ ಮನ್ನಾ ಯೋಜನೆಯಡಿ ಅಂಕೋಲಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಅಂಕೋಲಾ ಹಾಗೂ ಶ್ರೀ ಯೋಧ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಕುಮಟಾ ಈ ಸಂಸ್ಥೆಗಳಿಗೆ ರೂ.3,14,986/– ಗಳನ್ನು (ಮೂರು ಲಕ್ಷ ಹದಿನಾಲ್ಕು ಸಾವಿರ ಒಂಬೈನೂರಾ ಎಂಬತ್ತಾರು ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ **“2425–00–107–2–46–ಸಾಲ ಮನ್ನಾ (ಯೋಜನೇತರ)”** ಅಡಿ ಭರಿಸತಕ್ಕದ್ದು.

ಈ ಹಣವನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರು ಹಣ ಸಂದಾಯ ರಸೀದಿ ಮೂಲಕ ಸಹಕಾರ ಸಂಘಗಳ ನಿಬಂಧಕರ ಮೇಲು ಸಹಿ ಪಡೆದು ಖಜಾನೆಯಿಂದ ಪಡೆಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಆರ್.ಎಸ್. ಹುಚ್ಚಾಚಾರಿ**
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ ಸಹಕಾರ ಇಲಾಖೆ.

ಪಿ.ಆರ್. 1507

**ತಿದ್ದುಪಡಿ ಆದೇಶ**

**ಸಂಖ್ಯೆ :ಸಿಒ 58 ಸಿಎಲ್ಎಸ್ 2009, ಬೆಂಗಳೂರು, ದಿನಾಂಕ: 24ನೇ ಜೂನ್ 2009**

ಸರ್ಕಾರದ ಆದೇಶ ಸಂಖ್ಯೆ: ಸಿಒ 58 ಸಿಎಲ್ಎಸ್ 2007 ದಿನಾಂಕ: 06.05.2009ರ (4)ನೇ ಷರತ್ತಿನಲ್ಲಿ **"ಕಸ್ಕಾರ್ಡ್ ಬ್ಯಾಂಕು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ಶೇಕಡಾ 0.5ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸತಕ್ಕದ್ದು"** ಎಂಬುದರ ಬದಲಾಗಿ **"ಕಸ್ಕಾರ್ಡ್ ಬ್ಯಾಂಕು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಗೆ ತಾನು ನಿಗದಿಪಡಿಸುವ ಯುಕ್ತ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸತಕ್ಕದ್ದು"** ಎಂದು ತಿದ್ದುಪಡಿ ಮಾಡಲಾಗಿದ್ದು ಅದರಂತೆ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 1508

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

**ಆರ್ಥಿಕ ಸಚಿವಾಲಯ**

**ವಿಷಯ:** ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಕಡ್ಡಾಯ ಜೀವ ವಿಮಾ ಯೋಜನೆಯ ದಿ: 1.4.2004ರಿಂದ 31.3.2006ಕ್ಕೆ ಅಂತ್ಯಗೊಂಡ ದ್ವೈವಾರ್ಷಿಕ ಅವಧಿಯ ಮೌಲ್ಯಮಾಪನ ವರದಿಯ ಮೇಲೆ ಜೀವ ವಿಮಾ ಪಾಲಿಸಿಗಳ ಸ್ಥಿರಪಡಿಸಿದ ಮೊತ್ತದ ಮೇಲೆ ಬೋನಸ್ ನೀಡಲು ಮಂಜೂರಾತಿ.

**ಓದಲಾಗಿದೆ:** 1) ಸರ್ಕಾರದ ಪತ್ರ ಸಂಖ್ಯೆ:ಆಇ 62 ಕವಿಇ 2008, ದಿನಾಂಕ: 25.09.2008.

2) ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ವಿನಿ.ವಿಗಸಾ/Avg/805/2008-09, ದಿನಾಂಕ: 05.09.2008, ಪತ್ರ ಸಂಖ್ಯೆ: ವಿಮಾ/ವಿಗಸಾ/1309/2008-09, 19.02.2009 ಮತ್ತು ಅ.ಸ. ಪತ್ರ ಸಂಖ್ಯೆ.AVG/30/2008-09, ದಿನಾಂಕ: 21.04.2009.

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ 2004-2006ನೇ ದ್ವೈವಾರ್ಷಿಕ ಅವಧಿಯ ವಿಮಾ ಗಣನಾ ಕಾರ್ಯವನ್ನು ಶ್ರೀ ಕೆ.ವಿ.ವೈ.ಶಾಸ್ತ್ರಿ, ಕನ್ಸಲ್ಟಿಂಗ್ ಅಕ್ಚುಯರಿ, ಹೈದರಾಬಾದ್, ಇವರಿಗೆ ವಹಿಸಲು ಆದೇಶಿಸಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಪತ್ರಗಳಲ್ಲಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ನಿರ್ದೇಶಕರು 2004-2006ನೇ ದ್ವೈವಾರ್ಷಿಕ ಅವಧಿಯ ಕಡ್ಡಾಯ ಜೀವ ವಿಮಾ ಪಾಲಿಸಿಗಳ ಮೌಲ್ಯ ಮಾಪನ ಮಾಡಿದ ವರದಿಯನ್ನು ಕಳುಹಿಸಿ ಇದನ್ನು ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿಯನ್ನು ಕೋರಿದ್ದಾರೆ. ಮೌಲ್ಯ ಮಾಪನ ವರದಿಯ ಪ್ರಮುಖ ಅಂಶಗಳು ಈ ಕೆಳಕಂಡಂತೆ ಇದೆ.

**(1) ವಿಮಾ ವ್ಯವಹಾರದ ಮಾಹಿತಿ:**

| ವಿವರಗಳು | | ಅವಧಿ | |
|---|---|---|---|
| | | 2002-04 | 2004-06 |
| ಎ) | ಚಾಲ್ತಿಯಲ್ಲಿರುವ ಪಾಲಿಸಿಗಳ ಸಂಖ್ಯೆ: | 10,81,293 | 10,27,292 |
| | | | (ಕೋಟಿ ರೂ.ಗಳಲ್ಲಿ) |
| ಬಿ) | ವಿಮಾ ಮೊಬಲಗು | 4185.47 | 4658.29 |
| ಸಿ) | ಅಧಿಲಾಭಾಂಶ | 2137.84 | 2528.76 |
| ಡಿ) | ವಾರ್ಷಿಕ ವಿಮಾ ಕಂತು ಆದಾಯ | 209.94 | 223.66 |
| ಇ) | ವಿಮಾ ನಿಧಿಯ ಶಿಲ್ಕು | 2524.86 | 3114.40 |

(2) 2004-2006ನೇ ಸಾಲಿನಲ್ಲಿ ವಿಮಾ ಗಣನೆಯ ನಂತರ ಹೆಚ್ಚುವರಿ ಮೊತ್ತ (ಟೋಟಲ್ ಸರ್ ಪ್ಲಸ್) ರೂ.123.9539 ಕೋಟಿಗಳಾಗಿದ್ದು, ಈ ಮೊತ್ತವು 2002-2004ರ ಮೌಲ್ಯಮಾಪನ ವರದಿಯ ಅಂತ್ಯಕ್ಕೆ ರೂ.237.1868 ಕೋಟಿಯಷ್ಟಿತ್ತು.

(3) ವಿಮಾ ಕಂತಿನ ಆದಾಯಕ್ಕನುಗುಣವಾಗಿ 2004-2006ನೇ ಮೌಲ್ಯಮಾಪನ ಅವಧಿಗೆ ವೆಚ್ಚದ ಅನುಪಾತ ಶೇ.4.28 ಆಗಿದ್ದು, ಈ ವೆಚ್ಚವು 2002-2004ರ ಅಂತ್ಯಕ್ಕೆ ಶೇ.4.76 ಆಗಿದ್ದಿತು.

(4) ವಿಮಾ ನಿಧಿಯು 2004-2005ರಲ್ಲಿ ಶೇ.8.91 ಹಾಗೂ 2005-2006 ನೇ ಸಾಲಿನಲ್ಲಿ ಶೇ.8.43 ಬಡ್ಡಿಯನ್ನು ಗಳಿಸಿದ್ದು, ಈ ದರವು 2002-2003ರಲ್ಲಿ 9.36 ಹಾಗೂ 2003-2004ರಲ್ಲಿ 8.52ರ ದರದಲ್ಲಿತ್ತು.

(5) ವಿಮಾಗಣನಾ ಕಾರ್ಯಕ್ಕೆ ಅಳವಡಿಸಿಕೊಂಡ ಮಾರ್ಟಾಲಿಟಿ ಕೋಷ್ಟಕದಂತೆ ವಾಸ್ತವ ಮರಣಗಳಲ್ಲಿ ಹಾಗೂ ನಿರೀಕ್ಷೆಯ ಮರಣಗಳ ಮೇಲಿನ ಅನುಪಾತ 2004–2006ಕ್ಕೆ ಶೇ.75.59 ಇದ್ದು, ಈ ಅನುಪಾತವು 2002–2004ರ ಅವಧಿಗೆ ಶೇ.77.20 ಎಂಬುದಾಗಿ ಕಂಡುಬಂದಿದೆ.

ಮುಂದುವರೆದು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ನಿರ್ದೇಶಕರು ಮೇಲಿನ ಅಂಶಗಳ ಆಧಾರದ ಮೇಲೆ 2004–2006ರ ದ್ವೈವಾರ್ಷಿಕ ಅವಧಿಯಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಪಾಲಿಸಿಗಳಿಗೆ ಪ್ರತಿ ರೂ. 1000–00ಗಳಿಗೆ ಪ್ರತಿ ವರ್ಷಕ್ಕೆ ರೂ.75–00ರ ಅಧಿಲಾಭಾಂಶವನ್ನೂ ಹಾಗೂ 01.04.2006 ರಿಂದ 31.03.2008ರ ಅವಧಿಯಲ್ಲಿ ಫಲಪ್ರದ, ಮರಣಜನ್ಯ ಹಾಗೂ ವಿಮಾ ತ್ಯಾಗ ಮೌಲ್ಯಗಳಿಂದ ಹೊರಹೋಗಿರುವ ಪಾಲಿಸಿಗಳಿಗೆ ಪ್ರತಿ ರೂ.1000–00ಗಳಿಗೆ ವಾರ್ಷಿಕ ರೂ.75–00 ಮಧ್ಯಂತರ ಲಾಭಾಂಶವನ್ನು ನೀಡಬಹುದಾಗಿದೆ ಎಂದು ವಿಮಾಗಣಕರು ಶಿಫಾರಸ್ಸು ಮಾಡಿರುತ್ತಾರೆಂದು ತಿಳಿಸಿದ್ದಾರೆ.

ಮುಂದುವರೆದು, ಮೇಲ್ಕಂಡ ವಿಮಾ ಗಣಕರ ಶಿಫಾರಸ್ಸನ್ನು ಒಪ್ಪಿ ಈ ಕೆಳಕಂಡ ಪ್ರಸ್ತಾವನೆಗಳಿಗೆ ಸರ್ಕಾರದ ಆದೇಶವನ್ನು ನೀಡಬೇಕೆಂದು ನಿರ್ದೇಶಕರು ಕೋರಿದ್ದಾರೆ.

1. ದಿನಾಂಕ: 01.04.2004 ರಿಂದ 31.03.2006ರ ದ್ವೈವಾರ್ಷಿಕ ಮೌಲ್ಯಮಾಪನ ಅವಧಿಯಲ್ಲಿ ಚಾಲ್ತಿಯಲ್ಲಿದ್ದ ಎಲ್ಲಾ ಪಾಲಿಸಿಗಳಿಗೆ ಹಾಗೂ ಚಾಲ್ತಿಯಲ್ಲಿದ್ದ ಪ್ರತಿ ತಿಂಗಳ ಅವಧಿಯನ್ನು ಒಳಗೊಂಡಂತೆ ಪಾಲಿಸಿಗಳ ಸ್ಥಿರಪಡಿಸಿದ ವಿಮಾ ಮೊತ್ತದ ಮೇಲೆ ಪ್ರತಿ ರೂ.1000–00ಗಳಿಗೆ ವಾರ್ಷಿಕ ರೂ. 75–00ರಂತೆ ಸಾಮಾನ್ಯ ಪ್ರತ್ಯಾವರ್ತಿ ಲಾಭಾಂಶ (ಸಿಂಪಲ್ ರಿವರ್ಶನರಿ ಬೋನಸ್) ಘೋಷಿಸುವುದು.

2. ಅವಧಿಪೂರ್ಣ, ಮರಣಜನ್ಮ ಹಾಗೂ ವಿಮಾ ತ್ಯಾಗ ಮೌಲ್ಯಗಳಿಂದ ದಿನಾಂಕ: 01.04.2006 ರಿಂದ 31.03.2008ರ ಅವಧಿಯಲ್ಲಿ ಹೊರಹೋಗಿರುವ ವಿಮಾ ಪಾಲಿಸಿಗಳಿಗೆ ಅಂದರೆ ಮುಂದಿನ ಮೌಲ್ಯಮಾಪನ ದಿನಾಂಕದವರೆವಿಗೂ ಪ್ರತಿ ರೂ.1000–00ಗಳಿಗೆ ವಿಮಾ ಮೊತ್ತಕ್ಕೆ ವಾರ್ಷಿಕ ರೂ.75–00ರಂತೆ ಮಧ್ಯಂತರ ಲಾಭಾಂಶವನ್ನು (ಇಂಟೀರಿಯಂ ಬೋನಸ್) ಘೋಷಿಸುವುದು.

**ಸರ್ಕಾರಿ ಆದೇಶ ಸಂಖ್ಯೆ: ಆಇ 62 ಕವಿಇ 2008, ಬೆಂಗಳೂರು, ದಿನಾಂಕ: 30ನೇ ಮೇ 2009**

ಸರ್ಕಾರವು ವಿಮಾ ಗಣನಾ ವರದಿ ಹಾಗೂ ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಇವರ ಶಿಫಾರಸ್ಸನ್ನು ವಿವರವಾಗಿ ಪರಿಶೀಲಿಸಿ ಈ ಕೆಳಕಂಡ ಅಂಶಗಳಿಗೆ ಸರ್ಕಾರ ಮಂಜೂರಾತಿಯನ್ನು ನೀಡಿದೆ.

1) ದಿನಾಂಕ: 31.03.2006 ರಂದು ಚಾಲ್ತಿಯಲ್ಲಿದ್ದ ಎಲ್ಲಾ ಪಾಲಿಸಿಗಳಿಗೆ 2004–2006ರ ದ್ವೈವಾರ್ಷಿಕ ಅವಧಿಯಲ್ಲಿ ವಿಮಾ ಮೊತ್ತದ ಪ್ರತಿ ರೂ.1000–00ಗಳಿಗೆ ವಾರ್ಷಿಕ ರೂ.75–00 ಬೋನಸ್ ನೀಡತಕ್ಕದ್ದು.

2) ದಿನಾಂಕ: 01.04.2006 ರಿಂದ 31.03.2008ರ ಅವಧಿಯಲ್ಲಿ ಅವಧಿಪೂರ್ಣತೆ, ಮರಣ ಜನ್ಯ ಹಾಗೂ ವಿಮಾ ತ್ಯಾಗ ಮೌಲ್ಯಗಳಿಂದ ಹೊರಹೋಗಿರುವ ವಿಮಾ ಪಾಲಿಸಿಗಳಿಗೆ ಮುಂದಿನ ಮೌಲ್ಯಮಾಪನ ದಿನಾಂಕದವರೆಗೆ ಪ್ರತಿ ರೂ.1000–00ಗಳಿಗೆ ವಾರ್ಷಿಕ ರೂ.75–00 ಮಧ್ಯಂತರ ಬೋನಸ್ಸನ್ನು ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎನ್. ಶ್ರೀನಿವಾಸಮೂರ್ತಿ**

ಪಿ.ಆರ್. 1513 ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

## ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

**ವಿಷಯ:** ಪ್ರಥಮ ರಾಷ್ಟ್ರೀಯ ನ್ಯಾಯಾಂಗ ವೇತನ ಆಯೋಗದ ಶಿಫಾರಸ್ಸುಗಳ ಅನುಷ್ಠಾನ – ನಿವೃತ್ತ ನ್ಯಾಯಾಂಗ ಅಧಿಕಾರಿಗಳಿಗೆ ಸೌಲಭ್ಯ ವಿಸ್ತರಿಸಿ ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: ಲಾ 124 ಎಲ್‌ಸಿಎಲ್ 1997 ದಿನಾಂಕ 04.02.2004.

2) ಸರ್ಕಾರದ ಆದೇಶ ಸಂಖ್ಯೆ:ಆಇ (ಎಸ್‌ಪಿಎಲ್) 03 ಪಿಇಎನ್ 2007 (II) ದಿನಾಂಕ 06.06.2007

3) ಕರ್ನಾಟಕ ರಾಜ್ಯ ನಿವೃತ್ತ ನ್ಯಾಯಾಂಗ ಅಧಿಕಾರಿಗಳ ಸಂಘ ಬೆಂಗಳೂರು ಇವರ ಮನವಿ ದಿನಾಂಕ:11.07.2007 ಮತ್ತು 12.09.2007.

**ಪ್ರಸ್ತಾವನೆ:**

ಮೇಲೆ ಓದಲಾದ ಆದೇಶ (1)ರಲ್ಲಿ ಸರ್ಕಾರವು ನಿವೃತ್ತ ನ್ಯಾಯಾಂಗ ಅಧಿಕಾರಿಗಳಿಗೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವುದರೊಂದಿಗೆ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನವನ್ನು ಪರಿಷ್ಕರಣೆ ಮಾಡಿ ಆದೇಶ ಹೊರಡಿಸಿದೆ. ಓದಲಾದ ಕ್ರಮಸಂಖ್ಯೆ (2)ರಲ್ಲಿನ ಆದೇಶದಲ್ಲಿ ಸರ್ಕಾರವು 5ನೇ ವೇತನ ಆಯೋಗ ಶಿಫಾರಸ್ಸಿನನ್ವಯ ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ಸೌಲಭ್ಯಗಳನ್ನು ಪರಿಸ್ಕರಿಸಿ ಆದೇಶ ಹೊರಡಿಸಿದೆ. ಆದರೆ ಈ ಆದೇಶ ವ್ಯಾಪ್ತಿಯಿಂದ ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಯ ನ್ಯಾಯಾಂಗ ಅಧಿಕಾರಿಗಳನ್ನು ಹೊರತುಪಡಿಸಲಾಗಿದೆ. ಮೇಲೆ ಓದಲಾದ (3)ರಲ್ಲಿ ಕರ್ನಾಟಕ ರಾಜ್ಯ ನಿವೃತ್ತ ನ್ಯಾಯಾಂಗ ಅಧಿಕಾರಿಗಳ ಸಂಘ ಬೆಂಗಳೂರು ಇವರು ಸರ್ಕಾರಕ್ಕೆ ದಿನಾಂಕ 11.07.2007ರಂದು ಹಾಗೂ 12.09.2007ರಂದು

ಮನವಿಯನ್ನು ನೀಡಿ, ಈ ಸೌಲಭ್ಯವನ್ನು ಸಹ ದಿನಾಂಕ 01.04.2004 ರಿಂದ ಜಾರಿಗೆ ಬರುವಂತೆ ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಯ ನ್ಯಾಯಾಂಗ ಅಧಿಕಾರಿಗಳಿಗೆ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನ ಪಡೆಯುವವರಿಗೆ ನೀಡುವಂತೆ ಕೋರಿರುತ್ತಾರೆ. ಆದ್ದರಿಂದ ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ: ಲಾ 277 ಎಲ್‌ಎಸಿ 2008 ಬೆಂಗಳೂರು, ದಿನಾಂಕ: 3ನೇ ಜೂನ್ 2009.**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಯ ನಿವೃತ್ತ ನ್ಯಾಯಾಂಗ ಅಧಿಕಾರಿಗಳಿಗೆ ಈ ಕೆಳಕಂಡ ಸವಲತ್ತುಗಳನ್ನು ಮಂಜೂರು ಮಾಡಿದೆ.

1) ದಿನಾಂಕ 01.04.2004 ರಿಂದ ಜಾರಿಗೆ ಬರುವಂತೆ ನ್ಯಾಯಾಂಗ ಇಲಾಖೆಯ ಅಧಿಕಾರಿಗಳ ನಿವೃತ್ತಿ ವೇತನದ ಮೇಲೆ ನೀಡಲಾಗುತ್ತಿದ್ದ ತುಟ್ಟಿಭತ್ಯೆಯ ಶೇಕಡ 50 ರಷ್ಟನ್ನು ಮೂಲ ನಿವೃತ್ತಿ ವೇತನದೊಂದಿಗೆ ವಿಲೀನಗೊಳಿಸುವುದು; ಮತ್ತು ವಿಲೀನಗೊಳಿಸಿದ ಮೊತ್ತವನ್ನು ಪ್ರತ್ಯೇಕವಾಗಿ ತೋರಿಸುವುದು;

2) ದಿನಾಂಕ 01.07.2005ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾಗುವ ಉಪದಾನ ಮತ್ತು ಕುಟುಂಬ ನಿವೃತ್ತಿ ವೇತನ ಪರಿಷ್ಕೃತ ದರಗಳನ್ನು ನ್ಯಾಯಾಂಗ ಇಲಾಖೆಯ ಅಧಿಕಾರಿಗಳಿಗೂ ವಿಸ್ತರಿಸುವುದು. ದಿನಾಂಕ 01.07.2005 ರಿಂದ ದಿನಾಂಕ 31.03.2006 ರವರೆಗಿನ ಅವಧಿಗೆ ಕೇವಲ ಕಾಲ್ಪನಿಕ ಹೆಚ್ಚಳ ನೀಡಲಾಗಿದ್ದು, ಅದರಿಂದ ಯಾವುದೇ ಆರ್ಥಿಕ ಸೌಲಭ್ಯ ಈ ಅವಧಿಗೆ ಲಭ್ಯವಾಗುವುದಿಲ್ಲ. ದಿನಾಂಕ 01.04.2006 ರಿಂದ ಬಾಕಿಯನ್ನು ಈ ಕೂಡಲೇ ನೀಡುವುದು.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 03 ಪಿಇಎನ್ 07(1) ದಿನಾಂಕ 06.06.2007ನ್ನು ಎಫ್‌ಎನ್‌ಜೆಪಿಸಿ ವೇತನ ಶ್ರೇಣಿಗಳಲ್ಲಿ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ಪಡೆಯುವವರಿಗೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ (ವಿ)25ಪಿಇಎನ್ 2008, ದಿನಾಂಕ 29.05.2009ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಎಸ್. ಸಿದ್ದಲಿಂಗೇಶ್**
ಸರ್ಕಾರದ ಕಾರ್ಯದರ್ಶಿಗಳು,
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 1514

## ಸಹಕಾರ ಸಚಿವಾಲಯ

**ವಿಷಯ:** ದಿನಾಂಕ:31.03.2009ರೊಳಗೆ ನಡೆಸಬೇಕಾಗಿರುವ ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದರ ಆಡಳಿತ ಸಮಿತಿ ಚುನಾವಣೆಯನ್ನು ಮುಂದೂಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಸಿಒ 47 ಸಿಎಲ್‌ಎಂ 2009, ದಿನಾಂಕ: 04.03.2009.
2. ಸರ್ಕಾರದ ಆದೇಶ ಸಂಖ್ಯೆ: ಸಿಒ 47 ಸಿಎಲ್‌ಎಂ 2009, ದಿನಾಂಕ: 13.05.2009.
3. ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದರ ವ್ಯವಸ್ಥಾಪಕರ ದಿನಾಂಕ:23.05.2009ರ ಮನವಿ.

**ಪ್ರಸ್ತಾವನೆ:**

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಒ 47 ಸಿಎಲ್‌ಎಂ 2009, ದಿನಾಂಕ:04.03.2009ರ ಆದೇಶದಲ್ಲಿ ನಿಗದಿಪಡಿಸದ ಕಾಲಮಿತಿಯೊಳಗೆ ಮತ್ತು ಆ ಅನುಕ್ರಮದಲ್ಲಿ 2009–10ರಿಂದ ಐದು ವರ್ಷದ ಅವಧಿಗೆ ಆಡಳಿತ ಸಮಿತಿಗೆ ಚುನಾವಣೆ ನಡೆಸಬೇಕಾದ ಸಹಕಾರ ಸಂಘಗಳಿಗೆ ಚುನಾವಣೆಯನ್ನು ನಡೆಸತಕ್ಕದ್ದೆಂದು ಆದರೆ, ದಿನಾಂಕ: 04.03.2009ಕ್ಕೆ ಹಿಂದೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ್ದು ಚುನಾವಣೆಯು ಮುಕ್ತಾಯವಾಗದಿದ್ದ ಸಂದರ್ಭಗಳಲ್ಲಿ ಮಾತ್ರ ದಿನಾಂಕ:04.03.2009ರಲ್ಲಿದ್ದಂತೆ ಚುನಾವಣಾ ವೇಳಾ ಪಟ್ಟಿಯ ಯಾವ ಹಂತದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ನಿಲ್ಲಿಸಲಾಗಿತ್ತೋ ಆ ಹಂತದಿಂದ ಚುನಾವಣಾ ಪ್ರಕ್ರಿಯೆಯನ್ನು ಮುಂದುವರಿಸಿ ದಿನಾಂಕ:04.03.2009ರ ಆದೇಶದಲ್ಲಿ ನಿಗದಿಪಡಿಸಿದ ಕಾಲಮಿತಿಯೊಳಗೆ ಮತ್ತು ಆ ಅನುಕ್ರಮದಲ್ಲಿ ಚುನಾವಣೆಯನ್ನು ಮುಕ್ತಾಯಗೊಳಿಸತಕ್ಕದ್ದೆಂದು ಆದೇಶಿಸಿರುತ್ತದೆ. ಮೇಲೆ ಓದಲಾದ (3)ರ ಮನವಿಯಲ್ಲಿ ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದು ಮೈಸೂರು ರಸ್ತೆಯಲ್ಲಿ ಸಂಘದ ನಿವೇಶನ ರಹಿತ ಸದಸ್ಯರಿಗಾಗಿ 16 ಎಕರೆ 15 ಗುಂಟೆ ಬಡಾವಣೆಯನ್ನು ರಚಿಸಿ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವ ಕಾರ್ಯ ನಡೆಯುತ್ತಲಿದ್ದು ಈ ಸಂದರ್ಭದಲ್ಲಿ ಚುನಾವಣೆ ನಡೆದು ಆಡಳಿತ ಮಂಡಳಿಯಲ್ಲಿ ಬದಲಾವಣೆಗಳಾದಲ್ಲಿ ಸದಸ್ಯರ ಹಿತಾಸಕ್ತಿಗೆ ಧಕ್ಕೆಯಾಗುವ ಸಂಭವವಿರುವುದನ್ನು ಮತ್ತು ಲೆಕ್ಕಪರಿಶೋಧನಾ

ಕಾರ್ಯಕ್ಕೆ ಸಹಾಯಕಾರಿ ಆಗಲೆಂಬ ಅಂಶಗಳನ್ನು ಪರಿಗಣಿಸಿ ಹಾಗೂ ಸಂಘಕ್ಕೆ ಹೆಚ್ಚುವರಿ ಖರ್ಚಿನ ಆರ್ಥಿಕ ಹೊರೆಯನ್ನು ತಪ್ಪಿಸುವ ದೃಷ್ಟಿಯಿಂದ ಸಂಘದ ಆಡಳಿತ ಸಮಿತಿಯ ಚುನಾವಣೆಯನ್ನು 6 ತಿಂಗಳ ಕಾಲ ಮುಂದೂಡಬೇಕೆಂದು ಕೋರಿರುತ್ತದೆ.

ಸದರಿ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಸಿಒ 30 ಸಿಎಲ್ಎಂ 2009, ದಿನಾಂಕ: 16ನೇ ಜೂನ್ 2009**

ಮೇಲಿನ ಪರಿಸ್ಥಿತಿಯಲ್ಲಿ ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದಕ್ಕೆ ಅನ್ವಯವಾಗುವಂತೆ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(4) ಮತ್ತು 121ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2)ಅನ್ನು ಮಾರ್ಪಾಟು ಮಾಡಿ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಿಒ 47 ಸಿಎಲ್ಎಂ 2009, ದಿನಾಂಕ:04.03.2009 ಅನ್ನು ಭಾಗಶಃ ಮಾರ್ಪಡಿಸಿ ಸದರಿ ಸಹಕಾರ ಸಂಘದ ಆಡಳಿತ ಸಮಿತಿಗೆ ಚುನಾವಣೆಯನ್ನು 30.09.2009ರೊಳಗೆ ನಡೆಸುವಂತೆ ಆದೇಶಿಸುತ್ತದೆ.

**ಸೂಚನೆ:** ಪ್ರಕರಣ 28ಎ(4) 28ಎ(5), 28ಬಿ(2) 29ಎಫ್(4) ಮತ್ತು 39ಎ(2)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ:30.09.2009 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶದ ಮೂಲಕ ಮಾರ್ಪಾಡು ಮಾಡಿದಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್. 1534

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

## ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

**ವಿಷಯ:** ಶ್ರೀ ಎಂ.ವಿರುಪಾಕ್ಷಗೌಡ, ಹಿರಿಯಭೂವಿಜ್ಞಾನಿ (ಖನಿಜ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಶಿವಮೊಗ್ಗ ಇವರನ್ನು ಅಮಾನತ್ತುಗೊಳಿಸುವ ಕುರಿತು.

**ಓದಲಾಗಿದೆ:** 1) ನಿರ್ದೇಶಕರು, ಗಣಿ ಭೂವಿಜ್ಞಾನ ಇಲಾಖೆ, ಇವರ ಅ.ಸ.ಪತ್ರ ಸಂಖ್ಯೆ:ಗಭೂಇ/ಆ.ಶಾ./2009–10, ದಿನಾಂಕ:06.04.2009.

**ಪ್ರಸ್ತಾವನೆ:**

ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ದಿ:04.04.09ರಂದು ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮ ಮರಳು ಸಾಗಾಣಿಕೆ ಹಾಗೂ ಉಚ್ಚ ನ್ಯಾಯಾಲಯದಲ್ಲಿನ ಕೆಲವು ಮೊಕದ್ದಮೆಗಳ ಕುರಿತಂತೆ ಮಾತನಾಡುವ ಸಲುವಾಗಿ ಶ್ರೀ ಎಂ.ವಿರುಪಾಕ್ಷಗೌಡ, ಹಿರಿಯಭೂವಿಜ್ಞಾನಿ(ಖನಿಜ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಶಿವಮೊಗ್ಗ ಇವರನ್ನು ಸಂಪರ್ಕಿಸಲು, ಶಿವಮೊಗ್ಗದಲ್ಲಿನ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಛೇರಿಯನ್ನು ದೂರವಾಣಿಯ ಮೂಲಕ ಸಂಪರ್ಕಿಸಿದ್ದು, ಶ್ರೀ ಎಂ.ವಿರುಪಾಕ್ಷಗೌಡ, ಹಿರಿಯಭೂವಿಜ್ಞಾನಿ(ಖನಿಜ), ಇವರು ಯಾವುದೇ ಮಾಹಿತಿಯನ್ನು ನೀಡದೇ ಕೇಂದ್ರಸ್ಥಾನವನ್ನು ಬಿಟ್ಟು ಹೋಗಿರುತ್ತಾರೆಂದೂ, ಸದರಿ ಅಧಿಕಾರಿಯನ್ನು ಮೊಬೈಲ್ ದೂರವಾಣಿಯ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದಾಗ, ಮೊಬೈಲ್ ಅನ್ನು ಸ್ವಿಚ್ ಆಫ್ ಮಾಡಿರುತ್ತಾರೆಂದು, ಪ್ರಸ್ತುತ ಲೋಕಸಭಾ ಚುನಾವಣೆಯ ಸಿದ್ಧತೆಗಳು ನಡೆಯುತ್ತಿದ್ದು, ಇಲಾಖೆಯ ಜಿಲ್ಲಾ ಮುಖ್ಯಸ್ಥರಾದ ಶ್ರೀ ಎಂ.ವಿರೂಪಾಕ್ಷಗೌಡ, ಹಿರಿಯ ಭೂವಿಜ್ಞಾನಿ(ಖನಿಜ), ಇವರು ಯಾವುದೇ ಕಾರಣಕ್ಕೂ ಮೇಲಾಧಿಕಾರಿಯ ಪೂರ್ವಾನುಮತಿ ಪಡೆಯದೇ ಕೇಂದ್ರಸ್ಥಾನವನ್ನು ಬಿಡಬಾರದೆಂದು ತಿಳಿದಿದ್ದರೂ, ನಿರ್ದೇಶಕರ ಪೂರ್ವಾನುಮತಿ ಪಡೆಯದೆ, ತಮ್ಮ ಕಛೇರಿಯಲ್ಲಿ ತಮ್ಮ ಚಲನವಲನದ ಬಗ್ಗೆ ಯಾವುದೇ ಮಾಹಿತಿ ನೀಡದೇ, ಕೇಂದ್ರಸ್ಥಾನವನ್ನು ಬಿಟ್ಟು ಹೋಗಿರುತ್ತಾರೆಂದು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಮೇಲೆ ಓದಲಾದ ದಿ:06.04.09 ರ ಅರೆ ಸರ್ಕಾರಿ ಪತ್ರದಲ್ಲಿ ತಿಳಿಸಿರುತ್ತಾರೆ.

ಅಲ್ಲದೇ, ದಿ:04.04.09 ರಂದು ಮತ್ತು ದಿ:05.04.09 ರಂದು ಶ್ರೀ ಎಂ.ವಿರುಪಾಕ್ಷಗೌಡ ಇವರ ಮೊಬೈಲ್ ದೂರವಾಣಿಯನ್ನು ಸಂಪರ್ಕಿಸಲು ಯತ್ನಿಸಿದಾಗ ಸ್ವಿಚ್ ಆಫ್ ಮಾಡಿರುತ್ತಾರೆಂದು, ದಿ:05.04.09 ರಂದು ತುರ್ತಾಗಿ ನಿರ್ದೇಶಕರನ್ನು ಸಂಪರ್ಕಿಸುವಂತೆ ಮೊಬೈಲ್ ಮುಖಾಂತರ ಸಂದೇಶ ಕಳುಹಿಸಿದ್ದರೂ ಸಹ ಸಂಪರ್ಕಿಸಿಲ್ಲವೆಂದು ತಿಳಿಸುತ್ತಾ, ಜಿಲ್ಲೆಯಲ್ಲಿ ಅನಧಿಕೃತವಾಗಿ ಮರಳು ಗಣಿಗಾರಿಕೆ/ಸಾಗಾಣಿಕೆ ನಡೆಯುತ್ತಿದ್ದರೂ ಸಹ ಅದನ್ನು ತಡೆಗಟ್ಟಲು ಯಾವುದೇ ಕ್ರಮ

ಕೈಗೊಂಡಿರುವುದಿಲ್ಲವಲ್ಲದೇ, ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿಸಿರುವುದರಿಂದ, ಇವರು ಸರ್ಕಾರಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅಸಮರ್ಥರಾಗಿರುವುದರಿಂದ, ಶ್ರೀ ಎಂ.ವಿರೂಪಾಕ್ಷಗೌಡ, ಹಿರಿಯ ಭೂವಿಜ್ಞಾನಿ (ಖನಿಜ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಶಿವಮೊಗ್ಗ ಇವರನ್ನು ಅಮಾನತ್ತಿನಲ್ಲಿಡಲು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಮೇಲೆ ಓದಲಾದ ದಿ:06.04.09 ಅರೆ ಸರ್ಕಾರಿ ಪತ್ರದಲ್ಲಿ ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ:

**ಸರ್ಕಾರದ ಆದೇಶ ಸಂಖ್ಯೆ:ಸಿಐ.39.ಎಂಜಿಎಸ್.2009, ಬೆಂಗಳೂರು, ದಿನಾಂಕ: 30ನೇ ಮೇ 2009.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಮೇರೆಗೆ, ಶ್ರೀ ಎಂ.ವಿರುಪಾಕ್ಷಗೌಡ, ಹಿರಿಯಭೂವಿಜ್ಞಾನಿ (ಖನಿಜ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಶಿವಮೊಗ್ಗ, ಇವರ ವಿರುದ್ಧದ ಆರೋಪಗಳ ಕುರಿತು ವಿಚಾರಣೆಯನ್ನು ಕಾಯ್ದಿರಿಸಿ, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 10(1)(ಡಿ)ರ ಪ್ರಕಾರ, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸರ್ಕಾರವು ಸೇವೆಯಿಂದ ಅಮಾನತ್ತುಗೊಳಿಸಿದೆ.

ಅಮಾನತ್ತಿನ ಅವಧಿಯಲ್ಲಿ, ಶ್ರೀ ಎಂ.ವಿರುಪಾಕ್ಷಗೌಡ, ಇವರು ನಿಯಮಗಳ ಪ್ರಕಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎಂ.ವಿರುಪಾಕ್ಷಗೌಡ ಇವರು ನಿಯಮಗಳ ಪ್ರಕಾರ ಸಕ್ಷಮ ಪ್ರಾಧಿಕಾರಿಯವರ ಲಿಖಿತ ಅನುಮತಿ ಪಡೆಯದೆ, ಕೇಂದ್ರ ಕಾರ್ಯಸ್ಥಾನ ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1538 **ಎ.ಪಿ. ರಾಮಕೃಷ್ಣ**

ಪೀಠಾಧಿಕಾರಿ (ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

## ಆರ್ಥಿಕ ಸಚಿವಾಲಯ

**ವಿಷಯ:** ಶ್ರೀ ಕೆ.ದೊರೈ, ವಾಣಿಜ್ಯ ತೆರಿಗೆ ಅಧಿಕಾರಿರವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ ಕುರಿತು.

**ಓದಲಾಗಿದೆ:**
1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜ)ಬಿಡಿ–40/ಸಿ.ಆರ್.–7/2008/ಸಿ.ಬಿ.ಪುರ, ದಿನಾಂಕ:11.07.2008.
2. ಸರ್ಕಾರಿ ಆದೇಶ ಸಂಖ್ಯೆ: ಆಇ 47 ವಾತೆತ 2008, ದಿನಾಂಕ:19.08.2008.
3. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜ)/ಬಿಡಿ–40/ಸಿ.ಆರ್.–7/2008/ಸಿ.ಬಿ.ಪುರ, ದಿನಾಂಕ:30.04.2009
4. ತನಿಖಾಧಿಕಾರಿಯ ವರದಿ ಸಂಖ್ಯೆ: ಲೋಕ್/ಸಿಬಿಪಿ/ಡಿಎಸ್‌ಪಿ/ಸಿಆರ್–07/2008, ದಿನಾಂಕ:30.01.09, ಪೊಲೀಸ್ ಉಪ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ ಜಿಲ್ಲೆ.
5. ತನಿಖಾ ದಾಖಲೆಗಳಾದ ಫಿರಿಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು. ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

**ಪ್ರಸ್ತಾವನೆ:**

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (1)ರ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ರವರ ಶಿಫಾರಸ್ಸಿನ ಮೇರೆಗೆ ಶ್ರೀ ಕೆ.ದೊರೈ, ವಾಣಿಜ್ಯ ತೆರಿಗೆ ಅಧಿಕಾರಿ ಇವರ ವಿರುದ್ಧದ ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಅದರಿ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲಾಗಿದೆ.

ಶ್ರೀ ಕೆ. ದೊರೈ, ವಾಣಿಜ್ಯ ತೆರಿಗೆ ಅಧಿಕಾರಿ ಇವರ ವಿರುದ್ಧ ಗುನ್ನೆ ಸಂಖ್ಯೆ:07/2008 ರಲ್ಲಿ ಆರಕ್ಷಕ ನಿರೀಕ್ಷಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿ ಅಂತಿಮ ವರದಿ ಮತ್ತು ದಾಖಲಾತಿಗಳನ್ನು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ತಮ್ಮ ಪತ್ರ ದಿನಾಂಕ:30.04.2009 ರೊಡನೆ ಕಳುಹಿಸುತ್ತಾ ಆಪಾಧಿತ ಅಧಿಕಾರಿಯನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯಿದೆ, 1988ರ 19ನೇ ಕಲಂ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಉಲ್ಲೇಖ (3)ರ ಪತ್ರದಲ್ಲಿ ಕಳುಹಿಸಿಕೊಟ್ಟಿರುವ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿರುತ್ತದೆ:

1. ಶ್ರೀ ಎಸ್.ರಾಘವೇಂದ್ರ, ಇಂಡಿಯನ್ ಮದ್ರಾಸ್ ಮೋಟಾರ್ಸ್ ಅಂಗಡಿಯ ಮಾಲೀಕರು, ಚೇಳೂರು ರಸ್ತೆ, ಚಿಂತಾಮಣಿ ರವರ ಲಿಖಿತ ದೂರು ದಿನಾಂಕ:16.06.2008.
2. ಪ್ರಥಮ ವರ್ತಮಾನ ವರದಿ ಚಿಕ್ಕಬಳ್ಳಾಪುರ ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ:07/2008, ದಿನಾಂಕ:16.06.2008.
3. ಪ್ರಾಯೋಗಿಕ ಪಂಚನಾಮೆ ದಿನಾಂಕ:16.06.2008
4. ಟ್ರ್ಯಾಪ್ ನ ಮಹಜರ್ ದಿನಾಂಕ:16.06.2008.
5. ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ:ಪಿಹೆಚ್ಐ/ಸಿಎಂಇ/ಲೋಕ್/42/08–09, ದಿನಾಂಕ:23.08.2008.
6. ಕೃತ್ಯ ನಡೆದ ಸ್ಥಳದ ನಕಾಶೆ 2008–09/232, ದಿನಾಂಕ:04.09.2008.
7. **ಸಾಕ್ಷಿಗಳ ಹೇಳಿಕೆಗಳು:**
    1. ಶ್ರೀ ಎಸ್.ರಾಘವೇಂದ್ರ ಬಿನ್ ಎನ್.ಸುಬ್ರಮಣ್ಯಂ
    2. ಶ್ರೀ ಆವಲಪ್ಪ ಬಿನ್ ಲೇಟ್ ತಾಯಪ್ಪ.
    3. ಶ್ರೀ ಟಿ.ನಾಗರಾಜ ಬಿನ್ ವೆಂಕಟರಾಯಪ್ಪ
    4. ಶ್ರೀ ಸಿ.ಎನ್.ನಾಗರಾಜ ರಾವ್ ಬಿನ್ ಲೇಟ್ ಲಕ್ಷ್ಮಿನಾರಾಯಣ ರಾವ್.
    5. ಶ್ರೀ ಎಸ್. ಜಯರಾಮ್ ಬಿನ್ ಲೇಟ್ ಆರ್.ಸಣ್ಣಯ್ಯ.
    6. ಶ್ರೀ ಬಿ.ಎಂ.ಮಂಜುನಾಥ ಸ್ವಾಮಿ ಬಿನ್ ಬಿ.ಎಂ.ಮುನಿಯಪ್ಪ.
    7. ಶ್ರೀ ಎಂ.ರಾಜಣ್ಣ @ ಡ್ರೈವರ್ ರಾಜು ಬಿನ್ ಮುನಿಚೌಡಪ್ಪ.
    8. ಶ್ರೀ ಎಂ.ವಿ.ಪ್ರಸಾದ್, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿಂತಾಮಣಿ ಉಪವಿಭಾಗ, ಚಿಕ್ಕಬಳ್ಳಾಪುರ ಜಿಲ್ಲೆ
    9. ಡಾ: ಕೆ.ಆರ್.ರೇಖಾ, ರಾಸಾಯನಿಕ ಪರೀಕ್ಷಾ ತಜ್ಞರು, ಕೆ.ಆರ್.ವೃತ್ತ ಬೆಂಗಳೂರು.
    10. ಶ್ರೀ ಸೈಯದ್ ಹಾಜಿ, ಮುಖ್ಯ ಪೇದೆ.
    11. ಶ್ರೀ ಕೆ.ಆರ್.ಪ್ರತಾಪ್, ಮುಖ್ಯ ಪೇದೆ.
    12. ಶ್ರೀ ಎಂ.ರಾಮಚಂದ್ರ, ಪೇದೆ.
    13. ಶ್ರೀ ಕೆ.ಆರ್.ನಾಗರಾಜ, ಪೇದೆ.
    14. ಶ್ರೀ ಶಿವಣ್ಣ, ಪೇದೆ.
    15. ಶ್ರೀ ಶ್ರೀನಿವಾಸ್, ಎ.ಪಿ.ಸಿ
    16. ಶ್ರೀ ಎಂ.ಸಿ.ಬೂದಿಹಾಳ್, ಪೊಲೀಸ್ ಉಪ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ.
8. ಲಂಚ ಕೇಳಲು ಆಧಾರವಾದ ಕಡತ ಅಥವಾ ದಾಖಲೆಗಳ ಸಂಖ್ಯೆ.

**ವಿಷಯ:** ಫಿರ್ಯಾದುದಾರರಾದ ಶ್ರೀ ಎಸ್. ರಾಘವೇಂದ್ರ ಇವರ ಬಾಬತ್ತು ಚೇಳೂರು ರಸ್ತೆಯಲ್ಲಿರುವ ಇಂಡಿಯನ್ ಮದ್ರಾಸ್ ಮೋಟಾರ್ಸ್ ಬಿಡಿ ಭಾಗಗಳ ಅಂಗಡಿಗೆ ಚಿಂತಾಮಣಿಯ ವಾಣಿಜ್ಯ ತೆರಿಗೆ ಅಧಿಕಾರಿ ಶ್ರೀ ಕೆ.ದೊರೈ ಮತ್ತು ಶ್ರೀ ನಾಗರಾಜ್, ಶ್ರೀ ಕೆ.ಪ್ರೇಮ್‌ರಾಜ್, ಶ್ರೀ ಜಯರಾಂ, ಸಹಾಯಕ, ಇವರುಗಳು ಅಂಗಡಿಗೆ ಬಂದು ಒಂದು ಲೀಟರ್ ಆಯಿಲ್ ಖರೀದಿಸಿದ ನಗದು ರಸೀದಿಯನ್ನು ಕೇಳಿದ್ದು, ಆಗ ಫಿರ್ಯಾದಿ ರಸೀದಿ ನೀಡದೇ ಇದ್ದುದರಿಂದ ಸ್ಥಳ ದಂಡವಾಗಿ ರೂ.2000/– ಗಳ ರಸೀದಿಯನ್ನು ಕೊಟ್ಟು ಅಂಗಡಿಯಲ್ಲಿನ ವಾರ್ಷಿಕ ಲೆಕ್ಕ ಪುಸ್ತಕಗಳನ್ನು, ದಿನವಹಿ ಬಿಡಿ ಚೀಟಿಗಳನ್ನು ಬಿಡದೆ ಜಪ್ತಿ ಮಾಡಿ ತೆಗೆದುಕೊಂಡು ಹೋಗಿದ್ದು, ಮರುದಿನ ಆಫೀಸಿಗೆ ಬರಲು ತಿಳಿಸಿರುತ್ತಾರೆ. ಅದರಂತೆ ಮಾರನೆ ದಿನ ಆರೋಪಿತರ ಕಛೇರಿಗೆ ಹೋದಾಗ ಆರೋಪಿಯಾದ ಶ್ರೀ ದೊರೈ ರವರು ಫಿರ್ಯಾದಿಯ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಅನುಕೂಲ ಮಾಡಿಕೊಡಲು ರೂ.1,00,000/– ಕೊಡಲು ಒತ್ತಾಯ ಮಾಡಿರುತ್ತಾರೆ. ಫಿರ್ಯಾದಿ ಅಷ್ಟು ಹಣ ಇಲ್ಲವೆಂದು ಬೇಡಿಕೊಂಡಾಗ ನಿನ್ನ ಮೇಲೆ ಕೇಸು ಹಾಕಿ ಕೋರ್ಟಿಗೆ ಹಾಕುತ್ತೇನೆ. ನಿನಗೆ ಆರು ತಿಂಗಳ ಸಜೆ ಮತ್ತು ದಂಡವಾಗುತ್ತದೆಂದು ಭಯಪಡಿಸಿರುತ್ತಾರೆ. ನಂತರ ಫಿರ್ಯಾದಿ ಚೌಕಾಸಿ ಮಾಡಿದಾಗ ಆರೋಪಿತರು ರೂ.25,000/–ಗಳನ್ನು ತೆಗೆದುಕೊಳ್ಳಲು ಒಪ್ಪಿರುತ್ತಾರೆ. ಈ ಸಂಬಂಧ ಫಿರ್ಯಾದುದಾರರಿಗೆ ಲಂಚದ ಹಣವನ್ನು ಕೊಡಲು ಇಷ್ಟವಿಲ್ಲದ್ದರಿಂದ ಸೂಕ್ತ ಕಾನೂನು ಕ್ರಮಕ್ಕೆ ಕೋರಿರುತ್ತಾರೆ. ಸದರಿ ದೂರನ್ನು ಆಧರಿಸಿ ಚಿಕ್ಕಬಳ್ಳಾಪುರ ಲೋಕಾಯುಕ್ತ ಪೊಲೀಸ್‌ರವರು ಲಂಚ ನಿರೋಧಕ ಕಾಯಿದೆ, 1988ರ ಕಲಂ 13(1)(ಡಿ) ಜೊತೆಗೆ 13(2)ರ ಪ್ರಕಾರ ಚಿಕ್ಕಬಳ್ಳಾಪುರ ಲೋಕಾಯುಕ್ತ ಠಾಣೆ, ಮೊಕದ್ದಮೆ ಸಂಖ್ಯೆ:07/2008ರಲ್ಲಿ ಪ್ರಕರಣವನ್ನು ದಾಖಲೆ ಮಾಡಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ.

9. ಆಪಾದಿತರ ಸಮಜಾಯಿಷಿ ಹೇಳಿಕೆಗಳು:
    1. ಶ್ರೀ ಕೆ.ದೊರೈ, ವಾಣಿಜ್ಯ ತೆರಿಗೆ ಅಧಿಕಾರಿ.
    2. ಶ್ರೀ ಎನ್.ರಾಜಣ್ಣ, ವಾಣಿಜ್ಯ ತೆರಿಗೆ ಪರಿವೀಕ್ಷಕ, ಉಪ ಮೌಲ್ಯವರ್ಧಿತ ತೆರಿಗೆ ಕಛೇರಿ, ಚಿಂತಾಮಣಿ ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ.

ತನಿಖಾಧಿಕಾರಿಗಳಾದ ಶ್ರೀ ಎಂ.ಸಿ.ಬೂದಿಹಾಳ್, ಪೊಲೀಸ್ ಉಪ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ಶ್ರೀ ಕೆ.ದೊರೈ, ವಾಣಿಜ್ಯ ತೆರಿಗೆ ಅಧಿಕಾರಿ ರವರ ವಿರುದ್ಧ ದಂಡನಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಚಿಕ್ಕಬಳ್ಳಾಪುರ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ:07/2008ರಲ್ಲಿ ಲಂಚ ನಿರೋಧಕ ಕಾಯಿದೆ, 1988ರ ಕಲಂ 7, 13(1)(ಡಿ) ಜೊತೆಯಲ್ಲಿ 13(2)ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಆಪಾದಿತರಾದ ಶ್ರೀ ಕೆ.ದೊರೈ, ವಾಣಿಜ್ಯ ತೆರಿಗೆ ಅಧಿಕಾರಿ, ಫಿರ್ಯಾದುದಾರರಾದ ಶ್ರೀ ಎಸ್. ರಾಘವೇಂದ್ರ, ಇಂಡಿಯನ್ ಮದ್ರಾಸ್ ಮೋಟಾರ್ಸ್, ಅಂಗಡಿಯ ಮಾಲೀಕರು, ಚೇಳೂರು ರಸ್ತೆ, ಚಿಂತಾಮಣಿ, ಇವರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಅನುಕೂಲ ಮಾಡಿಕೊಡಲು ರೂ.25,000/– ಅಕ್ರಮ ಸಂಭಾವನೆಯನ್ನು ಕೇಳಿರುತ್ತಾರೆ. ಫಿರ್ಯಾದಿಯು ಲಂಚದ ಹಣವನ್ನು ಕೊಡಲು ಬಯಸದ ಕಾರಣ ಸದರಿ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿನಂತೆ ತನಿಖಾಧಿಕಾರಿಗಳು ಛಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ವ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿನಾಂಕ:16.06.2008ರಂದು ಚಿಕ್ಕಬಳ್ಳಾಪುರ ಉಪಮೌಲ್ಯವರ್ಧಿತ ತೆರಿಗೆ ಕಛೇರಿಯಲ್ಲಿ ಬೀಸಿದ ಟ್ರ್ಯಾಪ್ ಯಶಸ್ವಿಯಾಗಿ ಶ್ರೀ ಕೆ.ದೊರೈ, ವಾಣೀಜ್ಯ ತೆರಿಗೆ ಅಧಿಕಾರಿ, ಇವರು ಅಕ್ರಮ ಸಂಭಾವನೆಯಾದ ರೂ.25,000/– ಗಳನ್ನು ತಾವು ತೆಗೆದುಕೊಳ್ಳದೆ ಶ್ರೀ ಎನ್.ರಾಜಣ್ಣ, ವಾಣೀಜ್ಯ ತೆರಿಗೆ ಪರಿವೀಕ್ಷಕರವರಿಗೆ ಕೊಡಲು ತಿಳಿಸಿದ್ದು, ಸದರಿಯವರು ರೂ.25,000/– ಗಳನ್ನು ಸರ್ಕಾರಿ ಕೆಲಸವನ್ನು ಮಾಡಲು ಕೇಳಿ ಪಡೆಯುತ್ತಿದ್ದಾಗ ಸಿಕ್ಕಿಹಾಕಿಕೊಂಡಿರುತ್ತಾರೆ. ಆಪಾಧಿತ ನೌಕರರಾದ ಶ್ರೀ ಎನ್.ರಾಜಣ್ಣ, ವಾಣಿಜ್ಯ ತೆರಿಗೆ ಪರಿವೀಕ್ಷಕ ಇವರ ಬಲಗೈ ಮತ್ತು ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಮಾರ್ಜನೆ ಮಾಡಿ ಫಿನಾಪ್ತಲಿನ್ ಪರೀಕ್ಷೆಗೆ ಒಳಪಡಿಸಿದಾಗ ಅದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ಪರೀಕ್ಷಣಾ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಫಿರ್ಯಾದಿ ಹಾಗೂ ಸಾರ್ವಜನಿಕ ಅಧಿಕಾರಿ/ನೌಕರರ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ ಮತ್ತು ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ.25,000/– ಗಳನ್ನು ಶ್ರೀ ಎನ್.ರಾಜಣ್ಣ, ವಾಣಿಜ್ಯ ತೆರಿಗೆ ಪರಿವೀಕ್ಷಕ ಉಪ ಮೌಲ್ಯವರ್ಧಿತ ತೆರಿಗೆ ಕಛೇರಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆರವರಿಂದ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ಈ ಪ್ರಕರಣದಲ್ಲಿ ಮೇಲೆ ವಿವರಿಸಿರುವಂತೆ ಆರೋಪಿತ ಸರ್ಕಾರಿ ಅಧಿಕಾರಿಗಳಾದ ಶ್ರೀ ಕೆ.ದೊರೈ, ವಾಣಿಜ್ಯ ತೆರಿಗೆ ಅಧಿಕಾರಿ ಮತ್ತು ಶ್ರೀ ಎನ್.ರಾಜಣ್ಣ, ವಾಣಿಜ್ಯ ತೆರಿಗೆ ಪರಿವೀಕ್ಷಕ, ಉಪ ಮೌಲ್ಯ ವರ್ಧತ ತೆರಿಗೆ ಕಛೇರಿ ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಇವರಗಳ ಮೇಲಿನ ಭ್ರಷ್ಟಾಚಾರ ಆರೋಪ ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

ಈ ಎಲ್ಲಾ ಕಾರಣಗಳಿಂದ ಲಂಚ ನಿರೋಧಕ ಕಾಯಿದೆ, 1988ರ ಕಲಂ 7, 13(1)(ಡಿ) ಜೊತೆಯಲ್ಲಿ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಮನವರಿಕೆಯಾಗಿರುತ್ತದೆ. ಆದ್ದರಿಂದ ಇವರನ್ನು ಲಂಚ ನಿರೋಧಕ ಕಾಯಿದೆ, 1988ರ ಕಲಂ 7, 13(1)(ಡಿ) ಜೊತೆಯಲ್ಲಿ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯಕವೆಂದು ಸರ್ಕಾರಕ್ಕೆ ಮನವರಿಕೆಯಾಗಿರುತ್ತದೆ.

ಸಕ್ಷಮ ಪ್ರಾಧಿಕಾರಿವಾದ ಪ್ರಾಧಿಕಾರವು ಆಪಾದಿತ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕಲು ಅಧಿಕಾರ ಉಳ್ಳದ್ದಾಗಿರುತ್ತದೆ. ಆದ್ದರಿಂದ ಲಂಚ ನಿರೋಧಕ ಕಾಯಿದೆ, 1988ರ ಕಲಂ 19(ಸಿ) ಅಡಿಯಲ್ಲಿ ಆಪಾಧಿತ ಅಧಿಕಾರಿಯಾದ ಶ್ರೀ ಕೆ.ದೊರೈ, ವಾಣಿಜ್ಯ ತೆರಿಗೆ ಅಧಿಕಾರಿರವರನ್ನು ಲಂಚ ನಿರೋಧಕ ಕಾಯಿದೆ, 1988ರ ಕಲಂ 7 ಮತ್ತು 13(1)(ಡಿ) ಜೊತೆಯಲ್ಲಿ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 47 ವಾತೆತ 2008, ಬೆಂಗಳೂರು, ದಿನಾಂಕ: 30ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಲಂಚ ನಿರೋಧಕ ಕಾಯಿದೆ, 1988ರ ಕಲಂ 19(1)(ಬಿ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಆಪಾದಿತ ಅಧಿಕಾರಿಯಾದ ಶ್ರೀ ಕೆ.ದೊರೈ, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ಲಂಚ ನಿರೋಧಕ ಕಾಯಿದೆ, 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2)ರ ಅಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜಿಸಲು ಲೋಕಾಯುಕ್ತ ಪೊಲೀಸರಿಗೆ ಈ ಮೂಲಕ ಅಧಿಕಾರ ನೀಡಲಾಗಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ಮೇಲ್ಕಂಡ ನಿಯಮಗಳನ್ವಯ ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ:30.05.2009ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1549

ಎಲ್.ಎಸ್. ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವಾ.ತೆ.–2)

**COMMERCE AND INDUSTRIES SECRETARIAT**

**Sub**: The Project Proposal of M/s Jupiter Aviation & Logistics Pvt. Ltd., Bangalore to establish a Unit for "Maintenance & Support Infrastructure for Commercial Aircrafts [MRO]" for – approval for order – reg.

**Read**: 1. Proceedings of the 8th State High Level Clearance Committee [SHLCC] meeting held on 23.2.2007.

2. Proceedings of the 13th Land Audit Committee Meeting held on 18.3.2009.

**Preamble:**

The Project Proposal of M/s Jupiter Aviation & Logistics Pvt. Ltd., Bangalore to establish a Unit for "Maintenance & Support Infrastructure for Commercial Aircrafts [MRO]" in 75 acres of land, out of the land being acquired by KIADB for the proposed Aerospace components manufacturing cluster adjoining the International Airport, Devanahalli, Bangalore Rural District, with an investment of Rs.1800.00 crores. Generating employment for 9000 people has been approved in-the 8th SHLCC meeting held on 23.2.2007.

After detailed discussion of the project proposal of the said Company, vide the proceedings in references 1 & 2 above, has recommended for approval of the project.

Government has examined the recommendations made by the State High Level Clearance Committee in the 8th Meeting held on 23.2.2007 and Proceedings of the 13th Land Audit Committee Meeting on 18.3.2009, in all aspects Hence the following order.

**Government Order No: CI 280 SPI 2007, Bangalore, Dated: 26th May 2009**

In the circumstances explained above, Government is pleased to accord the approval of the project proposal of M/s Jupiter Aviation & Logistics Pvt. Ltd., Bangalore to establish a Unit for "Maintenance & Support Infrastructure for Commercial Aircrafts [MRO]" adjoining the International Airport, Devanahalli, Bangalore Rural District, with an investment of Rs.1800.00 crores, Generating employment for 9000 people has been approved in the 8th SHLCC Meeting held on 23.2.2007 and Land Audit Committee Meeting held on 18.3.2009.

**INFRASTRUCTURE FACILITIES:**

**Land:** 75 acres of land to be allotted by KIADB, out of the land being acquired by KIADB for the proposed Aerospace components manufacturing cluster adjoining the International Airport, Devanahalli, Bangalore rural district.

**Incentives and Concessions:** As per Industrial Policy 2006-2011.

**Environment:** The promoters to obtain CFE and CFO from KSPCB and environmental clearance from MOEF, GOI. No works shall commence prior to obtaining EC as per prevailing law.

**Employment:** The Company shall prepare a plan for development of human resources required for the project, train local people and provide employment to these trained local youth and comply with Government policy of Employment to local people i.e Dr. Sarojini Mahishi report. A copy of human resources development plan shall be sent to the Commissioner for I.D. & Director of Industries and Commerce for monitoring.

**Vendor Development:** Where ever there is scope for vendor development for the project, the company shall prepare a vendor development plan develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.

**Social Infrastructure Development:** The Company is advised to take up social infrastructure development projects in the vicinity of proposed location of the unit. A copy of such projects shall be sent to the Commissioner for I.D. & Director of Industries and Commerce for monitoring.

**Others:** The promoter shall take all statutory and other necessary clearances including GOI and shall submit milestones/progress in implementation of the project regularly, which will be monitored by the Departments concerned.

This approval is valid for a period of two years from the date of issue.

By Order and in the name of the Governor of Karnataka,

P.R. 1357

**APARNA PAVATE**

Desk Officer (Technical Cell), Commerce & Industries Department

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

**ವಿಷಯ:** 2009-10ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಹಾಗೂ ಖಾಸಗಿ ಫಾರ್ಮಸಿ, ಕಾಲೇಜುಗಳಲ್ಲಿನ ಎಂ.ಫಾರ್ಮ ಸೀಟುಗಳಿಗೆ ಸೀಟ್ ಮ್ಯಾಟ್ರಿಕ್ಸ್‌ನ್ನು ಪ್ರಕಟಿಸುವ ಬಗ್ಗೆ.

**ಓದಲಾಗಿದೆ:** (1) ಸರ್ಕಾರದ ಆದೇಶ ಸಂಖ್ಯೆ:ಆಕುಕ 163 ಪಿಟಿಡಿ 2008, ದಿನಾಂಕ:24-05-2008.

(2) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ:ಪಿಜಿಎಸ್/74/2008-09, ದಿನಾಂಕ:11-05-2009.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ.(1)ರಲ್ಲಿನ ಸರ್ಕಾರದ ಆದೇಶದಲ್ಲಿ, 2008-09ನೇ ಸಾಲಿಗೆ ರಾಜ್ಯದ ಸರ್ಕಾರಿ ಹಾಗೂ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಪಟ್ಟಂತೆ ಪ್ರವೇಶದ ಮಿತಿ ಮತ್ತು ಸೀಟುಗಳ ಹಂಚಿಕೆಯನ್ನು ಹಿಂದಿನ ಸಾಲಿನಲ್ಲಿ ಅಳವಡಿಸಿಕೊಂಡಿದ್ದ ಪ್ರಕ್ರಿಯೆಯನ್ನು ಯಥಾಸ್ಥಿತಿ ಮುಂದುವರೆಸಿ ಸೀಟ್ ಮ್ಯಾಟ್ರಿಕ್ಸ್‌ನ್ನು ಪ್ರಕಟಿಸಲಾಗಿದೆ.

ಮೇಲೆ ಓದಲಾದ ಕ.ಸಂ.(2)ರಲ್ಲಿನ ಪತ್ರದಲ್ಲಿ, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು ಇವರು 2009-10ನೇ ಸಾಲಿನಲ್ಲಿ ಸ್ನಾತಕೋತ್ತರ ಕೋರ್ಸುಗಳಿಗೆ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಿಗೆ ಎಂ.ಫಾರ್ಮ ಸೀಟುಗಳನ್ನು ಶೇಕಡಾ 50:50ರ ಅನುಪಾತದಲ್ಲಿ ನಿಗದಿಪಡಿಸಿ, ಸೀಟುಗಳ ಆಧಾರದ ಮೇಲೆ ಸೀಟ್ ಮ್ಯಾಟ್ರಿಕ್ಸ್ ಆದೇಶವನ್ನು ಪ್ರಕಟಿಸುವಂತೆ ಕೋರಿರುತ್ತಾರೆ.

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಮೇಲೆ ಓದಲಾದ ಕ್ರ.ಸಂ.(2)ರಲ್ಲಿನ ಪತ್ರದಲ್ಲಿ ಸ್ಪಷ್ಟಪಡಿಸಿರುವಂತೆ, 2009-10ನೇ ಸಾಲಿಗಾಗಿ ಸರ್ಕಾರಿ/ಖಾಸಗಿ ಕಾಲೇಜುಗಳಲ್ಲಿನ ಎಂ.ಫಾರ್ಮ ಕೋರ್ಸುಗಳಿಗೆ ಸೀಟುಗಳನ್ನು ಹಂಚಿಕೆ ಮಾಡಿ ಸೀಟ್ ಮ್ಯಾಟ್ರಿಕ್ಸ್‌ನ್ನು ಪ್ರಕಟಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿದೆ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 161 ಪಿಟಿಡಿ 2009, ಬೆಂಗಳೂರು, ದಿನಾಂಕ: 19ನೇ ಮೇ 2009**

ಪ್ರಸ್ತಾವನೆಯಲ್ಲಿ ಹೇಳಲಾದ ಅಂಶಗಳನ್ನು ಪರಿಗಣಿಸಿ 2009-10ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಮತ್ತು ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ಸೀಟುಗಳ ಹಂಚಿಕೆಯನ್ನು ಈ ಕೆಳಗಿನಂತೆ ನಿಗದಿಪಡಿಸಿ ಆದೇಶಿಸಲಾಗಿದೆ.

**ಸ್ನಾತಕೋತ್ತರ ಕೋರ್ಸುಗಳು**

| ಕ್ರಮ ಸಂಖ್ಯೆ | ಕೋರ್ಸಿನ ಹೆಸರು | ಸರ್ಕಾರಿ ಕೋಟಾ ಸೀಟುಗಳು | ಆಡಳಿತ ಮಂಡಳಿ ಸೀಟುಗಳು |
|---|---|---|---|
| 01 | ಎಂ.ಫಾರ್ಮ | 50% | 50% |

ರಾಜ್ಯದ ಸರ್ಕಾರಿ ಹಾಗೂ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಸೀಟುಗಳನ್ನು ಹಂಚಿಕೆ ಮಾಡಿದ ವಿವರವನ್ನು ಈ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎನ್. ಮಹಾಲಕ್ಷ್ಮಮ್ಮ**

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

## ANNEXURE-I

### STATEMENT SHOWING THE M.PHARM SEATS IN GOVERNMENT & PRIVATE PHARMACY COLLEGES FOR THE ACADEMIC YEAR 2009-10

| Sl. No. | Subject | Govt. College of Pharmacy, Bangalore | Al-Ameen College of Pharmacy, Bangalore | | | Bapuji Pharmacy College, Davangere | | | TMAE Society's SCS College of Pharmacy, Davangere | | | National College of Pharmacy Shimoga | | |
|---|---|---|---|---|---|---|---|---|---|---|---|---|---|---|
| | | TS | TS | MS | GS | TS | MS | GS | TS | MS | GS | TS | MS | GS |
| 1 | Pharmaceutics | 6 | 7 | 3 | 4 | - | - | - | - | - | - | 10 | 5 | 5 |
| 2 | Pharma Chemistry | 6 | 10 | 5 | 5 | - | - | - | 8 | 4 | 4 | - | - | - |
| 3 | Pharmacology | 4 | 7 | 4 | 3 | - | - | - | 11 | 6 | 5 | - | - | - |
| 4 | Pharmacognosy | 4 | 7 | 4 | 3 | - | - | - | - | - | - | 10 | 5 | 5 |
| 5 | Pharma Marketing & Management | - | 10 | 5 | 5 | - | - | - | - | - | - | - | - | - |
| 6 | Quality Assurance | - | 5 | 2 | 3 | - | - | - | - | - | - | - | - | - |
| 7 | Pharmacy Practice | - | 6 | 3 | 3 | - | - | - | - | - | - | - | - | - |
| 8 | Industrial Pharmacy | - | - | - | - | 14 | 7 | 7 | - | - | - | - | - | - |
| 9 | Bulk Drucks | - | - | - | - | - | - | - | - | - | - | - | - | - |
| 10 | Pharma Technology | - | - | - | - | - | - | - | - | - | - | - | - | - |
| 11 | Pharmaceutical Analysis | - | - | - | - | - | - | - | - | - | - | 10 | 5 | 5 |
| 12 | Pharma Bio- Technology | - | - | - | - | - | - | - | - | - | - | - | - | - |
| | **TOTAL** | **20** | **52** | **26** | **26** | **14** | **7** | **7** | **19** | **10** | **09** | **30** | **15** | **15** |

| Sl. No. | Subject | Bharathi College of Pharmacy, Mandya | | | Karnataka College of Pharmacy, Bidar | | | BVVS Hanagal Shri Kumareshwar Colleg of Pharmacy, Bagalkot | | | V.V.Puram College of Pharmacy, Bangalore | | |
|---|---|---|---|---|---|---|---|---|---|---|---|---|---|
| | | TS | MS | GS | TS | MS | GS | TS | MS | GS | TS | MS | GS |
| 1 | Pharmaceutics | 10 | 5 | 5 | - | - | - | - | - | - | 10 | 5 | 5 |
| 2 | Pharma Chemistry | 10 | 5 | 5 | - | - | - | - | - | - | | | |
| 3 | Pharmacology | - | - | - | - | - | - | 8 | 4 | 4 | 10 | 5 | 5 |
| 4 | Pharmacognosy | - | - | - | - | - | - | - | - | - | - | - | - |

| Sl. No. | Subject | Bharathi College of Pharmacy, Mandya | | | Karnataka College of Pharmacy, Bidar | | | BVVS Hanagal Shri Kumareshwar Colleg of Pharmacy, Bagalkot | | | V.V.Puram College of Pharmacy, Bangalore | | |
|---|---|---|---|---|---|---|---|---|---|---|---|---|---|
| | | TS | MS | GS | TS | MS | GS | TS | MS | GS | TS | MS | GS |
| 5 | Pharma Marketing & Management | - | - | - | - | - | - | - | - | - | - | - | - |
| 6 | Quality Assurance | - | - | - | - | - | - | - | - | - | - | - | - |
| 7 | Pharmacy Practice | - | - | - | - | - | - | - | - | - | 10 | 5 | 5 |
| 8 | Industrial Pharmacy | - | - | - | 6 | 3 | 3 | - | - | - | - | - | - |
| 9 | Bulk Drucks | - | - | - | 5 | 3 | 2 | - | - | - | - | - | - |
| 10 | Pharma Technology | - | - | - | - | - | - | - | - | - | - | - | - |
| 11 | Pharmaceutical Analysis | 10 | 5 | 5 | - | - | - | - | - | - | - | - | - |
| 12 | Pharma Bio- Technology | 10 | 5 | 5 | - | - | - | - | - | - | - | - | - |
| | **TOTAL** | **40** | **20** | **20** | **11** | **6** | **5** | **8** | **4** | **4** | **30** | **15** | **15** |

| Sl. No. | Subject | Soniya Education Trust's College of Pharmacy, Dharwad | | | Dayananda Sagar College of Pharmacy Bangalore | | | HKES. College of Pharmacy, Gulbarga | | | BLDEA College of Pharmacy, Bijapur | | |
|---|---|---|---|---|---|---|---|---|---|---|---|---|---|
| | | TS | MS | GS | TS | TS | MS | GS | TS | TS | MS | GS | TS |
| 1 | Pharmaceutics | - | - | - | 10 | 5 | 5 | - | - | - | 10 | 5 | 5 |
| 2 | Pharma Chemistry | - | - | - | 10 | 5 | 5 | - | - | - | 10 | 5 | 5 |
| 3 | Pharmacology | 10 | 5 | 5 | 10 | 5 | 5 | 10 | 5 | 5 | - | - | - |
| 4 | Pharmacognosy | - | - | - | - | - | - | 5 | 2 | 3 | - | - | - |
| 5 | Pharma Marketing & Management | - | - | - | - | - | - | - | - | - | - | - | - |
| 6 | Quality Assurance | - | - | - | - | - | - | - | - | - | - | - | - |
| 7 | Pharmacy Practice | - | - | - | - | - | - | - | - | - | - | - | - |
| 8 | Industrial Pharmacy | - | - | - | - | - | - | - | - | - | - | - | - |
| 9 | Bulk Drucks | - | - | - | - | - | - | - | - | - | - | - | - |
| 10 | Pharma Technology | - | - | - | - | - | - | 10 | 5 | 5 | - | - | - |
| 11 | Pharmaceutical Analysis | - | - | - | - | - | - | 10 | 5 | 5 | - | - | - |
| 12 | Pharma Bio- Technology | - | - | - | - | - | - | - | - | - | - | - | - |
| | **TOTAL** | **10** | **5** | **5** | **30** | **15** | **15** | **35** | **17** | **18** | **20** | **10** | **10** |

| Sl. No. | Subject | V.L. College of Pharmacy, Raichur | | | Nargund College of Pharmacy, Bangalore | | | Sree Siddaganga College of Pharmacy, Tumkur | | | St.John's Pharmacy College, Bangalore | | |
|---|---|---|---|---|---|---|---|---|---|---|---|---|---|
| | | TS | MS | GS | TS | MS | GS | TS | MS | GS | TS | MS | GS |
| 1 | Pharmaceutics | 6 | 3 | 3 | 10 | 5 | 5 | 10 | 4 | 6 | - | - | - |
| 2 | Pharma Chemistry | 11 | 6 | 5 | 10 | 5 | 5 | - | - | - | - | - | - |
| 3 | Pharmacology | 6 | 3 | 3 | 10 | 5 | 5 | 12 | 4 | 8 | 10 | 5 | 5 |
| 4 | Pharmacognosy | - | - | - | - | - | - | - | - | - | - | - | - |
| 5 | Pharma Marketing & Management | - | - | - | - | - | - | - | - | - | - | - | - |
| 6 | Quality Assurance | - | - | - | - | - | - | - | - | - | - | - | - |
| 7 | Pharmacy Practice | - | - | - | - | - | - | - | - | - | - | - | - |
| 8 | Industrial Pharmacy | - | - | - | - | - | - | - | - | - | - | - | - |
| 9 | Bulk Drucks | - | - | - | - | - | - | - | - | - | - | - | - |
| 10 | Pharma Technology | - | - | - | - | - | - | - | - | - | - | - | - |
| 11 | Pharmaceutical Analysis | - | - | - | - | - | - | - | - | - | - | - | - |
| 12 | Pharma Bio- Technology | - | - | - | - | - | - | - | - | - | - | - | - |
| | **TOTAL** | 23 | 12 | 11 | 30 | 15 | 15 | 22 | 8 | 14 | 10 | 5 | 5 |

| Sl. No. | Subject | Krupanidhi College of Pharmacy, Bangalore | | | Acharya B.M. Reddy College of Pharmacy, Bangalore | | | PES College of Pharmacy, Bangalore | | |
|---|---|---|---|---|---|---|---|---|---|---|
| | | TS | MS | GS | TS | MS | GS | TS | MS | GS |
| 1 | Pharmaceutics | 8 | 4 | 4 | 8 | 4 | 4 | 10 | 5 | 5 |
| 2 | Pharma Chemistry | 10 | 5 | 5 | 12 | 6 | 6 | 10 | 5 | 5 |
| 3 | Pharmacology | 10 | 5 | 5 | 12 | 6 | 6 | 10 | 5 | 5 |
| 4 | Pharmacognosy | - | - | - | - | - | - | 8 | 4 | 4 |
| 5 | Pharma Marketing & Management | - | - | - | - | - | - | - | - | - |
| 6 | Quality Assurance | - | - | - | - | - | - | - | - | - |
| 7 | Pharmacy Practice | - | - | - | - | - | - | - | - | - |
| 8 | Industrial Pharmacy | - | - | - | 12 | 6 | 6 | - | - | - |

| Sl. No. | Subject | Krupanidhi College of Pharmacy, Bangalore | | | Acharya B.M. Reddy College of Pharmacy, Bangalore | | | PES College of Pharmacy, Bangalore | | |
|---|---|---|---|---|---|---|---|---|---|---|
| | | TS | MS | GS | TS | MS | GS | TS | MS | GS |
| 9 | Bulk Drucks | - | - | - | - | - | - | - | - | - |
| 10 | Pharma Technology | - | - | - | - | - | - | - | - | - |
| 11 | Pharmaceutical Analysis | - | - | - | - | - | - | 8 | 4 | 4 |
| 12 | Pharma Bio- Technology | - | - | - | - | - | - | - | - | - |
| | **TOTAL** | **28** | **14** | **14** | **44** | **22** | **22** | **46** | **23** | **23** |

| Sl. No. | Subject | M S Ramaiah College of Pharmacy, Bangalore | | | Oxford College of Pharmacy, Bangalore | | | Sri Adichunchangiri College of Pharmacy, Mandya | | |
|---|---|---|---|---|---|---|---|---|---|---|
| | | TS | MS | GS | TS | MS | GS | TS | MS | GS |
| 1 | Pharmaceutics | - | - | - | - | - | - | - | - | - |
| 2 | Pharma Chemistry | 10 | 5 | 5 | - | - | - | 10 | 5 | 5 |
| 3 | Pharmacology | - | - | - | - | - | - | - | - | - |
| 4 | Pharmacognosy | 10 | 5 | 5 | 10 | 5 | 5 | - | - | - |
| 5 | Pharma Marketing & Management | - | - | - | - | - | - | - | - | - |
| 6 | Quality Assurance | - | - | - | - | - | - | - | - | - |
| 7 | Pharmacy Practice | - | - | - | - | - | - | - | - | - |
| 8 | Industrial Pharmacy | - | - | - | - | - | - | - | - | - |
| 9 | Bulk Drucks | - | - | - | - | - | - | - | - | - |
| 10 | Pharma Technology | - | - | - | - | - | - | - | - | - |
| 11 | Pharmaceutical Analysis | - | - | - | - | - | - | - | - | - |
| 12 | Pharma Bio- Technology | - | - | - | - | - | - | - | - | - |
| | **TOTAL** | **20** | **10** | **10** | **10** | **5** | **5** | **10** | **5** | **5** |

| Sl. No. | Subject | RRK Samithi's College of Pharmacy, Bidar | | | Dr.H.L. Thimmegowda College of Pharmacy, Channapatna | | | NET College of Pharmacy, Raichur | | | SJM College of Pharmacy, Chitradurga | | |
|---|---|---|---|---|---|---|---|---|---|---|---|---|---|
| | | TS | MS | GS | TS | MS | GS | TS | MS | GS | TS | MS | GS |
| 1 | Pharmaceutics | 8 | 4 | 4 | 8 | 4 | 4 | 10 | 8 | 2 | - | - | - |
| 2 | Pharma Chemistry | - | - | - | 6 | 3 | 3 | - | - | - | 8 | 4 | 4 |
| 3 | Pharmacology | - | - | - | - | - | - | 10 | 8 | 2 | - | - | - |
| 4 | Pharmacognosy | - | - | - | - | - | - | - | - | - | - | - | - |
| 5 | Pharma Marketing & Management | - | - | - | - | - | - | - | - | - | - | - | - |
| 6 | Quality Assurance | - | - | - | - | - | - | - | - | - | - | - | - |
| 7 | Pharmacy Practice | - | - | - | - | - | - | - | - | - | - | - | - |
| 8 | Industrial Pharmacy | - | - | - | - | - | - | - | - | - | - | - | - |
| 9 | Bulk Drucks | - | - | - | - | - | - | - | - | - | - | - | - |
| 10 | Pharma Technology | - | - | - | - | - | - | - | - | - | - | - | - |
| 11 | Pharmaceutical Analysis | - | - | - | - | - | - | - | - | - | - | - | - |
| 12 | Pharma Bio- Technology | - | - | - | - | - | - | - | - | - | - | - | - |
| | **TOTAL** | **8** | **4** | **4** | **14** | **7** | **7** | **20** | **16** | **4** | **8** | **4** | **4** |

**N. MAHALAKSHMAMMA**
Under Secretary to Government,
Health and Family Welfare Department

P.R. 1358

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

**ವಿಷಯ:** 2008–09 ನೇ ಸಾಲಿನ ಡಿಆರ್‌ಡಿಎ ಆಡಳಿತ ಯೋಜನೆಯಡಿ ರಾಜ್ಯದ ಪಾಲಿನ ಬಾಕಿ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :**
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:ಆರ್–20015: 28 : 2007–ಡಿಆರ್‌ಡಿಎ (ಎಸ್‌ಆರ್ ನಂ.10) ದಿನಾಂಕ 03–04–08, (ಎಸ್‌ಆರ್ ನಂ.40) ದಿನಾಂಕ 28–05–08. ಆರ್–17014/10/ 2008–09 ಡಿಆರ್‌ಡಿಎ (ಎಸ್‌ಎಲ್ 82) ದಿನಾಂಕ 03–11–08 ಮತ್ತು (ಎಸ್ ನಂ.90) ದಿನಾಂಕ 14–11–2008, (ಎಸ್‌ಎಲ್ ನಂ.108) ದಿನಾಂಕ 11–12–08, (ಎಸ್‌ಎಲ್ ನಂ.141) ದಿನಾಂಕ 09–01–09 (ಎಸ್‌ಎಲ್ ನಂ.159) ದಿನಾಂಕ 23–01–09. ಮತ್ತು (ಎಸ್ ನಂ.186) ದಿನಾಂಕ 19–02–09.
2. ಸರ್ಕಾರದ ಆದೇಶ ಸಂ. ಗ್ರಾಅಪ 7 ಎಸ್‌ಜಿವೈ (ಡಿಆರ್‌ಡಿಎ) 2008 ಬೆಂಗಳೂರು, ದಿನಾಂಕ 23–05–08, 26–06–08, ದಿನಾಂಕ 18–12–08, 31–01–09, 19–02–09 ಮತ್ತು 06–03–09
3. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 1 ಎಸ್‌ಜಿವೈ (ಡಿಆರ್‌ಡಿಎ) 2008 (ಪಿ) ಬೆಂಗಳೂರು, ದಿನಾಂಕ 07–03–09, ತಿದ್ದುಪಡಿ 09–03–09, 21–03–09 ಮತ್ತು 23–03–09.
4. ಕೇಂದ್ರ ಸರ್ಕಾರದ ಪತ್ರ ಆರ್ 17014/35/2008/ಡಿಆರ್‌ಡಿಎ (ಎಸ್‌ಎಲ್ ನಂ.232) ದಿನಾಂಕ 31–03–2009

**ಪ್ರಸ್ತಾವನೆ:**

ಡಿಆರ್‌ಡಿಎ ಆಡಳಿತ ಯೋಜನೆಯಡಿ, ಓದಲಾಗಿದೆ (4) ರನ್ವಯ ಕೇಂದ್ರ ಸರ್ಕಾರ 2008–09ನೇ ಸಾಲಿಗೆ ರಾಜ್ಯದ ಬಾಗಲಕೋಟೆ, ಬೆಂಗಳೂರು ನಗರ, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ್, ಗುಲ್ಬರ್ಗಾ, ಹಾಸನ, ಹಾವೇರಿ, ಕೊಡಗು, ಕೊಪ್ಪಳ, ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು, ಉಡುಪಿ ಮತ್ತು ಉತ್ತರ ಕನ್ನಡ ಒಟ್ಟು 24 ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಬಾಕಿ ಅನುದಾನ ರೂ.1,22,19,000 ಗಳನ್ನು ದಿನಾಂಕ 31–03–2009 ರಂದು ಬಿಡುಗಡೆ ಮಾಡಿದ ಕಾರಣ ರಾಜ್ಯದ ಪಾಲಿನ ಅನುದಾನವನ್ನು ಸದರಿ ಸಾಲಿನಲ್ಲಿ ಬಿಡುಗಡೆ ಮಾಡಲು ಸಾಧ್ಯವಾಗಲಿಲ್ಲ. ಇದಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನವನ್ನು 2009–10 ನೇ ಸಾಲಿನ ಆಯವ್ಯಯದಿಂದ ಭರಿಸಿ ಬಿಡುಗಡೆ ಮಾಡಬೇಕಾಗಿದೆ.

2008–09 ನೇ ಸಾಲಿಗೆ ಕೇಂದ್ರ ಸರ್ಕಾರ ಒಟ್ಟು ರೂ.11,59,22,000 ಗಳನ್ನು ಬಿಡುಗಡೆ ಮಾಡಿದೆ. ಇದಕ್ಕನುಗುಣವಾಗಿ, ರಾಜ್ಯವು ರೂ.3,86,41,000 ಗಳನ್ನು ಬಿಡುಗಡೆ ಮಾಡಬೇಕಾಗಿತ್ತು. ಆದರೆ, 2007–08 ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅನುದಾನಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರ ಅನುದಾನ ಬಿಡುಗಡೆ ವರ್ಷಾಂತ್ಯದಲ್ಲಿ ಮಾಡಿದ್ದು, ಬೆಂಗಳೂರು ಗ್ರಾಮಾಂತರ, ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳು ರೂ.15,14,000 ಲಕ್ಷಗಳನ್ನು ಸದರಿ ಸಾಲಿನಲ್ಲಿ ಸೆಳೆಯದ ಕಾರಣ 2008–09 ನೇ ಸಾಲಿನಲ್ಲಿ ನವೀಕರಿಸಿ ಬಿಡುಗಡೆ ಗೊಳಿಸಲಾಯಿತು. ಅಲ್ಲದೆ, 2008–09 ನೇ ಸಾಲಿನಲ್ಲಿ ರಾಜ್ಯದ ಕೆಲವು ಜಿಲ್ಲಾ ಪಂಚಾಯತಿಗಳಲ್ಲಿ ವೇತನ ವಿತರಿಸಲು ಅನುದಾನದ ಕೊರತೆಯಿದ್ದ ಕಾರಣ, ಡಿಆರ್‌ಡಿಎ ಆಡಳಿತ ಮಾರ್ಗಸೂಚಿಯನ್ವಯ ರಾಜ್ಯದ ಪಾಲಿನ ಅನುದಾನದಿಂದ ಭರಿಸಿ ಬಿಡುಗಡೆಗೊಳಿಸಲಾಗಿದೆ. ಆದ ಕಾರಣ, 2008–09 ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಈ ಯೋಜನೆಗೆ ಒಟ್ಟು ಅನುದಾನ ರೂ.4,85,70,000 ಗಳನ್ನು ಬಿಡುಗಡೆ ಮಾಡಲಾಯಿತು.

2008–09 ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಮೇಲಿನ 24 ಜಿಲ್ಲಾ ಪಂಚಾಯತಿಗಳಿಗೆ ರೂ.10,50,24,000 ಗಳನ್ನು ಬಿಡುಗಡೆ ಮಾಡಿದ್ದು, ಇದಕ್ಕನುಗುಣವಾಗಿ ರಾಜ್ಯ ಸರ್ಕಾರ ರೂ.3,50,08,000 ಗಳನ್ನು ಬಿಡುಗಡೆ ಮಾಡಬೇಕಿದ್ದು, ಇದರ ಬದಲಿಗೆ ರೂ.4,20,51,000 ಗಳನ್ನು ಬಿಡುಗಡೆ ಮಾಡಿದೆ. ಈಗಾಗಲೇ ಬಿಡುಗಡೆ ಮಾಡಿದ ಜಿಲ್ಲಾ ಪಂಚಾಯತಿಗಳನ್ನು ಹೊರತುಪಡಿಸಿ, ಉಳಿದ 14 ಜಿಲ್ಲಾ ಪಂಚಾಯತಿಗಳಾದ ಬಾಗಲಕೋಟೆ, ಬೆಂಗಳೂರು ನಗರ, ಬೆಳಗಾಂ, ಬೀದರ್, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ಧಾರವಾಡ, ಗದಗ್, ಹಾಸನ, ಹಾವೇರಿ, ಕೊಡಗು, ಉಡುಪಿ ಮತ್ತು ಉತ್ತರ ಕನ್ನಡ ಗಳಿಗೆ ರೂ.24,13,000 ಗಳನ್ನು 2009–10ನೇ ಸಾಲಿನ ಆಯವ್ಯಯದಿಂದ ಭರಿಸಿ ಬಿಡುಗಡೆ ಮಾಡಬೇಕಾಗಿರುವುದಿಂದ ಈ ಆದೇಶ :

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 7 ಎಸ್‌ಜಿವೈ (ಡಿಆರ್‌ಡಿಎ) 2008, ಬೆಂಗಳೂರು, ದಿನಾಂಕ: 20ನೇ ಮೇ 2009**

ರಾಜ್ಯ ಸರ್ಕಾರವು, ಡಿಆರ್‌ಡಿಎ ಆಡಳಿತ ಯೋಜನೆಯಡಿ 2008–09ನೇ ಸಾಲಿನಲ್ಲಿ ನೇ ಸಾಲಿನ ಬಾಕಿ ಅನುದಾನವನ್ನು 2009–2010ನೇ ಸಾಲಿನ ಆಯವ್ಯಯದಿಂದ ಭರಿಸಿ ಅನುಬಂಧದಲ್ಲಿ ತೋರಿಸಿರುವಂತೆ ಜಿಲ್ಲಾ

ಪಂಚಾಯತಿಗಳಿಗೆ ಒಟ್ಟು ರೂ.24,13,000 ಗಳನ್ನು (ರೂ.ಇಪ್ಪತ್ತನಾಲ್ಕು ಲಕ್ಷದ ಹದಿಮೂರು ಸಾವಿರ ಮಾತ್ರ) ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

**ಷರತ್ತುಗಳು:**

ಡಿಆರ್‌ಡಿಎ ಆಡಳಿತ ಯೋಜನೆಯ ಕೈಪಿಡಿಯ ಮಾರ್ಗಸೂಚಿಯಂತೆ ಅನುದಾನವನ್ನು ಜಿಲ್ಲಾ ಪಂಚಾಯತ್ ಸಿಬ್ಬಂದಿ ಗಳ ವೇತನ ಹಾಗೂ ಸಾದಿಲ್ವಾರು ವೆಚ್ಚಗಳಿಗೆ ಮಾತ್ರ ಉಪಯೋಗಿಸುವುದು. ಇನ್ನಾವುದೇ ಉದ್ದೇಶಗಳಿಗೆ ಉಪಯೋಗಿಸ ತಕ್ಕದ್ದಲ್ಲ.

ಅನುದಾನದ ಮಾದರಿಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ 75:25 ರ ಅನುಪಾತದಲ್ಲಿರುತ್ತದೆ.

ಯೋಜನೆಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ : "2515 ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು 00-196-ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-6-ಜಿಲ್ಲಾ ಪಂಚಾಯತ್-06-ಡಿಆರ್‌ಡಿಎ ಆಡಳಿತಾತ್ಮಕ ವೆಚ್ಚ- (ಕೇಂದ್ರ ಪುರಸ್ಕೃತ ಯೋಜನೆ) 2009-2010 (2515-00-196-6-06)" ರಡಿ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಎಫ್‌ಡಿ 1 ಜಡ್‌ಪಿಎ 2007 (ಪಿ2) ದಿನಾಂಕ 26-04-2007 ರನ್ವಯ ಜಿಲ್ಲಾ ಪಂಚಾಯತ್ ನಿಧಿ-1ಕ್ಕೆ ಜಮೆ ಮಾಡಿಕೊಂಡು ಪೇಯಿಸ್ ರಸೀದಿಯ ಮೂಲಕ ಜಿಲ್ಲಾ ಪಂಚಾಯತಿ ನಿಧಿಯಿಂದ ಅನುದಾನವನ್ನು ಖಜಾನೆಯಿಂದ ಪಡೆದುಕೊಂಡು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿಕೊಂಡು ವೆಚ್ಚವನ್ನು ಭರಿಸತಕ್ಕದ್ದು.

ಬಿಡುಗಡೆ ಮಾಡುವ ಅನುದಾನದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಆಯಾ ಮಾಹೆಯ ಪ್ರಗತಿ ವರದಿ ಹಾಗೂ ಹುದ್ದೆವಾರು ವಿವರಗಳನ್ನು ಮುಂದಿನ ತಿಂಗಳ 5ನೇ ತಾರೀಖಿನೊಳಗೆ ನಿರ್ದೇಶಕರು {ಸ್ವ ಉಕಾ} ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಲೆಕ್ಕ ಪರಿಶೋಧನ ವರದಿಗಳನ್ನು, ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ :ಗ್ರಾಅಪ 151 ಪಿಬಿಎಸ್ 2009 ದಿನಾಂಕ 19-05-2009 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ:ಶಮ್ಲಾ ಇಕ್ಬಾಲ್**

ನಿರ್ದೇಶಕರು (ಸ್ವಉಕಾ) ಹಾಗೂ

ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 7 ಎಸ್‌ಜೆವೈ (ಡಿಆರ್‌ಡಿಎ) 2008, ಬೆಂಗಳೂರು, ದಿನಾಂಕ: 20-05-2009 ಕ್ಕೆ ಅನುಬಂಧ**

(ರೂ.ಗಳಲ್ಲಿ)

| ಕ್ರ ಸಂ | ಜಿಲ್ಲಾ ಪಂಚಾಯತಿ ಹೆಸರು | ಜಿ.ಪಂ. ಕೋಡ್ | ಡಿ.ಡಿ.ಓ ಕೋಡ್ | 2008-09 ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದ ಒಟ್ಟು ಅನುದಾನ | ಇದಕ್ಕನು ಗುಣವಾಗಿ ರಾಜ್ಯ ಸರ್ಕಾರವು ಬಿಡುಗಡೆ ಮಾಡ ಬೇಕಾಗಿದ್ದ ಒಟ್ಟು ಅನುದಾನ | ರಾಜ್ಯ ಸರ್ಕಾರ ಈಗಾಗಲೇ ಬಿಡುಗಡೆ ಮಾಡಿದ ಒಟ್ಟು ಅನುದಾನ | ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತಿರುವ ಉಳಿಕೆ ಅನುದಾನ |
|---|---|---|---|---|---|---|---|
| 1 | ಬಾಗಲಕೋಟೆ | 461 | 2900ZZ0001 | 55,73,000 | 18,58,000 | 16,46,000 | 2,12,000 |
| 2 | ಬೆಂಗಳೂರು ನಗರ | 401 | 0100ZZ8001 | 48,13,000 | 16,04,000 | 14,21,000 | 1,83,000 |
| 3 | ಬೆಳಗಾಂ | 413 | 2200ZZ0002 | 54,42,000 | 18,14,000 | 16,08,000 | 2,06,000 |
| 4 | ಬಳ್ಳಾರಿ | 418 | 3400ZZ0001 | 59,11,000 | 19,70,000 | 28,79,000 | 0 |
| 5 | ಬೀದರ್ | 419 | 3800ZZ5701 | 39,66,000 | 12,22,000 | 11,71,000 | 1,51,000 |
| 6 | ಬಿಜಾಪುರ | 414 | 2800ZZ9152 | 45,91,000 | 15,30,000 | 26,68,000 | 0 |
| 7 | ಚಾಮರಾಜನಗರ | 456 | 1000ZZ0001 | 27,85,000 | 9,28,000 | 8,22,000 | 1,06,000 |

| ಕ್ರ ಸಂ | ಜಿಲ್ಲಾ ಪಂಚಾಯತಿ ಹೆಸರು | ಜಿ.ಪಂ. ಕೋಡ್ | ಡಿ.ಡಿ.ಓ ಕೋಡ್ | 2008–09 ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದ ಒಟ್ಟು ಅನುದಾನ | ಇದಕ್ಕನು ಗುಣವಾಗಿ ರಾಜ್ಯ ಸರ್ಕಾರವು ಬಿಡುಗಡೆ ಮಾಡ ಬೇಕಾಗಿದ್ದ ಒಟ್ಟು ಅನುದಾನ | ರಾಜ್ಯ ಸರ್ಕಾರ ಈವರೆಗೆ ಬಿಡುಗಡೆ ಮಾಡಿದ ಒಟ್ಟು ಅನುದಾನ | ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತಿರುವ ಉಳಿಕೆ ಅನುದಾನ |
|---|---|---|---|---|---|---|---|
| 8 | ಚಿಕ್ಕಮಗಳೂರು | 408 | 1800ZZ0017 | 25,53,000 | 8,51,000 | 6,79,000 | 1,72,000 |
| 9 | ಚಿತ್ರದುರ್ಗ | 403 | 1600ZZ0001 | 58,78,000 | 19,59,000 | 17,36,000 | 2,23,000 |
| 10 | ದಕ್ಷಿಣ ಕನ್ನಡ | 409 | 1900ZZ0047 | 37,47,000 | 12,49,000 | 14,19,000 | 0 |
| 11 | ದಾವಣಗೆರೆ | 451 | 1700ZZ0002 | 47,05,000 | 15,68,000 | 21,53,000 | 0 |
| 12 | ಧಾರವಾಡ | 415 | 2500ZZ8798 | 51,11,000 | 17,04,000 | 15,09,000 | 1,95,000 |
| 13 | ಗದಗ್ | 462 | 2600ZZ0001 | 46,67,000 | 15,56,000 | 13,78,000 | 1,78,000 |
| 14 | ಗುಲ್ಬರ್ಗಾ | 417 | 3200ZZ0003 | 34,93,000 | 11,64,000 | 34,32,000 | 0 |
| 15 | ಹಾಸನ | 410 | 1300ZZ0003 | 46,28,000 | 15,43,000 | 13,67,000 | 1,76,000 |
| 16 | ಹಾವೇರಿ | 463 | 2700ZZ0001 | 35,49,000 | 11,83,000 | 10,48,000 | 1,35,000 |
| 17 | ಕೊಡಗು | 411 | 1200ZZ0001 | 20,88,000 | 6,96,000 | 5,48,000 | 1,48,000 |
| 18 | ಕೊಪ್ಪಳ | 466 | 1500ZZ0010 | 20,67,000 | 6,89,000 | 10,91,000 | 0 |
| 19 | ಮಂಡ್ಯ | 412 | 1100ZZ0001 | 52,49,000 | 17,50,000 | 26,51,000 | 0 |
| 20 | ಮೈಸೂರು | 407 | 0900ZZ0001 | 53,69,000 | 17,90,000 | 32,69,000 | 0 |
| 21 | ಶಿವಮೊಗ್ಗ | 405 | 1400ZZ0002 | 53,07,000 | 17,69,000 | 19,68,000 | 0 |
| 22 | ತುಮಕೂರು | 406 | 0800ZZ0001 | 51,72,000 | 17,24,000 | 30,30,000 | 0 |
| 23 | ಉಡುಪಿ | 457 | 2000ZZ0001 | 41,26,000 | 13,75,000 | 12,18,000 | 1,57,000 |
| 24 | ಉತ್ತರ ಕನ್ನಡ | 416 | 3000ZZ0080 | 45,34,000 | 15,11,000 | 13,40,000 | 1,71,000 |
| | ಒಟ್ಟು: | | | **10,50,24,000** | **3,50,08,000** | **4,20,51,000** | **24,13,000** |

**ಡಾ:ಶಮ್ಲಾ ಇಕ್ಬಾಲ್**
ನಿರ್ದೇಶಕರು (ಸ್ವಉಕಾ) ಹಾಗೂ
ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪಿ.ಆರ್. 1392

**ವಿಷಯ:** 2009–10ನೇ ಸಾಲಿಗೆ ಎಸ್‌ಜಿಎಸ್‌ವೈ ಒಂದನೇ ಕಂತಿನ ರಾಜ್ಯದ ಪಾಲಿನ ಅನುದಾನವನ್ನು ರಾಜ್ಯದ 29 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** (1) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022/1/2009 ಎಸ್‌ಜಿಎಸ್‌ವೈ–I (10) ದಿನಾಂಕ : 16–04–2008.

**ಪ್ರಸ್ತಾವನೆ:**

2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಓದಲಾಗಿದೆ (1) ರಲ್ಲಿ ಒಂದನೇ ಕಂತಿನ ಭಾಗಶ: ಅನುದಾನ ರೂ.32,88,40,000 ಗಳನ್ನು ರಾಜ್ಯದ ಎಲ್ಲಾ 29 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರವು ಮೊದಲನೇ ಕಂತಿನ ಅನುದಾನ ರೂ.10,96,13,000 ಬಿಡುಗಡೆ ಮಾಡಬೇಕಾಗಿದೆ. ಆದುದರಿಂದ ಈ ಆದೇಶ:

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 7 ಎಸ್‌ಜಿವೈ 2009, ಬೆಂಗಳೂರು, ದಿನಾಂಕ: 20ನೇ ಮೇ 2009**

ರಾಜ್ಯ ಸರ್ಕಾರವು, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಮೊದಲನೇ ಕಂತಿನ ಅನುದಾನ ರೂ.10,96,13,000 ಗಳನ್ನು (ರೂ.ಹತ್ತು ಕೋಟಿ ತೊಂಬತ್ತಾರು ಲಕ್ಷದ ಹದಿಮೂರು ಸಾವಿರ ಮಾತ್ರ) ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಿರುವಂತೆ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಷರತ್ತುಗಳು : -

1999 ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ನಿಧಿಯ ಮಾದರಿ ಕೇಂದ್ರ ಮತ್ತು ರಾಜ್ಯದ ನಡುವೆ 75 : 25 ರ ಅನುಪಾತದಲ್ಲಿ ನೀಡಲಾಗುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ "2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು-198-ಗ್ರಾಮ ಪಂಚಾಯತ್‌ಗಳಿಗೆ ಸಹಾಯ-6-ಗ್ರಾಮ ಪಂಚಾಯತ್‌ಗಳು-01-ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2009-2010ನೇ (2501-01-198-6-01)" (ಲಿಂಕ್ ಕೋಡ್ 2501-01-800-0-07) ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 7 ಜೆಡ್‌ಪಿಎ 2003 ದಿನಾಂಕ 14-07-2005 ರನ್ವಯ ಖಜಾನೆಯಿಂದ ಪಡೆಯುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ನೇರವಾಗಿ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನ ಮತ್ತು ರಾಜ್ಯದ ಪಾಲಿನ ಅನುದಾನವೂ ಸೇರಿದಂತೆ ಒಟ್ಟು ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 14 ಎಸ್ ಜೆ ವೈ 2007 ದಿನಾಂಕ 18-04-2007 ರ ಸೂಚನೆಯಂತೆ ಕ್ರಮ ಕೈಗೊಳ್ಳುವುದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

2009-10 ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರು ಸರ್ಕಾರಕ್ಕೆ ಸಲ್ಲಿಸುವುದು.

ಆರ್ಥಿಕ ಮತ್ತು ಭೌತಿಕ ಸಾಧನೆಯ ಮಾಸಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ onlineಗೆ upload ಮಾಡಿ ಪ್ರತಿಯನ್ನು ಸ್ವ ಉದ್ಯೋಗ ಕಾರ್ಯಕ್ರಮಗಳ ಶಾಖೆಗೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ : ಗ್ರಾಅಪ 148 ಪಿಬಿಎಸ್ 2009 ದಿನಾಂಕ: 19-05-2009 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ:ಶಮ್ಲಾ ಇಕ್ಬಾಲ್**

ನಿರ್ದೇಶಕರು (ಸ್ವಉಕಾ) ಹಾಗೂ

ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಅನುಬಂಧ**

**ಸರ್ಕಾರದ ಆದೇಶದ ಸಂಖ್ಯೆ : ಗ್ರಾಅಪ 7 ಎಸ್‌ಜೆವೈ 2009, ಬೆಂಗಳೂರು, ದಿನಾಂಕ : 20 -05-2009**

(ರೂ.ಗಳಲ್ಲಿ)

| ಕ್ರ ಸಂ | ಜಿಲ್ಲಾ ಪಂಚಾಯತಿ ಹೆಸರು | ಜಿ.ಪಂ. ಕೋಡ್ | ಡಿ.ಡಿ.ಓ ಕೋಡ್ | ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಮೊದಲನೇ ಕಂತಿನ ಭಾಗಶ: ಅನುದಾನ | ರಾಜ್ಯ ಸರ್ಕಾರವು ಬಿಡುಗಡೆ ಮಾಡ ಬೇಕಾದ ಮೊದಲನೇ ಕಂತಿನ ಅನುದಾನ |
|---|---|---|---|---|---|
| 1 | ಬಾಗಲಕೋಟೆ | 461 | 2900ZZ0001 | 77,62,000 | 25,87,000 |
| 2 | ಬೆಂಗಳೂರು (ಗ್ರಾ) | 402 | 0300ZZ8001 | 42,83,000 | 14,28,000 |
| 3 | ಬೆಂಗಳೂರು ನಗರ | 401 | 0100ZZ8001 | 33,04,000 | 11,01,000 |
| 4 | ಬೆಳಗಾಂ | 413 | 2200ZZ0002 | 2,29,39,000 | 76,46,000 |
| 5 | ಬಳ್ಳಾರಿ | 418 | 3400ZZ0001 | 1,82,28,000 | 60,76,000 |
| 6 | ಬೀದರ್ | 419 | 3800ZZ5701 | 1,29,18,000 | 43,06,000 |
| 7 | ಬಿಜಾಪುರ | 414 | 2800ZZ9152 | 1,52,08,000 | 50,69,000 |
| 8 | ಚಾಮರಾಜನಗರ | 456 | 1000ZZ0001 | 1,60,97,000 | 53,66,000 |
| 9 | ಚಿಕ್ಕಮಗಳೂರು | 408 | 1800ZZ0017 | 73,08,000 | 24,36,000 |
| 10 | ಚಿಕ್ಕಬಳ್ಳಾಪುರ | 453 | 0600ZZ0001 | 84,54,000 | 28,18,000 |

| ಕ್ರ ಸಂ | ಜಿಲ್ಲಾ ಪಂಚಾಯತಿ ಹೆಸರು | ಜಿಲ್ಲೆ ಸಂಕೇತ | ಡಿ.ಡಿ.ಓ ಕೋಡ್ | ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಮೊದಲನೇ ಕಂತಿನ ಭಾಗಶ: ಅನುದಾನ | ರಾಜ್ಯ ಸರ್ಕಾರವು ಬಿಡುಗಡೆ ಮಾಡ ಬೇಕಾದ ಮೊದಲನೇ ಕಂತಿನ ಅನುದಾನ |
|---|---|---|---|---|---|
| 11 | ಚಿತ್ರದುರ್ಗ | 403 | 1600ZZ0001 | 1,29,84,000 | 43,28,000 |
| 12 | ದಕ್ಷಿಣ ಕನ್ನಡ | 409 | 1900ZZ0047 | 70,57,000 | 23,52,000 |
| 13 | ದಾವಣಗೆರೆ | 451 | 1700ZZ0002 | 1,04,80,000 | 34,93,000 |
| 14 | ಧಾರವಾಡ | 415 | 2500ZZ8798 | 65,38,000 | 21,79,000 |
| 15 | ಗದಗ್ | 462 | 2600ZZ0001 | 1,03,76,000 | 34,59,000 |
| 16 | ಗುಲ್ಬರ್ಗಾ | 417 | 3200ZZ0003 | 1,88,97,000 | 62,99,000 |
| 17 | ಹಾಸನ | 410 | 1300ZZ0003 | 94,73,000 | 31,58,000 |
| 18 | ಹಾವೇರಿ | 463 | 2700ZZ0001 | 1,13,32,000 | 37,77,000 |
| 19 | ಕೊಡಗು | 411 | 1200ZZ0001 | 26,63,000 | 8,88,000 |
| 20 | ಕೋಲಾರ | 404 | 0700ZZ8002 | 95,52,000 | 31,84,000 |
| 21 | ಕೊಪ್ಪಳ | 466 | 1500ZZ0010 | 1,63,03,000 | 54,34,000 |
| 22 | ಮಂಡ್ಯ | 412 | 1100ZZ0001 | 1,23,31,000 | 41,10,000 |
| 23 | ಮೈಸೂರು | 407 | 0900ZZ0001 | 1,50,29,000 | 50,10,000 |
| 24 | ರಾಯಚೂರು | 420 | 3600ZZ0001 | 1,53,53,000 | 51,18,000 |
| 25 | ರಾಮನಗರ | 452 | 0400ZZ0001 | 76,68,000 | 25,56,000 |
| 26 | ಶಿವಮೊಗ್ಗ | 405 | 1400ZZ0002 | 1,30,60,000 | 43,53,000 |
| 27 | ತುಮಕೂರು | 406 | 0800ZZ0001 | 1,93,56,000 | 64,52,000 |
| 28 | ಉಡುಪಿ | 457 | 2000ZZ0001 | 57,46,000 | 19,15,000 |
| 29 | ಉತ್ತರ ಕನ್ನಡ | 416 | 3000ZZ0080 | 81,41,000 | 27,14,000 |
| | ಒಟ್ಟು: | | | **32,88,40,000** | **10,96,13,000** |

**ಡಾ:ಶಮ್ಲಾ ಇಕ್ಬಾಲ್**
ನಿರ್ದೇಶಕರು (ಸ್ವಉಕಾ) ಹಾಗೂ
ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್. 1393

**ವಿಷಯ:** 2009–10 ನೇ ಸಾಲಿಗೆ ಡಿಆರ್‌ಡಿಎ ಆಡಳಿತ ಯೋಜನೆಯ ರಾಜ್ಯದ ಪಾಲಿನ ಒಂದನೇ ಕಂತಿನ ಅನುದಾನವನ್ನು ರಾಜ್ಯದ 26 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** (1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : ಆರ್– 18014 : 03 : 2009–10–ಡಿಆರ್‌ಡಿಎ (ಎಸ್‌ಆರ್ ನಂ.10) ದಿನಾಂಕ 13–04–2009

**ಪ್ರಸ್ತಾವನೆ:**

2009–10ನೇ ಸಾಲಿನಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ಡಿಆರ್‌ಡಿಎ ಆಡಳಿತ ಯೋಜನೆಗೆ ಓದಲಾಗಿದೆ (1) ರಲ್ಲಿ ಒಂದನೇ ಕಂತಿನ ಭಾಗಶ: ಅನುದಾನ ರೂ.3,98,75,000 ಗಳನ್ನು ಚಿಕ್ಕಬಳ್ಳಾಪುರ, ರಾಮನಗರ ಮತ್ತು ರಾಯಚೂರು ಜಿಲ್ಲಾ ಪಂಚಾಯತಿಗಳನ್ನು ಹೊರತುಪಡಿಸಿ ಉಳಿದ 26 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರವು ಮೊದಲನೇ ಕಂತಿನ ಅನುದಾನ ರೂ.1,32,92,000 ಬಿಡುಗಡೆ ಮಾಡಬೇಕಾಗಿದೆ. ಆದುದರಿಂದ ಈ ಆದೇಶ:

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 1 ಎಸ್‌ಜಿವೈ (ಡಿಆರ್‌ಡಿಎ) 2009, ಬೆಂಗಳೂರು, ದಿನಾಂಕ: 20ನೇ ಮೇ 2009**

ರಾಜ್ಯ ಸರ್ಕಾರವು, ಡಿಆರ್‌ಡಿಎ ಆಡಳಿತ ಯೋಜನೆಗೆ ಮೊದಲನೇ ಕಂತಿನ ಅನುದಾನ ರೂ.1,32,92,000 ಗಳನ್ನು (ರೂ.ಒಂದು ಕೋಟಿ ಮೂವತ್ತೆರಡು ಲಕ್ಷದ ತೊಂಬತ್ತೆರಡು ಸಾವಿರ ಮಾತ್ರ) ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಿರುವ 26 ಜಿಲ್ಲಾ ಪಂಚಾಯತಿಗಳಿಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಷರತ್ತುಗಳು :

ಡಿಆರ್‌ಡಿಎ ಆಡಳಿತ ಯೋಜನೆಯ ಕೈಪಿಡಿಯ ಮಾರ್ಗಸೂಚಿಯಂತೆ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಪಂಚಾಯತಿಗಳ ಅನುದಾನವನ್ನು ಜಿಲ್ಲಾ ಪಂಚಾಯತಿಗಳ ಸಿಬ್ಬಂದಿಗಳ ವೇತನ ಹಾಗೂ ಸಾದಿಲ್ವಾರು ವೆಚ್ಚಗಳಿಗೆ ಮಾತ್ರ ಉಪಯೋಗಿಸುವುದು. ಇನ್ಯಾವುದೇ ಉದ್ದೇಶಗಳಿಗೆ ಉಪಯೋಗಿಸತಕ್ಕದ್ದಲ್ಲ.

ಅನುದಾನದ ಮಾದರಿಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ 75:25 ರ ಅನುಪಾತದಲ್ಲಿರುತ್ತದೆ.

ಯೋಜನೆಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ : "2515 ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು 00-196-ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-6-ಜಿಲ್ಲಾ ಪಂಚಾಯತ್-06-ಡಿಆರ್‌ಡಿಎ ಆಡಳಿತಾತ್ಮಕ ವೆಚ್ಚ- (ಕೇಂದ್ರ ಪುರಸ್ಕೃತ ಯೋಜನೆ) 2009-2010 (2515-00-196-6-06)" ರಡಿ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಎಫ್‌ಡಿ 1 ಜಡ್‌ಪಿಎ 2007 (ಪಿ2) ದಿನಾಂಕ 26-04-2007 ರನ್ವಯ ಜಿಲ್ಲಾ ಪಂಚಾಯತ್ ನಿಧಿ-1ಕ್ಕೆ ಜಮೆ ಮಾಡಿಕೊಂಡು ಪೇಯಿಸ್ ರಸೀದಿಯ ಮೂಲಕ ಜಿಲ್ಲಾ ಪಂಚಾಯತಿ ನಿಧಿಯಿಂದ ಅನುದಾನವನ್ನು ಖಜಾನೆಯಿಂದ ಪಡೆದುಕೊಂಡು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿಕೊಂಡು ವೆಚ್ಚವನ್ನು ಭರಿಸತಕ್ಕದ್ದು.

ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತಿ ಇವರು ಆಯಾ ತಿಂಗಳ ಪ್ರಗತಿ ವರದಿ ಹಾಗೂ ಹುದ್ದೆವಾರು ವಿವರಗಳನ್ನು ಮುಂದಿನ ತಿಂಗಳ 5 ನೇ ತಾರೀಖಿನೊಳಗೆ ನಿರ್ದೇಶಕರು {ಸ್ವಉಕಾ} ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ತಪ್ಪದೇ ಕಳುಹಿಸುವುದು.

ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಲೆಕ್ಕ ಪರಿಶೋಧನ ವರದಿಗಳನ್ನು, ನಿರ್ದೇಶಕರು {ಸ್ವಉಕಾ} ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಇವರ ಸಹಮತಿ ಸಂಖ್ಯೆ:ಗ್ರಾಅಪ 150 ಪಿಬಿಎಸ್.2009 ದಿನಾಂಕ: 19-05-2009 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ: ಶಮ್ಲಾ ಇಕ್ಬಾಲ್**

ನಿರ್ದೇಶಕರು (ಸ್ವ.ಉ.ಕಾ.) ಹಾಗೂ ಪ. ನಿ.

ಸರ್ಕಾರದ ಉಪ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 1 ಎಸ್‌ಜಿವೈ (ಡಿಆರ್‌ಡಿಎ) 2009, ಬೆಂಗಳೂರು, ದಿನಾಂಕ:20-05-2009ಕ್ಕೆ**

**ಅನುಬಂಧ**

(ರೂ.ಗಳಲ್ಲಿ)

| ಕ್ರ ಸಂ | ಜಿಲ್ಲಾ ಪಂಚಾಯತಿ | [illegible] | ಡಿ.ಡಿ.ಓ ಕೋಡ್ | ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಮೊದಲನೇ ಕಂತಿನ ಭಾಗಶ: ಅನುದಾನ | ರಾಜ್ಯ ಸರ್ಕಾರವು ಬಿಡುಗಡೆ ಮಾಡುತ್ತಿರುವ ಮೊದಲನೇ ಕಂತಿನ ಅನುದಾನ |
|---|---|---|---|---|---|
| 1 | ಬಾಗಲಕೋಟೆ | 461 | 2900ZZ0001 | 16,74,000 | 5,58,000 |
| 2 | ಬೆಂಗಳೂರು (ಗ್ರಾ) | 402 | 0300ZZ8001 | 13,51,000 | 4,50,000 |
| 3 | ಬೆಂಗಳೂರು ನಗರ | 401 | 0100ZZ8001 | 13,51,000 | 4,50,000 |
| 4 | ಬೆಳಗಾವಿ | 413 | 2200ZZ0002 | 16,74,000 | 5,58,000 |
| 5 | ಬಳ್ಳಾರಿ | 418 | 3400ZZ0001 | 16,74,000 | 5,58,000 |
ಮೇಲೆ ಓದಲಾದ (17)ರಲ್ಲಿರುವ ಆಯುಕ್ತರು ಕಬ್ಬು ಅಭಿವೃದ್ಧಿ ರವರ ಪತ್ರದಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಹಾಗೂ ಅಥಣಿ ತಾಲ್ಲೂಕಿನ ರೈತರು ಮಹಾರಾಷ್ಟ್ರ ರಾಜ್ಯದ ಜವಹಾರ್ ಶೇತಕಾರಿ ಸಹಕಾರಿ ಸಕ್ಕರೆ ಕಾರ್ಖಾನೆ, ಕೊಲ್ಹಾಪುರ ಜಿಲ್ಲೆ ಈ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ್ದು, ಈ ಸಂಬಂಧ ಸಾಗಾಣಿಕೆ ಸಹಾಯಧನ 23,90,459/- ರೂ.ಗಳನ್ನು ಕಾರ್ಖಾನೆಯು ಭರಿಸಿದ್ದು, ಈ ಹಣವನ್ನು ಕಾರ್ಖಾನೆಗೆ ಪಾವತಿಸುವ ಸಲುವಾಗಿ ಜಿಲ್ಲಾಧಿಕಾರಿ ಬೆಳಗಾವಿ ರವರಿಗೆ ಬಿಡುಗಡೆ ಮಾಡಲು ಶಿಫಾರಸ್ಸು ಮಾಡಿದ್ದಾರೆ.

ಮೇಲೆ ಓದಲಾದ (13)ರಲ್ಲಿರುವ ದಿನಾಂಕ 30.06.2008ರ ಆದೇಶದಲ್ಲಿ ಬಿಜಾಪುರ ಜಿಲ್ಲೆಗೆ 52,66,000/- ರೂ.ಗಳ ಸಾಗಾಣಿಕೆ ಸಹಾಯಧನವನ್ನು ಜಿಲ್ಲಾಧಿಕಾರಿ ಬಿಜಾಪುರ ಜಿಲ್ಲೆಗೆ ಬಿಡುಗಡೆ ಮಾಡಲಾಗಿದ್ದು, ಆದರೆ ಪ್ರಸ್ತಾವನೆಯಂತೆ ಬಿಡುಗಡೆ ಮಾಡಬೇಕಾಗಿದ್ದ ಮೊತ್ತವು 57,94,964/- ರೂ.ಗಳಾಗಿದ್ದು, ವ್ಯತ್ಯಾಸದ ಮೊತ್ತ 5,28,964/- ರೂ.ಗಳು ಬಿಡುಗಡೆಗೊಳಿಸಲು ಬಾಕಿ ಉಳಿದಿದ್ದು, ಈ ಬಾಕಿ ಹಣವನ್ನು ಈಗ ಬಿಡುಗಡೆಗೊಳಿಸಲು ಅನುಮೋದನೆಯಾಗಿದೆ.

ಮೇಲಿನಂತೆ ಆಯುಕ್ತರು ಕಬ್ಬು ಅಭಿವೃದ್ಧಿ ರವರ ಪ್ರಸ್ತಾವನೆಗಳನ್ನು ಹಾಗೂ ಬಾಕಿ ಉಳಿದಿರುವ ಹಣದ ಬಿಡುಗಡೆಗೆ ಅನುಮೋದನೆಯಾಗಿರುವ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ ಸಿಐ 58 ಎಸ್‌ಜಿಎಫ್ 2007 (ಭಾ-2) (12), ಬೆಂಗಳೂರು ದಿನಾಂಕ: 2ನೇ ಜುಲೈ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ರಾಜ್ಯದ ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 2006-07ನೇ ಸಾಲಿನ ಸಕ್ಕರೆ ವರ್ಷದಲ್ಲಿ ರಾಜ್ಯದ ಬಿಜಾಪುರ, ಗುಲ್ಬರ್ಗಾ, ಬೆಳಗಾಂ ಜಿಲ್ಲೆಗಳಿಂದ ಮಹಾರಾಷ್ಟ್ರ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಮತ್ತು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿದ ಕಬ್ಬಿಗೆ ಪ್ರತಿ ಟನ್‌ಗೆ ಪ್ರತಿ ಕಿ.ಮೀ.ಗೆ ರೂ.2/-ರಂತೆ ಒಟ್ಟು 1,81,07,599/- ರೂ.ಗಳನ್ನು (ಒಂದು ಕೋಟಿ ಎಂಬತ್ತೊಂದು ಲಕ್ಷ ಏಳು ಸಾವಿರದ ಐನೂರ ತೊಂಬತ್ತೊಂಬತ್ತು ರೂಪಾಯಿಗಳು ಮಾತ್ರ) ರೈತರಿಗೆ ಮತ್ತು ಮಹಾರಾಷ್ಟ್ರ ರಾಜ್ಯದ ಸಕ್ಕರೆ ಕಾರ್ಖಾನೆಗೆ ಪಾವತಿಸುವ ಸಲುವಾಗಿ ಈ ಕೆಳಕಂಡ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

**ಸಾಗಾಣಿಕೆ ಸಹಾಯಧನ :**

| | | | |
|---|---|---|---|
| 1) ಬಿಜಾಪುರ ಜಿಲ್ಲೆಗೆ (ರೈತರಿಗೆ) * | : ರೂ. | 1,16,49,760-00 | ಜಿಲ್ಲಾಧಿಕಾರಿ ಬಿಜಾಪುರ |
| 2) ಗುಲ್ಬರ್ಗಾ ಜಿಲ್ಲೆಗೆ (ರೈತರಿಗೆ) * | : ರೂ. | **39,751-00** | ಜಿಲ್ಲಾಧಿಕಾರಿ ಗುಲ್ಬರ್ಗಾ |
| * (ಮಹಾರಾಷ್ಟ್ರ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿದ ಕಬ್ಬಿಗೆ) | ರೂ. | 1,16,89,511-00 | |

3) ಬೆಳಗಾಂ ಜಿಲ್ಲೆಗೆ (ರೈತರಿಗೆ) : ರೂ. 34,98,665–00 ಜಿಲ್ಲಾಧಿಕಾರಿ ಬೆಳಗಾಂ
(ಶ್ರೀ ರೇಣುಕಾ ಶುಗರ್ಸ್, ಮನೋಳಿ ಕಾರ್ಖಾನೆಗೆ
ರೈತರು ಸರಬರಾಜು ಮಾಡಿದ್ದಾರೆ)

4) ಬೆಳಗಾಂ ಜಿಲ್ಲೆಗೆ (ಕಾರ್ಖಾನೆಗೆ) : ರೂ. 23,90,459–00 ಜಿಲ್ಲಾಧಿಕಾರಿ ಬೆಳಗಾಂ
(ಮಹಾರಾಷ್ಟ್ರದ ರಾಜ್ಯದ ಜವಹಾರ್ ಶೇತಕಾರಿ
ಸಹಕಾರಿ ಸಕ್ಕರೆ ಕಾರ್ಖಾನೆ, ಕೊಲ್ಹಾಪುರ ಜಿಲ್ಲೆ
ಈ ಕಾರ್ಖಾನೆಗೆ ಪಾವತಿಸಬೇಕಾಗಿದೆ)

5) ಬಿಜಾಪುರ ಜಿಲ್ಲೆಗೆ (ರೈತರಿಗೆ) : ರೂ. 5,28,964–00 ಜಿಲ್ಲಾಧಿಕಾರಿ ಬಿಜಾಪುರ
(ಮಹಾರಾಷ್ಟ್ರ ರಾಜ್ಯದ ಮಹಾಂಕಾಳಿ
ಸಕ್ಕರೆ ಕಾರ್ಖಾನೆಗೆ ರೈತರು ಸರಬರಾಜು ಮಾಡಿದ ಕಬ್ಬಿಗೆ
ಸಾಗಾಣಿಕೆ ಸಹಾಯಧನದ ವ್ಯತ್ಯಾಸದ ಮೊತ್ತ
ದಿನಾಂಕ 30.06.2008ರ ಆದೇಶದಲ್ಲಿ
ರೂ. 5,28,964/– ಕಡಿಮೆ ಬಿಡುಗಡೆಯಾಗಿದೆ) ------------------

**ಒಟ್ಟು ರೂ. 1,81,07,599–00**

2009–10ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ "2852–08–201–0–07 (ಯೋಜನೆ)" ಸಹಾಯಧನ ಅಡಿಯಲ್ಲಿ 34.50 ಕೋಟಿ ರೂಗಳನ್ನು ಒದಗಿಸಲಾಗಿದ್ದು, ಈ ಹಣದಲ್ಲಿ ಮೇಲಿನಂತೆ 1,81,07,599/– ರೂ.ಗಳನ್ನು ರೈತರಿಗೆ/ಕಾರ್ಖಾನೆಗಳಿಗೆ ಸಾಗಾಣಿಕೆ ಸಹಾಯಧನವಾಗಿ ಬಿಡುಗಡೆ ಮಾಡಲು ಮಂಜೂರು ಮಾಡಲಾಗಿದೆ.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬಿಡುಗಡೆ ಮಾಡಲಾದ ಈ ಹಣವನ್ನು ಸರ್ಕಾರದ ಆದೇಶ ದಿನಾಂಕ: 13–06–2007 ರಲ್ಲಿ ವಿಧಿಸಲಾಗಿರುವ ನಿಬಂಧನೆ ಮತ್ತು ಮಾರ್ಗಸೂಚಿಗಳಯನ್ವಯ ಪರಿಶೀಲಿಸಿ, ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಕ್ರಮವಹಿಸತಕ್ಕದು. ವಿತರಿಸಲಾದ ಹಣದ ವಿವರವನ್ನು ಆಯುಕ್ತರು ಕಬ್ಬು ಅಭಿವೃದ್ಧಿ ರವರು ಜಿಲ್ಲಾದಿಕಾರಿಗಳಿಂದ ಪಡೆದು ಸರ್ಕಾರಕ್ಕೆ ವರದಿ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 871 ವೆಚ್ಚ–1/2009 ದಿನಾಂಕ: 26.06.09 ರಂದು ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1682 **ಪಿ. ಆನಂದ್ ಕುಮಾರ್**

ಪೀಠಾಧಿಕಾರಿ (ಸಕ್ಕರೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ವಿಷಯ:** 2007–08ನೇ ಸಾಲಿನಲ್ಲಿ ಕಬ್ಬು ಬೆಳೆದ ರೈತರಿಗೆ ಹಾಗೂ ಸಕ್ಕರೆ ಕಾರ್ಖಾನೆಗಳಿಗೆ ರಾಜ್ಯ ಸರ್ಕಾರದಿಂದ ವಿಶೇಷ ನೆರವು.

**ಓದಲಾಗಿದೆ:** 1] ಸರ್ಕಾರದ ಆದೇಶ ಸಂಖ್ಯೆ ಸಿಐ 19 ಎಸ್‌ಜಿಎಫ್ 2008 (ಭಾ–2), ದಿನಾಂಕ:12.03.2008.
2] ಸರ್ಕಾರದ ಆದೇಶ ಸಂಖ್ಯೆ ಸಿಐ 19 ಎಸ್‌ಜಿಎಫ್ 2008 (ಭಾ–2) ದಿನಾಂಕ 13.06.2008.
3] ಸರ್ಕಾರದ ಆದೇಶ ಸಂಖ್ಯೆ ಸಿಐ 19 ಎಸ್‌ಜಿಎಫ್ 2008 (ಭಾ–2(2)) ದಿನಾಂಕ 28.08.2008.
4] ಸರ್ಕಾರದ ಆದೇಶ ಸಂಖ್ಯೆ ಸಿಐ 19 ಎಸ್‌ಜಿಎಫ್ 2008 (ಭಾ–2(3)) ದಿನಾಂಕ 16.12.2008.
5] ಸರ್ಕಾರದ ಆದೇಶ ಸಂಖ್ಯೆ ಸಿಐ 19 ಎಸ್‌ಜಿಎಫ್ 2008 (4) ದಿನಾಂಕ 02.01.2009.
6] ಸರ್ಕಾರದ ಆದೇಶ ಸಂಖ್ಯೆ ಸಿಐ 19 ಎಸ್‌ಜಿಎಫ್ 2008 (5) ದಿನಾಂಕ 19.01.2009.
7] ಆಯುಕ್ತರು ಕಬ್ಬು ಅಭಿವೃದ್ಧಿರವರ ಪತ್ರಗಳು ದಿನಾಂಕ 03.12.2008, 16.12.2008, 27.12.2008, 12.01.2009, 13.01.2009, 09.02.2009, 11.02.2009, 13.02.2009, 16.02.2009, 18.02.2009, 19.02.2009, 03.03.2009, 04.03.2009, 11.03.2009 13.03.2009, 18.03.2009, 09.04.2009 ಮತ್ತು 20.04.2009.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿರುವ ಸರ್ಕಾರದ ಆದೇಶದಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು 2007–08ನೇ ಸಾಲಿನ ಹಂಗಾಮಿನಲ್ಲಿ ದಿನಾಂಕ:31–03–2008ರ ಅಂತ್ಯಕ್ಕೆ 12 ತಿಂಗಳು ಮೀರಿ ಪಕ್ವವಾದ ಎಲ್ಲಾ ಕಬ್ಬನ್ನು ನುರಿಸಬೇಕೆಂಬ

ಹಿನ್ನೆಲೆಯಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕೆಲವು ವಿನಾಯಿತಿ ಮತ್ತು ಸಹಾಯಧನ ಸೌಲಭ್ಯಗಳನ್ನು ನೀಡಲಾಗುವುದೆಂದು ಆದೇಶಿಸಲಾಗಿದೆ.

ಮೇಲೆ ಓದಲಾದ (2)ರಲ್ಲಿರುವ ಆದೇಶದಲ್ಲಿ 2.00 ಕೋಟಿ ರೂ.ಗಳನ್ನು ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಗೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (3)ರಲ್ಲಿರುವ ಆದೇಶದಲ್ಲಿ 100.59 ಲಕ್ಷ ರೂ.ಗಳನ್ನು ಮೈಸೂರು ಪೇಪರ್ ಮಿಲ್ಸ್ ಲಿ., ರವರಿಗೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (4)ರಲ್ಲಿರುವ ಆದೇಶದಲ್ಲಿ 6,.64,76,652/- ರೂ.ಗಳನ್ನು ನಂದಿ ಸ.ಸ.ಕಾರ್ಖಾನೆ ಮತ್ತು ದೂದ್ ಗಂಗಾ ಸ.ಸ.ಕಾ, ಈ ಎರಡು ಸಕ್ಕರೆ ಕಾರ್ಖಾನೆಗಳಿಗೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (5)ರಲ್ಲಿರುವ ಆದೇಶದಲ್ಲಿ ವಿಸ್ತರಿಸಿದ ಅವಧಿಯಲ್ಲಿ ನುರಿಸಿದ ಕಬ್ಬಿಗೆ ರೂ. 100/- ಗಳ ಸಹಾಯಧನ ಬಾಬ್ತು ಶೇ. 50ರಷ್ಟು 11,15,00,000/- ರೂ.ಗಳನ್ನು ಸಾಗಾಣಿಕೆ ಸಹಾಯಧನ 7,25,00,000/- ರೂ.ಗಳನ್ನು ಒಟ್ಟು ಸೇರಿ 18,40,00,000/- ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (6) ರಲ್ಲಿರುವ ಆದೇಶದಲ್ಲಿ 100/- ರೂ.ಗಳ ಸಹಾಯಧನ ಬಾಬ್ತು 4,90,05,135/- ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (7) ರಲ್ಲಿರುವ ಆಯುಕ್ತರು ಕಬ್ಬು ಅಭಿವೃದ್ದಿರವರ ಪತ್ರಗಳಲ್ಲಿ ರಾಜ್ಯದ 22 ಸಕ್ಕರೆ ಕಾರ್ಖಾನೆಗಳು 2007-08ನೇ ಸಾಲಿನಲ್ಲಿ ವಿಸ್ತರಿಸಿದ ಅವಧಿಯಲ್ಲಿ ಕಬ್ಬು ನುರಿಸಿದ್ದು, ಮತ್ತು 30 ಕಿ.ಮೀ ಗೆ ಮೀರಿದ ದೂರದಿಂದ ಕಬ್ಬು ಸಾಗಾಣಿಕೆ ಮಾಡಿಕೊಂಡಿದ್ದು ಹಾಗೂ ಸಕ್ಕರೆಯನ್ನು ರಫ್ತು ಮಾಡಲಾಗಿದ್ದು ಈ ಸಂಬಂಧ ದಿನಾಂಕ: 12-03-2008ರ ಸರ್ಕಾರದ ಆದೇಶದಂತೆ 21,51,93,493/- ರೂಗಳ ಸಹಾಯಧನ 3,63,34,794/-ರೂಗಳ ಸಾಗಾಣಿಕೆ ಸಹಾಯಧನ ಮತ್ತು 29,00,15,110/-ರೂಗಳ ರಫ್ತು ಸಹಾಯಧನವನ್ನು ಕಾರ್ಖಾನೆಗಳಿಗೆ ಬಿಡುಗಡೆ ಮಾಡಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆಗೆ ಶಿಫಾರಸ್ಸು ಮಾಡಿದ್ದಾರೆ.

ಆಯುಕ್ತರು ಕಬ್ಬು ಅಭಿವೃದ್ಧಿರವರ ಪ್ರಸ್ತಾವನೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಸಿಐ 19 ಎಸ್‌ಜಿಎಫ್ 2008 (6), ಬೆಂಗಳೂರು, ದಿನಾಂಕ: 7ನೇ ಜುಲೈ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2007-08ನೇ ಸಾಲಿನಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಕಾಣಿಸಿರುವ ರಾಜ್ಯದ ಸಕ್ಕರೆ ಕಾರ್ಖಾನೆಗಳು 30 ಕಿ.ಮೀ. ಹೊರಗಿನ ದೂರದಿಂದ ಸಾಗಾಣಿಕೆ ಮಾಡಿಕೊಂಡ ಕಬ್ಬಿಗೆ ಪ್ರತಿ ಟನ್‌ಗೆ ಪ್ರತಿ ಕಿ.ಮೀ.ಗೆ ರೂ. 2/-ರಂತೆ ಸಾಗಾಣಿಕೆ ಸಹಾಯಧನ ರೂ. 3,63,34,794/-ಗಳನ್ನು ಹಾಗೂ ಮೇಲೆ ಓದಲಾದ (5)ರ ದಿ. 02.01.2009ರ ಆದೇಶದಲ್ಲಿ ದಿ. ಗೋದಾವರಿ ಬಯೋ ರಿಫೈನರೀಸ್ ಲಿ., ರವರಿಗೆ 6,42,914/- ರೂ.ಗಳ ಸಾಗಾಣಿಕೆ ಸಹಾಯಧನ ಕಡಿಮೆ ಬಿಡುಗಡೆಗೊಳಿಸಲಾಗಿದ್ದು, ಈ ಬಾಕಿ ಮೊತ್ತವನ್ನು ಈಗ ಬಿಡುಗಡೆಗೊಳಿಸಲು ಅನುಮೋದನೆ ದೊರಕಿದ್ದು, ಈ ಹಣವು ಸೇರಿ ಒಟ್ಟು 3,69,77,708/- ರೂ.ಗಳನ್ನು (ಮೂರು ಕೋಟಿ, ಅರವತ್ತೊಂಬತ್ತು ಲಕ್ಷ, ಎಪ್ಪತ್ತೇಳು ಸಾವಿರದ ಏಳುನೂರ ಎಂಟು ರೂ.ಗಳು ಮಾತ್ರ) ಸಾಗಾಣಿಕೆ ಸಹಾಯಧನವಾಗಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಕಾಣಿಸಿರುವ 15 ಸಕ್ಕರೆ ಕಾರ್ಖಾನೆಗಳಿಗೆ ಹಾಗೂ ರೈತರಿಗೆ ನೀಡುವ ಸಲುವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2009-10ನೇ ಸಾಲಿನ ಆಯವ್ಯಯದಲ್ಲಿ ಈ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ **"2852-08-201-0-07 (ಯೋಜನೆ) "** ಸಹಾಯಧನ ಇದರಡಿಯಲ್ಲಿ 34.50 ಕೋಟಿ ರೂಗಳನ್ನು ಒದಗಿಸಲಾಗಿದ್ದು, ಈ ಹಣದಲ್ಲಿ ಮೇಲಿನಂತೆ 3,69,77,708/- ರೂ.ಗಳನ್ನು ಕಾರ್ಖಾನೆಗಳಿಗೆ/ರೈತರಿಗೆ ಸಾಗಾಣಿಕೆ ಸಹಾಯಧನವಾಗಿ ಬಿಡುಗಡೆಗೆ ಮಂಜೂರು ಮಾಡಲಾಗಿದೆ.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬಿಡುಗಡೆ ಮಾಡಲಾದ ಈ ಹಣವನ್ನು ಸರ್ಕಾರದ ಆದೇಶ ದಿನಾಂಕ 12-03-2008ರಲ್ಲಿ ವಿಧಿಸಲಾಗಿರುವ ನಿಬಂಧನೆ ಮತ್ತು ಮಾರ್ಗಸೂಚಿಗಳನ್ವಯ ಪರಿಶೀಲಿಸಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ ಸಂಬಂಧಿಸಿದ ಕಾರ್ಖಾನೆಗಳಿಗೆ/ರೈತರಿಗೆ ಬಿಡುಗಡೆ ಮಾಡಲು ಕ್ರಮ ವಹಿಸತಕ್ಕದ್ದು. ಕಾರ್ಖಾನೆಗಳು ರೈತರಿಗೆ ಕಬ್ಬು ಖರೀದಿ ಬಾಕಿ ಉಳಿಸಿಕೊಂಡಿದ್ದಲ್ಲಿ, ರೈತರಿಗೆ ಆದ್ಯತೆ ಮೇರೆಗೆ ಬಿಡುಗಡೆ ಮಾಡಲು ಕ್ರಮವಹಿಸತಕ್ಕದ್ದು, ವಿತರಿಸಲಾದ ಹಣದ ವಿವರವನ್ನು ಆಯುಕ್ತರು ಕಬ್ಬು ಅಭಿವೃದ್ದಿರವರು ಜಿಲ್ಲಾಧಿಕಾರಿಗಳಿಂದ ಪಡೆದು ಸರ್ಕಾರಕ್ಕೆ ವರದಿ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 871 ವೆಚ್ಚ–1/2009, ದಿನಾಂಕ:26–06–2009 ರಲ್ಲಿ ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಪಿ. ಆನಂದ್‌ಕುಮಾರ್**

ಪೀಠಾಧಿಕಾರಿ(ಸಕ್ಕರೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಸರ್ಕಾರದ ಆದೇಶ ಸಂಖ್ಯೆ ಸಿಐ 19 ಎಸ್‌ಜಿಎಫ್ 2008 (6) ದಿನಾಂಕ 07.07.2009ಕ್ಕೆ ಸಂಬಂಧಿಸಿದ ಅನುಬಂಧ**

2007–08ನೇ ಸಾಲಿನಲ್ಲಿ ವಿಸ್ತರಿಸಿದ ಅವಧಿಯಲ್ಲಿ 30 ಕಿ.ಮೀ.ಗಿಂತ ಮೀರಿದ ದೂರದಿಂದ ಸಾಗಾಣಿಕೆ ಮಾಡಿಕೊಂಡಿದ್ದ ಕಬ್ಬಿಗೆ ಸಾಗಾಣಿಕೆ ಸಹಾಯಧನ.

(ರೂ.ಗಳಲ್ಲಿ)

| ಕ್ರ ಸಂ. | ಕಾರ್ಖಾನೆ ಹೆಸರು | ಸಾಗಾಣಿಕೆ ಸಹಾಯಧನ | ಜಿಲ್ಲಾಧಿಕಾರಿ/ಜಿಲ್ಲೆ | ಯಾರಿಗೆ ಪಾವತಿ (ಕಾರ್ಖಾನೆಗೆ/ರೈತರಿಗೆ) |
|---|---|---|---|---|
| 1 | ಅಂಬಿಕಾ ಶುಗರ್ಸ್ (ಲಿ) (ಶ್ರೀರಾಮ ಸ.ಸ.ಕಾ.ಯನ್ನು ಗುತ್ತಿಗೆ ಪಡೆದುಕೊಂಡಿದ್ದಾರೆ.) | 1,84,100 | ಜಿಲ್ಲಾಧಿಕಾರಿ, ಮೈಸುರು ಜಿಲ್ಲೆ | ಕಾರ್ಖಾನೆಗೆ |
| 2 | ವೆಂಕಟೇಶ್ವರ ಪವರ್ ಪ್ರಾಜೆಕ್ಟ್ | 41,05,085 | ಜಿಲ್ಲಾಧಿಕಾರಿ, ಬೆಳಗಾಂ ಜಿಲ್ಲೆ | ಕಾರ್ಖಾನೆಗೆ |
| 3 | ಉಗಾರ್ ಶುಗರ್ಸ್ (ಲಿ) | 63,74,162 | ಜಿಲ್ಲಾಧಿಕಾರಿ, ಬೆಳಗಾಂ ಜಿಲ್ಲೆ | ಕಾರ್ಖಾನೆಗೆ |
| 4 | ನಿರಾಣಿ ಶುಗರ್ಸ್ (ಲಿ) | 11,24,960 | ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ | ಕಾರ್ಖಾನೆಗೆ |
| 5 | ಜಮಖಂಡಿ ಶುಗರ್ಸ್ (ಲಿ) | 25,68,589 | ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ | ಕಾರ್ಖಾನೆಗೆ |
| 6 | ಅಥಣಿ ಫಾರ್ಮರ್ಸ್ ಶುಗರ್ಸ್ (ಲಿ) | 24,17,481<br>19,08,434 | ಜಿಲ್ಲಾಧಿಕಾರಿ, ಬೆಳಗಾಂ ಜಿಲ್ಲೆ | ರೈತರಿಗೆ<br>ಕಾರ್ಖಾನೆಗೆ |
| 7 | ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ | 20,420<br>9,41,212 | ಜಿಲ್ಲಾಧಿಕಾರಿ, ಬೆಳಗಾಂ ಜಿಲ್ಲೆ | ರೈತರಿಗೆ<br>ಕಾರ್ಖಾನೆಗೆ |
| 8 | ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ (ಜಿ.ಎಂ.ಆರ್. ಶುಗರ್ಸ್ ಅಂಡ್ ಎನರ್ಜಿ ರವರು ಗುತ್ತಿಗೆ ಪಡೆದಿದ್ದಾರೆ) | 15,08,568 | ಜಿಲ್ಲಾಧಿಕಾರಿ, ಹಾವೇರಿ ಜಿಲ್ಲೆ | ರೈತರಿಗೆ |
| 9 | ಜೆಮ್ ಶುಗರ್ಸ್ (ಲಿ) | 55,18,974 | ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ | ಕಾರ್ಖಾನೆಗೆ |
| 10 | ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ | 12,02,455<br>9,84,982 | ಜಿಲ್ಲಾಧಿಕಾರಿ, ಬೆಳಗಾಂ ಜಿಲ್ಲೆ | ರೈತರಿಗೆ<br>ಕಾರ್ಖಾನೆಗೆ |
| 11 | ಬನ್ನಾರಿ ಅಮ್ಮನ್ ಶುಗರ್ಸ್ | 2,72,854 | ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ | ಕಾರ್ಖಾನೆಗೆ |
| 12 | ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ | 60,286<br>1,22,915 | ಜಿಲ್ಲಾಧಿಕಾರಿ, ಬೆಳಗಾಂ ಜಿಲ್ಲೆ | ರೈತರಿಗೆ<br>ಕಾರ್ಖಾನೆಗೆ |
| 13 | ಪ್ರಭುಲಿಂಗೇಶ್ವರ ಶುಗರ್ಸ್ | 22,71,236<br>40,18,319 | ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ | ರೈತರಿಗೆ<br>ಕಾರ್ಖಾನೆಗೆ |
| 14 | ವಿಶ್ವನಾಥ ಶುಗರ್ಸ್ (ಲಿ) | 84,700<br>6,45,062 | ಜಿಲ್ಲಾಧಿಕಾರಿ, ಬೆಳಗಾಂ ಜಿಲ್ಲೆ | ರೈತರಿಗೆ<br>ಕಾರ್ಖಾನೆಗೆ |
| 15 | ದಿನಾಂಕ 02.01.2009ರ ಆದೇಶದಲ್ಲಿ ದಿ. ಗೋದಾವರಿ ಬಯೋ ರಿಫೈನರೀಸ್ ಲಿ., ಈ ಕಾರ್ಖಾನೆಗೆ ಬಿಡುಗಡೆಗೆ ಬಾಕಿ ಉಳಿದಿದ್ದ ಹಣ | 6,42,914 | ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ | ಕಾರ್ಖಾನೆಗೆ |
| | ಒಟ್ಟು | **3,69,77,708** | | |

**ಪಿ. ಆನಂದ್‌ಕುಮಾರ್**

ಪಿ.ಆರ್. 1683 ಪೀಠಾಧಿಕಾರಿ(ಸಕ್ಕರೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**I -F6 -B/B**

ವಿಷಯ: ಶ್ರೀ ಜೆ. ಶಿವಲಿಂಗಯ್ಯ, ರೇಷ್ಮೆ ಪ್ರದರ್ಶಕರು ಇವರ ಮೇಲ್ಮನವಿಯ ಬಗ್ಗೆ.

ಓದಲಾಗಿದೆ:
1. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂಖ್ಯೆ:ಸಿಬ್ಬಂದಿ/ಶಿಸ್ತು/ಡಿಸಿಬಿ/4ಬಿ/94-95, ದಿನಾಂಕ: 8-1-1999.
2. ಶ್ರೀ ಜೆ. ಶಿವಲಿಂಗಯ್ಯ, ರೇಷ್ಮೆ ಪ್ರದರ್ಶಕರು, ಮೇಲ್ವಿಚಾರಣಾ ದಳ, ಬೆಂಗಳೂರು ಇವರ ಮೇಲ್ಮನವಿ ಪತ್ರ ದಿನಾಂಕ: 31-7-2008.
3. ಈ ಇಲಾಖೆಯ ಇದೇ ಸಂಖ್ಯೆಯ ದಿನಾಂಕ: 24-10-2008ರ ಪತ್ರ.
4. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ಸಿಬ್ಬಂದಿ/3ಎ/ಶಿಸ್ತು/17/2008-09, ದಿನಾಂಕ: 21-1-2009.

**ಪ್ರಸ್ತಾವನೆ:**

ಶ್ರೀ ಜೆ. ಶಿವಲಿಂಗಯ್ಯ, ರೇಷ್ಮೆ ಪ್ರದರ್ಶಕರು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ, ಮೇಲೆ ಓದಲಾದ ಕ್ರಮಸಂಖ್ಯೆ(1)ರ ಆದೇಶದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಇವರು ಸರ್ಕಾರಕ್ಕೆ ಬರಬೇಕಾದ ಬಾಕಿ ಹಣ ರೂ. 93,328.30 ಗಳನ್ನು ಇವರ ಮಾಸಿಕ ವೇತನದಿಂದ ರೂ. 2500/- ರಂತೆ ಜನವರಿ-1999 ರಿಂದ ಪ್ರಾರಂಭಗೊಂಡು ಪೂರ್ಣ ಹಣ ಸರ್ಕಾರಕ್ಕೆ ಸಂದಾಯವಾಗುವ ತನಕ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಲು ಹಾಗೂ ನೌಕರರ 1 ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರುವಂತೆ ತಡೆಹಿಡಿಯಲು ಆದೇಶ ಹೊರಡಿಸಿರುತ್ತಾರೆ. ಸದರಿ ದಂಡನೆ ಆದೇಶದ ವಿರುದ್ಧ ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ದಿನಾಂಕ: 31-7-2008ರ ಪತ್ರದಲ್ಲಿ ದಂಡಿತ ನೌಕರರು ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿ, ತಾನು ಕೆ.ಎಂ. ದೊಡ್ಡಿ, ತಾಂತ್ರಿಕ ಸೇವಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ರೇಷ್ಮೆ ಚಾಕಾಣಿಕೆ ಹುಳುಗಳನ್ನು ಹೆಚ್ಚು ಹೆಚ್ಚಾಗಿ ರೈತಾಪಿ ವರ್ಗದವರಿಗೆ ಪ್ರಸರಿಸಲು ಬಿತ್ತನೆಕೋಠಿಗಳಿಂದ ಮೊಟ್ಟೆಗಳನ್ನು ಪಡೆದು ವಿತರಿಸಿರುವುದಾಗಿ ಅವುಗಳಲ್ಲಿ ಹೆಚ್ಚಿನವು ಚಾಕಿಯಾಗದೇ ಬೆಳೆ ನಷ್ಟ ಉಂಟಾಗಿದ್ದು, ರೈತರಿಗೂ ನಷ್ಟ ಉಂಟಾಗಿರುವುದರಿಂದ ಮೊಟ್ಟೆಗಳ ಹಣವನ್ನು ನೀಡಿರುವುದಿಲ್ಲ. ಮೊಟ್ಟೆಗಳನ್ನು ಸ್ವೀಕೃತಿ ನೀಡಿ ತಾನು ಪಡೆದಿದ್ದರಿಂದ ಇಲಾಖೆಯು ಹಣವನ್ನು ತಾನು ದುರುಪಯೋಗ ಪಡಿಸಿಕೊಂಡಿರುವನೆಂದು ಆರೋಪಿಸಿ, ಇಲಾಖಾ ವಿಚಾರಣೆ ನಡೆಸಿ ಮಾಸಿಕ ರೂ. 2500/-ಗಳನ್ನು ವಸೂಲು ಮಾಡಲು ಹಾಗೂ ಒಂದು ವಾರ್ಷಿಕ ವೇತನ ಮುಂಬಡ್ತಿಯನ್ನು ಸಂಚಿತ ಪರಿಣಾಮ ಬೀರುವಂತೆ ತಡೆಹಿಡಿಯಲು ದಂಡನೆ ಆದೇಶ ವಿಧಿಸಿರುತ್ತದೆ. ಇದರಿಂದ ತನಗೆ ನಷ್ಟ ಉಂಟಾಗಿದ್ದು, ಅನ್ಯಾಯವಾಗಿರುತ್ತದೆ. ಇಲಾಖೆಯು ಇಂತಹುದೇ ಪ್ರಕರಣಗಳಲ್ಲಿ ಕೆಲವರಿಗೆ ದಂಡನೆ ವಿಧಿಸಿರುವುದಿಲ್ಲ. ಆದರೆ ತನಗೆ ದಂಡನೆ ವಿಧಿಸಿರುತ್ತದೆ. ಮೊಟ್ಟೆಗಳನ್ನು ತಾನು ರೈತರಿಗೆ ನೀಡಿದ್ದು, ಅವರಿಂದ ಹಣ ಬಂದಿರುವುದಿಲ್ಲ. ಆದಾಗ್ಯೂ ವಸೂಲಾತಿಯನ್ನು ತನ್ನಿಂದ ಮಾಡಲಾಗಿದೆ. ತನಗೆ ವಿಧಿಸಿರುವ ದಂಡನೆಯು ತೀರಾ ಭಾರಿಯಾದ್ದರಿಂದ ತನ್ನ ವೇತನದಿಂದ ಒಂದು ವೇತನ ಮುಂಬಡ್ತಿಯನ್ನು ಸಂಚಿತ ಪರಿಣಾಮ ಬೀರುವಂತೆ ಕಡಿತಗೊಳಿಸಿರುವುದನ್ನು ಮಾರ್ಪಡಿಸಿ ವೇತನ ಮುಂಬಡ್ತಿ ಕಡಿತವನ್ನು ಸಂಚಿತ ರಹಿತ ಪರಿಣಾಮ ಬೀರುವಂತೆ ಮಾರ್ಪಡಿಸುವಂತೆ ಕೋರಿರುತ್ತಾರೆ.

ನೌಕರರು ಸಲ್ಲಿಸಿದ್ದ ಮೇಲ್ಮನವಿಗೆ ಕುರಿತಂತೆ ಪರಿಶೀಲಿಸಿ, ಮನವಿಯಲ್ಲಿ ಹೇಳಿರುವ ಅಂಶಕ್ಕೆ ಕುರಿತಂತೆ ಇಲಾಖೆಯ ಅಭಿಪ್ರಾಯವನ್ನು ಒದಗಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಇಲಾಖೆಯನ್ನು ಕೋರಲಾಯಿತು. ಈ ನೌಕರರ ಮೇಲ್ಮನವಿಗೆ ಕುರಿತಂತೆ ಇಲಾಖೆಯು ಇವರ ಮೇಲಿನ ದೋಷಾರೋಪಣೆಗಳ ಕುರಿತಂತೆ ವಿವರಿಸಿ, ನೌಕರರ ವಿರುದ್ಧದ ಎಲ್ಲಾ 7 ಆರೋಪಗಳು ಸಾಬೀತಾಗಿದ್ದ ಹಿನ್ನಲೆಯಲ್ಲಿ ದಂಡನೆಯನ್ನು ವಿಧಿಸಿರುವುದಾಗಿ ನೌಕರರು ಇಲಾಖೆಯ ವಿವಿಧ 7 ಬಿತ್ತನೆಕೋಠಿಗಳಲ್ಲಿ ಒಟ್ಟು ರೂ. 93328/- ಗಳಷ್ಟು ಮೊತ್ತದ ರೇಷ್ಮೆ ಮೊಟ್ಟೆಯ ಹಣವನ್ನು ಸಕಾಲದಲ್ಲಿ ಸರ್ಕಾರಕ್ಕೆ ಸಂದಾಯಿಸದೇ ದುರುಪಯೋಗ ಪಡಿಸಿಕೊಂಡು ದುರ್ನಡತೆ ಎಸಗಿ ನಿಯಮ ಉಲ್ಲಂಘಿಸಿರುವುದರಿಂದ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಂಡಿದ್ದು ಸಮರ್ಪಕವಾಗಿರುವುದರಿಂದ ಕೈಗೊಂಡಿರುವ ಕ್ರಮವನ್ನು ಸ್ಥಿರೀಕರಿಸುವಂತೆ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತದೆ.

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು ನಿಯಮ 20 ರಲ್ಲಿ ಈ ನೌಕರರಿಗೆ ದಂಡನೆ ವಿಧಿಸಿದ ಮೂರು ತಿಂಗಳೊಳಗಾಗಿ ಸದರಿ ದಂಡನಾ ಆದೇಶದ ವಿರುದ್ಧ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು 3 ತಿಂಗಳ ಕಾಲಾವಕಾಶವಿದ್ದು, ಅದರಂತೆ ದಂಡಿತ ನೌಕರರು 3 ತಿಂಗಳೊಳಗಾಗಿ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದು ಕಂಡುಬರುತ್ತಿಲ್ಲ. ನೌಕರರು ಜೂನ್-1999 ರಲ್ಲಿ ಮೇಲ್ಮನವಿ ಸಲ್ಲಿಸಿರುವುದಾಗಿ ಹೇಳಿದ್ದು, ಈ ಬಗ್ಗೆ ಯಾವುದೇ ದಾಖಲಾತಿಗಳು ಲಭ್ಯವಿರುವುದಿಲ್ಲ. ಹಾಗೂ ಮೇಲ್ಮನವಿ ಸಲ್ಲಿಸಿರುವುದಕ್ಕೆ ಯಾವುದೇ ದಾಖಲಾತಿಗಳನ್ನು ಸಹ ಒದಗಿಸಿರುವುದಿಲ್ಲ. ಇವರು ಜೂನ್-1999 ರಲ್ಲಿಯೇ ಮೇಲ್ಮನವಿ ಸಲ್ಲಿಸಿದ್ದಾಗಲೂ ಮೇಲ್ಮನವಿಗೆ ಕಾಲಮಿತಿ ಮೀರಿರುತ್ತದೆ. ವಾಸ್ತವವಾಗಿ ದಂಡನೆ ವಿಧಿಸಿದ

3 ತಿಂಗಳೊಳಗಾಗಿ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಬೇಕಾಗಿದ್ದು, ನಿಯಮಾನುಸಾರ ನಿಗದಿತ ಅವಧಿಯೊಳಗೆ ಮೇಲ್ಮನವಿ ಸಲ್ಲಿಸದೇ ಇರುವುದರಿಂದ ಇವರು ಸಲ್ಲಿಸಿರುವ ಮೇಲ್ಮನವಿಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲವಾದ್ದರಿಂದ ಇವರ ಮೇಲ್ಮನವಿಯನ್ನು ತಿರಸ್ಕರಿಸಲು ತೀರ್ಮಾನಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 116 ರೇಇವಿ 2008, ಬೆಂಗಳೂರು, ದಿನಾಂಕ: 15ನೇ ಜೂನ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ದಂಡಿತ ನೌಕರರಾದ ಶ್ರೀ ಜೆ. ಶಿವಲಿಂಗಯ್ಯ, ರೇಷ್ಮೆ ಪ್ರದರ್ಶಕರು ಇವರು ನಿಗದಿತ ಅವಧಿಯಲ್ಲಿ ಮೇಲ್ಮನವಿ ಸಲ್ಲಿಸದೇ ವಿಳಂಬವಾಗಿ ಸಲ್ಲಿಸಿರುವ ಮೇಲ್ಮನವಿಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 25 ರನ್ವಯ ತಿರಸ್ಕರಿಸಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಮತ್ತು ರೇಷ್ಮೆ ನಿರ್ದೇಶಕರು ದಂಡನೆ ವಿಧಿಸಿ ಹೊರಡಿಸಿರುವ ಆದೇಶ ಸಂಖ್ಯೆ: ಸಿಬ್ಬಂದಿ/ಶಿಸ್ತು/ಡಿಸಿಬಿ/4ಬಿ/94–95, ದಿನಾಂಕ: 8–1–1999ರ ಆದೇಶವನ್ನು ಸ್ಥಿರೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1580

**ಭಾರತಿ ಆರ್. ನಾಯಕ್**

ಪೀಠಾಧಿಕಾರಿ(ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

**ವಿಷಯ:** ಶ್ರೀ ಎಲ್.ಎಂ. ಮಂಜುನಾಥ್, ರೇಷ್ಮೆ ಪ್ರವರ್ತಕರು ಇವರ ಪರೀಕ್ಷಾರ್ಥ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ಓದಲಾಗಿದೆ:** 1. ಅಧಿಕೃತ ಜ್ಞಾಪನ ಸಂಖ್ಯೆ: ಸಿಬ್ಬಂದಿ1(5)/ಪಪೂಅ/ವಿಸ್ತರಣೆ/88/06–07, ದಿನಾಂಕ: 26–3–2007 ಮತ್ತು 26–2–2009.

2. ಸರ್ಕಾರದ ಆದೇಶ ಸಂಖ್ಯೆ: ವಾಕೈ 57 ರೇಇವಿ 2007, ದಿನಾಂಕ: 21–5–2007

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಸಂಖ್ಯೆ(1)ರ ದಿನಾಂಕ: 26–3–2007 ರ ಪತ್ರದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಇವರು ಶ್ರೀ ಎಲ್.ಎಂ. ಮಂಜುನಾಥ್, ರೇಷ್ಮೆ ಪ್ರವರ್ತಕರು, ಇವರ ಪರಿವೀಕ್ಷಣಾ ಅವಧಿಯನ್ನು ದಿ: 19–6–2007 ರಿಂದ 18–6–2008ರವರೆಗೆ ವಿಸ್ತರಿಸಿ ಆದೇಶಿಸುವಂತೆ ಕೋರಿದ್ದರ ಮೇರೆಗೆ ಮೇಲೆ ಓದಲಾದ ಕ್ರಮಸಂಖ್ಯೆ (2)ರ ಆದೇಶದಲ್ಲಿ ಶ್ರೀ ಎಲ್.ಎಂ. ಮಂಜುನಾಥ್, ರೇಷ್ಮೆ ಪ್ರವರ್ತಕರು, ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ, ಕೆಂಪನಹಳ್ಳಿ ಇವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ: 19–6–2007 ರಿಂದ 18–6–2008 ರವರೆಗೆ 1977 ರ ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳ ನಿಯಮ 4(1)(i) ರನ್ವಯ ವಿಸ್ತರಿಸಿ ಆದೇಶಿಸಲಾಗಿತ್ತು. ಮೇಲೆ ಓದಲಾದ ಕ್ರಮಸಂಖ್ಯೆ (1)ರ ದಿನಾಂಕ: 26–2–2009ರ ಪತ್ರದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ನೌಕರರು ತಮ್ಮ ಹುದ್ದೆಗೆ ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳನ್ನು ದಿ: 2–8–2007 ರಂದು ಪಾಸು ಮಾಡಿಕೊಂಡಿರುವುದರಿಂದ ದಿನಾಂಕ:2–8–2007 ರಿಂದ ನೌಕರರ ಪರಿವೀಕ್ಷಣಾ ಅವಧಿಯನ್ನು ಘೋಷಿಸಬೇಕಾಗಿರುತ್ತದೆ. ಎಂದು ತಿಳಿಸಿ ಉಲ್ಲೇಖ(2)ರ ಆದೇಶದಲ್ಲಿ ಈಗಾಗಲೇ ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸಿ ಆದೇಶಿಸಿರುವುದನ್ನು ಮಾರ್ಪಡಿಸಿ, ದಿನಾಂಕ: 18–6–2008ರ ಬದಲಾಗಿ 2–8–2007ರವರೆಗೆ ವಿಸ್ತರಿಸಿ ಪರಿಷ್ಕೃತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಅವರು ಕೋರಿರುವಂತೆ ನೌಕರರ ಪರಿವೀಕ್ಷಣಾ ಅವಧಿಯನ್ನು ಅವರು ಇಲಾಖಾ ಪರೀಕ್ಷೆ ಪಾಸು ಮಾಡಿಕೊಂಡ ದಿನಾಂಕದವರೆಗೆ ವಿಸ್ತರಿಸಲು ತೀರ್ಮಾನಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಾಕೈ 77 ರೇಇವಿ 2009, ಬೆಂಗಳೂರು, ದಿನಾಂಕ: 12ನೇ ಜೂನ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆದೇಶದಲ್ಲಿ ಶ್ರೀ ಎಲ್.ಎಂ. ಮಂಜುನಾಥ್, ರೇಷ್ಮೆ ಪ್ರವರ್ತಕರು, ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ, ಕೆಂಪನಹಳ್ಳಿ ಇವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ: 19–6–2007 ರಿಂದ 18–6–2008ರವರೆಗೆ ವಿಸ್ತರಿಸಿ, ಆದೇಶಿಸಿರುವುದನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977 ರ ನಿಯಮ 4(2) ರನ್ವಯ ದಿನಾಂಕ: 19–6–2007 ರಿಂದ 2–8–2007 ರವರೆಗೆ ಮಾರ್ಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1581

**ಭಾರತಿ ಆರ್. ನಾಯಕ್**

ಪೀಠಾಧಿಕಾರಿ(ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ವಿಷಯ: ಆದೇಶ ಸಂಖ್ಯೆ: ಕಂಇ/34/ಎಲ್‌ಜೆಎಂ/71, ದಿ: 5-1-1972 ರಲ್ಲಿ ಕಂದಾಯ ಇಲಾಖೆಯಿಂದ ರೇಷ್ಮೆ ಇಲಾಖೆಗೆ ವರ್ಗಾಯಿಸಿದ್ದ 206.25 ಎಕರೆ ಜಮೀನಿನಲ್ಲಿ 166.25 ಎಕರೆ ಜಮೀನನ್ನು ಕಂದಾಯ ಇಲಾಖೆಗೆ ವಾಪಸ್ಸು ನೀಡುವ ಬಗ್ಗೆ.

ಓದಲಾಗಿದೆ: 1. ಕಂದಾಯ ಇಲಾಖೆಯ ಕಡತ ಸಂಖ್ಯೆ: ಆರ್‌ಡಿ 39 ಎಲ್‌ಜಿಎಂ 2007.
2. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರಿಗೆ ಬರೆದ ಈ ಇಲಾಖೆಯ ಇದೇ ಸಂಖ್ಯೆಯ ದಿನಾಂಕ:8-4-209ರ ಪತ್ರ.
3. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಎಸ್‌ಪಿಎಸ್‌ಎಫ್/ಧರ್ಮಾ/ ಜಮೀನು /31/2009-10, ದಿನಾಂಕ: 11-5-2009.

**ಪ್ರಸ್ತಾವನೆ:**

ಕುಪ್ಪೆಕೊಳಘಟ್ಟ ಗ್ರಾಮದಲ್ಲಿ ವಾರ್‌ಫಾರ್ ರೇಂಜ್‌ಗಾಗಿ ರಕ್ಷಣಾ ಇಲಾಖೆಗೆ ಜಮೀನು ಕಳೆದುಕೊಂಡವರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ನ್ಯಾಯಾಲಯದ ಆದೇಶದನ್ವಯ ಜಮೀನು ಕಳೆದುಕೊಂಡ 21 ಮಂದಿಗೆ ತಲಾ 3 ಎಕರೆಯಂತೆ ಜಮೀನು ಮಂಜೂರು ಮಾಡುವ ವಿಷಯವನ್ನು ಕಂದಾಯ ಇಲಾಖೆಯು ಪರಿಶೀಲಿಸಿ ಅದರಂತೆ ಜಮೀನು ಮಂಜೂರು ಮಾಡಲು ತೀರ್ಮಾನಿಸಿರುವುದಾಗಿ, ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 34 ಎಲ್‌ಜೆಎಂ 71, ದಿ: 5-1-72 ರಲ್ಲಿ ಕಂದಾಯ ಇಲಾಖೆಯ 206.25 ಎಕರೆ ಜಮೀನನ್ನು ರೇಷ್ಮೆ ಇಲಾಖೆಗೆ ವರ್ಗಾಯಿಸಿದ್ದು, ಸದರಿ ಜಮೀನನ್ನು ರೇಷ್ಮೆ ಇಲಾಖೆಯು ಬಳಸದೇ ಇರುವುದರಿಂದ 141.25 ಎಕರೆ ಜಮೀನನ್ನು ರೇಷ್ಮೆ ಇಲಾಖೆಯಿಂದ ಹಿಂದಕ್ಕೆ ಪಡೆದು ಜಮೀನು ಕಳೆದುಕೊಂಡವರಿಗೆ ಮಂಜೂರು ಮಾಡಬೇಕಾಗಿದೆಯಾದ್ದರಿಂದ ರೇಷ್ಮೆ ಇಲಾಖೆಗೆ ಮಂಜೂರು ಮಾಡಲಾಗಿದ್ದ ಜಮೀನಿನಲ್ಲಿ141.25 ಎಕರೆ ಜಮೀನನ್ನು ಕಂದಾಯ ಇಲಾಖೆಗೆ ವಾಪಸ್ಸು ನೀಡುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಕಡತದಲ್ಲಿ ಕಂದಾಯ ಇಲಾಖೆಯು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯನ್ನು ಕೋರಿರುತ್ತದೆ. ಸದರಿ ವಿಷಯವನ್ನು ಪರಿಶೀಲಿಸಿ, ಕಂದಾಯ ಇಲಾಖೆಯು ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸುವುದಕ್ಕಾಗಿ ರೇಷ್ಮೆ ಇಲಾಖೆಗೆ ನೀಡಿದ್ದ ಜಮೀನಿನಲ್ಲಿ ಬಳಕೆಯಾಗದೇ ಉಳಿದಿರುವ !41.25 ಎಕರೆ ಜಮೀನನ್ನು ಹಿಂದಕ್ಕೆ ಪಡೆಯಲು ತೀರ್ಮಾನಿಸಿ ಜಮೀನನ್ನು ಕಂದಾಯ ಇಲಾಖೆಗೆ ವಾಪಸ್ಸು ನೀಡುವಂತೆ ಕೋರಿರುವುದರಿಂದ ಕಂದಾಯ ಇಲಾಖೆಯು ಕೋರಿರುವಂತೆ ರೇಷ್ಮೆ ಇಲಾಖೆಯ ಜಮೀನನ್ನು ಕಂದಾಯ ಇಲಾಖೆಗೆ ನೀಡುವುದಕ್ಕೆ ಕುರಿತಂತೆ ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಪತ್ರದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರ ಅಭಿಪ್ರಾಯ/ಸಹಮತಿ ಕೋರಲಾಯಿತು. ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ ಕುಪ್ಪೆಕೊಳಘಟ್ಟ ಗ್ರಾಮದ ಸರ್ವೆ ನಂ. 155ರ ಜಮೀನು ಧರ್ಮಾಪುರ ರೇಷ್ಮೆ ಕೃಷಿ ಕ್ಷೇತ್ರದ ಜಮೀನಾಗಿದ್ದು, ಈ ಕ್ಷೇತ್ರದ 166.25 ಎಕರೆ ಜಮೀನನ್ನು ಸಂಪೂರ್ಣವಾಗಿ ಇದನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಲು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಸಹಮತಿ ನೀಡಿದ್ದು, ಈ ಬಗ್ಗೆ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸಮಗ್ರವಾಗಿ ಪರಿಶೀಲಿಸಿ ಕಂದಾಯ ಇಲಾಖೆಯು ಕೋರಿರುವಂತೆ ಹಾಗೂ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಶಿಫಾರಸ್ಸು ಮಾಡಿರುವಂತೆ ಜಮೀನನ್ನು ಕಂದಾಯ ಇಲಾಖೆಗೆ ವಾಪಸ್ಸು ನೀಡಲು ತೀರ್ಮಾನಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 13 ರೇಯೋವಿ 2009, ಬೆಂಗಳೂರು, ದಿನಾಂಕ: 11ನೇ ಜುನ್ 2009**

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 34 ಎಲ್‌ಜೆಎಂ 71, ದಿ: 5-1-72 ರಲ್ಲಿ ಕಂದಾಯ ಇಲಾಖೆಯಿಂದ ರೇಷ್ಮೆ ಇಲಾಖೆಗೆ ವರ್ಗಾಯಿಸಿದ್ದ ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ, ಧರ್ಮಾಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ. 155ರ ಜಮೀನಿನಲ್ಲಿ ರೇಷ್ಮೆ ಇಲಾಖೆಯು ಬಳಸದೇ ಇರುವ 166.25 ಎಕರೆ ಜಮೀನನ್ನು ಸಂಪೂರ್ಣವಾಗಿ ಕಂದಾಯ ಇಲಾಖೆಗೆ ವಾಪಸ್ಸು ನೀಡಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1582

**ಭಾರತಿ ಆರ್. ನಾಯಕ್**

ಪೀಠಾಧಿಕಾರಿ(ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ವಿಷಯ: ಶಿವಮೊಗ್ಗದ ರೇಷ್ಮೆಗೂಡು ಮಾರುಕಟ್ಟೆ ಕಟ್ಟಡವನ್ನು ಕೈಗಾರಿಕೆ ಇಲಾಖೆಯ ಕಛೇರಿಗಳಿಗೆ ನೀಡುವ ಬಗ್ಗೆ.

ಓದಲಾಗಿದೆ: ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಇವರ ಪತ್ರ ಸಂಖ್ಯೆ: ರೇನಿ/ಗೂಮಾ/ಶಿಮೊ/60/2008-09, ದಿನಾಂಕ: 16-1-2009.

**ಪ್ರಸ್ತಾವನೆ:**

ಶಿವಮೊಗ್ಗ ನಗರದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಬಿ.ಹೆಚ್. ರಸ್ತೆ ಒತ್ತುವರಿ ತೆರವು ಹಾಗೂ ರಸ್ತೆ ಅಗಲೀಕರಣ ಕಾರ್ಯ ಕೈಗೊಳ್ಳಲಾಗಿದ್ದು, ಶಿವಮೊಗ್ಗ ನಗರಸಭೆಗೆ ಸೇರಿದ ಹಳೆಯ ಶಿವಪ್ಪನಾಯಕ ಮಾರುಕಟ್ಟೆಯನ್ನು ಕೆಡವಲಾಗಿದ್ದು, ಸದರಿ

ಸ್ಥಳದಲ್ಲಿ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸುವುದಕ್ಕೆ ನಿರ್ಧರಿಸಿದ್ದು, ಆ ಜಾಗಕ್ಕೆ ಹೊಂದಿಕೊಂಡಿರುವ ಜಿಲ್ಲಾ ಕೈಗಾರಿಕಾ ಕೇಂದ್ರದ ಕಛೇರಿ ಜಾಗವನ್ನು ಸಹ ಸದರಿ ಸಂಕೀರ್ಣ ನಿರ್ಮಾಣಕ್ಕೆ ಬಳಸಿಕೊಳ್ಳಲು ತೀರ್ಮಾನಿಸಿರುವುದರಿಂದ ಅಲ್ಲಿರುವ ಸರ್ಕಾರಿ ಕಛೇರಿಗಳನ್ನು ಸ್ಥಳಾಂತರಿಸಬೇಕಾಗಿರುವ ಹಿನ್ನಲೆಯಲ್ಲಿ ತೆರವು ಮಾಡಿಸಲಿರುವ ಜಿಲ್ಲಾ ಕೈಗಾರಿಕಾ ಕೇಂದ್ರದ ಕಛೇರಿಗಳನ್ನು 100 ಅಡಿ ರಸ್ತೆ ರಾಜೇಂದ್ರನಗರ ಹಾಗೂ ಸಾಗರ ರಸ್ತೆಗಳಲ್ಲಿರುವ ರೇಷ್ಮೆ ಇಲಾಖೆಗೆ ಸೇರಿದ ರೇಷ್ಮೆಗೂಡು ಮಾರುಕಟ್ಟೆ ಕಟ್ಟಡ ಹಾಗೂ ಇತರ ಕಟ್ಟಡಗಳನ್ನು ಗುರುತಿಸಿ, ಈ ಕಟ್ಟಡಗಳ ನವೀಕರಣ ಮತ್ತು ದುರಸ್ತಿ ಕಾರ್ಯಗಳನ್ನು ಇಲ್ಲಿಗೆ ಸ್ಥಳಾಂತರಿಸುವ ಇಲಾಖೆಗಳಿಂದ ಹಾಗೂ ನಗರಸಭೆಯ ವತಿಯಿಂದ ಕೈಗೊಳ್ಳುವುದಾಗಿ ಉದ್ದೇಶಿತ ಬೃಹತ್ ಸಂಕೀರ್ಣವು ಪೂರ್ಣವಾದ ನಂತರ ರೇಷ್ಮೆ ಇಲಾಖೆಯ ಕಟ್ಟಡಗಳನ್ನು ವಾಪಸ್ಸು ಬಿಟ್ಟುಕೊಡುವುದಾಗಿ ಅಲ್ಲಿಯವರೆಗೆ ರೇಷ್ಮೆ ಇಲಾಖೆಯ ಸದರಿ ಕಟ್ಟಡಗಳನ್ನು ಬಿಟ್ಟುಕೊಡುವಂತೆ ಶಿವಮೊಗ್ಗ ಜಿಲ್ಲಾಧಿಕಾರಿಗಳು ಕೋರಿರುವುದಾಗಿ ಮೇಲೆ ಓದಲಾದ ಪತ್ರದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ತಿಳಿಸಿ, ಹಾಲಿ ರೇಷ್ಮೆಗೂಡು ಮಾರುಕಟ್ಟೆಯಲ್ಲಿ 2 ವರ್ಷಗಳಿಂದ ವಹಿವಾಟು ನಡೆಯುತ್ತಿಲ್ಲವಾದ್ದರಿಂದ ಮತ್ತು ಸದರಿ ಇಲಾಖಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು ಇವುಗಳ ದುರಸ್ತಿ ಹಾಗೂ ನವೀಕರಣ ಕಾರ್ಯವನ್ನು ಸ್ಥಳಾಂತರವಾಗಲಿರುವ ಇಲಾಖೆಗಳೇ ಕೈಗೊಳ್ಳುವುದಾಗಿ ತಿಳಿಸಿರುವುದರಿಂದ ಶಿವಮೊಗ್ಗ ನಗರದ ಬಿ.ಹೆಚ್. ರಸ್ತೆಯ ಅಗಲೀಕರಣದ ಹಿನ್ನಲೆಯಲ್ಲಿ ಅಲ್ಲಿರುವಂತಹ ಜಿಲ್ಲಾಕೈಗಾರಿಕಾ ಕೇಂದ್ರದ ಕಛೇರಿಗಳನ್ನು ಸ್ಥಳಾಂತರಿಸುವುದಕ್ಕೆ ರೇಷ್ಮೆ ಇಲಾಖೆಗೆ ಸೇರಿದ ಕಟ್ಟಡಗಳನ್ನು ನೀಡಬಹುದಾಗಿದೆ ಎಂದು ತಿಳಿಸಿ, ಈ ಬಗ್ಗೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದ್ದು, ಶಿವಮೊಗ್ಗದ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆಯ ಕಟ್ಟಡವನ್ನು ಕೈಗಾರಿಕಾ ಇಲಾಖೆಯ ಕಛೇರಿಗಳಿಗೆ ನೀಡಲು ತೀರ್ಮಾನಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಾಕೈ 7 ರೇಯೋವಿ 2009, ಬೆಂಗಳೂರು, ದಿನಾಂಕ: 11ನೇ ಜೂನ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಶಿವಮೊಗ್ಗದ ರೇಷ್ಮೆಗೂಡು ಮಾರುಕಟ್ಟೆ ಕಟ್ಟಡವನ್ನು ಜಿಲ್ಲಾ ಕೈಗಾರಿಕೆ ಕೇಂದ್ರದ ವಿವಿಧ ಕಛೇರಿಗಳನ್ನು ಸ್ಥಳಾಂತರಿಸುವುದಕ್ಕಾಗಿ, ಶಿವಮೊಗ್ಗ ಜಿಲ್ಲಾಧಿಕಾರಿಗಳ ಕೋರಿಕೆಯಂತೆ ಕೈಗಾರಿಕಾ ಇಲಾಖೆಗೆ ತಾತ್ಕಾಲಿಕವಾಗಿ ನೀಡುವುದಕ್ಕೆ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1584 **ಭಾರತಿ ಆರ್. ನಾಯಕ್**

ಪೀಠಾಧಿಕಾರಿ(ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

**ವಿಷಯ:** ಅಗಲಕೋಟೆ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿ ಕಟ್ಟಡವನ್ನು ತಾತ್ಕಾಲಿಕವಾಗಿ ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜಿಗೆ ನೀಡುವ ಬಗ್ಗೆ.

**ಓದಲಾಗಿದೆ:** ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಇವರ ಪತ್ರ ಸಂಖ್ಯೆ: ರೇಬೀರೇಕ್ಷೆ/ಅ.ಕೋಟೆ/ಪಪೂಕಾ/23/08-09, ದಿನಾಂಕ: 12-2-2009.

**ಪ್ರಸ್ತಾವನೆ:**

ಅಗಲಕೋಟೆ ಹ್ಯಾಂಡ್ ಪೋಸ್ಟ್, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ಇಲ್ಲಿ ಹೊಸದಾಗಿ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾರಂಭವಾಗಿದ್ದು, ಈ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದಿರುವ ಕಾರಣ ಹಾಲಿ ಖಾಲಿ ಇರುವ ಅಗಲಕೋಟೆ ಬಿತ್ತನೆ ಕೋಠಿ ಕಟ್ಟಡವನ್ನು ಬಿಟ್ಟುಕೊಡುವಂತೆ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕೋರಿದ್ದು, ಈ ಬಗ್ಗೆ ರೇಷ್ಮೆ ಜಂಟಿ ನಿರ್ದೇಶಕರು, ಬಿತ್ತನೆ ಪ್ರದೇಶ, ಬಿಳಿದೇವಾಲಯ ಇವರು ಅಗಲಕೋಟೆ ಬಿತ್ತನೆ ಕೋಠಿ ಕಟ್ಟಡವನ್ನು ಪ್ರಸ್ತುತ ಇಲಾಖೆಯು ಬಳಸದೇ ಇರುವುದರಿಂದ ಕನಿಷ್ಟ ಬಾಡಿಗೆ ಆಧಾರದ ಮೇಲೆ ನೀಡುಬಹುದಾಗಿದೆ ಎಂದು ಅಭಿಪ್ರಾಯ ನೀಡಿದ್ದು, ಪ್ರಸ್ತುತ ಕಟ್ಟಡವನ್ನು ಇಲಾಖೆಯು ಉಪಯೋಗಿಸದೇ ಇರುವುದರಿಂದ ಹಾಗೂ ಶಿಕ್ಷಣ ಇಲಾಖೆಗೆ ಕಟ್ಟಡ ಅಗತ್ಯವಿರುವುದರಿಂದ ಕಾಲೇಜಿಗೆ ಸ್ವಂತ ಕಟ್ಟಡ ನಿರ್ಮಿಸಿಕೊಳ್ಳುವವರೆಗೆ ಅಗಲಕೋಟೆ ಬಿತ್ತನೆ ಕೋಠಿ ಕಟ್ಟಡವನ್ನು ತಾತ್ಕಾಲಿಕವಾಗಿ ಶಿಕ್ಷಣ ಇಲಾಖೆಗೆ ನೀಡಬಹುದಾಗಿದ್ದು, ಈ ಬಗ್ಗೆ ಸರ್ಕಾರದ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ರೇಷ್ಮೆ ಇಲಾಖೆಯ ಅಗಲಕೋಟೆ ಬಿತ್ತನೆ ಕೋಠಿ ಕಟ್ಟಡವನ್ನು ಇಲಾಖೆಯು ಪ್ರಸ್ತುತ ಉಪಯೋಗಿಸದೇ ಇರುವುದರಿಂದ ಹಾಗೂ ಹೊಸದಾಗಿ ಪ್ರಾರಂಭವಾಗಿರುವ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದಿರುವ ಕಾರಣ ವಿದ್ಯಾಭ್ಯಾಸಕ್ಕಾಗಿ ಸದರಿ ಬಿತ್ತನೆ ಕೋಠಿ ಕಟ್ಟಡವನ್ನು ಬಿಟ್ಟುಕೊಡುವಂತೆ ಆಯುಕ್ತರು, ಪದವಿಪೂರ್ವ ಶಿಕ್ಷಣ ಇಲಾಖೆ ಇವರು ಕೋರಿರುವುದರಿಂದ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಶಿಫಾರಸ್ಸು ಮಾಡಿರುವಂತೆ ಅಗಲಕೋಟೆ ಬಿತ್ತನೆ ಕೋಠಿಯ ಕಟ್ಟಡಗಳನ್ನು ತಾತ್ಕಾಲಿಕ ಶಿಕ್ಷಣ ಇಲಾಖೆಗೆ ನೀಡಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 9 ರೇಯೋವಿ 2009, ಬೆಂಗಳೂರು, ದಿನಾಂಕ: 9ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ರೇಷ್ಮೆ ಇಲಾಖೆಯ ಅಗಲಕೋಟೆ ಚಿತ್ರಸೆಕೋಠಿಯ ಕಟ್ಟಡವನ್ನು ಅಗಲಕೋಟೆ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಸ್ವಂತ ಕಟ್ಟಡ ನಿರ್ಮಿಸಿಕೊಳ್ಳುವವರೆಗೆ ಕಾಲೇಜು ನಡೆಸುವುದಕ್ಕಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ತಾತ್ಕಾಲಿಕವಾಗಿ ನೀಡುವುದಕ್ಕೆ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1585

ಭಾರತಿ ಆರ್. ನಾಯಕ್

ಪೀಠಾಧಿಕಾರಿ(ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

**ವಿಷಯ:** ಶ್ರೀ ಎಸ್.ಪಿ.ರಾಜು, ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, (ಅಮಾನತ್ತು), ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ಬಾಕಿ ಇಟ್ಟು ಅಮಾನತ್ತಿನಿಂದ ತೆರವುಗೊಳಿಸುವ ಕುರಿತು.

**ಓದಲಾಗಿದೆ:**
1) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/INV(G)/CBL/A2/CR-1/2009 ಚಿತ್ರದುರ್ಗ ದಿನಾಂಕ:27–01–2009.
2) ದಿನಾಂಕ:06–03–2009ರ ಆದೇಶ ಸಂಖ್ಯೆ:ಸಿಐ.10.ಎಂಜಿಎಸ್.2009.
3) ಶ್ರೀ ಎಸ್.ಪಿ.ರಾಜು, ಉಪನಿರ್ದೇಶಕರು (ಅಮಾನತ್ತು) ಇವರ ದಿನಾಂಕ:20–02–2009ರ ಮನವಿ.
4) ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿ ಸಂಖ್ಯೆ:1089/2009ರಲ್ಲಿನ ದಿನಾಂಕ:11.03.2009ರ ಆದೇಶ.
5) ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ಪತ್ರ ಸಂಖ್ಯೆ:ಗಭೂಇ/ಸಿಬ್ಬಂದಿ.ಅ.3: 2008–09:10/114, ದಿನಾಂಕ:15–4–2009.

**ಪ್ರಸ್ತಾವನೆ:**

ಶ್ರೀ ಎಸ್.ಪಿ.ರಾಜು, ಉಪನಿರ್ದೇಶಕರು (ಪ್ಲಾನಿಂಗ್ ಮತ್ತು ಮಾನಿಟರಿಂಗ್), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರು ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿರುತ್ತಾರೆ ಎಂಬ ನಂಬಲರ್ಹ ಮಾಹಿತಿಯ ಆಧಾರದ ಮೇರೆಗೆ ಇವರ ವಿರುದ್ಧ ಚಿತ್ರದುರ್ಗ ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಭ್ರಷ್ಟಾಚಾರ ನಿರೋಧ ಕಾಯ್ದೆ 1988ರ ಕಲಂ–13 (1)(ಇ) ಸಹವಾಚನ 13(2)ರ ಪ್ರಕಾರ ಮೊಕದ್ದಮೆ ಸಂಖ್ಯೆ:1/2009 ರಂತೆ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದ್ದು, ಈ ಸಂಬಂಧ ಅಗತ್ಯವಾದ ಶೋಧನಾ ವಾರೆಂಟ್‌ಗಳನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ವಿಶೇಷ ನ್ಯಾಯಾಧೀಶರು, ಚಿತ್ರದುರ್ಗ ಇವರಿಂದ ಪಡೆದು, ಅಧಿಕಾರಿಯ ಚಿತ್ರದುರ್ಗ ಮತ್ತು ಬೆಂಗಳೂರಿನಲ್ಲಿನ ನಿವಾಸಗಳನ್ನು, ಅಧಿಕಾರಿಯ ತಂದೆಯವರ ಚಿತ್ರದುರ್ಗ ವಾಸದ ಮನೆಯನ್ನು ಮತ್ತು ಅಧಿಕಾರಿಯ ಕಛೇರಿಯನ್ನು ದಿನಾಂಕ:23.01.2009ರಂದು ಪಂಚ ಸಾಕ್ಷಿಗಳ ಸಮಕ್ಷಮ ಶೋಧಿಸಲಾಗಿ, ಪ್ರಾಥಮಿಕ ತನಿಖೆಯಿಂದ ಅಧಿಕಾರಿಯು ತಮ್ಮ ಗೊತ್ತಾದ ಆದಾಯಕ್ಕಿಂದ ರೂ.1,12,38,673–00 ಗಳನ್ನು ಹೆಚ್ಚಾಗಿ ಅಕ್ರಮ ಆಸ್ತಿಪಾಸ್ತಿಗಳನ್ನು ಹೊಂದಿರುವುದು ತಿಳಿದುಬಂದಿರುವುದಾಗಿ ಮತ್ತು ಸದರಿ ಚರಾ ಮತ್ತು ಚಿರಾಸ್ತಿಗಳ ಮೌಲ್ಯವು ಸದರಿ ಅಧಿಕಾರಿಯ ನಿಗಧಿತ ಮೂಲಗಳಿಂದ ಗಳಿಸಿರುವ ವರಮಾನಕ್ಕಿಂತ ಶೇಕಡಾ 351.20 ರಷ್ಟು ಹೆಚ್ಚಿನ ಮೊತ್ತವಾಗಿರುತ್ತದೆಯೆಂದು ತಿಳಿಸುತ್ತಾ, ಅಧಿಕಾರಿಯು ತಮ್ಮ ಗೊತ್ತಾದ ಆದಾಯಕ್ಕಿಂತ ಹೆಚ್ಚಿನ ಅಕ್ರಮ ಆಸ್ತಿಗಳನ್ನು ಹೊಂದಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ಇವರ ವಿರುದ್ಧದ ಪ್ರಕರಣದ ಸುಗಮ ತನಿಖೆಗೆ ಅಡ್ಡಿಯುಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದುರಿಂದ ಶ್ರೀ ಎಸ್.ಪಿ.ರಾಜು, ಉಪನಿರ್ದೇಶಕರು ಇವರನ್ನು ಕೂಡಲೇ ಅಮಾನತ್ತಿನಲ್ಲಿಡಲು ಹಾಗೂ ಇವರ ಲೀನ್‌ನ್ನು ಬೇರೆ ಕಡೆಗೆ ವರ್ಗಾಯಿಸುವಂತೆ ಮೇಲೆ(1) ರಲ್ಲಿ ಓದಲಾದ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕೋರಿದ್ದರ ಮೇರೆಗೆ ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಶ್ರೀ ಎಸ್.ಪಿ.ರಾಜು, ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ನಾಗರೀಕ ಸೇವಾ (ನಿಯಂತ್ರಣ, ವರ್ಗೀಕರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ–10(1)(aa)ರ ಪ್ರಕಾರ ಅಮಾನತ್ತುಗೊಳಿಸಿ ಇವರ ಲೀನ್ ಅನ್ನು ಉಪನಿರ್ದೇಶಕರು, ಸೇಡಂ ಹುದ್ದೆಗೆ ವರ್ಗಾಯಿಸಿ ಮೇಲೆ (2)ರಲ್ಲಿ ಓದಲಾದ ಆದೇಶವನ್ನು ಹೊರಡಿಸಿತ್ತು.

ಮೇಲೆ(2)ರಲ್ಲಿ ಓದಲಾದ ದಿನಾಂಕ:06–3–2009ರ ಆದೇಶವನ್ನು ಪ್ರಶ್ನಿಸಿ ಆಪಾದಿತ ಅಧಿಕಾರಿಯು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:1089/2009 ನ್ನು ಸಲ್ಲಿಸಿದ್ದು ದಿನಾಂಕ:11–3–2009 ರಂದು ನೀಡಿರುವ ತೀರ್ಪಿನಲ್ಲಿ ದಿನಾಂಕ:06–3–2009 ರ ಸರ್ಕಾರಿ ಆದೇಶದಲ್ಲಿ CCA ನಿಯಮಾವಳಿಗಳ ನಿಯಮ–10ರ ಉಪನಿಯಮ(3)

ರನ್ವಯ ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸದೆ ಆದೇಶವನ್ನು ಹೊರಡಿಸಲಾಗಿದೆಯೆಂದು, ಸದರಿ ಅಧಿಕಾರಿಯ ಮೇಲೆ ಮಾಡಿರುವ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗದ ಹೊರತು. ಆಪಾದನೆಗಳನ್ನು ಸಬಲೀಕರಿಸಬಹುದಾದ ಸಾಕ್ಷಿಪುರಾವೆಗಳು ಇಲ್ಲದ ಹೊರತು ಅಮಾನತ್ತಿನಲ್ಲಿಡಲು ಸಾದ್ಯವಿಲ್ಲವೆಂದು ಉಲ್ಲೇಖಿಸುತ್ತಾ ಮೇಲೆ (2)ರಲ್ಲಿ ಓದಲಾದ ದಿನಾಂಕ:06–3–2009ರ ಆದೇಶವನ್ನು ರದ್ದುಗೊಳಿಸಿ, ಸರ್ಕಾರವು KCS (CC&A) Rulesನ ನಿಯಮ–10(3) ರನ್ವಯ ಪುನರ್ ಪರಿಶೀಲಿಸಿ ಮರು ನಿರ್ಧಾರ ತೆಗೆದುಕೊಳ್ಳಬಹುದೆಂದು ಉಲ್ಲೇಖಿಸಿರುತ್ತದೆ.

ಮೇಲೆ (3)ರಲ್ಲಿ ಓದಲಾದ ಮನವಿಯಲ್ಲಿ ಆಪಾದಿತ ಅಧಿಕಾರಿಯು, ತಮ್ಮ ಮೇಲೆ ಹೊರಿಸಲ್ಪಟ್ಟಿರುವ ಆರೋಪಗಳು ಸತ್ಯಕ್ಕೆ ದೂರವಾದವು ಎಂದೂ, ಮೇಲಾಗಿ ಸದರಿ ಆರೋಪಗಳ ಕುರಿತು ತನಿಖೆ ನಡೆಯುತ್ತಿದ್ದು, ಆರೋಪವು ಸಾಬೀತಾದಲ್ಲಿ ನಿಯಮಾನುಸಾರ ಮುಂದಿನ ಕ್ರಮವಹಿಸಲು ಅವಕಾಶವಿರುತ್ತದೆಯಾದ್ದರಿಂದ ಆರೋಪಗಳು ಸಾಬೀತಾದಲ್ಲಿ ಆನಂತರವೇ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ಮೇಲೆ (5)ರಲ್ಲಿ ಓದಲಾದ ದಿನಾಂಕ:15–4–2009ರ ಪತ್ರದಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಳಿ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಆಪಾದಿತ ಅಧಿಕಾರಿಯನ್ನು ಸೇವೆಯಲ್ಲಿ ಪುನರ್‌ಸ್ಥಾಪನೆ ಮಾಡುವ ಕುರಿತು ಪ್ರಸ್ತಾವಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ:–

**ಸರ್ಕಾರದ ಆದೇಶ ಸಂಖ್ಯೆ:ಸಿಐ.10:ಎಂಜಿಎಸ್.2009, ಬೆಂಗಳೂರು, ದಿನಾಂಕ: 16ನೇ ಜುಲೈ 2009.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:1089/2009 ರಲ್ಲಿ ದಿನಾಂಕ:11–3–2009 ರಂದು ನೀಡಿರುವ ತೀರ್ಪಿನ ಮೇರೆಗೆ ಶ್ರೀ ಎಸ್.ಪಿ.ರಾಜು, ಉಪ ನಿರ್ದೇಶಕರು, ಸೇಡಂ (ಲೀನ್), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ವಿರುದ್ಧದ ಆರೋಪಗಳ ಕುರಿತು ನಿಯಮಾನುಸಾರ ವಿಚಾರಣೆಯನ್ನು ಕಾಯ್ದರಿಸಿ ಅಮಾನತ್ತನ್ನು ತೆರವುಗೊಳಿಸಲಾಗಿದೆ.

ಅಮಾನತ್ತು ತೆರವುಗೊಳಿಸಿದ ನಂತರ ಶ್ರೀ ಎಸ್.ಪಿ.ರಾಜು, ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಸೇಡಂ ಇವರನ್ನು ಶ್ರೀ ಜಿ.ಎನ್.ಶಂಕರ್, ಉಪನಿರ್ದೇಶಕರು, ಹೊಸಪೇಟೆ ಇವರು ರಜೆಯ ಮೇಲೆ ತೆರಳಿದ್ದು, ಖಾಲಿಯಿರುವ ಉಪನಿರ್ದೇಶಕರು, ಹೊಸಪೇಟೆ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೂ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1737

**ಎ.ಪಿ. ರಾಮಕೃಷ್ಣ**

ಪೀಠಾಧಿಕಾರಿ(ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ವಿವಿಧ ಪಂಚಾಯತ್‌ರಾಜ್ ಸಂಸ್ಥೆಗಳ ಹಂತಗಳಲ್ಲಿ ಆಡಳಿತವನ್ನು ಸುವ್ಯವಸ್ಥೆಗೊಳಿಸಲು ಹೊರ ಗುತ್ತಿಗೆಯ ಆಧಾರದ ಮೇಲೆ ಸಿಬ್ಬಂದಿ ಸೇವೆ ಪಡೆಯುವ ಕುರಿತು.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂ.ಗ್ರಾಅಪ.12:ಉಖಾಯೋ:2006 ಬೆಂಗಳೂರು, ದಿನಾಂಕ:9.3.2007.

2. ಸರ್ಕಾರದ ಆದೇಶ ಸಂ.ಗ್ರಾಅಪ.12:ಉಖಾಯೋ.2006:08 ಬೆಂಗಳೂರು, ದಿನಾಂಕ:4.5.2007.

3. ಸರ್ಕಾರದ ಆದೇಶ ಸಂ.ಗ್ರಾಅಪ.104:ಉಖಾಯೋ.2007: ದಿನಾಂಕ:2.4.2007.

4. ಕೇಂದ್ರ ಸರ್ಕಾರದ ಪತ್ರ ಸಂ.J–11011/18/2007–NREGA ದಿನಾಂಕ:19.03.2009

**ಪ್ರಸ್ತಾವನೆ:**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಈಗ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ, ಸಾಧಿಸಲಾದ ಪ್ರಗತಿಯು ರಾಷ್ಟ್ರದ ಇತರೆ ರಾಜ್ಯಗಳಲ್ಲಿ ಸಾಧಿಸಿದ ಪ್ರಗತಿಗೆ ಹೋಲಿಸಿದಾಗ, ತೀರಾ ಕಡಿಮೆ ಇದ್ದು, ಆಡಳಿತ ಯಂತ್ರವನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ಯೋಜನೆಯಲ್ಲಿ ಬರುವ ಎಲ್ಲಾ ಪ್ರತಿಯೊಂದು ಚಟುವಟಿಕೆಗಳ ಮೇಲ್ವಿಚಾರಣೆ, ಪರಿವೀಕ್ಷಣೆಯನ್ನು ಅಧಿನಿಯಮದ ಪ್ರಕಾರ ಕ್ರಮಬದ್ಧವಾಗಿ ಸುವ್ಯವಸ್ಥೆಗೊಳಿಸುವುದು ಅನಿವಾರ್ಯವೆಂದು ಅಭಿಪ್ರಾಯಪಡಲಾಗಿದೆ. ಮೊಟ್ಟ ಮೊದಲು, ಉಲ್ಲೇಖ(1)ರಲ್ಲಿ, ಮೊದಲನೇ ಹಂತದ, ಐದು ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ರಾಯಚೂರು, ದಾವಣಗೆರೆ ಮತ್ತು ಚಿತ್ರದುರ್ಗ ಇವುಗಳ 1091 ಗ್ರಾಮ ಪಂಚಾಯತ್‌ಗಳಿಗೆ, ಕಾರ್ಯನಿರ್ವಾಹಕ ಸಹಾಯಕರ ಹುದ್ದೆಯನ್ನು ಪ್ರತಿಯೊಂದು ಗ್ರಾಮ ಪಂಚಾಯತಿಗೆ ಒಂದರಂತೆ ಸೃಜಿಸಿ ಸದರಿ ಕಾರ್ಯನಿರ್ವಾಹಕ ಸಹಾಯಕರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಸಂಬಂಧಪಟ್ಟ ಗ್ರಾಮ

ಪಂಚಾಯತಿಗಳು ಆರು ತಿಂಗಳವರೆಗೆ ಅಥವಾ ಮುಂದಿನ ಆದೇಶ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಕಾತಿ ಮಾಡಿಕೊಳ್ಳಲು ಆದೇಶವಾಗಿರುತ್ತದೆ. ಇದೇ ರೀತಿ, ದಿನಾಂಕ:1-4-2007 ರಿಂದ ಜಾರಿಗೆ ಬಂದಿರುವ ಎರಡನೇ ಹಂತದ ಜಿಲ್ಲೆಗಳಾದ ಬಳ್ಳಾರಿ, ಬೆಳಗಾಂ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಕೊಡಗು ಇವುಗಳಿಗೂ ಸಹ ಉಲ್ಲೇಖ(2)ರಲ್ಲಿ, 1516 ಗ್ರಾಮ ಪಂಚಾಯತ್‌ಗಳಿಗೆ, ಪ್ರತಿ ಗ್ರಾಮ ಪಂಚಾಯತಿಗೆ ಒಂದರಂತೆ 1516 ಕಾರ್ಯನಿರ್ವಾಹಕ ಸಹಾಯಕರ ಹುದ್ದೆಗಳನ್ನು ಉಲ್ಲೇಖ(1)ರಲ್ಲಿ ತಿಳಿಸಿರುವ ಷರತ್ತು ಮತ್ತು ನಿಯಮಗಳಂತೆ, ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆದೇಶಿಸಲಾಗಿತ್ತು.

ಉಲ್ಲೇಖ(3)ರಲ್ಲಿ, ಮೂರನೇ ಹಂತದ 18 ಜಿಲ್ಲೆಗಳ 3021 ಗ್ರಾಮ ಪಂಚಾಯತ್‌ಗಳಿಗೆ, ಪ್ರತಿ ಗ್ರಾಮ ಪಂಚಾಯತಿಗೆ ಒಂದರಂತೆ, ತಾಂತ್ರಿಕ ಸಹಾಯಕರ ಹುದ್ದೆಗಳನ್ನು ಸೃಜಿಸಿ ಹೊರ ಗುತ್ತಿಗೆಯ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆದೇಶಿಸಲಾಗಿತ್ತು. ಮೊದಲನೇ ಹಾಗೂ ಎರಡನೇ ಹಂತದ ಜಿಲ್ಲೆಗಳ ಗ್ರಾಮ ಪಂಚಾಯತಿಗಳಿಗೆ ನೇಮಕಾತಿಯಾದ ಕಾರ್ಯನಿರ್ವಾಹಕ ಸಹಾಯಕರ ಹುದ್ದೆಗಳನ್ನು ಹಾಗೂ ಮೂರನೇ ಹಂತದ ಜಿಲ್ಲೆಗಳ ಗ್ರಾಮ ಪಂಚಾಯತಿಗಳಿಗೆ ನೇಮಕಾತಿಯಾದ ತಾಂತ್ರಿಕ ಸಹಾಯಕರ ಹುದ್ದೆಗಳ ನಾಮ ನಿರ್ದೇಶನವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಆಡಳಿತ ಸಹಾಯಕರೆಂದು (Administrative Assistant) ಒಂದೇ ಇರುವಂತೆ ಬದಲಾಯಿಸಲು ತೀರ್ಮಾನಿಸಿದೆ.

ಜಿಲ್ಲೆಗಳಲ್ಲಿರುವ ಜಿಲ್ಲಾ ಪಂಚಾಯತ್‌ನ ಪಂಚಾಯತ್‌ರಾಜ್ ಇಂಜಿನೀಯರಿಂಗ್ ಇಲಾಖೆಯ ಅಭಿಯಂತರರು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ನಿಗಾ ವಹಿಸಿ, ಪರಿವೀಕ್ಷಣೆ ಮಾಡಲು ಸಾಧ್ಯವಾಗದ ಕಾರಣ ಹಾಗೂ ಜಿಲ್ಲಾ ಪಂಚಾಯತ್‌ನಲ್ಲಿ ಹಾಲಿ ಇರುವ ಅನೇಕ ಯೋಜನೆಗಳ ಕಾಮಗಾರಿಗಳು, ವಿವಿಧ ಸ್ಥಳಗಳಿಗೆ ಹರಡಿರುವುದರಿಂದ ಹಾಗೂ ಜಿಲ್ಲಾ ಪಂಚಾಯತ್ ನಿಯಮಿತ ಕಾಮಗಾರಿಗಳಿಗೆ ಹೆಚ್ಚಾಗಿ ವಿಶೇಷ ಗಮನ ಕೊಡಬೇಕಾಗಿರುವುದರಿಂದ ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯು ಕೂಡ, ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲು ಸಾಧ್ಯವಾಗದ ಕಾರಣ, ಸರ್ಕಾರವು ತಾಲ್ಲೂಕು ಮಟ್ಟದಲ್ಲಿ ಪ್ರತಿ ನಾಲ್ಕು ಗ್ರಾಮ ಪಂಚಾಯತ್‌ಗಳಿಗೆ, ಉದ್ಯೋಗ ಖಾತರಿ ಯೋಜನೆಯ ಇಂಜಿನೀಯರಿಂಗ್ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು, ಒಬ್ಬ ತಾಂತ್ರಿಕ ಸಹಾಯಕನನ್ನು ಹೊರ ಗುತ್ತಿಗೆಯ ಆಧಾರದ ಮೇಲೆ ಸೇವೆ ಪಡೆಯಲು (ರಾಜ್ಯದಲ್ಲಿ ಒಟ್ಟು 1407 ತಾಂತ್ರಿಕ ಸಹಾಯಕರು) ತೀರ್ಮಾನಿಸಲಾಗಿದೆ. ಅದರಂತೆಯೇ ತಾಲ್ಲೂಕು ಮಟ್ಟದಲ್ಲಿ ಕೃಷಿ, ನೀರಾವರಿ, ಜಲಾನಯನ, ಅರಣ್ಯ, ತೋಟಗಾರಿಕೆ ಹಾಗೂ ಇತರ ಇಲಾಖೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಹಾಗೂ ಪರಿಣಾಮಕಾರಿಯಾಗಿ ಪರಿವೀಕ್ಷಣೆ ಮಾಡಲು ಪ್ರತಿ ನಾಲ್ಕು ಗ್ರಾಮ ಪಂಚಾಯತಿಗಳಿಗೆ ಒಬ್ಬ ತಾಂತ್ರಿಕ ಸಹಾಯಕರ ಸೇವೆಯನ್ನು ಹೊರ ಗುತ್ತಿಗೆಯ ಆಧಾರದ ಮೇಲೆ ಪಡೆಯಲು(ರಾಜ್ಯದಲ್ಲಿ ಒಟ್ಟು 1407 ತಾಂತ್ರಿಕ ಸಹಾಯಕರು) ತೀರ್ಮಾನಿಸಲಾಗಿದೆ.

ಉಲ್ಲೇಖ(3)ರಲ್ಲಿ ರಾಜ್ಯದ ಎಲ್ಲಾ 176 ತಾಲ್ಲೂಕು ಪಂಚಾಯತಿಗಳಿಗೆ, ಪ್ರತಿ ತಾಲ್ಲೂಕು ಪಂಚಾಯತಿಗೆ ಒಂದರಂತೆ, ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿಯ ಹುದ್ದೆಯನ್ನು ಒಟ್ಟು 176 ಹುದ್ದೆ ಗಳನ್ನು ಅನುಷ್ಠಾನ ಇಲಾಖೆಗಳಿಂದ ನಿಯೋಜನೆಯ ಮೂಲಕ ತುಂಬಲು/ನೇಮಕಾತಿ ಮಾಡಲು ಆದೇಶಿಸಲಾಗಿತ್ತು. ಸದರಿ ಹುದ್ದೆಯ ಅಧಿಕಾರಿಯವರು, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ, ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಕಾಮಗಾರಿಗಳನ್ನು ನೋಡಿಕೊಳ್ಳಲು ಸಮನ್ವಯ ಮಾಡಲು ನೆರವಾಗುತ್ತಾರೆ. ಈಗ ಸದರಿ 176 ಹೆಚ್ಚುವರಿ ಕಾರ್ಯಕ್ರಮದ ಅಧಿಕಾರಿಗಳ ಹುದ್ದೆಗಳನ್ನು ಕ್ಷೇತ್ರಮಟ್ಟದ/ಅನುಷ್ಠಾನ ಇಲಾಖೆಗಳಲ್ಲಿ ಸಿಬ್ಬಂದಿ ಕೊರತೆಯ ಕಾರಣ, ನಿಯೋಜನೆ ಮೇರೆಗೆ ತುಂಬಲು ಸಾಧ್ಯವಾಗದೇ ಇರುವ ಕಾರಣ ಸದರಿ ಹುದ್ದೆಗಳನ್ನು ನಿಯೋಜನೆ ಮೂಲಕ ತುಂಬುವ ಬದಲಾಗಿ ತಾತ್ಕಾಲಿಕವಾಗಿ ಹೊರಗುತ್ತಿಗೆಯ ಆಧಾರದ ಮೇಲೆ ಸೇವೆ ಪಡೆಯಲು ನಿರ್ಧರಿಸಿದೆ.

ತಾಲ್ಲೂಕು ಮಟ್ಟದಲ್ಲಿ, ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿಯವರು ಇರುವುದಲ್ಲದೆ, ಸಾಮಾಜಿಕ ತಪಾಸಣೆ ಮತ್ತು ಕುಂದುಕೊರತೆಗಳ ನಿವಾರಣಾ ಕೋಶ, ತಾಂತ್ರಿಕ ಕೋಶ, ಮಾಹಿತಿ ನಿರ್ವಹಣಾ ವ್ಯವಸ್ಥೆಯ ಕೋಶ, ತರಬೇತಿ ಮತ್ತು ಐಇಸಿ ಕೋಶಗಳನ್ನು ಸ್ಥಾಪಿಸಬೇಕಾಗಿದೆ. ಈ ಘಟಕಗಳಿಗೆ, ಸಿಬ್ಬಂದಿ ಬೆಂಬಲ ಅಗತ್ಯವಿದೆ. ಇದೇ ರೀತಿ, ಜಿಲ್ಲಾ ಮಟ್ಟದಲ್ಲಿ ಕೂಡ, ಮೇಲಿನ ಕೋಶಗಳನ್ನು ಸ್ಥಾಪಿಸಿ, ಅಗತ್ಯವಾದ ಸಿಬ್ಬಂದಿಯ ಬೆಂಬಲವನ್ನು ಕೊಡಲು ನಿರ್ಧರಿಸಿದೆ. ತಾಲ್ಲೂಕು ಮಟ್ಟದಲ್ಲಿ ಸಾಮಾಜಿಕ ತಪಾಸಣೆ ಮತ್ತು ಕುಂದುಕೊರತೆಗಳ ನಿವಾರಣಾ ಕೋಶಕ್ಕೆ ಪ್ರತಿಯೊಂದು ತಾಲ್ಲೂಕು ಪಂಚಾಯತಿಗೆ ಒಂದರಂತೆ

76 ಸಂಯೋಜಕರು ಮತ್ತು 176 ಸಹಾಯಕರುಗಳ ಸೇವೆಯನ್ನು ಪಡೆಯಲು ತೀರ್ಮಾನಿಸಿದೆ. ತಾಂತ್ರಿಕ ಕೋಶ ಕಾಮಗಾರಿಗಳು) ಇದರಡಿ, ಪ್ರತಿಯೊಂದು ತಾಲ್ಲೂಕು ಪಂಚಾಯತಿಗೆ ಒಂದರಂತೆ 176 ತಾಂತ್ರಿಕ ಸಂಯೋಜಕರು ಮತ್ತು 76 ತಾಂತ್ರಿಕ ಸಹಾಯಕರುಗಳ ಸೇವೆಯನ್ನು ಪಡೆಯಲು ತೀರ್ಮಾನಿಸಿದೆ. ತರಬೇತಿ ಮತ್ತು ಐಇಸಿ ಕೋಶದಡಿ, ್ರತಿಯೊಂದು ತಾಲ್ಲೂಕು ಪಂಚಾಯತಿಗೆ ಒಂದರಂತೆ 176 ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಂಯೋಜಕರ (IEC Co-rdinator ) ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯಲು ತೀರ್ಮಾನಿಸಿದೆ. ಹಾಗೆಯೇ, ಮಾಹಿತಿ ನಿರ್ವಹಣಾ ್ಯವಸ್ಥೆಯನ್ನು ತಾಲ್ಲೂಕು ಮಟ್ಟದಲ್ಲಿ ನಿರ್ವಹಿಸಲು, MIS ಸಂಯೋಜಕರ ಸೇವೆಯ ಅವಶ್ಯಕತೆ ಇರುತ್ತದೆ. ಈಗಾಗಲೇ, ಾಲ್ಲೂಕು ಮಟ್ಟದಲ್ಲಿ ಉಲ್ಲೇಖ(3)ರಲ್ಲಿ ಪ್ರತಿಯೊಂದು ತಾಲ್ಲೂಕು ಪಂಚಾಯತಿಗೆ ಒಂದರಂತೆ, 176 ಗಣಕ ಸಹಾಯಕರ ುದ್ದೆಗಳನ್ನು ಸೃಜಿಸಿದ್ದು ಈಗ ಸದರಿ ಹುದ್ದೆಗಳ ಪದನಾಮವನ್ನು ಇನ್ನು ಮುಂದೆ MIS ಸಂಯೋಜಕರೆಂದು ಹೆಸರಿಸಿ ದಲಾವಣೆ ಮಾಡಲು ನಿರ್ಧರಿಸಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಕೂಡ ತಾಲ್ಲೂಕು ಮಟ್ಟದ ಮಾದರಿಯಂತೆ ಸಾಮಾಜಿಕ ತಪಾಸಣೆ ಮತ್ತು ಕುಂದು ಕೊರತೆಗಳ ವಾರಣಾ ಕೋಶದಡಿ ಪ್ರತಿ ಜಿಲ್ಲಾ ಪಂಚಾಯತಿಗೆ ಒಂದರಂತೆ 29 ಸಂಯೋಜಕರು ಹಾಗೂ 29 ಸಹಾಯಕರುಗಳ ೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯಲು ನಿರ್ಧರಿಸಲಾಗಿದೆ ಮತ್ತು ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಪ್ರತಿ ಲ್ಲಾ ಪಂಚಾಯತಿಗೆ ಒಂದರಂತೆ ಉಲ್ಲೇಖ (3)ರಲ್ಲಿ 29 ಜಿಲ್ಲಾ ಕಾರ್ಯನಿರ್ವಾಹಕ ಸಹಾಯಕರ ಹುದ್ದೆಗಳನ್ನು ಸೃಜಿಸಿದ್ದು, ದರಿ ಹುದ್ದೆಗಳ ಪದನಾಮವನ್ನು ಇನ್ನು ಮುಂದೆ MIS Co-ordinator ಎಂದು ಹೆಸರಿಸಿ ಬದಲಾವಣೆ ಮಾಡಲು ರ್ಧರಿಸಿದೆ. ತರಬೇತಿ ಮತ್ತು IEC ಕೋಶದಡಿ ಪ್ರತಿ ಜಿಲ್ಲಾ ಪಂಚಾಯತಿಗೆ ಒಂದರಂತೆ 29 ಮಾಹಿತಿ, ಶಿಕ್ಷಣ ಮತ್ತು ಂವಹನ ಸಂಯೋಜಕರು ಹಾಗೂ ಇದೇ ಕೋಶದಡಿ ಪ್ರತಿ ಜಿಲ್ಲಾ ಪಂಚಾಯತಿಗೆ ಒಂದರಂತೆ 29 ಸಹಾಯಕರುಗಳ ೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯಲು ನಿರ್ಧರಿಸಿದೆ. ಉಸ್ತುವಾರಿ, ಮೌಲ್ಯಮಾಪನ ಮತ್ತು ಸಂಶೋಧನಾ ರಿಣಿತ ಘಟಕದಡಿ ಸಮರ್ಪಕವಾಗಿ ಎಲ್ಲಾ ಚಟುವಟಿಕೆಗಳನ್ನು ನಿಗಾ ವಹಿಸಿ ಉಸ್ತುವಾರಿ ಮಾಡಲು ಜಿಲ್ಲಾ ಮಟ್ಟದಲ್ಲಿ ಪ್ರತಿ ಲ್ಲಾ ಪಂಚಾಯತಿಗೆ ಒಂದರಂತೆ 29 ಪರಿಣಿತ ಸಂಶೋಧಕರುಗಳ ಸೇವೆಯನ್ನು ಹೊರ ಗುತ್ತಿಗೆಯ ಆಧಾರದ ಮೇಲೆ ಡೆಯಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ.104:ಉಖಾಯೋ:2007, ಬೆಂಗಳೂರು, ದಿನಾಂಕ: 5ನೇ ಜೂನ್ 2009**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ–2005ರಲ್ಲಿ ತಿಳಿಸಿರುವ ಲ್ಲಾ ಪ್ರಕ್ರಿಯೆಗಳನ್ನು ಯೋಜನೆಯ ಅನುಷ್ಠಾನದಲ್ಲಿ ಕ್ರಮಬದ್ಧವಾಗಿ ಹಾಗೂ ಸಮರ್ಪಕವಾಗಿ ನಿರ್ವಹಿಸಲು ಜಿಲ್ಲಾ ಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಹಂತಗಳಲ್ಲಿ ಸಿಬ್ಬಂದಿ ಸೇವೆಗಳನ್ನು ಹೊರ ಗುತ್ತಿಗೆಯ ಧಾರದ ಮೇಲೆ ಪಡೆಯಲು ಒಟ್ಟು ಯೋಜನಾ ವೆಚ್ಚದ ಶೇಕಡಾ 6ರಷ್ಟಿನ ಮಿತಿಗೆ ಒಳಪಟ್ಟು ಆಯಾ ಜಿಲ್ಲಾ ಪಂಚಾಯತಿ ್ಯಾಪ್ತಿಯಲ್ಲಿನ ಬೇಡಿಕೆ ಹಾಗೂ ಪ್ರಗತಿಗೆ ಅನುಗುಣವಾಗಿ ಅನುಬಂಧದಲ್ಲಿರುವಂತೆ ಸರ್ಕಾರವು ಮಂಜೂರಾತಿ ನೀಡಿದೆ. ಆದರೆ, ಂಗಳೂರು(ನಗರ), ಬೆಂಗಳೂರು(ಗ್ರಾಮಾಂತರ), ರಾಮನಗರ, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಾತ್ರ ಆಯಾ ಜಿಲ್ಲೆಗಳ ಬೇಡಿಕೆಗೆ ಅನುಗುಣವಾಗಿ ಅಗತ್ಯ ಸಿಬ್ಬಂದಿ ಸೇವೆ ಪಡೆಯುವ ಕುರಿತು ನಿರ್ದೇಶನಾಲಯಕ್ಕೆ ಸೂಕ್ತ ಸ್ತಾವನೆ ಸಲ್ಲಿಸಿ ಪೂರ್ವಾನುಮೋದನೆ ಪಡೆದು ಸಿಬ್ಬಂದಿ ಸೇವೆ ಪಡೆಯಲು ಕ್ರಮ ವಹಿಸುವುದು. ಈ ಆದೇಶವು ಕೂಡಲೇ ರಿಗೆ ಬರತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂ.ಆಇ/261/ವೆಚ್ಚ–6/09 ದಿನಾಂಕ: 29.5.2009ರಲ್ಲಿ ಮತಿಸಿದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ:ಪಿ.ಸಿ.ಜಾಫರ್**

ನಿರ್ದೇಶಕರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**I -F7 -B/B**

## ANNEXURE to GO No:RDP 104 EGS 2007 dated:05.06.2009

### Details of the sanctioned services of the professionals to be outsourced for the implementation of NREGA at various PRI level

| No. | Name of the Professional | Maximum no. of persons allowed to be procured based on the performance | Maximum consolidated pay per month per professional (Amt in Rs) | | | Minimum requirements | | Reamrks |
|---|---|---|---|---|---|---|---|---|
| | | | Remuneration | TA/DA | Total | Educational qualification | Experience in the related field | |
| I | Grama Panchayath(GP) | | | | | | | |
| 1 | Administrative assistant for every GP (Executive Assistants and Technical Assistant)* | 1 per GP | 3000.00 | 500.00 | 3500.00 | PUC-pass with minmium of 40%marks with computer knowledge | 2-3 years | He/she will discharge all activities as prescribed in Annexure-A4 (page-99) of operational gudielines and all other works entrusted by the GP |
| 2 | One technical assistant for at least 4 GP (Engineer) | Maximum no.of technical professionals allowed to be procured in combination is left to the CEO/EO for the GP or group of GPs depending on the demand for employment | 2000.00 | 1000.00 | 3000.00 | Diploma in civil or any other equivalent qualifications with computer knowldege | 2-3 years | For the proposed remuneration of Rs.3000.00 he/she must get the minimum execution of work worth Rs.4.00 lakhs per month and 0.5% incentive can be given for the over and above Rs.4.00 lakhs execution for the month |
| 3 | One technical assistant for at least 4 GP (Agriculture/watershed/Forest etc..) | | 2000.00 | 1000.00 | 3000.00 | Graduation in Agriculture or Forestry or horticulture or any other equivalent qualification with computer knowledge | 2-3 years | |

| No. | Name of the Professional | Maximum no. of persons allowed to be procured based on the performance | Maximum consolidated pay per month per professional (Amt in Rs) | | | Minimum requirements | | Reamrks |
|---|---|---|---|---|---|---|---|---|
| | | | Remuneration | TA/DA | Total | Educational qualification | Experience in the related field | |
| II | **Programme Officer(PO) office(Block)** | | | | | | | |
| 1 | Assistant Programme Officer | 1 per Taluk | 15000.00 | 5000.00 | 20000.00 | Any Post Graduation with computer knowledge.Preference will be given to MCA/MSW/MA (Rural Development) | 2-3 years | |
| 2 | Social Audit and Grievance Redressal Cell | | | | | | | |
| | a)Co-ordinator | 1 per Taluk | 10000.00 | 2000.00 | 12000.00 | Will be selected by ANSSIRD, Mysore | | |
| | b)Assistant | 1 per Taluk | 6000.00 | 2000.00 | 8000.00 | Any Graduation or any other equivalent qualification with computer knowledge | 2-3 years | |
| 3 | Technical Cell(Works) | | | | | | | |
| | a)Technical Co-ordinator | 1 per Taluk | 10000.00 | 2000.00 | 12000.00 | Bachelor of Engineer in civil or any other equivalent qualifications with computer knowldege | | |
| 4 | Training & IEC Cell | | | | | | | |
| | a)IEC Co-ordinator | 1 per Taluk | 10000.00 | 2000.00 | 12000.00 | Post Graduation in Mass communication or any post graduation with diploma in mass communication or related subjects and computer knowledge. In the absence of the above any post graduation with computer knowledge | 2-3 years | |

| No. | Name of the Professional | Maximum no. of persons allowed to be procured based on the performance | Maximum consolidated pay per month per professional (Amt in Rs) | | | Minimum requirements | | Reamrks |
|---|---|---|---|---|---|---|---|---|
| | | | Remuneration | TA/DA | Total | Educational qualification | Experience in the related field | |
| 5 | MIS Co-ordinator (Data Entry operator)* | 1 per Taluk | 10000.00 | 2000.00 | 12000.00 | MCA or Bachelor of Engineer in computer/Electronics or Graduation in computer science or any other equivalent qualification. In the absence of such candidates mentioned above graduation with PGDC or any other equivalent course by the recognised university. | 2-3 years | |
| III | **District Progreamme co-ordinator(DPC) Office** | | | | | | | |
| 1 | Socail Audit and Grievance Redressal Cell | | | | | | | |
| | a)Co-ordinator | 1 per district | 12000.00 | 3000.00 | 15000.00 | Will be selected by ANSSIRD, Mysore | | |
| | b)Assistant | 1 per district | 6000.00 | 2000.00 | 8000.00 | Any Graduation or any other equivalent qualification with computer knowledge | 2-3 years | |
| 2 | Training & IEC Cell | | | | | | | |
| | a)Co-ordinator | 1 per district | 12000.00 | 3000.00 | 15000.00 | Post Graduation in Mass communication or any post graduation with diploma in mass communication or related subjects and computer knowledge. In the absence of the such candidates mentione above any post graduation with computer knowledge | 2-3 years | |

| No. | Name of the Professional | Maximum no. of persons allowed to be procured based on the performance | Maximum consolidated pay per month per professional (Amt in Rs) | | | Minimum requirements | | Reamrks |
|---|---|---|---|---|---|---|---|---|
| | | | Remuneration | TA/DA | Total | Educational qualification | Experience in the related field | |
| | b)Assistant | 1 per district | 6000.00 | 2000.00 | 8000.00 | Any Graduation or any other equivalent qualification with computer knowledge | 2-3 years | |
| 3 | Monitoring, Evaluation & Research Expert | 1 per district | 12000.00 | 3000.00 | 15000.00 | Post Graduation in statistics or any other equivalent qualification or Any post graduation with diploma in statistics/reseach methodolgy related subjects and computer knowledge | 2-3 years | |
| 4 | MIS Co-ordinator (District Programme Executive)* | 1 per district | 12000.00 | 3000.00 | 15000.00 | Graduation in computer science or Diploma in Computer Science/Electronics or any other equivalent qualification | 2-3 years | |

*The name of the professionals given in the bracket is the one approved in the earlier orders.

**Dr. P.C. JAFFER, I.A.S.**
Director, NREGA
Rural Developmwnt and Panchayath Raj Department, Bangalore

P.R. 1557

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಆಕುಕ 86 ಹೆಚ್‌ಎಸ್‌ಹೆಚ್ 2009(ಭಾಗ-2), ಬೆಂಗಳೂರು, ದಿನಾಂಕ:30ನೇ ಜೂನ್, 2009**

**ವಿಷಯ:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸೇವಾನಿರತ ವೈದ್ಯಾಧಿಕಾರಿಗಳನ್ನು 2009-10 ನೇ ಸಾಲಿನ ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜಿಸುವ ಬಗ್ಗೆ.

**ಉಲ್ಲೇಖ:** 1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಸಂಖ್ಯೆ: ಜೆಆರ್‌ಬ(ಎಂ) 45/ 2008-09 ದಿನಾಂಕ: 09/06/09 ಮತ್ತು 26/06/2009.

2. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರುರವರ ಪತ್ರ ಸಂಖ್ಯೆ:ಪಿಜಿಇಟಿ-9/ ಕೌನ್ಸಿಲಿಂಗ್/01-2009-10 ದಿನಾಂಕ:26/06/2009.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನಿರತ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು 2009-10ನೇ ಸಾಲಿನ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಅರ್ಜಿ ಸಲ್ಲಿಸಿ, ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಉಲ್ಲೇಖ-2 ರಲ್ಲಿ ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಿರುವಂತೆ, ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಆಯ್ಕೆ ಪಟ್ಟಿಯೊಂದಿಗೆ ಉಲ್ಲೇಖ-1 ರಲ್ಲಿ ಕಳುಹಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೂಡಲೇ ಜಾರಿಗೆ ಬರುವಂತೆ ಈ ಅಧಿಸೂಚನೆಯ ಅನುಬಂಧದಲ್ಲಿರುವ 102 ವೈದ್ಯಾಧಿಕಾರಿಗಳನ್ನು ಅವರುಗಳ ಹೆಸರಿನ ಮುಂದೆ ನಮೂದಿಸಿರುವ ವಿಷಯ ಮತ್ತು ಕಾಲೇಜುಗಳಿಗೆ ನಿಯೋಜಿಸಲಾಗಿದೆ.

2. ಸಂಬಂಧಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಸಂಬಂಧಿಸಿದ ಮೇಲಾಧಿಕಾರಿಗಳು ಕರ್ನಾಟಕ ಸರ್ಕಾರಿ ಸೇವಾ ನಿಯಮಗಳಲ್ಲಿ ನಿಗದಿಪಡಿಸಿರುವಂತೆ ಹಾಗೂ ಪ್ರಸ್ತುತ ಜಾರಿಯಲ್ಲಿರುವ ನಿಯಮಗಳಂತೆ ನಮೂನೆ 19 ಮತ್ತು 19-ಎ ಹಾಗೂ ಪೆನಾಲ್ಟಿ ಬಾಂಡ್ ಪಡೆದು ಕೂಡಲೇ ಕರ್ತವ್ಯದಿಂದ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು.

3. ಈ ಅಧಿಸೂಚನೆಯ ಅನುಬಂಧದಲ್ಲಿ ತಿಳಿಸಿರುವ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆಯಾಗಿರುವ ಸೇವಾನಿರತ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಸ್ನಾತಕೋತ್ತರ ಕೋರ್ಸಿಗೆ ಪ್ರವೇಶ ಪಡೆದ ನಂತರ ವ್ಯಾಸಂಗದ ರಜೆ ಅಥವಾ ಪ್ರತಿನಿಯೋಜನಾ ರಿಯಾಯಿತಿ ಸೌಲಭ್ಯ ಮಂಜೂರಾತಿಗೆ ಸಂಬಂಧಿಸಿದಂತೆ ಸರ್ಕಾರವು ಪ್ರತ್ಯೇಕವಾಗಿ ಪರಿಶೀಲಿಸಿ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು. ಸ್ನಾತಕೋತ್ತರ ಕೋರ್ಸಿಗೆ ಪ್ರವೇಶ ಪಡೆದ ದಿನಾಂಕದಿಂದ ಜಾರಿಗೆ ಬರುವಂತೆ ಸರ್ಕಾರದ ಮಂಜೂರಾತಿ ಇಲ್ಲದೇ ಈ ಅಭ್ಯರ್ಥಿಗಳು ವೇತನ/ರಜೆಯ ವೇತನ ಪಡೆಯಲು ಅವಕಾಶವಿರುವುದಿಲ್ಲ.

4. 2009-10ನೇ ಸಾಲಿನಲ್ಲಿ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆಯಾದ ಈ ಅಧಿಸೂಚನೆಯ ಅನುಬಂಧದಲ್ಲಿ ತಿಳಿಸಿರುವ ಸೇವಾನಿರತ ವೈದ್ಯರು ಸಂಬಂಧಪಟ್ಟ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸು ಪ್ರಾರಂಭವಾಗುವವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳದಲ್ಲಿ ಮುಂದುವರೆಯುವುದು ಹಾಗೂ ತದನಂತರ ಕರ್ತವ್ಯದಿಂದ ಬಿಡುಗಡೆಗೊಳ್ಳತಕ್ಕದ್ದು. ಸಂಬಂಧಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಸಂಬಂಧಿಸಿದ ಮೇಲಾಧಿಕಾರಿಗಳು ಅದರಂತೆ ಕ್ರಮತೆಗೆದುಕೊಳ್ಳಬೇಕೆಂದು ಆದೇಶಿಸಲಾಗಿದೆ.

5. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 693 ವೆಚ್ಚ-5 : 2008 ದಿನಾಂಕ: 31-05-2008 ರಲ್ಲಿ 5 ವರ್ಷಕ್ಕಿಂತ ಕಡಿಮೆ ಹಾಗೂ 3 ವರ್ಷ ಮೇಲ್ಪಟ್ಟು ಸರ್ಕಾರಿ ಸೇವೆ ಸಲ್ಲಿಸಿರುವ ಸೇವಾನಿರತ ಸ್ನಾತಕೋತ್ತರ ವ್ಯಾಸಂಗ ನಡೆಸುತ್ತಿರುವ ವೈದ್ಯಾಧಿಕಾರಿಗಳಿಂದ ಪರಿಷ್ಕೃತ ಕರಾರು ಬಂಧ ಪತ್ರವನ್ನು ಪಡೆಯುವ ಷರತ್ತಿಗೊಳಪಟ್ಟು ನೀಡಿರುವ ಸಹಮತಿಯೊಂದಿಗೆ ಹೊರಡಿಸಿದೆ.

6. ಸ್ನಾತಕೋತ್ತರ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿ/ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯ ಮೇಲಿನ ಅಂತಿಮ ತೀರ್ಮಾನಕ್ಕೆ ಈ ಆದೇಶವು ಒಳಪಟ್ಟಿರುತ್ತದೆ.

ಈ ಅಧಿಸೂಚನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಆಇ 02 ಎಸ್‌ಆರ್‌ಎ 2008 ದಿನಾಂಕ:05-06-2008 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಐ. ಹೇಮನಾಥ್**

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು-1).

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 86 ಹೆಚ್‌ಎಸ್‌ಹೆಚ್ 2009 (ಭಾಗ-2) ದಿನಾಂಕ: 30/06/2009 ಕ್ಕೆ ಅನುಬಂಧ

| ಕ್ರ ಸಂ. | ವೈದ್ಯರ ಹೆಸರು ಮತ್ತು ಕಾರ್ಯನಿರತ ಸ್ಥಳ | ವಿಷಯ | ಆಯ್ಕೆ ಮಾಡಿಕೊಂಡ ವೈದ್ಯಕೀಯ ಕಾಲೇಜಿನ ಹೆಸರು |
|---|---|---|---|
| 1 | ಡಾ: ಪ್ರಶಾಂತ್ ಹೆಚ್.ಕೆ.<br>ಪ್ರಾಆಕೇಂದ್ರ, ಸಾತನೂರು, ಕನಕಪುರ ತಾ:<br>ರಾಮನಗರ ಜಿಲ್ಲೆ | DCH | ಆದಿಚುಂಚನಗಿರಿ ಮೆಡಿಕಲ್ ಕಾಲೇಜ್, ಬೆಳ್ಳೂರು |
| 2 | ಡಾ: ರಂಗಸ್ವಾಮಿ ಹೆಚ್.ವಿ.<br>ಜಿಲ್ಲಾ ಕ್ಷಯರೋಗಯ ನಿಯಂತ್ರಾಣಾಧಿಕಾರಿ<br>ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ,<br>ತುಮಕೂರು | MD Com. Med | ಆದಿಚುಂಚನಗಿರಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಕಾಲೇಜ್, ಬೆಳ್ಳೂರು |
| 3 | ಡಾ: ಶ್ರೀಕಾಂತ್ ಎಸ್.<br>ಪ್ರಾಆಕೇ. ಹಾರಮಘಟ್ಟ ಶಿವಮೊಗ್ಗ ಜಿಲ್ಲೆ | MD GM | ಆದಿಚುಂಚನಗಿರಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಕಾಲೇಜ್, ಬೆಳ್ಳೂರು |
| 4 | ಡಾ: ಮಂಜುನಾಥ ಪ್ರಸಾದ್,<br>ಪ್ರಾ.ಆ.ಕೇಂದ್ರ, ರಿಪ್ಪನ್‌ಪೇಟೆ, ಶಿವಮೊಗ್ಗ | MS ENT | ಎ.ಜೆ. ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಮಂಗಳೂರು |
| 5 | ಡಾ: ಶಶಿಕಲಾ ಎಸ್.<br>ಎಸ್.ಡಿ.ಎಸ್. ಟಿಬಿ ಮತ್ತು ಆರ್.ಜಿ.ಐ.ಸಿ.ಡಿ.<br>ಬೆಂಗಳೂರು | MD Bio Chem | ಎ.ಜೆ. ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಮಂಗಳೂರು |
| 6 | ಡಾ: ಬಯಪ್ಪರೆಡ್ಡಿ,<br>ಪ್ರಾ.ಆ.ಕೇಂದ್ರ, ಕೊಡಿಗೇನಹಳ್ಳಿ, ಮಧುಗಿರಿ ತಾ:<br>ತುಮಕೂರು ಜಿಲ್ಲೆ | DMRD | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 7 | ಡಾ: ಭಾರತಿ ಅಂಜಗಿ,<br>ನಿಯೋಜನೆ ಮೇಲೆ, ಕೃಭಾ.ಜ.ನಿಗಮ<br>ನಿಯಮಿತ, ಆಲಮಟ್ಟಿ-586201 | MS OBG | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 8 | ಡಾ: ಹೇಮಂತ್ ಎಸ್.ಎನ್.<br>ಪ್ರಾ.ಆ.ಕೇಂದ್ರ, ಅಮ್ಮತೂರು, ಕುಣಿಗಲ್ ತಾ:<br>ತುಮಕೂರು ಜಿಲ್ಲೆ | MS GS | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 9 | ಡಾ: ಮಂಜುಳ ಎಸ್.ಸಿ.<br>ಪ್ರಾ.ಆ.ಕೇಂದ್ರ, ಉಲ್ಲಾಳು, ಬೆಂ.ನ. ಜಿಲ್ಲೆ | MD Phrma | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 10 | ಡಾ: ನಟರಾಜ್ ಬಿ.<br>ಪ್ರಾ.ಆ.ಕೇಂದ್ರ, ಸಾಗರಕಟ್ಟೆ, ಮೈಸೂರು ಜಿಲ್ಲೆ | MD RD | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 11 | ಡಾ: ಪೂರ್ಣಿಮ ಸಿ.<br>ಆ.ಕೇಂದ್ರ, ಭುವನೇಶ್ವರಿ ನಗರ, ಬೆಂ.ಮ.ನ.ಪಾ.<br>ಬೆಂಗಳೂರು | MD Com. Med | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 12 | ಡಾ: ಪ್ರತಿಭಾ ಜೆ.<br>ಪ್ರಾಆಕೇಂ. ಹೊಸೂರು , ಮೈಸೂರು ಜಿಲ್ಲೆ | MD Micro | ಬೆಂಗಳೂರು ಮೆಡಿಕಲ್ ಕಾಲೇಜ್, ಬೆಂಗಳೂರು |
| 13 | ಡಾ: ಪ್ರಿಯ ಆರ್.<br>ಪ್ರಾ.ಆ.ಕೇಂದ್ರ, ಕನಕವಾಡಿ, ದೊಡ್ಡಬಳ್ಳಾಪುರ<br>ತಾ: ಬೆಂ. ಗ್ರಾ ಜಿಲ್ಲೆ | DGO | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 14 | ಡಾ: ರಮಣನ್ ವಿ.<br>ಪ್ರಾ.ಆ.ಕೇಂದ್ರ, ಕೊನೇನಹಳ್ಳಿ, ದೊಡ್ಡಬಳ್ಳಾಪುರ<br>ತಾ: ಬೆಂ. ಗ್ರಾ. ಜಿಲ್ಲೆ | MSGS | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 15 | ಡಾ: ಶಂಕರಪ್ಪ ಆರ್.ವಿ.<br>ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ | MD Anae | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 16 | ಡಾ: ಶಿವಣ್ಣಗೌಡ ಎಸ್ ಪಾಟೀಲ್.<br>ಪ್ರಾಆಕೇ. ಅಮ್ಮಣಗಿ, ಹುಕ್ಕೇರಿ ತಾ:; ಚಿಕ್ಕೋಡಿ | MD GM | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |

| ಕ್ರ ಸಂ. | ವೈದ್ಯರ ಹೆಸರು ಮತ್ತು ಕಾರ್ಯನಿರತ ಸ್ಥಳ | ವಿಷಯ | ಆಯ್ಕೆ ಮಾಡಿಕೊಂಡ ವೈದ್ಯಕೀಯ ಕಾಲೇಜಿನ ಹೆಸರು |
|---|---|---|---|
| 17 | ಡಾ: ಶ್ರೀಧರ್ ಜಿ.<br>ಪ್ರಾಆಕೇಂ. ಕೆ.ಜಿ. ಹಳ್ಳಿ, ಬೆಂ. ನಗರ ಜಿಲ್ಲೆ | DVD | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 18 | ಡಾ: ಶ್ರೀಧರ್ ಬಿ.ಟಿ.<br>ಪ್ರಾ.ಆ.ಕೇಂದ್ರ, ತಳಗವಾದಿ, ಮಳವಳ್ಳಿ ತಾ: ಮಂಡ್ಯ ಜಿಲ್ಲೆ | DOMS | ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು |
| 19 | ಡಾ: ಶ್ರೀನಿವಾಸ.ಎನ್.<br>ಸ.ಆ.ಕೇಂದ್ರ, ಜೆ.ಮಲ್ಲಾಪುರ, ರಾಯಚೂರು ಜಿಲ್ಲೆ | DCH | ಬೆಂಗಳೂರು ಮೆಡಿಕಲ್ ಕಾಲೇಜ್, ಬೆಂಗಳೂರು |
| 20 | ಡಾ: ಸುಧಾ ಸಿ.<br>ಪ್ರಾ.ಆ.ಕೇಂದ್ರ, ಸಿಂಗಟಗೆರೆ, ಕಡೂರು ತಾ: ಚಿಕ್ಕಮಗಳೂರು | DLO | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 21 | ಡಾ: ಸುಜಾತ.ಹೆಚ್ಎಸ್.<br>ಸ.ಆ.ಕೇಂದ್ರ, ಪಡುವಲಹಿಪ್ಪೆ, ಹೆಚ್.ಎನ್.ಪುರ ತಾ: ಹಾಸನ ಜಿಲ್ಲೆ | MD Phy | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 22 | ಡಾ: ವೀಣಾ ಪಿ.ಎಸ್.<br>ಪ್ರಾ.ಆ.ಕೇಂದ್ರ, ಅಜಕಾರು, ಕಾರ್ಕಳ ತಾ: ಉಡುಪಿ ಜಿಲ್ಲೆ | DLO | ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು |
| 23 | ಡಾ: ಸಿ.ಎನ್. ಪ್ರಭಾವತಿ,<br>ಪ್ರಾಆಕೇಂ. ಚಿಕ್ಕಮದುವಾಡಿ, ಕನಕಪುರ ತಾ: ರಾಮನಗರ ಜಿಲ್ಲೆ | DGO | ಡಾ॥ ಬಿ.ಆರ್.ಅಂಬೇಡ್ಕರ್ ಮೆಡಿಕಲ್ ಕಾಲೇಜ್, ಬೆಂಗಳೂರು |
| 24 | ಡಾ: ವೀಣಾ ಹೆಚ್.<br>ಪ್ರಾ.ಆ.ಕೇಂದ್ರ, ಗೂಳೂರು, ತುಮಕೂರು ತಾ: ಜಿಲ್ಲೆ | MD Com. Med | ಬಿ.ಆರ್.ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು |
| 25 | ಡಾ: ಭಗವಾನ್ ಬಿ.<br>ಸ.ಆ.ಕೇಂದ್ರ, ಕಮಲಾನಗರ, ಔರಾದ್ ಬಿ. ತಾ: ಬೀದರ್ ಜಿಲ್ಲೆ | MSGS | ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜ್, ಮಂಗಳೂರು |
| 26 | ಡಾ: ಶೋಭಾ ವಿ.<br>ಪ್ರಾ.ಆ.ಕೇಂದ್ರ, ಅಣ್ಣೀಹಳ್ಳಿ, ಕೋಲಾರ ತಾ; | MD Skin & VD | ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜ್, ಮಂಗಳೂರು |
| 27 | ಡಾ: ಲಲಿತಾ ಎಂ.<br>ಪ್ರಾ.ಆ.ಕೇಂದ್ರ, ಮಲ್ಲನಾಯಕಹಳ್ಳಿ, ಮುಳಬಾಗಿಲು ತಾ: ಕೋಲಾರ ಜಿಲ್ಲೆ | DCH | ಇಂದಿರಾಗಾಂಧಿ ಇನ್ಸ್ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್, ಬೆಂಗಳೂರು |
| 28 | ಡಾ: ಸುರೇಶ ಟಿ.ಎನ್.<br>ಜಿಲ್ಲಾ ಆಸ್ಪತ್ರೆ, ಮಂಡ್ಯ ಜಿಲ್ಲೆ | MD Pdea | ಇಂದಿರಾಗಾಂಧಿ ಇನ್ಸ್ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ, ಬೆಂಗಳೂರು |
| 29 | ಡಾ: ಆನಂದಕುಮಾರ್ ಗುರುಪಾದಪ್ಪ,<br>ಸಾ.ಆ. ಆಳಂದ, ಗುಲ್ಬರ್ಗಾ ಜಿಲ್ಲೆ | MD Patho | ಜೆ.ಜೆ.ಎಂ.ಮೆಡಿಕಲ್ ಕಾಲೇಜ್, ದಾವಣಗೆರೆ |
| 30 | ಡಾ: ಪ್ರವೀಣ ಕುಮಾರ್ ಕೆ.ಎಸ್.<br>ತಾ.ಆ. ರಾಣಿಬನ್ನೂರು, ಹಾವೇರಿ ಜಿಲ್ಲೆ | MS OBG | ಜೆ.ಜೆ.ಎಂ.ಮೆಡಿಕಲ್ ಕಾಲೇಜ್, ದಾವಣಗೆರೆ |
| 31 | ಡಾ: ಗಿರೀಶ ಬಿ. ಸಂಗಮ,<br>ಪ್ರಾ.ಆ.ಘಟಕ, ಚಿತ್ರರಗಿ, ಹುನಗುಂದ ತಾ: ಬಾಗಲಕೋಟೆ ಜಿಲ್ಲೆ | MD GM | ಜೆ.ಜೆ.ಎಂ.ಮೆಡಿಕಲ್ ಕಾಲೇಜ್, ದಾವಣಗೆರೆ |
| 32 | ಡಾ: ನಾಗರಾಜು ಎಸ್.<br>ಪ್ರಾ.ಆ.ಕೇಂದ್ರ, ಅರೆಮಲ್ಲಾಪುರ, ರಾಣಿಬೆನ್ನೂರು ತಾ: ಹಾವೇರಿ ಜಿಲ್ಲೆ | DA | ಜೆ.ಜೆ.ಎಂ.ಮೆಡಿಕಲ್ ಕಾಲೇಜ್, ದಾವಣಗೆರೆ |

| ಕ್ರ ಸಂ. | ವೈದ್ಯರ ಹೆಸರು ಮತ್ತು ಕಾರ್ಯನಿರತ ಸ್ಥಳ | ವಿಷಯ | ಆಯ್ಕೆ ಮಾಡಿಕೊಂಡ ವೈದ್ಯಕೀಯ ಕಾಲೇಜಿನ ಹೆಸರು |
|---|---|---|---|
| 33 | ಡಾ: ಪ್ರಕಾಶ್ ಸಿ. ಪ್ರಾಆಘ. ವಿದ್ಯಾನಗರ, ಶಿವಮೊಗ್ಗ ಜಿಲ್ಲೆ | D Ortho | ಜೆ.ಜೆ.ಎಂ.ಮೆಡಿಕಲ್ ಕಾಲೇಜ್, ದಾವಣಗೆರೆ |
| 34 | ಡಾ: ಪ್ರೀತಿ ಜೆ.ಎಂ. ನ.ಆ.ಕೇಂದ್ರ, ಉಜ್ಜಿನಪುರ, ಶಿವಮೊಗ್ಗ | MD Anae | ಜೆ.ಜೆ.ಎಂ.ಮೆಡಿಕಲ್ ಕಾಲೇಜ್, ದಾವಣಗೆರೆ |
| 35 | ಡಾ: ರಘು ಜೆ.ಎನ್. ಪ್ರಾ.ಆ.ಕೇಂದ್ರ, ಹೂವಿನಹಳ್ಳಿ ಕಾವಲು, ಹಾಸನ ಜಿಲ್ಲೆ | DPM | ಜೆ.ಜೆ.ಎಂ.ಮೆಡಿಕಲ್ ಕಾಲೇಜ್, ದಾವಣಗೆರೆ |
| 36 | ಡಾ: ಶ್ರೀಕಾಂತ ಪ್ರಾ.ಆ.ಕೇಂದ್ರ, ಬೆಳ್ವೆ, ಕುಂದಾಪುರ ತಾ: ಉಡುಪಿ ಜಿಲ್ಲೆ | DLO | ಜೆ.ಜೆ.ಎಂ.ಮೆಡಿಕಲ್ ಕಾಲೇಜ್, ದಾವಣಗೆರೆ |
| 37 | ಡಾ: ಸುಬ್ರಾಯ್ ಹೆಚ್. ತಾ.ಆ. ಭಟ್ಕಳ, ಉ.ಕ. ಜಿಲ್ಲೆ | MD Pead. | ಜೆ.ಜೆ.ಎಂ.ಮೆಡಿಕಲ್ ಕಾಲೇಜ್, ದಾವಣಗೆರೆ |
| 38 | ಡಾ: ವಿಜಯಲಕ್ಷ್ಮಮ್ಮ ವಿ. ಕುಟುಂಬ ಕಲ್ಯಾಣ, ಮಾಗಡಿ ರಸ್ತೆ, ಬೆಂ. | DGO | ಜೆ.ಜೆ.ಎಂ.ಮೆಡಿಕಲ್ ಕಾಲೇಜ್, ದಾವಣಗೆರೆ |
| 39 | ಡಾ: ಚಿಕ್ಕಬೋರೆಗೌಡ, ಪ್ರಾ.ಆ.ಕೇಂದ್ರ, ನಾರಾಯಣಪುರ, ಪಾಂಡವಪುರ ತಾ: ಮಂಡ್ಯ ಜಿಲ್ಲೆ | MS GS | ಕಿಮ್ಸ್, ಹುಬ್ಬಳ್ಳಿ |
| 40 | ಡಾ: ಹರೀಶ್ ಬಿ.ಹೆಚ್. ಪ್ರಾ.ಆ.ಕೇಂದ್ರ, ತೇರದಕುಪ್ಪ, ತುಮಕೂರು ಜಿಲ್ಲೆ | MS Opthal | ಕಿಮ್ಸ್, ಹುಬ್ಬಳ್ಳಿ |
| 41 | ಡಾ: ಹೇಮಂತ ನಂದಕುಮಾರ ಭಟ್, ಪ್ರಾ.ಆ.ಘಟಕ, ಚವತ್ತಿ, ಯಲ್ಲಾಪುರ, ಉ.ಕ. ಜಿಲ್ಲೆ | DA | ಕಿಮ್ಸ್, ಹುಬ್ಬಳ್ಳಿ |
| 42 | ಡಾ: ಜಯಲಕ್ಷ್ಮೀ ಬಿ.ಎನ್. ಪ್ರಾ.ಆ.ಕೇಂದ್ರ, ಕಳಸಾಪುರ, ಚಿಕ್ಕಮಗಳೂರು ಜಿಲ್ಲೆ | DGO | ಕಿಮ್ಸ್, ಹುಬ್ಬಳ್ಳಿ |
| 43 | ಡಾ: ಮಹೇಶ್, ಪ್ರಾ.ಆ.ಕೇಂದ್ರ, ಉದ್ದೂರು, ಮೈಸೂರು ತಾ: ಜಿಲ್ಲೆ | MS GS | ಕಿಮ್ಸ್, ಹುಬ್ಬಳ್ಳಿ |
| 44 | ಡಾ: ಮಂಜುನಾಥ ಎಸ್.ಇ. ಪ್ರಾ.ಆ.ಕೇಂದ್ರ, ಮೇಗರವಳ್ಳಿ, ಶಿವಮೊಗ್ಗ ಜಿಲ್ಲೆ | D Ortho | ಕಿಮ್ಸ್, ಹುಬ್ಬಳ್ಳಿ |
| 45 | ಡಾ: ನಾರಾಯಣಸ್ವಾಮಿ ಆರ್.ಆರ್. ಪ್ರಾ.ಆ.ಕೇಂದ್ರ, ಕೋಡ್ಲಾಪುರ, ಮಧುಗಿರಿ ತಾ: ತುಮಕೂರು ಜಿಲ್ಲೆ | MS GS | ಕಿಮ್ಸ್, ಹುಬ್ಬಳ್ಳಿ |
| 46 | ಡಾ: ಪ್ರಗತಿ ಜೆ. ಭೋರಗಾಂವ್, ಪ್ರಾ.ಆ.ಕೇಂದ್ರ, ನಂದಗಡ, ಖಾನಾಪುರ ತಾ: ಬೆಳಗಾಂ ಜಿಲ್ಲೆ | DOMS | ಕಿಮ್ಸ್, ಹುಬ್ಬಳ್ಳಿ |
| 47 | ಡಾ: ವಿಜಯಕುಮಾರ್ ರಾವ್ ಎಸ್.ಆರ್.ಡಿ. ಪ್ರಾ.ಆ.ಕೇಂದ್ರ, ಜೆ.ಜಿ.ಹಳ್ಳಿ, ಚಿತ್ರದುರ್ಗ ಜಿಲ್ಲೆ | DVD | ಕಿಮ್ಸ್, ಹುಬ್ಬಳ್ಳಿ |
| 48 | ಡಾ: ಶಾಂತಗೌಡ ಪಿ.ಕೆ. ವೈದ್ಯಾಧಿಕಾರಿ, ಪ್ರಾಆಕೇ. ಲಿಂಗನೂರು, ಬಾಗಲಕೋಟೆ ಜಿಲ್ಲೆ | D Ortho | ಕಿಮ್ಸ್, ಹುಬ್ಬಳ್ಳಿ |

| ಕ್ರ ಸಂ. | ವೈದ್ಯರ ಹೆಸರು ಮತ್ತು ಕಾರ್ಯನಿರತ ಸ್ಥಳ | ವಿಷಯ | ಆಯ್ಕೆ ಮಾಡಿಕೊಂಡ ವೈದ್ಯಕೀಯ ಕಾಲೇಜಿನ ಹೆಸರು |
|---|---|---|---|
| 49 | ಡಾ: ಶರಣಬಸವ, ಪ್ರಾ.ಆ.ಕೇಂದ್ರ, ಮುಸಲಾಪುರ, ಕುಷ್ಟಗಿ ತಾ: ಕೊಪ್ಪಳ ಜಿಲ್ಲೆ | MD GM | ಕಿಮ್ಸ್, ಹುಬ್ಬಳ್ಳಿ |
| 50 | ಡಾ: ಶ್ಯಾಮಲಾ ಶೆಟ್ಟರ್, ಸ.ಆ.ಕೇಂದ್ರ, ಕುಂದಗೋಳ, ಧಾರವಾಡ | MD Micro | ಕಿಮ್ಸ್, ಹುಬ್ಬಳ್ಳಿ |
| 51 | ಡಾ: ವಿಜಯಶಂಕರ್, ಪ್ರಾ.ಆ.ಕೇಂದ್ರ, ಬಲಟಗಿ, ಮಾನ್ವಿ ತಾ: ರಾಯಚೂರು ಜಿಲ್ಲೆ | DA | ಕಿಮ್ಸ್, ಹುಬ್ಬಳ್ಳಿ |
| 8. | ಮಕ್ಕಿಮನೆ, ಹೇರಂಭಾಪುರ, ಕಟ್ಟೆಹಕ್ಕಲು ಮೃಗವಧೆ ಮಳಂದೂರು ರಸ್ತೆ | 21.00 |
| 9. | ಕೋಣಂದೂರು ಕೋದುರು ರಸ್ತೆ ಮಾರ್ಗ ಮಳಲಿಮಕ್ಕಿ ನೊಣಬೂರು, ಅಂಬುತೀರ್ಥ ಬಂದ್ಯ | 15.00 |
| 10. | ಅರಗ ಶಂಕರಹಳ್ಳಿ ರಸ್ತೆ ಮಾರ್ಗ ನೊಣಬೂರು ಮಲ್ಲೇಸರ | 15.00 |
| 11. | ಬಿಳಿಕೊಪ್ಪಸಾತಗೋಡು ರಸ್ತೆ | 7.00 |
| 12. | ಕಲವಳ್ಳಿ ಕವಲೇದುರ್ಗ ರಸ್ತೆ ಮಾರ್ಗ ಕೆಸ್ತೂರು, ಕಡಸವಳ್ಳಿ ಅಂದಬೈಲು | 10.00 |
| 13. | ಬಿದರಗೋಡು ಮುತ್ತಳ್ಳಿ ರಸ್ತೆ | 4.50 |
| 14. | ದಾನಸಾಲೆ-ಬಿಸಿಲುಮನೆ-ಅತ್ತಿಗದ್ದೆ-ಕನ್ನಂಗಿ ರಸ್ತೆ | 6.50 |
| 15. | ಎನ್.ಹೆಚ್-13ರ ಕಿ.ಮೀ 566ರಲ್ಲಿ ಇರುವ ಬಿಳುಮಂಡೆಯಿಂದ ಉಬ್ಲೂರು-ಕನ್ನಂಗಿ ರಸ್ತೆ | 10.00 |
| 16. | ಮಾಸ್ತಿಕಲ್ಲು-ಬಸರವಾನಿ-ಕನ್ನಂಗಿ ರಸ್ತೆ | 4.00 |
| | ಒಟ್ಟು | **120.00** |
| | **ಭದ್ರಾವತಿ ತಾಲ್ಲೂಕು** | |
| 17. | ಭದ್ರಾವತಿ-ಹೊಳೆಹೊನ್ನೂರು ರಸ್ತೆಯಿಂದ ಎಂ.ಎಂ.ರಸ್ತೆಗೆ ಸೇರುವುದು ಎಮ್ಮೆಹಟ್ಟಿ, ತಿಮ್ಲಾಪುರ, ಮಾರಶೆಟ್ಟಿಹಳ್ಳಿ, ಕಲ್ಲಿಹಾಳು, ಅರಕೆರೆ, ದಾನವಾಡಿ ಮೂಲಕ | 10.00 |
| 18. | ಭದ್ರಾವತಿ ತಾಲ್ಲೂಕು ರಪಸ ಗುಡುಮಘಟ್ಟ, ಆನವೇರಿ, ಅರಿಶಿನಘಟ್ಟ, ದಿಗ್ಗೇನಹಳ್ಳಿ, ಸೈದರ್ ಕಲ್ಲಹಳ್ಳಿ ಸೇರುವ ರಸ್ತೆ | 15.00 |
| 19. | ಕೆ.ಕೆ.ರಸ್ತೆಯಿಂದ ಎಂ.ಎಂ.ರಸ್ತೆಗೆ ಸೇರುವುದು ಅರಕೆರೆ, ಕೋಡಿಹಳ್ಳಿ ಮೂಲಕ | 5.50 |
| 20. | ಹೆಚ್.ಎ.ರಸ್ತೆಯಿಂದ ಹೊಸ ಸನ್ಯಾಸಿ ಕೋಡಮಗ್ಗೆ ಮಂಡ್ಯ ಕ್ಯಾಂಪ್, ಕನಸಿನಕಟ್ಟೆ, ಸಿದ್ಲಿಪುರಕ್ಕೆ ಸೇರುವ ರಸ್ತೆ | 8.50 |
| | ಒಟ್ಟು | **39.00** |
| | **ಸಾಗರ ತಾಲ್ಲೂಕು** | |
| 21. | ಹುಕ್ಕೇರಿ-ಹುಣಾಲುಮಡಿಕೆ-ಆವಿನಹಳ್ಳಿ ರಸ್ತೆ | 14.00 |
| 22. | ಉಳ್ಳೂರು-ಬಾಳೆಗೂಂಡಿ-ನೀಚಡಿ-ಹೊಸಂತೆ-ಕೋಟೆಕೊಪ್ಪ ಗೌತಮಪುರ ರಸ್ತೆ | 19.50 |
| | ಒಟ್ಟು | **33.50** |
| | **ದಾವಣಗೆರೆ ಜಿಲ್ಲೆ** | |
| | **ಜಗಳೂರು ತಾಲ್ಲೂಕು** | |
| 23. | ಕೊಟ್ಟೂರು-ಲಕ್ಕಂಪುರ ರಸ್ತೆ ಮಾರ್ಗ ನಾಗರಕಟ್ಟೆ, ಸೊಕ್ಕೆ, ಚಿಕ್ಕಬಂಟನಹಳ್ಳಿ | 5.50 |
| 24. | ಅಣಜಿ-ಸೊಕ್ಕೆ ರಸ್ತೆ ಮಾರ್ಗ ಕುರುಡಿ, ಮರುಕುಂಟೆ, ಪಲ್ಲಾಗಟ್ಟೆ | 4.50 |
| 25. | ಜಗಳೂರು-ಹಿರೇಮೇಗಳಗೆರೆ ರಸ್ತೆ ಪಲ್ಲಾಗಟ್ಟೆ, ಉಚ್ಚಂಗಿದುರ್ಗ | 27.00 |
| 26. | ರಾಜ್ಯಹೆದ್ದಾರಿ-45ರಿಂದ ಚಿಕ್ಕಮಲ್ಲನಹೊಳೆ ಮಾರ್ಗ ಗೌರೀಪುರ, ಹುಚ್ಚವ್ವನ ಹಳ್ಳಿ | 22.00 |
| 27. | ದೇವಿಕೆರೆ-ಪಲ್ಲಾಗಟ್ಟೆ ರಸ್ತೆ ಮಾರ್ಗ ಸೊರಡ್ಡಿಹಳ್ಳಿ | 12.00 |

| ಕ್ರ ಸಂ | ಗ್ರಾಮೀಣ ರಸ್ತೆಗಳ ವಿವರ | ಕಿ.ಮೀ ಗಳಲ್ಲಿ |
|---|---|---|
| 28. | ಜಗಳೂರು-ಜಮ್ಮಾಪುರ ರಸ್ತೆ | 9.00 |
| 29. | ರಾಜ್ಯ ಹೆದ್ದಾರಿ-65ರಿಂದ ಕೆಚ್ಚೇನಹಳ್ಳಿ(ರಾಜ್ಯ ಹೆದ್ದಾರಿ-45) ಮಾರ್ಗ ಮದಿಕೇರೆನಹಳ್ಳಿ ಐಯ್ಯನಹಳ್ಳಿ ರಸ್ತೆ | 16.00 |
| 30. | ಮುಗ್ಗಿದ ರಾಗಿಹಳ್ಳಿ ಮುಚ್ಚನೂರು ರಸ್ತೆ ಮಾರ್ಗ ಹಾಲೇಕಲ್ಲು | 8.00 |
| 31. | ರಂಗಾಪುರ ಗಡಿಮಾಕುಂಟೆ ರಸ್ತೆ ಮಾರ್ಗ ಗೌರಮ್ಮನಹಳ್ಳಿ | 22.00 |
| 32. | ಹಿರೇಮಲ್ಲನಹೊಳೆ ಹುಚ್ಚವ್ವನಹಳ್ಳಿ ರಸ್ತೆ | 4.00 |
| | **ಒಟ್ಟು** | **130.00** |
| | **ಚಿಕ್ಕಮಗಳೂರು ಜಿಲ್ಲೆ** | |
| | **ತರೀಕೆರೆ ತಾಲ್ಲೂಕು(ಬೀರೂರು ವಿ.ಸ)** | |
| 33. | ತರೀಕೆರೆ ತಾಲ್ಲೂಕು ಗೂಳ್ಳೂರು ಮನೆ-ಬಿ.ಟಿ.ರಸ್ತೆಯಿಂದ ಮಲ್ಲಿಗೆಹಳ್ಳಿ ರಸ್ತೆ | 4.00 |
| | **ಒಟ್ಟು** | **4.00** |
| | **ಮೈಸೂರು ಜಿಲ್ಲೆ** | |
| | **ನಂಜನಗೂಡು ತಾಲ್ಲೂಕು(ವರುಣಾ ವಿ.ಸ)** | |
| 34. | ಮಡಹಳ್ಳಿಯಿಂದ ಬದನವಾಳಿಗೆ ಅಳಗಂಚಿ, ದೇವನೂರು ಮಾರ್ಗವಾಗಿ ಸೇರುವ ರಸ್ತೆ (ಎಸ್.ಹೆಚ್.57ರಿಂದ 80) | 6.40 |
| 35. | ತಗಡೂರಿನಿಂದ ಕಾರೆಪುರಕ್ಕೆ ಚಿನ್ನಂಬಳ್ಳಿ ಕಾರ್ಯ ಮಾರ್ಗವಾಗಿ ಸೇರುವ ರಸ್ತೆ (ಎಸ್.ಹೆಚ್.57ರಿಂದ 57ಗೆ) | 9.00 |
| 36. | ಹನುಮನಪುರದಿಂದ ಪಿ.ಮರಹಳ್ಳಿ-ಅವತಾಳಪುರ ಮಾರ್ಗ ದೊಡ್ಡಹೊಮ್ಮ ಸೇರುವ ರಸ್ತೆ | 8.00 |
| 37. | ಎಸ್.ಹೆಚ್.80ರಿಂದ ಎಸ್.ಹೆಚ್.80ಗೆ ಕೋಣನೂರು-ಕೋಣನುಪುರ-ಕೋಣನೂರುಪಾಳ್ಯ ರಸ್ತೆ | 5.00 |
| 38. | ಸಿರಾ-ನಂಜನಗೂಡು ರಸ್ತೆಯಿಂದ ಬಿಳಿಗೆರೆ ಸೋನಹಳ್ಳಿ-ಸಣ್ಣಮಲ್ಲಪುರ-ಕಿರುಗುಂದ ಮಾರ್ಗವಾಗಿ ಮಡಹಳ್ಳಿಗೆ ಸೇರುವ ರಸ್ತೆ(ಎಸ್.ಹೆಚ್.84ರಿಂದ 57) | 7.00 |
| 39. | ದಾಸನೂರಿನಿಂದ ದೊಡ್ಡಹೊಮ್ಮ ಚಿಕ್ಕಹೊಮ್ಮ ಮಾರ್ಗವಾಗಿ ತೊರವಳ್ಳಿಗೆ ಸೇರುವ ರಸ್ತೆ | 6.40 |
| 40. | ಹೊಸಕೋಟೆಯಿಂದ ತುಂನೇರಳೆ ಮಾರ್ಗವಾಗಿ ಮರಡಿಹುಂಡಿ ಸೇರುವ ರಸ್ತೆ (ಎಸ್.ಹೆಚ್.84ಎ ರಿಂದ ಮಾರಡಿಹುಂಡಿ ಸೇರುವ ರಸ್ತೆ) | 5.00 |
| 41. | ಎನ್.ಟಿ.ಎನ್.ರಸ್ತೆಯಿಂದ ಜಿ.ಮರಹಳ್ಳಿ-ಬಿಳಗುಲಿ ಮಾರ್ಗ ಸಾಲುಂಡಿ (ಜೋಡಿಹರಿಪುರ)ಕ್ಕೆ ಸೇರುವ ರಸ್ತೆ | 6.00 |
| 42. | ದೇವನೂರಿನಿಂದ ವರಹಳ್ಳಿ ಮಾರ್ಗವಾಗಿ ತಗಡೂರಿಗೆ ಸೇರುವ ರಸ್ತೆ (ಎಂಡಿಆರ್ ರಿಂದ ಎಸ್.ಹೆಚ್.57 ಸೇರುವ ರಸ್ತೆ) | 4.00 |
| 43. | ಸಿರಾ-ನಂಜನಗೂಡು ಎಸ್.ಹೆಚ್.84 ರಸ್ತೆಯಿಂದ ಆಲಂಬೂರು-ಮಂಟಿ ಮಾರ್ಗವಾಗಿ ಬಾಗಲಕೋಟೆ-ಬಿಳಿಗಿರಿರಂಗನಬೆಟ್ಟ ಎಸ್.ಹೆಚ್.57 ಸೇರುವ ರಸ್ತೆ | 3.00 |
| | **ಒಟ್ಟು** | **59.80** |
| | **ಮೈಸೂರು ತಾಲ್ಲೂಕು(ಚಾಮುಂಡೇಶ್ವರಿ ವಿ.ಸ)** | |
| 44. | ತಿಬ್ಬಯ್ಯನಹುಂಡಿಯಿಂದ ಜೀವನಭೀಮನಗರ ಸೇರುವ ರಸ್ತೆ (ಎಲ್.ಐ.ಸಿ. ಕಾಲೋನಿ) ಮಾರ್ಗ ಮೂಗನಹುಂಡಿ ಲಿಂಗಾಬೂದಿಪಾಳ್ಯ | 7.80 |
| | **ಒಟ್ಟು** | **7.80** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.545

**ಎಸ್.ಆರ್. ರೇವಣ್ಣ**

ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

## ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ವಿ. ವಿಜಯಕುಮಾರ್, ಪಿ.ಎಸ್.ಐ. (ಸಿವಿಲ್) ದೇವನಹಳ್ಳಿ ಪೊಲೀಸ್ ಠಾಣೆ ರವರ ಪರಿವೀಕ್ಷಣಾ ಅವಧಿ ವಿಸ್ತರಿಸುವ ಕುರಿತು.

ಓದಲಾಗಿದೆ: 1) ಡಿಜಿ ಮತ್ತು ಐಜಿಪಿ, ಬೆಂಗಳೂರು ರವರ ಆದೇಶ ಸಂಖ್ಯೆ:8/ನೇಮಕಾತಿ/2000-01, ದಿನಾಂಕ 20-12-2001.

2) ಡಿಜಿ ಮತ್ತು ಐಜಿಪಿ, ಬೆಂಗಳೂರು ಇವರ ಪತ್ರ ಸಂಖ್ಯೆ:93/ಸಿಬ್ಬಂದಿ-1/2008-09, ದಿನಾಂಕ 05-01-2009.

**ಪ್ರಸ್ತಾವನೆ:**

ಶ್ರೀ ವಿ. ವಿಜಯಕುಮಾರ್, ಪಿಎಸ್ಐ, ದೇವನಹಳ್ಳಿ ಇವರು ಮೇಲ್ ಓದಲಾದ (1) ರಲ್ಲಿನ ಡಿಜಿ ಮತ್ತು ಐಜಿಪಿ ರವರ ಆದೇಶದನ್ವಯ ದಿನಾಂಕ 31-12-2001 ರಂದು ಸೇವಾ ನಿರತ ಪಿಎಸ್ಐ ಆಗಿ ನೇಮಕಗೊಂಡಿದ್ದು, ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು 2½ ವರ್ಷಗಳ ಪರಿವೀಕ್ಷಣಾ ಅವಧಿಯನ್ನು ಪೂರ್ಣಗೊಳಿಸಿರುತ್ತಾರೆ. ಆದರೆ ಹುದ್ದೆಗೆ ನಿಗಧಿಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ಕರ್ನಾಟಕ ಸಿವಿಲ್ ಸೇವಾ ನಿಯಮಗಳು (ಸೇವೆ & ಕನ್ನಡ ಭಾಷೆ ಪರೀಕ್ಷೆಗಳು), 1974 ರನ್ವಯ ನಿಗಧಿಪಡಿಸಲಾದ ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ಖಾಯಂಪೂರ್ವ ಅವಧಿಯೊಳಗೆ ಉತ್ತೀರ್ಣರಾಗಿರುವುದಿಲ್ಲ. ಎಸ್.ಎಸ್.ಎಲ್.ಸಿ. ಯಲ್ಲಿ ಕನ್ನಡವನ್ನು ಪ್ರಥಮ ಭಾಷಾ ವಿಷಯವನ್ನಾಗಿ ಅಭ್ಯಾಸಮಾಡಿದ್ದು, ಕನ್ನಡ ಭಾಷಾ ಪರೀಕ್ಷೆಗೆ ವಿನಾಯ್ತಿ ಪಡೆಸಿರುತ್ತಾರೆ. ಸದರಿಯವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ / ನ್ಯಾಯಾಂಗ ನಡವಳಿ/ಚಾಲ್ತಿ ಶಿಕ್ಷೆ ಇರುವುದಿಲ್ಲವಾದ್ದರಿಂದ ಹಾಗೂ ಸೇವೆಯಲ್ಲಿ ಮುಂದುವರೆಸಲು ಅರ್ಹರೆಂದು ಕಂಡು ಬಂದಿರುವುದರಿಂದ ಅಕೌಂಟ್ಸ್ ಹೈಯರ್ ಪರೀಕ್ಷೆ ನಡೆದ ದಿನಾಂಕದವರೆಗೆ ಇವರ ಖಾಯಂ ಪೂರ್ವ ಅವಧಿಯನ್ನು ವಿಸ್ತರಿಸಲು ಮೇಲೆ ಓದಲಾದ (2) ರ ಪತ್ರದಲ್ಲಿ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ. ಸದರಿಯವರು ದಿನಾಂಕ 09-06-2007 ರಂದು ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದರಿಂದ ಇವರ ಪರಿವೀಕ್ಷಣಾ ಅವಧಿಯನ್ನು 2½ ವರ್ಷಗಳ ಪರಿವೀಕ್ಷಣಾ ಅವಧಿ ಮುಕ್ತಾಯಗೊಂಡ ದಿನಾಂಕದಿಂದ ಅಂದರೆ ದಿನಾಂಕ 01-10-2005 ರಿಂದ 09-06-2007 ರವರೆಗೆ ವಿಸ್ತರಿಸುವಂತೆಯೂ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 14 ಪೊಸಇ 2009, ಬೆಂಗಳೂರು, ದಿನಾಂಕ 9ನೇ ಫೆಬ್ರವರಿ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು, 1977ರ ನಿಯಮ 4(1)(i) ರನ್ವಯ ಶ್ರೀ ವಿ. ವಿಜಯಕುಮಾರ್, ಪಿ.ಎಸ್.ಐ. ದೇವನಹಳ್ಳಿ ಇವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ 01-10-2005 ರಿಂದ 09-06-2007 ರವರೆಗೆ ವಿಸ್ತರಿಸಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾ.ಸೇ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗಧಿಪಡಿಸುವುದು. ಹೀಗೆ ನಿಗಧಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.573

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಂ. ರಾಮಕೃಷ್ಣ, ಪೊಲೀಸ್ ಉಪಾಧೀಕ್ಷಕರು, ಸಿ.ಓ.ಡಿ. ಬೆಂಗಳೂರು ರವರು ಅಕ್ರಮ ಆಸ್ತಿ ಹೊಂದಿರುವವರೆಂಬ ಕರ್ನಾಟಕ ಲೋಕಾಯುಕ್ತ ರವರ ವರದಿ - ಅವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ: ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ಕಛೇರಿ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರ ಸಂಖ್ಯೆ: ಲೋಕ್/ ಐಎನ್‌ವಿ(ಜಿ)/ ಬಿಡಿ-44/ಸಿಆರ್-4/ 2008/ ರಾಮನಗರ, ದಿನಾಂಕ 16-07-2008 ಮತ್ತು 18-10-2008.

**ಪ್ರಸ್ತಾವನೆ:**

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ಕಛೇರಿ ರವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸುತ್ತಾ ಶ್ರೀ ಎಂ. ರಾಮಕೃಷ್ಣ, ಪೊಲೀಸ್ ಉಪಾಧೀಕ್ಷಕರು, ಸಿ.ಓ.ಡಿ. ಬೆಂಗಳೂರು ರವರು ನಿಗಧಿತ ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವುದರ ಬಗ್ಗೆ ಖಚಿತ ಮಾಹಿತಿಯ ಹಿನ್ನೆಲೆಯಲ್ಲಿ ಅವರ ವಿರುದ್ಧ ಬೆಂಗಳೂರು

ಗ್ರಾಮಾಂತರ ಜಿಲ್ಲೆ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊ.ಸಂ.4/2008ರ ಕಲಂ 13(1)(ಇ) r/w 13(2)ರ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ, 1988ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಳ್ಳಲಾಯಿತು. ದಾಖಲಿಸಿಕೊಂಡ ನಂತರ ದಿನಾಂಕ 27-06-2008ರಂದು ಜಿಲ್ಲಾ ಪ್ರಧಾನ ಸತ್ರ ಮತ್ತು ವಿಶೇಷ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ಅಗತ್ಯವಾದ ಶೋಧನಾ ವಾರೆಂಟ್‌ಗಳನ್ನು ಪಡೆದುಕೊಂಡು ದಿನಾಂಕ 27-06-2008 ರಂದು ಆರೋಪಿತರ ಮನೆ, ಕಛೇರಿ ಮತ್ತು ಅವರ ಸ್ವಂತ ಗ್ರಾಮವಾದ ಹೊಸಕೋಟೆ ತಾಲ್ಲೂಕಿನ ಮನೆ, ಮುಂತಾದ ಸ್ಥಳಗಳ ಮೇಲೆ ಪಂಚಸಾಕ್ಷಿಗಳ ಸಕ್ಷಮ ಶೋಧಿಸಿದಾಗ ಅಪಾರ ಮೊತ್ತದ ಸ್ಥಿರ-ಚರಾಸ್ಥಿ ದೊರೆತಿರುತ್ತವೆ. ಪ್ರಾಥಮಿಕ ತನಿಖೆಯಿಂದ ಆರೋಪಿತರು ಅವರ ಬಲ್ಲ ಮೂಲಗಳಿಗಿಂತ ಹೊಂದಿರುವ ಅಕ್ರಮ ಆಸ್ತಿಗಳ ಮೌಲ್ಯ ರೂ.10,31,56,623=00 ಆಗಿರುತ್ತದೆ. ಸದರಿ ಹೆಚ್ಚುವರಿ ಅಕ್ರಮ ಮೂಲಗಳಿಂದ ಗಳಿಸಿರುವ ಚರ-ಸ್ಥಿರ ಆಸ್ತಿಗಳ ಮೌಲ್ಯವು ಆರೋಪಿತ ಸರ್ಕಾರಿ ನೌಕರ ಶೋಧನಾ ಅವಧಿಯಲ್ಲಿ ನಿಗಧಿತ ಮೂಲಗಳಿಂದ ಗಳಿಸಿರುವ ವರಮಾನಕ್ಕಿಂತ ಹೆಚ್ಚಿನ ಮೊತ್ತವಾಗಿರುತ್ತದೆ. ಅಲ್ಲದೆ, ಆರೋಪಿತರು, ವಿವಿಧ ಬಾಬ್ತುಗಳಿಗಾಗಿ ಮಾಡಿರುವ ಖರ್ಚು-ವೆಚ್ಚಗಳು ಇನ್ನೂ ಕೆಲವು ಮೂಲಗಳಿಂದ ಬರಬೇಕಾಗಿದೆ. ಇದರಿಂದ ಭವಿಷ್ಯದಲ್ಲಿ ಪ್ರಕರಣದ ತನಿಖೆ ಮುಂದುವರೆದಂತೆ ಹೆಚ್ಚಿನ ಚರ-ಸ್ಥಿರಾಸ್ತಿ ಮತ್ತು ಖರ್ಚು ವೆಚ್ಚಗಳ ಒಟ್ಟಾರೆ ಮೌಲ್ಯವು ಇನ್ನೂ ಹೆಚ್ಚಾಗುವ ಸಂಭವವಿರುತ್ತದೆ. ಈ ಪ್ರಕರಣದ ಸುಗಮ ತನಿಖೆಗೆ ಅಡ್ಡಿಯುಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ದಾಖಲೆ / ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಸಾಧ್ಯತೆಯನ್ನು ಮನಗಂಡು ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವಂತೆ ಹಾಗೂ ಅವರ ಲೀನ್ ಅನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಎ.ಡಿ.ಜಿ.ಪಿ. ಕರ್ನಾಟಕ ಲೋಕಾಯುಕ್ತ ರವರು ವರದಿ ಮಾಡಿರುತ್ತಾರೆ.

ಮೇಲಿನ ಪ್ರಸ್ತಾವನೆ ಹಾಗೂ ವರದಿಗಳನ್ನು ಪರಿಶೀಲಿಸಿದ ನಂತರ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 266 ಪೊಸಿಪ 2008, ಬೆಂಗಳೂರು, ದಿನಾಂಕ 24ನೇ ಫೆಬ್ರವರಿ 2009.**

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 5(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಂ. ರಾಮಕೃಷ್ಣ, ಪೊಲೀಸ್ ಉಪಾಧೀಕ್ಷಕರು, ಸಿ.ಓ.ಡಿ. ಬೆಂಗಳೂರು ರವರ ವಿರುದ್ಧ ಶಿಸ್ತು ಕ್ರಮ ಕಾಯ್ದಿಟ್ಟು, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಮೂಲಕ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ. ಇವರ ಲೀನ್ ಅನ್ನು ರಾಜ್ಯ ಗುಪ್ತವಾರ್ತೆ ಇಲ್ಲಿನ ಡಿವೈ.ಎಸ್.ಪಿ. ಹುದ್ದೆಗೆ ಸ್ಥಳಾಂತರಿಸಲಾಗಿದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎಂ. ರಾಮಕೃಷ್ಣ, ಪೊಲೀಸ್ ಉಪಾಧೀಕ್ಷಕರು ರವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 98ರ ಅನ್ವಯ ಜೀವನಾಧಾರ ಭತ್ಯೆಯನ್ನು ನೀಡತಕ್ಕದ್ದು.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎಂ. ರಾಮಕೃಷ್ಣ, ಪೊಲೀಸ್ ಉಪಾಧೀಕ್ಷಕರು ರವರು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 739 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

**ವಿಷಯ:** ಶ್ರೀ ಜಿ. ಹನುಮೇಶ್, ಡಿವೈ.ಎಸ್.ಪಿ. ರವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸುವ ಬಗ್ಗೆ.

**ಓದಲಾಗಿದೆ:** ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ:ಸಿಬಿ(5)/63/08-09, ದಿನಾಂಕ 29-01-2009.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಶ್ರೀ ಜಿ. ಹನುಮೇಶ್, ಡಿವೈ.ಎಸ್.ಪಿ. ರವರು ದಿನಾಂಕ 10-01-2009 ರಂದು ಪೊಲೀಸ್ ಅಧೀಕ್ಷಕರು, ರಾಯಚೂರು ಜಿಲ್ಲೆ ರವರು ನಡೆಸಿದ ಮಾಸಿಕ ಅಪರಾಧ ಸಭೆಯಲ್ಲಿ ರಾಯಚೂರು ಗ್ರಾಮೀಣ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 8/2009 ಕಲಂ 394 ಐಪಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧೀಕ್ಷಕರು, ರಾಯಚೂರು ಜಿಲ್ಲೆರವರೊಡನೆ ಅಶಿಸ್ತಿನಿಂದ ಮತ್ತು ಅಸಭ್ಯವಾಗಿ ವರ್ತಿಸಿ, ದುರ್ನಡತೆ ಪ್ರದರ್ಶಿಸಿರುವುದು ಪೊಲೀಸ್ ಅಧೀಕ್ಷಕರು, ರಾಯಚೂರು ಜಿಲ್ಲೆ ರವರ ಪತ್ರ ದಿನಾಂಕ 10-01-2009 ರಂತೆ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸದರಿ ಅಧಿಕಾರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಕೆ.ಎಸ್.ಪಿ. (ಡಿಪಿ) ನಿಯಮ, 1965ರ ನಿಯಮ 6 ರಡಿಯಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿ ಪ್ರಾಂಶುಪಾಲರು, ಪಿಟಿಸಿ, ನಾಗೇನಹಳ್ಳಿ ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸುವಂತೆ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 80 ಪೊಸಿಪ 2009, ಬೆಂಗಳೂರು, ದಿನಾಂಕ: 7ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಶ್ರೀ ಜಿ. ಹನುಮೇಶ್, ಡಿವೈ.ಎಸ್.ಪಿ. ರಾಯಚೂರು ಉಪ ವಿಭಾಗ ರವರ ವಿರುದ್ಧ ಕೆ.ಎಸ್.ಪಿ. (ಡಿಪಿ) ನಿಯಮಗಳು, 1965ರ ನಿಯಮ 6 ರನ್ವಯ ಇಲಾಖಾ ವಿಚಾರಣೆಗೆ ಆದೇಶಿಸಿದೆ. ಪ್ರಾಂಶುಪಾಲರು, ಪಿಟಿಸಿ, ನಾಗೇನಹಳ್ಳಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ಈ ಸಂಬಂಧ ದೋಷಾರೋಪಣಾ ಪತ್ರವನ್ನು ಸಹ ಹೊರಡಿಸಲಾಗಿದೆ. ವಿಚಾರಣೆಯನ್ನು ನಿಯಮಾನುಸಾರ ನಡೆಸಿ ಮೂರು ತಿಂಗಳೊಳಗಾಗಿ ಮುಕ್ತಾಯಗೊಳಿಸಿ, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್.842

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

**ವಿಷಯ:** ಶ್ರೀ ಆರ್. ಆನಂದ್, ಡಿವೈ.ಎಸ್.ಪಿ. ಮತ್ತು ಶ್ರೀ ಕೆ.ವಿ.ಕೆ. ರೆಡ್ಡಿ, ಡಿವೈ.ಎಸ್.ಪಿ. ಇವರ ವರ್ಗಾವಣೆ ಆದೇಶದ ಬಗ್ಗೆ ವೃಂದ ನಿರ್ವಹಣಾ ಪ್ರಾಧಿಕಾರಕ್ಕೆ ಸಲ್ಲಿಸಿದ ಮನವಿ – ವೃಂದ ನಿರ್ವಹಣಾ ಪ್ರಾಧಿಕಾರದ ಶಿಫಾರಸ್ಸಿನ ಅನ್ವಯ ಆದೇಶ.

**ಓದಲಾಗಿದೆ:** 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 218 ಪೊಸಿಪ 2008, ದಿನಾಂಕ 27–08–2008.

2) ದಿನಾಂಕ 12–12–2008 ರಲ್ಲಿ ಕೆ.ಎ.ಟಿ. ಅರ್ಜಿ ಸಂಖ್ಯೆ: 4750/2008 ರಲ್ಲಿ ನೀಡಿರುವ ತೀರ್ಪು.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 218 ಪೊಸಿಪ 2008 ರಲ್ಲಿ ಡಿವೈ.ಎಸ್.ಪಿ (ಸಿವಿಲ್) ವೃಂದದ ಅಧಿಕಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾಯಿಸಿದೆ. ಈ ಅಧಿಸೂಚನೆಯಲ್ಲಿ ಶ್ರೀ ಕೆ.ವಿ.ಕೆ. ರೆಡ್ಡಿ, ಎ.ಸಿ.ಪಿ, ವಿಜಯನಗರ ಉಪ ವಿಭಾಗ, ರಾಜ್ಯ ಗುಪ್ತವಾರ್ತೆ, ಬೆಂಗಳೂರು ಇಲ್ಲಿಗೆ ಹಾಗೂ ಶ್ರೀ ಆರ್. ಆನಂದ್, ಡಿವೈ.ಎಸ್.ಪಿ. ಸಿ.ಓ.ಡಿ, ಬೆಂಗಳೂರು ಇವರನ್ನು ಎ.ಸಿ.ಪಿ, ವಿಜಯನಗರ ಉಪ ವಿಭಾಗ, ಬೆಂಗಳೂರು ಇಲ್ಲಿಗೆ ವರ್ಗಾಯಿಸಲಾಗಿತ್ತು. ಸದರಿ ವರ್ಗಾವಣೆಯ ವಿರುದ್ಧ ಶ್ರೀ ಆರ್. ಆನಂದ್ ರವರು ಕೆ.ಎ.ಡಿ.ಯಲ್ಲಿ ಅರ್ಜಿ ಸಂಖ್ಯೆ: 4750/2008 ಸಲ್ಲಿಸಿದ್ದು ಕೆ.ಎ.ಟಿ.ಯು ತೀರ್ಪು ನೀಡಿದ್ದು, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 4750/2008ರ ದಿನಾಂಕ 12–12–2008ರಲ್ಲಿ ಸುದೀರ್ಘವಾದ ತೀರ್ಪು ನೀಡಿದ್ದು, ತೀರ್ಪಿನ ಉದ್ಧೃತ ಭಾಗ ಕೆಳಕಂಡಂತಿದೆ.

> " xxx 17. For the reasons and circumstances narrated above, we hereby quash the impugned order dated 03-10-2008 Annexure A7 passed by the first Respondent. We hereby direct the Cadre Management Authority to pass appropriate orders afresh in accordance with law keeping in mind the direction issued by this Tribunal in A.No.3904/2008 and also the order passed in W.P.No.11112/2008 passed by the Hon'ble High Court of Karnataka apart from the transfer guidelines within four weeks from the date of receipt of a certified copy of this order giving opportunities of being heard to the parties concerned. Parties to bear their own costs."

ದಿನಾಂಕ 17–02–2009 ರಂದು ನಡೆದ ವೃಂದ ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಿದಂತೆ ಶ್ರೀ ಆರ್. ಆನಂದ್ ಮತ್ತು ಶ್ರೀ ಕೆ.ವಿ.ಕೆ. ರೆಡ್ಡಿ ಇವರನ್ನು ಖುದ್ದಾಗಿ ವೃಂದ ನಿರ್ವಹಣಾ ಪ್ರಾಧಿಕಾರದ ಮುಂದೆ ಹಾಜರಾಗಲು ಸೂಚಿಸಿದ್ದರ ಮೇರೆಗೆ ಈ ಅಧಿಕಾರಿಗಳು ಹಾಜರಾಗಿರುತ್ತಾರೆ. ಶ್ರೀ ಆರ್. ಆನಂದ್, ಡಿವೈ.ಎಸ್.ಪಿ. ರವರು ಸಭೆಯ ಮುಂದೆ ಹಾಜರಾಗಿ ತಮ್ಮ 32 ವರ್ಷದ ಸೇವಾ ಅವಧಿಯಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸಿದ್ದು, ಎರಡು ಬಾರಿ ಸಿ.ಓ.ಡಿ. ಘಟಕದಲ್ಲಿ ಉಪ ನಿರೀಕ್ಷಕ ಮತ್ತು ಪೊಲೀಸ್ ನಿರೀಕ್ಷಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರುವುದಾಗಿಯೂ ಕಳೆದ 2 ವರ್ಷಗಳಿಂದ ಸಿ.ಓ.ಡಿ. ಘಟಕದಲ್ಲಿ ಡಿವೈ.ಎಸ್.ಪಿ. ವೃಂದದಲ್ಲಿ ಕಾರ್ಯನಿರ್ವಹಿಸಿದ್ದು, ತಮ್ಮ ಸೇವಾವಧಿಯಲ್ಲಿ ಬೆಂಗಳೂರು ನಗರದ ಉಪ ವಿಭಾಗದಲ್ಲಿ ಕಾರ್ಯಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು, ಮೊದಲ ಬಾರಿಗೆ ತಮಗೆ ಉಪ ವಿಭಾಗದ ನೇಮಕಾತಿ ನೀಡಿ ವಿಜಯನಗರ ಉಪ ವಿಭಾಗದಲ್ಲಿ ಕೇವಲ 1½ ತಿಂಗಳು ಕಾರ್ಯನಿರ್ವಹಿಸಿದ್ದು, ಮತ್ತೊಂದು ಆದೇಶ ಹೊರಡಿಸಿ ತಮ್ಮನ್ನು ಬದಲಾಯಿಸಿರುವುದಾಗಿಯೂ, ತಮ್ಮ ಸ್ಥಳಕ್ಕೆ ನೇಮಿಸಿದ ಶ್ರೀ ಕೆ.ವಿ.ಕೆ. ರೆಡ್ಡಿ ರವರು ಹೆಚ್ಚು ಕಾಲ ಬೆಂಗಳೂರಿನಲ್ಲಿಯೇ ಕಾರ್ಯನಿರ್ವಹಿಸಿರುವುದಾಗಿ ತಿಳಿಸಿ ತಾವು ನಿವೃತ್ತಿಯಾಗಲು 1½ ವರ್ಷಗಳು ಉಳಿದಿದ್ದು, ಈ ಅವಧಿಯಲ್ಲಿ ಯಾವುದಾದರೂ ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸಲು

ಚ್ಛಿಸಿದ್ದು, ವಿಜಯನಗರ ಉಪ ವಿಭಾಗವಲ್ಲದಿದ್ದರೂ ಬೇರೆ ಉಪ ವಿಭಾಗಗಳಲ್ಲಿ ನೇಮಿಸಿದರೂ ಕಾರ್ಯನಿರ್ವಹಿಸುವುದಾಗಿ ಪ್ರಾಧಿಕಾರದ ಮುಂದೆ ತಿಳಿಸಿದರು.

ಶ್ರೀ ಕೆ.ವಿ.ಕೆ. ರೆಡ್ಡಿ, ಎ.ಸಿ.ಪಿ. ರವರು ತಮ್ಮನ್ನು ದಿನಾಂಕ 11-08-2008ರ ಆದೇಶದನ್ವಯ ವಿಜಯನಗರ ಉಪ ವಿಭಾಗದಿಂದ ವರ್ಗಾಯಿಸಲಾಗಿದ್ದು, ಕೆ.ಎ.ಟಿ.ಯಲ್ಲಿ ತಾವು ಸಹ ಅರ್ಜಿಯನ್ನು ಸಲ್ಲಿಸಿದ್ದುದಾಗಿಯೂ, ದಿನಾಂಕ 3-10-2008ರ ಆದೇಶದಲ್ಲಿ ತಮ್ಮನ್ನು ಎ.ಸಿ.ಪಿ. ವಿಜಯನಗರ ಉಪ ವಿಭಾಗ ಇಲ್ಲಿಯೇ ಮುಂದುವರೆಸಲಾಗಿತ್ತು. ಅದರನ್ವಯ ತಾವು ವಿಜಯನಗರ ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಶ್ರೀ ಆರ್. ಆನಂದ್ ರವರನ್ನು ಸಿ.ಓ.ಡಿ.ಗೆ ನೇಮಿಸಲಾಗಿದ್ದು, ಇವರಿಗೂ ಸಹ ಬೆಂಗಳೂರಿನಲ್ಲಿಯೇ ನೇಮಕಾತಿ ನೀಡಿರುವುದರಿಂದ ಅವರ ಕೇಂದ್ರ ಸ್ಥಾನ ಬದಲಾಗಿರುವುದಿಲ್ಲವೆಂದೂ, ಆದುದರಿಂದ ದಿನಾಂಕ 3-10-2008ರ ಆದೇಶದನ್ವಯ ತಮ್ಮನ್ನು ವಿಜಯನಗರ ಉಪ ವಿಭಾಗದಲ್ಲಿ ಮುಂದುವರೆಸಲು ಕೋರಿರುತ್ತಾರೆ.

ಕೆ.ಎ.ಟಿ. ಅರ್ಜಿ ಸಂಖ್ಯೆ: 4750/2008 ರಲ್ಲಿ ಮಾನ್ಯ ಕೆ.ಎ.ಟಿ.ಯು ದಿನಾಂಕ 12-12-2008 ರಂದು ನೀಡಿದ ತೀರ್ಪಿನ ಅನ್ವಯ ವೃಂದ ನಿರ್ವಹಣಾ ಪ್ರಾಧಿಕಾರವು ವಿವರವಾಗಿ ಚರ್ಚಿಸಿತು. ಶ್ರೀ ಆರ್. ಆನಂದ್ ರವರು ವೃಂದ ನಿರ್ವಹಣಾ ಪ್ರಾಧಿಕಾರದ ಮುಂದೆ ಅವರು ಬೇರೆ ಉಪ ವಿಭಾಗದಲ್ಲೂ ಕಾರ್ಯನಿರ್ವಹಿಸಲು ಸಿದ್ಧರಿರುವುದಾಗಿ ಸಲ್ಲಿಸಿದ ಹೇಳಿಕೆಯನ್ನು ಗಮನಿಸಿ ಹಾಗೂ ಇವರಿಗೆ ಉಪ ವಿಭಾಗದಲ್ಲಿ ಸ್ಥಳನಿಯುಕ್ತಿಗೊಳಿಸುವ ಬಗ್ಗೆ ಪರಿಗಣಿಸಿ ವೃಂದ ನಿರ್ವಹಣಾ ಪ್ರಾಧಿಕಾರವು ಕೆಳಕಂಡಂತೆ ಶಿಫಾರಸ್ಸು ಮಾಡಿತು.

| ಕ್ರಮ ಸಂಖ್ಯೆ | ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಶ್ರೀಯುತರು: | ವರ್ಗಾಯಿಸಿ ಸ್ಥಳನಿಯುಕ್ತಿಗೊಳಿಸಿದ ಹುದ್ದೆ |
|---|---|---|
| 1. | ಶ್ರೀ ಆರ್. ಆನಂದ್, ಡಿವೈ.ಎಸ್.ಪಿ. ಸಿ.ಓ.ಡಿಗೆ ವರ್ಗಾವಣೆಯ ಆದೇಶದಲ್ಲಿರುವವರು | ಡಿವೈ.ಎಸ್.ಪಿ. ಮಧುಗಿರಿ ಉಪ ವಿಭಾಗ, ಶ್ರೀ ಜಿ.ಕೆ. ಚನ್ನಬಸಪ್ಪ ಇವರ ಸ್ಥಾನದಲ್ಲಿ |
| 2 | ಶ್ರೀ ಕೆ.ವಿ.ಕೆ. ರೆಡ್ಡಿ, ಎ.ಸಿ.ಪಿ, ವಿಜಯನಗರ ಉಪ ವಿಭಾಗ, ಬೆಂಗಳೂರು ನಗರ | ಎ.ಸಿ.ಪಿ, ವಿಜಯನಗರ ಉಪ ವಿಭಾಗ, ಬೆಂಗಳೂರು ನಗರ ಇಲ್ಲಿಯೇ ಮುಂದುವರೆಸಲಾಗಿದೆ. |

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಾಗೂ ವೃಂದ ನಿರ್ವಹಣಾ ಪ್ರಾಧಿಕಾರಗಳ ಶಿಫಾರಸ್ಸನ್ನು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 82 ಪೊಸಿಪ 2009, ಬೆಂಗಳೂರು, ದಿನಾಂಕ: 28ನೇ ಫೆಬ್ರವರಿ 2009.**

ವೃಂದ ನಿರ್ವಹಣಾ ಪ್ರಾಧಿಕಾರದ ಶಿಫಾರಸ್ಸನ್ನು ಸರ್ಕಾರವು ಪರಿಶೀಲಿಸಿ ಶ್ರೀ ಆರ್. ಆನಂದ್, ಡಿವೈ.ಎಸ್.ಪಿ ಮತ್ತು ಶ್ರೀ ಕೆ.ವಿ.ಕೆ.ರೆಡ್ಡಿ, ಡಿವೈ.ಎಸ್.ಪಿ. ಇವರುಗಳು ವೃಂದ ನಿರ್ವಹಣಾ ಪ್ರಾಧಿಕಾರದ ಸಭೆಯ ಮುಂದೆ ನೀಡಿರುವ ಹೇಳಿಕೆಯನ್ನು ಪರಿಗಣಿಸಿ ದಿನಾಂಕ 27-08-2008ರ ಅಧಿಸೂಚನೆ ಸಂಖ್ಯೆ:ಒಇ 218 ಪೊಸಿಪ 2008ರಲ್ಲಿ ಆದೇಶಿಸಿರುವ ವರ್ಗಾವಣೆಗಳನ್ನು ಭಾಗಶ: ಮಾರ್ಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.

| ಕ್ರಮ ಸಂಖ್ಯೆ | ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಶ್ರೀಯುತರು: | ವರ್ಗಾಯಿಸಿ ಸ್ಥಳನಿಯುಕ್ತಿಗೊಳಿಸಿದ ಹುದ್ದೆ |
|---|---|---|
| 1. | ಶ್ರೀ ಆರ್. ಆನಂದ್, ಡಿವೈ.ಎಸ್.ಪಿ. ಸಿ.ಓ.ಡಿ.ಗೆ ವರ್ಗಾವಣೆಯ ಆದೇಶದಲ್ಲಿರುವವರು | ಡಿವೈ.ಎಸ್.ಪಿ. ಮಧುಗಿರಿ ಉಪ ವಿಭಾಗ, ಶ್ರೀ ಜಿ.ಕೆ. ಚನ್ನಬಸಪ್ಪ ಇವರ ಸ್ಥಾನದಲ್ಲಿ |
| 2 | ಶ್ರೀ ಕೆ.ವಿ.ಕೆ. ರೆಡ್ಡಿ, ಎ.ಸಿ.ಪಿ, ವಿಜಯನಗರ ಉಪ ವಿಭಾಗ, ಬೆಂಗಳೂರು ನಗರ | ಎ.ಸಿ.ಪಿ, ವಿಜಯನಗರ ಉಪ ವಿಭಾಗ, ಬೆಂಗಳೂರು ನಗರ ಇಲ್ಲಿಯೇ ಮುಂದುವರೆಸಲಾಗಿದೆ. |

ಈ ಅಧಿಸೂಚನೆಯನ್ನು ಮಾನ್ಯ ಮುಖ್ಯಮಂತ್ರಿಯವರು ಸಂಖ್ಯೆ: ಪಿಎಸ್‌ಸಿಎಂ/ ಎಫ್.1258/2009, ದಿನಾಂಕ 26-02-2009 ರಲ್ಲಿ ಅನುಮೋದಿಸಿದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್.743

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

**ವಿಷಯ :** ಶ್ರೀ ಸೈಲಾನಿ ದಲಾಯತ್, ಸಹಕಾರ ಇಲಾಖೆ ಇವರ ಸೇವೆಯನ್ನು ಖಾಯಂ ಆಗಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ವರ್ಗಾಯಿಸಿಕೊಳ್ಳುವ ಬಗ್ಗೆ.

**ಓದಲಾಗಿದೆ :**
1. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ನಂ. ಡಿಪಿಎಸ್ ಸಿಶಾ-1/165/2003-04, ದಿನಾಂಕ 20-9-2006 ಮತ್ತು 12-1-09.
2. ಸಹಕಾರ ಸಂಘಗಳ ನಿಬಂಧಕರು ಇವರ ಪತ್ರ ಸಂ: ಸಿಬ್ಬಂದಿ/225/ಇಎನ್‌ಪಿ/2005-06 ದಿನಾಂಕ 31-8-2006 ಮತ್ತು 23-12-2008.
3. ಶ್ರೀ ಸೈಲಾನಿ ದಲಾಯತ್, ಸಹಕಾರ ಇಲಾಖೆ ಇವರ ಒಪ್ಪಿಗೆ ಪತ್ರ ದಿನಾಂಕ 24-6-2008.

**ಪ್ರಸ್ತಾವನೆ :**

ಮೇಲೆ (1)ರಲ್ಲಿ ಓದಲಾಗಿರುವ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು ದಿನಾಂಕ 20-9-2006ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಕೊಪ್ಪಳ ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿಯಲ್ಲಿ ದಲಾಯತ್ ಹುದ್ದೆಯಲ್ಲಿ ನಿಯೋಜನೆಯ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಸೈಲಾನಿ, ದಲಾಯತ್, ಸಹಕಾರ ಇಲಾಖೆ ಇವರನ್ನು ಖಾಯಂ ಆಗಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ವರ್ಗಾಯಿಸುವ ಬಗ್ಗೆ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲೆ (2)ರಲ್ಲಿ ಓದಲಾಗಿರುವ ದಿನಾಂಕ 31-8-2006 ಸಹಕಾರ ಸಂಘಗಳ ನಿಬಂಧಕರು ಪತ್ರದಲ್ಲಿ ಶ್ರೀ ಸೈಲಾನಿ ದಲಾಯತ್ ಇವರನ್ನು ಖಾಯಂ ಆಗಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ವರ್ಗಾಯಿಸಿಕೊಳ್ಳುವ ಬಗ್ಗೆ ತಮ್ಮ ಒಪ್ಪಿಗೆಯನ್ನು ನೀಡಿರುತ್ತಾರೆ.

ಮೇಲೆ (3)ರಲ್ಲಿ ಓದಲಾಗಿರುವ ದಿನಾಂಕ 24-6-2008 ಪತ್ರದಲ್ಲಿ ಶ್ರೀ ಸೈಲಾನಿ ದಲಾಯತ್, ಸಹಕಾರ ಇಲಾಖೆ ಇವರು ಖಾಯಂ ಆಗಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ವರ್ಗಾವಣೆಗೊಳ್ಳುವ ಬಗ್ಗೆ ತಮ್ಮ ಒಪ್ಪಿಗೆಯನ್ನು ನೀಡಿರುತ್ತಾರೆ.

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 245 ಪಿಪಿಇ 2008, ದಿನಾಂಕ: 6ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 16(ಎ)(ii)ರ ರೀತ್ಯಾ ಶ್ರೀ ಸೈಲಾನಿ ದಲಾಯತ್, ಸಹಕಾರ ಇಲಾಖೆ ಇವರ ಸೇವೆಯನ್ನು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಖಾಯಂ ಆಗಿ ವರ್ಗಾಯಿಸಿದೆ.

ಈ ಆದೇಶವನ್ನು ಸಿಆಸುಇ (ಸೇವಾನಿಯಮಗಳು-ಎ) ಟಿಪ್ಪಣಿ ಸಂ: ಸಿಆಸುಇ 354 ಸೇನಿಎ 2008, ದಿನಾಂಕ 26-8-2009ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1161

**ಕೆ.ಸಿ. ಸಿದ್ದಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ
(ಕಾ. ಮತ್ತು ಸು., ಕಾಫಿಫೋಸ ಮತ್ತು ಅಭಿಯೋಗಗಳು)

**ತಿದ್ದುಪಡಿ**

**ನಂ: ಒಇ 429 ಪಿಪಿಇ 2008, ಬೆಂಗಳೂರು, ದಿನಾಂಕ: 9ನೇ ಏಪ್ರಿಲ್ 2009**

ಸರ್ಕಾರದ ಆದೇಶ ನಂ. ಒಇ 429 ಪಿಪಿಇ 2008, ದಿನಾಂಕ 19-3-2009ರ ವಿಷಯದ ಎರಡನೇ ಸಾಲಿನಲ್ಲಿ ಪ್ರಸ್ತಾವನೆಯ ಮೊದಲನೇ ಕಂಡಿಕೆಯ ಎರಡನೇ ಸಾಲಿನಲ್ಲಿ ಹಾಗೂ ಆದೇಶ ಭಾಗದ ಎರಡನೇ ಸಾಲಿನಲ್ಲಿ "ಎ.ಸಿ.ಎಂ.ಎಂ

ನ್ಯಾಯಾಲಯ" ಎಂಬುದರ ಬದಲಾಗಿ "2ನೇ ಎ.ಸಿ.ಎಂ.ಎಂ. ನ್ಯಾಯಾಲಯ" ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳುವುದು. ಉಳಿದಂತೆ ದಿನಾಂಕ 19-3-2009ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1162

**ಕೆ.ಸಿ. ಸಿದ್ದಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ

(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಫೋಸಾ ಮತ್ತು ಅಭಿಯೋಗಗಳು)

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

**ವಿಷಯ :** ಬಾಲ ಭವನ ಸೊಸೈಟಿ ನೌಕರರಿಗೆ ರಜಾ ಸೌಲಭ್ಯ ಹಾಗೂ ಇನ್ನಿತರೆ ಸೌಲಭ್ಯಗಳನ್ನು ವಿಸ್ತರಿಸಲು ನಿಯಮಗಳಿಗೆ ತಿದ್ದುಪಡಿ ತರಲು ಸಲಹಾ ಸಮಿತಿಯನ್ನು ರಚಿಸುವ ಬಗ್ಗೆ.

**ಓದಲಾಗಿದೆ :** ಕಾರ್ಯದರ್ಶಿ, ಬಾಲಭವನ ಸೊಸೈಟಿ ಇವರ ಏಕ ಕಡತದ ಪ್ರಸ್ತಾವನೆ ಸಂಖ್ಯೆ: ಬಾಭಬೆಂ: ಸಿಬ್ಬಂದಿ: 2005-06, ದಿನಾಂಕ 21-2-09.

**ಪ್ರಸ್ತಾವನೆ :**

ಕಾರ್ಯದರ್ಶಿ, ಬಾಲಭವನ ಸೊಸೈಟಿ ಇವರ ಮೇಲೆ ಓದಲಾದ ಏಕ ಕಡತದಲ್ಲಿನ ಪ್ರಸ್ತಾವನೆಯಲ್ಲಿ ಬಾಲಭವನ ಸೊಸೈಟಿ ನೌಕರರು ರಜಾ ಹಾಗೂ ಇನ್ನಿತರೆ ಸೌಲಭ್ಯಗಳನ್ನು ವಿಸ್ತರಿಸಲು ಕೋರಿದ್ದು, ಸದರಿ ನೌಕರರಿಗೆ 2007ರ ವೇತನ ಶ್ರೇಣಿ, ತುಟ್ಟಿ ಭತ್ಯೆ, ಇನ್ನಿತರೆ ಸೌಲಭ್ಯಗಳನ್ನು ಸರ್ಕಾರದ ಆದೇಶದಂತೆ ವಿಸ್ತರಿಸುವ ಸಂದರ್ಭದಲ್ಲಿ ಕೆಲವೊಂದು ಷರತ್ತುಗಳನ್ನು ವಿಧಿಸಲಾಗಿದ್ದು, ಈ ಷರತ್ತುಗಳಿಗೆ ದಿನಾಂಕ 28-1-2009ರಂದು ನಡೆದ ಬಾಲಭವನ ಸೊಸೈಟಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ತಿದ್ದುಪಡಿ ಮಾಡಲು ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ ನಿಯಮಾವಳಿಗಳಿಗೆ ತಿದ್ದುಪಡಿ ತರುವ ಸಲುವಾಗಿ ಸಲಹಾ ಸಮಿತಿಯನ್ನು ರಚಿಸಲು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಬಾಲ ಭವನ ಸೊಸೈಟಿ ಇದರ ನಿಯಮಗಳಿಗೆ ತಿದ್ದುಪಡಿ ತರಲು ಸಲಹಾ ಸಮಿತಿಯನ್ನು ರಚಿಸಲು ತೀರ್ಮಾನಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 15 ರಾಮಅ 2009, ಬೆಂಗಳೂರು, ದಿನಾಂಕ: 4ನೇ ಏಪ್ರಿಲ್ 2009**

ಬಾಲ ಭವನ ಸೊಸೈಟಿ ನೌಕರರಿಗೆ ರಜಾ ಸೌಲಭ್ಯ ಹಾಗೂ ಇನ್ನಿತರೆ ಸೌಲಭ್ಯಗಳನ್ನು ವಿಸ್ತರಿಸಲು ನಿಯಮಗಳಿಗೆ ತಿದ್ದುಪಡಿ ತರುವ ಸಲುವಾಗಿ ಬಾಲಭವನ ಸೊಸೈಟಿ ಇದರ ನಿಯಮಾವಳಿ ಮತ್ತು ನಿಬಂಧನೆ 13(1)ರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗೆ ಸೂಚಿಸಿದ ಅಧಿಕಾರಿಗಳನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1. | ನಿರ್ದೇಶಕರು,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಅಧ್ಯಕ್ಷರು |
| 2. | ಸರ್ಕಾರದ ಅಪರ ಕಾರ್ಯದರ್ಶಿಗಳು,<br>ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು) | ಸದಸ್ಯರು |
| 3. | ಸರ್ಕಾರದ ಅಪರ ಕಾರ್ಯದರ್ಶಿಗಳು,<br>ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಇಲಾಖೆ | ಸದಸ್ಯರು |
| 4. | ಸರ್ಕಾರದ ಉಪ ಕಾರ್ಯದರ್ಶಿ,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯರು |
| 5. | ಸರ್ಕಾರದ ಉಪ ಕಾರ್ಯದರ್ಶಿ,<br>ಆರ್ಥಿಕ ಇಲಾಖೆ (ವೆಚ್ಚ-3) | ಸದಸ್ಯರು |
| 6. | ಕಾರ್ಯದರ್ಶಿಗಳು,<br>ಬಾಲಭವನ ಸೊಸೈಟಿ | ಸದಸ್ಯ-ಕಾರ್ಯದರ್ಶಿ |

ಸದರಿ ಸಮಿತಿಯು ಎರಡು ತಿಂಗಳ ಅವಧಿಯಲ್ಲಿ ಕರಡು ನಿಯಮಗಳನ್ನು ರಚಿಸಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1163

**ಆರ್. ನರಸಿಂಹಯ್ಯ**

ಸರ್ಕಾರದ ಅಧೀನ ಕಾರ್ಯದರ್ಶಿ-2(ಪ್ರ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

## ಒಳಾಡಳಿತ ಸಚಿವಾಲಯ

**ವಿಷಯ :** ಶ್ರೀ ಜಿ. ರುದ್ರೇಶ್, ಪಿ.ಐ. ಮೂಡಿಗೆರೆ ವೃತ್ತ, ಚಿಕ್ಕಮಗಳೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ: 05/ಇವಿ/ಸಿಬ್ಬಂದಿ-2, 2005-06, ಓ.ಬಿ.55/2007-08, ದಿನಾಂಕ 22-6-07.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ: ಸಿಬಿ(8)58/2007-08, ದಿ: 31-5-2008.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 22-7-2008.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)58/2007-08, ದಿ: 19-12-2008.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 213 ಸಿಎನ್‌ಎಸ್ 2008, ದಿನಾಂಕ 28-3-2009.

**ಪ್ರಸ್ತಾವನೆ :**

ಶ್ರೀ ಜಿ. ರುದ್ರೇಶ್, ಪಿ.ಐ., ಮೂಡಿಗೆರೆ ವೃತ್ತ, ಚಿಕ್ಕಮಗಳೂರು ಜಿಲ್ಲೆ ಇವರು ಭದ್ರಾವತಿ ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಲೋಪ ಎಸಗಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷಾರೋಪಣೆ:**

1) ದಿ: 6-1-05ರಂದು ಭದ್ರಾವತಿ ಕೆನರಾ ಬ್ಯಾಂಕ್, ಚನ್ನಗಿರಿ ರೋಡ್ ಶಾಖೆಗೆ ಶ್ರೀ ಮಹೇಶ್ ಉದ್ಯೋಗಿ ಶಿವಶಂಕರ್ ಪೆಟ್ರೋಲ್ ಬಂಕ್, ಭದ್ರಾವತಿ ಇವರು ರೂ. 2,11,117-00 ಗಳನ್ನು ಪಾವತಿಸಲು ಬಂದಾಗ ಹಣವನ್ನು ಬ್ಯಾಂಕ್ ದಪ್ತರಿ ಶ್ರೀ ನಾರಾಯಣ ಮತ್ತು ಶ್ರೀ ಮಹೇಶ್ ಎಣಿಸಿದಾಗ ರೂ. 1,20,000-00 ವ್ಯತ್ಯಾಸ ಇರುವುದಾಗಿ ನಿಮ್ಮ ಮುಂದೆ ದೂರು ಬಂದಿದ್ದು, ಈ ಹಣವನ್ನು ಈ ಮೂವರೊಳಗೆ ಯಾರಾದರೂ ಕಳವು ಮಾಡಿರಬಹುದೆಂದು ಮೇಲ್ನೋಟಕ್ಕೆ ಕಂಡು ಬಂದರೂ, ಈ ನಿಟ್ಟಿನಲ್ಲಿ ನೀವು ಪ್ರಕರಣವನ್ನು ಕಲಂ 379 ಅಥವಾ 380 ಐಪಿಸಿ ರೀತ್ಯಾ ದಾಖಲಿಸಿ ತನಿಖೆ ನಿರ್ವಹಿಸದೆ ಕರ್ತವ್ಯಲೋಪ ಎಸಗಿರುತ್ತೀರಿ.

2) ಬ್ಯಾಂಕಿನಲ್ಲಿ ಹಣ ವ್ಯತ್ಯಾಸವಾದ ಬಗ್ಗೆ ಅರ್ಜಿಯ ಆಧಾರದಲ್ಲಿ ಬ್ಯಾಂಕ್ ಉದ್ಯೋಗಿಗಳಾದ ಶ್ರೀ ದಪ್ತಗಿರಿ ನಾರಾಯಣ ಮತ್ತು ಶ್ರೀ ಅಪ್ಪಾಜಿರಾವ್, ಕ್ಯಾಷಿಯರ್, ಇವರನ್ನು ದಿ: 8-1-05 ರಂದು ಹಳೆನಗರ ಪೊಲೀಸ್ ಠಾಣೆಗೆ ಕರೆತಂದು ಅವರಿಗೆ ದೈಹಿಕ ಹಿಂಸೆ ನೀಡಿ, ಬೆದರಿಸಿ ಅಪ್ಪಾಜಿರಾವ್ ಇವರಿಂದ ರೂ. 1,20,000-00 ಹಣವನ್ನು ಅರ್ಜಿದಾರ ಶ್ರೀ ಮಹೇಶ್, ಇವರಿಗೆ ದಾಖಲೆ ಮುಖಾಂತರ ಹಣ ಪಾವತಿಸಲು ಸೂಚಿಸಿ ನಿಮ್ಮ ಅಧಿಕಾರವನ್ನು ವ್ಯವಸ್ಥಿತವಾಗಿ ದುರುಪಯೋಗ ಪಡಿಸಿಕೊಂಡು ಪ್ರಕರಣ ಹಾಗೂ ಅರ್ಜಿದಾರರು ನಿಮಗೆ ತಿಳಿದಿರುವ ಕಾರಣಕ್ಕೆ ಅವರಿಗೆ ನ್ಯಾಯ ಒದಗಿಸಿದ್ದೇನೆಂದು ಭಾವಿಸಿ ಕಳುವಾದ ಹಣವು ಯಾವ ರೀತಿ ಕಳುವಾಯಿತು ಹಾಗೂ ಕಾರಣರಾರು? ಎಂಬುದನ್ನು ವಿಚಾರಣೆಯಲ್ಲಿ ದೃಢಪಡಿಸದೇ, ಅರ್ಜಿದಾರರಿಂದ ವಿಚಾರಣೆಯನ್ನು ಮುಂದುವರೆಸುವುದು ಬೇಡ ಎಂದು ದೂರು ಪಡೆದು, ಕಾನೂನುಬದ್ಧ ಹಾಗೂ ವಿದಿಬದ್ಧ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಅನುಚಿತ ಪೊಲೀಸ್ ಅಧಿಕಾರಿಯ ರೀತಿಯಲ್ಲಿ ವರ್ತಿಸಿರುವಿರಿ.

3) ಅಪ್ಪಾಜಿರಾವ್ ಇವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವುದಾಗಿ ಬೆದರಿಸಿ ಅವರಿಂದ ಅರ್ಜಿದಾರರಿಗೆ ಹಣವನ್ನು ದಾಖಲೆ ಮುಖಾಂತರ ಪಾವತಿಸಲು ಸೂಚಿಸಿ ಅರ್ಜಿದಾರರಿಂದ ಅರ್ಜಿಯ ವಿಚಾರಣೆಯನ್ನು ಮುಂದುವರಿಸಿದಂತೆ ಹೇಳಿಕೆ ಪಡೆದು, ಸದರಿ ಹಣ ಕಳವಾಗಲು ಕಾರಣರಾರು? ಎಂಬ ಅಪರಾಧದ ಅಂಶವನ್ನು ಪರಿಗಣಿಸದೇ ಒಂದು ವಿಚಾರಣೀಯ ಅಪರಾಧವನ್ನು ದಾಖಲಿಸದೆ ಕರ್ತವ್ಯ ಲೋಪವೆಸಗಿದ್ದೀರಿ.

4) ಬ್ಯಾಂಕ್ ಉದ್ಯೋಗಿಗಳಾದ ಶ್ರೀ ದಪ್ತರಿ ನಾರಾಯಣ ಹಾಗೂ ಶ್ರೀ ಅಪ್ಪಾಜಿರಾವ್, ಕ್ಯಾಷಿಯರ್, ಇವರನ್ನು ದಿ: 8-1-05 ರಂದು ದಾಣೆಗೆ ಕರೆಸಿ ಅರ್ಜಿದಾರರು ಹಾಗೂ ಪ್ರಕರಣ ನಿಮಗೆ ತಿಳಿದಿರುವ ಕಾರಣಕ್ಕಾಗಿ ಅವರುಗಳ ಮೇಲೆ ದೈಹಿಕ ಹಿಂಸೆ ನೀಡಿ ಇದರಿಂದಾಗಿ ಶ್ರೀ ದಪ್ತರಿ ನಾರಾಯಣ ತೀವ್ರವಾಗಿ ಅಸ್ವಸ್ಥಗೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು, ಈ ಅಪರಾಧವು ವಿಚಾರಣೀಯ

ಅಪರಾಧವಲ್ಲದಿದ್ದರು ಬ್ಯಾಂಕ್ ಅಧಿಕಾರಿ ಮತ್ತು ಸಿಬ್ಬಂದಿಯವರ ಮೇಲೆ ದೈಹಿಕ ಹಿಂಸೆ ನೀಡಿ ಕಾನೂನಿನ ಅಡಿಯಲ್ಲಿ ಯಾವುದೇ ಕ್ರಮ ಕೈಗೊಳ್ಳದೆ ಕರ್ತವ್ಯ ಲೋಪವೆಸಗಿ ಪೊಲೀಸ್ ವಶದಲ್ಲಿನ ವ್ಯಕ್ತಿಯನ್ನು ಸರ್ವೋಚ್ಚನ್ಯಾಯಾಲಯದ ಆದೇಶಗಳ ಅನ್ವಯ ಕಾನೂನುಬದ್ಧವಾಗಿ ನಡೆದುಕೊಳ್ಳದೆ ಕರ್ತವ್ಯಲೋಪವೆಸಗಿದ್ದೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿ: 22-6-07ರ ಆದೇಶದಲ್ಲಿ ಅರ್ಜಿದಾರರ "ಇವರ ವೇತನವನ್ನು ಪೊಲೀಸ್ ನಿರೀಕ್ಷಕ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ 3 ವರ್ಷಗಳ ಕಾಲ ಕೆಳಗಿಳಿಸುವ ದಂಡನೆಯನ್ನು ವಿಧಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲ್ಮನವಿಯನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿ: 31-5-2008ರ ಆದೇಶದಲ್ಲಿ ಭಾಗಶಃ ಪುರಸ್ಕರಿಸಿ, ಇವರ ಮುಂದಿನ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಮುಂಬರುವ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಮುಂದೂಡಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆಯ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಆರೋಪದಲ್ಲಿ ಇವರ ಪಾತ್ರವನ್ನು ಗಮನಿಸಿದಲ್ಲಿ ವಿಧಿಸಲಾದ ದಂಡನೆಯ ಪ್ರಮಾಣವು ಅಧಿಕವೆಂದು ಸರ್ಕಾರವು ಪರಿಗಣಿಸಿ ಈ ಬಗ್ಗೆ ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 293 ಪೊಸಿಅ 2008, ಬೆಂಗಳೂರು, ದಿನಾಂಕ: 18ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25(2)(ಬಿ) ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಿ. ರುದ್ರೇಶ್, ಪಿ.ಐ. ಮೂಡಿಗೆರೆ ವೃತ್ತ, ಚಿಕ್ಕಮಗಳೂರು, ಇವರಿಗೆ ಮೇಲ್ಮನವಿ ಪ್ರಾಧಿಕಾರ ವಿಧಿಸಿದ ದಂಡನಾದೇಶವನ್ನು ಮಾರ್ಪಡಿಸಿ ಇವರ ಒಂದು ವಾರ್ಷಿಕ ವೇತನವನ್ನು ಮೂರು ತಿಂಗಳ ಕಾಲ ಮುಂದಿನ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ. ಆದರೆ ಸರ್ಕಾರಿ ಆದೇಶ ಸಂಖ್ಯೆ: ಒಇ 359 ಪೊಸಿಅ 2008, ದಿನಾಂಕ 9-4-2009 ರಲ್ಲಿ ವಿಧಿಸಿದ ದಂಡನೆಯ ಅವಧಿಯು ಮುಕ್ತಾಯಗೊಂಡ ತರುವಾಯದ ತಕ್ಷಣದಿಂದ ಈ ದಂಡನೆಯು ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1164

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

**ವಿಷಯ :** ಶ್ರೀ ಎ.ಎಂ. ಹೊಂಗಲ, ಎ.ಎಚ್.ಸಿ., ಡಿ.ಎ.ಆರ್., ಬೆಳಗಾವಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ :**

1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರ ಆದೇಶ ಸಂಖ್ಯೆ: ಸಿಬ್ಬಂದಿ 2ಎ/ಪಿಆರ್/60/2007(ಅ.ಉ.ಸಂ.873), ದಿ: 31-8-07.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ಇವರ ಆದೇಶ ಸಂಖ್ಯೆ: ಅಪೀಲು/188/ಉವ/2007, ದಿ: 11-3-08.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 15-8-08.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ ಅಪೀಲು (2)57/2008-09, ದಿನಾಂಕ 9-2-2009.

**ಪ್ರಸ್ತಾವನೆ :**

ಶ್ರೀ ಎ.ಎಂ. ಹೊಂಗಲ, ಎ.ಎಚ್.ಸಿ., ಡಿ.ಎ.ಆರ್. ಬೆಳಗಾವಿ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಘೋರ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ, ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಆಪಾದಿತ ಪೊಲೀಸ್ ಅಧಿಕಾರಿಗಳಾದ ನೀವು ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಖೈದಿ ವಾಮಂಜೂರು ರೋಹಿ @ ರೋಹಿದಾಸ್‌ನನ್ನು ನೇರವಾಗಿ ಮಂಗಳೂರಿನ ಒಂದನೆ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸದೆ ಆತನೊಂದಿಗೆ ಶಾಮೀಲಾಗಿ ಆಹಾರ ಸೇವನೆ ಮಾಡಿದಲ್ಲದೆ ಆತನನ್ನು ಖಾಸಗಿ ಕಾರಿನಲ್ಲಿ ಆತನ ಮನೆಗೆ ಹಾಗೂ ಸಂಬಂಧಿಕರ ಮನೆಗಳಿಗೆ ಕರೆದುಕೊಂಡು ಹೋಗಿ ನಿಮ್ಮ ಕರ್ತವ್ಯದಲ್ಲಿ ಘೋರ ನಿಷ್ಕಾಳಜಿತನ ಹಾಗೂ ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 31-8-07ರ ಆದೇಶದಲ್ಲಿ "ಇವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಎರಡು ವರ್ಷಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 10-3-08ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ ಒಂದು ವರ್ಷಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 261 ಪೊಸಿಅ 2008, ಬೆಂಗಳೂರು, ದಿನಾಂಕ: 26ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎ.ಎಂ. ಹೊಂಗಲ, ಎ.ಎಚ್.ಸಿ., ಡಿ.ಎ.ಆರ್. ಬೆಳಗಾವಿ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1165

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

**ವಿಷಯ :** ಶ್ರೀ ಎಲ್.ವೈ. ಗಾಡಿವಡ್ಡರ್, ಸಿ.ಪಿ.ಸಿ. -1976, ನಂದಗಡ ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ :**

1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ ಇವರ ಆದೇಶ ಸಂಖ್ಯೆ: ಸಿಬ್ಬಂದಿವ-2/ಇವಿ12/2006, ಅ.ಪು.ಸಂ: 619/2007, ದಿನಾಂಕ 20-6-2007.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ: ಅಪೀಲು/161/ಉವ/2006, ದಿ: 3-10-2007.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 17-3-2008.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಅಪೀಲು(2)8/2008-09, ದಿನಾಂಕ 24-6-2008.
5. ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 130 ಸಿಎನ್‌ಎಸ್ 08, ದಿನಾಂಕ 18-3-2009.

**ಪ್ರಸ್ತಾವನೆ :**

ಶ್ರೀ ಎಲ್.ವೈ. ಗಾಡಿವಡ್ಡರ್, ಸಿ.ಪಿ.ಸಿ. -1976, ನಂದಗಡ ಪೊಲೀಸ್ ಠಾಣೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಕರ್ತವ್ಯದಲ್ಲಿ ಘೋರ ದುರ್ನಡತೆಯನ್ನು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ

ೋಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ಮತ್ತು 8 ರಡಿ ಜಂಟಿ ಇಲಾಖಾ ವಿಚಾರಣೆಗ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ೋಷಾರೋಪಣೆ:**

1. ಆಪಾದಿತ ಪೊಲೀಸ್ ಅಧಿಕಾರಿ ಸಿ.ಪಿ.ಸಿ. –1976 ಎಲ್.ವೈ. ಗಾಡಿವಡ್ಡರ್, ನಂದಗಡ ಪೊಲೀಸ್ ಠಾಣೆ ರವರಾದ **ಆಪಾದನೆ 1:** "ನೀವು ಹಾಗೂ ನಿಮ್ಮ ಇಬ್ಬರು ಮಕ್ಕಳೊಂದಿಗೆ ದಿ: 31–5–2006 ರಂದು 23–30 ಗಂಟೆಯ ಸುಮಾರಿಗೆ ಸಿ.ಪಿ.ಸಿ. –1517 ಎಸ್.ಎ. ತೊಲಗಿ, ನಂದಗಡ ಪೊಲೀಸ್ ಠಾಣೆ, ವಿನಾಕಾರಣ ಇವರ ಮನೆಯ ಬಾಗಿಲು ಒದ್ದು ಒಳಗೆ ಹೋಗಿ ಸಿ.ಪಿ.ಸಿ. –1517 ಎಸ್.ಎ. ತೊಲಗಿ ಇವರ ಪತ್ನಿ ಹಾಗೂ ಮಕ್ಕಳಿಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡಿ–ಬಡಿ ಮಾಡಿ ನಿಮ್ಮ ಕರ್ತವ್ಯದಲ್ಲಿ ಅತೀವ ಹಾಗೂ ಘೋರ ದುರ್ನಡತೆ ಪ್ರದರ್ಶಿಸಿರುವಿರಿ."
2. **ಆಪಾದಿತ ಪೊಲೀಸ್ ಅಧಿಕಾರಿ:** 1 ಸಿ.ಪಿ.ಸಿ. –1976 ಎಲ್.ವೈ. ಗಾಡಿವಡ್ಡರ್, ನಂದಗಡ ಪೊಲೀಸ್ ಠಾಣೆ, ರವರಾದ ನೀವು ಹಾಗೂ ಆ.ಪೊ.ಅ.: 1–ಸಿ.ಪಿ.ಸಿ.–2176 ಎ.ಕೆ. ಪಾಟೀಲ ಹಾಗೂ ಅ.ಪೊ.ಅ:3, ಸಿ.ಎಚ್.ಸಿ.–1946 ಡಿ.ವ್ಹಿ.ಜಡಗಿ ಇಬ್ಬರೂ ನಂದಗಡ ಪೊಲೀಸ್ ಠಾಣೆ ರವರು ಕೂಡಿ ಮೇಲಾಧಿಕಾರಿಗಳ ಅವಹೇಳನ ಮಾಡುವುದು, ಪೊಲೀಸ್ ಠಾಣೆಯ ಸಹದ್ಯೋಗಿ ಸಿಬ್ಬಂದಿಯವರ ಕೂಡಾ ಜಗಳ ಮಾಡುವುದು, ಬೈಯುವುದು ಮಾಡುತ್ತಾ ಪೊಲೀಸ್ ಇಲಾಖೆಯ ಹೆಸರು ಕೆಡಿಸುವಂತಹ ಅಪಕೃತ್ಯಗಳನ್ನು ಎಸಗಿ ನಿಮ್ಮ ಕರ್ತವ್ಯದಲ್ಲಿ ಘೋರ ದುರ್ನಡತೆ ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 20–6–2007ರ ಆದೇಶದಲ್ಲಿ "ಅರ್ಜಿದಾರರ ವೇತನವನ್ನು ಪಿ.ಸಿ. ಹುದ್ದೆಯ ಕನಿಷ್ಠ ಮೂಲ ವೇತನಕ್ಕೆ ಇಳಿಸಿ ಹೊಸದಾಗಿ ವೇತನ ಬಡ್ತಿಗಳನ್ನು ಗಳಿಸುವುದು ಹಾಗೂ ದಿ: 3–6–2006 ರಿಂದ 26–7–2006ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಆದೇಶಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಅವರ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಹಕ್ಕೆಯಾಗುವಂತೆ 5 ವರ್ಷಗಳ ಕಾಲ ಮುಂದೂಡಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 3–10–2007ರಲ್ಲಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿದಾರರಿಗೆ ವಿಧಿಸಿದ ದಂಡನೆಯು ಅಧಿಕವಾಗಿದೆ ಎಂದು ಸರ್ಕಾರವು ಮನಗಂಡು ಈ ಕುರಿತು ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 263 ಪೊಸಿಅ 2008, ಬೆಂಗಳೂರು, ದಿನಾಂಕ: 9ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಲ್.ವೈ. ಗಾಡಿವಡ್ಡರ್, ಸಿ.ಪಿ.ಸಿ. –1976, ನಂದಗಡ ಪೊಲೀಸ್ ಠಾಣೆ, ಇವರಿಗೆ ಮೇಲ್ಮನವಿ ಪ್ರಾಧಿಕಾರ ವಿಧಿಸಿದ ದಂಡನೆಯನ್ನು ಭಾಗಶಃ ಮಾರ್ಪಡಿಸಿ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿದು ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1166

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ : ಶ್ರೀ ಎಂ.ಎಂ. ನದಾಫ್, ಪಿ.ಎಸ್.ಐ., ಅಬಕಾರಿ ದಳ, ಹಾವೇರಿ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಹಾವೇರಿ ಜಿಲ್ಲೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ 2/ಪಿಆರ್/156/2007, ಓಬಿ:12/2008, ದಿ: 5-1-08.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ: ಅಪೀಲು/24/ಉವ/2008, ದಿನಾಂಕ 13-8-08.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 26-8-2008.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)65/2008-09, ದಿನಾಂಕ 9-2-09.

ಪ್ರಸ್ತಾವನೆ :

ಶ್ರೀ ಎಂ.ಎಂ. ನದಾಫ್, ಪಿ.ಎಸ್.ಐ., ಅಬಕಾರಿ ದಳ, ಹಾವೇರಿ ಜಿಲ್ಲೆ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಗುತ್ತಲ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕರ್ತವ್ಯದಲ್ಲಿ ಬೇಜವಾಬ್ದಾರಿತನ, ತೀವ್ರ ನಿರ್ಲಕ್ಷತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿಯಲ್ಲಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷಾರೋಪಣೆ:**

1) "ಶಿಸ್ತು ಪಾಲನಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೀವು ದಿ: 16-11-2007ರಂದು ವಾರದ ಕವಾಯತ್ ಮಾಡುವ ಬಗ್ಗೆ ಜಿಲ್ಲಾ ನಿಯಂತ್ರಣ ಕೊಠಡಿಗೆ ಮಾಹಿತಿಯನ್ನು ನೀಡಿರುತ್ತೀರಿ. ಆದರೆ, ಸಿ.ಪಿ.ಐ., ಕಾವೇರಿ ಗ್ರಾಮೀಣ ವೃತ್ತ ರವರು ದಿ: 16-11-2007ರಂದು ಬೆಳಿಗ್ಗೆ 7-30 ಗಂಟೆಗೆ ಗುತ್ತಲ ಠಾಣೆಗೆ ಭೇಟಿ ನೀಡಿ ಪರಿಶೀಲಿಸಲಾಗಿ ಪಿ.ಎಸ್.ಐ., ಹಾಗೂ ಸಿಬ್ಬಂದಿಯವರು ಪರೇಡ ಮಾಡಿರುವುದಿಲ್ಲ. ಠಾಣೆಗೆ ಪಿ.ಎಸ್.ಐ. ರವರು ಬಂದಿರುವುದಿಲ್ಲ. ಹಾಗೂ ಠಾಣಾ ದಿನಚರಿಯನ್ನು ಪ್ರಾರಂಭಿಸದೇ ಇರುವುದು ಕಂಡು ಬಂದಿದ್ದು ಈ ಬಗ್ಗೆ ನಿಮಗೆ ಕೇಳಲಾಗಿ ದಿ: 10-11-2007 ರಂದು ರಾತ್ರಿ ಮಹಾಪುರ ಗ್ರಾಮಕ್ಕೆ ಭೇಟಿ ನೀಡಿರುವುದಾಗಿ ತಿಳಿಸಿರುತ್ತೀರಿ. ವಾರದ ಕವಾಯತ್ ನಡೆಸದೇ ಹಾಗೂ ಠಾಣೆಗೆ ಬಾರದೇ ನೀವು ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತನ ಪ್ರದರ್ಶಿಸಿರುತ್ತೀರಿ.

2) ದಿ: 15-11-2007ರ ಠಾಣಾ ದಿನಚರಿಯನ್ನು ಮಧ್ಯಾಹ್ನ 01-00 ಗಂಟೆಯ ವರೆಗೆ ಬರೆದಿದ್ದನ್ನು ಬಿಟ್ಟರೆ ಉಳಿದಂತೆ ಪ್ರಕರಣ ದಾಖಲ ಮಾಡಿದ ಬಗ್ಗೆ ಹಾಗೂ ಇತರೇ ಕರ್ತವ್ಯಗಳ ಬಗ್ಗೆ ದಿನಚರಿಯಲ್ಲಿ ನಮೂದಿಸಿರುವುದಿಲ್ಲ. ಅಪರಾಧ ಸಂಖ್ಯೆ: 185/2007 ಹಾಗೂ 166/2007ರ ಪ್ರಕರಣಗಳ ಪ್ರಥಮ ವರ್ತಮಾನ ವರದಿ ತಯಾರಿಸುವಾಗ ಎಸ್.ಎಚ್.ಡಿ. ಕ್ರಮ ಸಂಖ್ಯೆ ಅಂಕಣವನ್ನು ಖಾಲಿ ಬಿಟ್ಟು ನೀವು ನಿಮ್ಮ ಆದ್ಯ ಕರ್ತವ್ಯದಲ್ಲಿ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷತನವನ್ನು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಹಾವೇರಿ, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 5-1-2008ರ ಆದೇಶದಲ್ಲಿ "ಇವರ ವಾರ್ಷಿಕ ವೇತನ ಬಡ್ತಿಯನ್ನು ನಂತರದ ವಾರ್ಷಿಕ ವೇತನ ಬಡ್ತಿಗಳಿಗೆ ಪರಿಣಾಮ ಬೀರದಂತೆ ಮೂರು ತಿಂಗಳುಗಳ ಕಾಲ ತಡೆಹಿಡಿಯುವ ದಂಡನೆಯನ್ನು ವಿಧಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಅರ್ಜಿದಾರರ ಮೇಲ್ಮನವಿಯನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 13-8-08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಕರ್ತವ್ಯದಲ್ಲಿ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಕಂಡು ಬರುತ್ತದೆ, ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 289 ಪೊಸಿಅ 2008, ಬೆಂಗಳೂರು, ದಿನಾಂಕ: 2ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಕಾಯ್ದೆ 1963ರ ಕಲಂ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಎಂ. ನದಾಫ್, ಪಿ.ಎಸ್.ಐ., ಅಬಕಾರಿ ದಳ, ಹಾವೇರಿ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1167

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

## ಜಲಸಂಪನ್ಮೂಲ ಸಚಿವಾಲಯ

**ವಿಷಯ :** ಗುಲ್ಬರ್ಗಾ ಜಿಲ್ಲೆ, ಜೇವರ್ಗಿ ತಾಲ್ಲೂಕು ಇಜೇರಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಇಜೇರಿ ಮತ್ತು ಹರನೂರ ಗ್ರಾಮಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

**ಓದಲಾಗಿದೆ :** ದಿನಾಂಕ 8-7-2008ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2008-09/3783.

**ಪ್ರಸ್ತಾವನೆ :**

ಗುಲ್ಬರ್ಗಾ ಜಿಲ್ಲೆ, ಜೇವರ್ಗಿ ತಾಲ್ಲೂಕು ಇಜೇರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಇಜೇರಿ ಮತ್ತು ಹರನೂರು ಗ್ರಾಮಗಳ ಜಮೀನುಗಳ ನ್ಯಾಯಾಲಯ ಪ್ರಕರಣಗಳಿಗೆ ಹೆಚ್ಚಿನ ಪರಿಹಾರ ಧನ ಪಾವತಿಸಲು ಹಣ ಭರವಸೆ ಪತ್ರ ಬಿಡುಗಡೆ ಮಾಡಲು ಕೋರಿ ಮೇಲೆ ಓದಲಾದ ಪತ್ರದಲ್ಲಿ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 14-3-1996.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 24-1-1998.

ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಲ್ಲಿ ಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ಪ್ರತಿ ಎಕರೆಗೆ ರೂ. 9,000/-ಗಳ ದರವನ್ನು ಖುಷ್ಕಿ ಜಮೀನಿಗೆ ಹಾಗೂ ಪೋಟಖರಾಬ್ ಜಮೀನಿಗೆ ಪ್ರತಿ ಎಕರೆಗೆ ರೂ. 800/-ಗಳಂತೆ ನಿಗದಿಪಡಿಸಲಾಗಿತ್ತು. ಪರಿಹಾರ ಧನ ಪಡೆದ ಇಜೇರಿ ಮತ್ತು ಹರನೂರ ಗ್ರಾಮಗಳ ಸ.ನಂ.ಗಳಿಗೆ ಸೇರಿದ ಒಟ್ಟು 34-30 ಎಕರೆ ಜಮೀನಿನ ಭೂಮಾಲೀಕರು ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಗುಲ್ಬರ್ಗಾದ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಕೆಲವೊಂದು ಪ್ರಕರಣಗಳ ತೀರ್ಪುಗಳ ವಿರುದ್ಧ ಜಿಲ್ಲಾ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಲಾಗಿತ್ತು. ಈ ಮೇಲ್ಮನವಿಗಳಲ್ಲಿ ಸಹ ನ್ಯಾಯಾಲಯದ ತೀರ್ಪು ಭೂಮಾಲೀಕರ ಪರವಾಗಿ ಆಗಿರುತ್ತದೆ. ಪ್ರಕರಣಗಳ ವಿವರ ಕೆಳಕಂಡಂತಿದೆ:

| ಕ್ರ. ಸಂ. | ಎಲ್ಎಸಿ ಸಂಖ್ಯೆ | ಎಂಎಫ್ಎ ಸಂಖ್ಯೆ | ಗ್ರಾಮ | ಸ.ನಂ. | ವಿಸ್ತೀರ್ಣ ಎ-ಗುಂ | ಪರಿಹಾರ ಮೊತ್ತ (ರೂ.ಗಳಲ್ಲಿ) |
|---|---|---|---|---|---|---|
| 1 | 291/99 | – | ಇಜೇರಿ | 184 | 03-10 | 368446 |
| 2 | 292/99 | 1957/03 | ಇಜೇರಿ | 182/2 | 12-30 | 490351 |
| 3 | 293/99 | 20/04 (ಎಲ್ಎಸಿಎ) | ಹರನೂರ | 175 | 01-18 | 164384 |
| 4 | 297/99 | – | ಹರನೂರ | 146 | 00-03 | 8503 |
| 5 | 318/99 | – | ಇಜೇರಿ | 190ಎ | 01-34 | 209731 |
| 6 | 319/99 | 6112/04 | ಇಜೇರಿ | 202 | 05-13 | 603685 |
| 7 | 321/99 | 6113/04 | ಇಜೇರಿ | 180 | 02-13 | 263581 |
| 8 | 322/99 | 6114/04 | ಇಜೇರಿ | 181 | 06-07 | 700048 |

| ಕ್ರ. ಸಂ. | ಎಲ್‌ಎಸಿ ಸಂಖ್ಯೆ | ಎಂಎಫ್‌ಎ ಸಂಖ್ಯೆ | ಗ್ರಾಮ | ಸ.ನಂ. | ವಿಸ್ತೀರ್ಣ ಎ-ಗುಂ | ಪರಿಹಾರ ಮೊತ್ತ (ರೂ.ಗಳಲ್ಲಿ) |
|---|---|---|---|---|---|---|
| 9 | 535/99 | 6115/04 | ಇಜೇರಿ | 189 | 01–22 | 175720 |
| | ಒಟ್ಟು | | | | | **2984449** |

* ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದಲ್ಲಿ ವೆಚ್ಚ ಸಹ ಸೇರಿದೆ.

ತೀರ್ಪುಗಳ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಟಿಪ್ಪಣಿ ಸಂಖ್ಯೆ: ಲಾ 1646 ಎಲ್‌ಎಸ್‌ಪಿ 2008, ದಿನಾಂಕ 2–12–08ರಲ್ಲಿ ಅಭಿಪ್ರಾಯ ನೀಡಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸನೀಇ 77 ಭೂಸ್ವಾಪ್ರ 2008, ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009**

ಗುಲ್ಬರ್ಗಾ ಜಿಲ್ಲೆ, ಜೇವರ್ಗಿ ತಾಲ್ಲೂಕು ಇಜೇರಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಇಜೇರಿ ಮತ್ತು ಹರನೂರ ಗ್ರಾಮಗಳ ಜಮೀನುಗಳಿಗೆ ಮೇಲ್ಕಂಡ ಪ್ರಸ್ತಾವನೆಯಲ್ಲಿ ತಿಳಿಸಿರುವ ಪ್ರಕರಣಗಳಲ್ಲಿ ನ್ಯಾಯಾಲಯದ ತೀರ್ಪಿನಂತೆ ಹೆಚ್ಚುವರಿ ಪರಿಹಾರ ಮೊತ್ತ ಒಟ್ಟು ರೂ. 29,84,449–00ಗಳನ್ನು (ಇಪ್ಪತ್ತೊಂಭತ್ತು ಲಕ್ಷದ ಎಂಭತ್ತ ನಾಲ್ಕು ಸಾವಿರದ ನಾನೂರ ನಲವತ್ತೊಂಭತ್ತು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ: ಎಫ್‌ಡಿ 01 ಟಿಎಫ್‌ಪಿ 2008 ದಿನಾಂಕ 16–5–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1168

**ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

**ವಿಷಯ :** ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕು ಕೊಳಹಾಳ್ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನದ ಶೇ. 50ರಷ್ಟನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡುವ ಕುರಿತು.

**ಓದಲಾಗಿದೆ :** ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ 16–7–2008ರ ಪತ್ರ ಸಂಖ್ಯೆ ಮುಸನೀ(ದ)/ಲೆಶಾ/ಲೆಸ–1/3/ಭೂಸ್ವಾಧೀನ/2008–09/1462.

**ಪ್ರಸ್ತಾವನೆ :**

ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ರವರು ಮೇಲೆ ಓದಲಾದ ಪತ್ರದಲ್ಲಿ ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕು ಕೊಳಹಾಳ್ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಚಿತ್ರದುರ್ಗದ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 31–10–91.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 29–3–95.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಚಿತ್ರದುರ್ಗ ಇಲ್ಲಿ ಎಲ್.ಎ.ಸಿ. ಪ್ರಕರಣ ಸಂಖ್ಯೆ: 141/95ನ್ನು ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ

ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಈ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯದಲಿ ಎಂ.ಎಫ್.ಎ.ಸಾ. 6032/04ನ್ನು ದಾಖಲಿಸಲಾಗಿತ್ತು. ಆದರೆ, ಪ್ರಕರಣದಲ್ಲಿಯ ಮೌಲ್ಯ ರೂ. 1.00 ಲಕ್ಷಗಳಿಗಿಂತ ಕಡಿಮೆಯಿರುವುದರಿಂದ ಮೇಲ್ಮನವಿಯನ್ನು ಜಿಲ್ಲಾ ನ್ಯಾಯಾಲಯದಲ್ಲಿ ದಾಖಲಿಸಲು ಅವಕಾಶ ನೀಡುವಂತೆ ಸರ್ಕಾರಿ ವಕೀಲರು ಮನವಿ ಮಾಡಿದ್ದರ ಮೇರೆಗೆ ಉಚ್ಚ ನ್ಯಾಯಾಲಯವು ಈ ಮನವಿಯನ್ನು ಅಂಗೀಕರಿಸಿದೆ. ಅದರಂತೆ ಚಿತ್ರದುರ್ಗ ಜಿಲ್ಲಾ ನ್ಯಾಯಾಲಯದಲ್ಲಿ ಎಂ.ಎ. ಸಂಖ್ಯೆ: 93/08ನ್ನು ದಾಖಲಿಸಲಾಗಿದೆ.

ಎಲ್.ಎ.ಸಿ. ಸಂಖ್ಯೆ: 141/95ರ ಜಾರಿಗಾಗಿ ಭೂಮಾಲೀಕರು ಜಪ್ತಿ ಆದೇಶವನ್ನು ನ್ಯಾಯಾಲಯದಿಂದ ಪಡೆದುಕೊಂಡಿರುವುದರಿಂದ, ಜಿಲ್ಲಾ ನ್ಯಾಯಾಲಯದ ತೀರ್ಪನ್ನು ಕಾಯ್ದಿರಿಸಿ ಸಿವಿಲ್ ನ್ಯಾಯಾಲಯದ ತೀರ್ಪಿನಂತೆ ಲೆಕ್ಕಹಾಕಿದ ಪರಿಹಾರ ಮೊತ್ತದ ಶೇ. 50ರಷ್ಟನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡಲು ತೀರ್ಮಾನಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸನೀಇ 92 ಭೂಸ್ವಾಪ್ರ 2007, ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009**

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕು ಕೊಳಹಾಳ್ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತದ ಶೇ. 50ರಷ್ಟು ಅಂದರೆ ರೂ. 1,42,842-00ಗಳನ್ನು (ಒಂದು ಲಕ್ಷದ ನಲವತ್ತೆರಡು ಸಾವಿರದ ಎಂಟು ನೂರ ನಲವತ್ತೆರಡು ರೂ.ಗಳು ಮಾತ್ರ) ಸಿವಿಲ್ ನ್ಯಾಯಾಲಯದ ತೀರ್ಪಿನ ಮೇಲೆ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ: 93/08ರ ತೀರ್ಪನ್ನು ಕಾಯ್ದಿರಿಸಿ, ಪರಿಹಾರ ಮೊತ್ತವನ್ನು ಭೂಮಾಲೀಕರಿಗೆ ಪಾವತಿಸದೇ ಇರುವ ಷರತ್ತಿಗೊಳಪಟ್ಟು ನ್ಯಾಯಾಲಯದಲ್ಲಿ ಠೇವಣಿ ಮಾಡಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-5-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1169

**ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

**ವಿಷಯ :** ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಬುಕ್ಕಾಪಟ್ಟಣ ಹೋಬಳಿ, ಗಾಣದ ಹುಣಿಸೇ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

**ಓದಲಾಗಿದೆ :** ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ 9-3-09ರ ಪತ್ರ ಸಂಖ್ಯೆ: ಮುಸನೀ(ದ)/ಲೆಶಾ/ಲೆಸ-1/3/ಭೂಸ್ವಾಧೀನ/08-09/606.

**ಪ್ರಸ್ತಾವನೆ :**

ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರದಲ್ಲಿ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಬುಕ್ಕಾಪಟ್ಟಣ ಹೋಬಳಿ, ಗಾಣದ ಹುಣಿಸೇ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣದಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ರೂ. 10,69,043-00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 29-7-82.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 2-6-86.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಶಿರಾ ಸಿವಿಲ್ (ಹಿರಿಯ ಶ್ರೇಣಿ)

ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣ ದಾಖಲಿಸಿದ್ದ ಎಲ್.ಎ.ಸಿ. ಪ್ರಕರಣದಲ್ಲಿ ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ಪಡೆದುಕೊಂಡಿದ್ದಾರೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ: ಆರ್‌ಡಿ 335 ಎಲ್‌ಸಿಎ 2008, ದಿನಾಂಕ 4-12-08ರಲ್ಲಿ ಅಭಿಪ್ರಾಯ ನೀಡಿದೆ. ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣದ ವಿವರ ಕೆಳಕಂಡಂತಿದೆ:

| ಕ್ರ. ಸಂ. | ಎಲ್‌ಎಸಿ ಸಂಖ್ಯೆ | ಗಾಣದ ಹುಣಸೇ ಗ್ರಾಮದ ಸ.ನಂ. | ವಿಸ್ತೀರ್ಣ ಎ-ಗುಂ | ಪರಿಹಾರ ಮೊತ್ತ ರೂ.ಗಳಲ್ಲಿ |
|---|---|---|---|---|
| 1 | 21/05 | 66/1ಎ, 64/2, 66/3, 64/1, 64/3ಬಿ & 66/2ಬಿ | 19-35 | 10,69,043-00 |

* ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸನೀಇ 42 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009**

ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಬುಕ್ಕಾಪಟ್ಟಣ ಹೋಬಳಿ, ಗಾಣದ ಹುಣಿಸೇ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಗಾಣದ ಹುಣಸೆ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣ ಸಂಖ್ಯೆ: 21/05ರಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 10,69,043-00ಗಳನ್ನು (ಹತ್ತು ಲಕ್ಷದ ಅರತ್ತೊಂಭತ್ತು ಸಾವಿರದ ನಲವತ್ಮೂರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ.

ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-5-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1170

**ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

## ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

**ವಿಷಯ :** ಅನಿವಾಸಿ ಭಾರತೀಯ ಕೋಶ ರಚಿಸುವ ಬಗ್ಗೆ – ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇದರ ಉಪಾಧ್ಯಕ್ಷರ ಆಪ್ತಶಾಖೆಗೆ ಹಾಗೂ ಅವರ ಕಛೇರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :**
1. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಪತ್ರ ಸಂಖ್ಯೆ: ಕಸನಿ 47 ಕಅ: 2008-09, ದಿನಾಂಕ 23-1-2009.
2. ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 67 ಕಸನಿ 08, ದಿನಾಂಕ 18-12-2008.

**ಪ್ರಸ್ತಾವನೆ :**

ಮೇಲೆ (1)ರಲ್ಲಿ ಓದಲಾದ ದಿನಾಂಕ 23-1-2009ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರು ಅನಿವಾಸಿ ಭಾರತೀಯ ಕೋಶ ರಚಿಸುವ ಬಗ್ಗೆ ಹಾಗೂ ಉಪಾಧ್ಯಕ್ಷರ ಆಪ್ತಶಾಖೆಗೆ ಹಾಗೂ ಅವರ ಕಛೇರಿಗೆ ರೂ. 100.00 ಲಕ್ಷಗಳ ಅನುದಾನವನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ 18-12-2008ರ ಸರ್ಕಾರದ ಆದೇಶದಲ್ಲಿ ಲೆಕ್ಕಶೀರ್ಷಿಕೆ 2205-00-800-0-09-059 (ಇತರೆ ಖರ್ಚು) (ಯೋಜನೆ)ಯಡಿ ಮಂಜೂರು ಮಾಡಲಾಗಿದೆ. ಆದರೆ 2008ರ ಸಾಲಿನ ರಾಜ್ಯ ಪ್ರಶಸ್ತಿ ಸಮಾರಂಭದ ವೆಚ್ಚ ಹಾಗೂ ಪ್ರಶಸ್ತಿ ವೆಚ್ಚ ಸೇರಿ ರೂ. 90.00 ಲಕ್ಷಗಳನ್ನು ಈ ಲೆಕ್ಕ

ಶೀರ್ಷಿಕೆಯಡಿ ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 217 ಕಸಧ 2008, ದಿನಾಂಕ 30-10-2008ರಲ್ಲು ಬಿಡುಗಡೆ ಮಾಡಲಾಗಿರುವುದರಿಂದ ಈ ಶೀರ್ಷಿಕೆಯಡಿ ರೂ. 10.00 ಲಕ್ಷಗಳ ಉಳಿಕೆ ಇರುತ್ತದೆ ಎಂದು ವರದಿ ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಅನಿವಾಸಿ ಭಾರತೀಯ ಕೋಶಕ್ಕೆ ಸಮಸಂಖ್ಯೆ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ಮಾಡಿರುವ ರೂ. 100.00 ಲಕ್ಷಗಳನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸದರಿ ಲೆಕ್ಕ ಶೀರ್ಷಿಕೆಯಡಿ ಉಳಿದಿರುವ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲು ಆದೇಶ ಹೊರಡಿಸುವಂತೆ ನಿರ್ದೇಶಕರು ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸಿರುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 67 ಕಸನಿ 2008, ಬೆಂಗಳೂರು, ದಿನಾಂಕ: 7ನೇ ಫೆಬ್ರವರಿ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಅದರ ಉಪಾಧ್ಯಕ್ಷರ ಆಪ್ತಶಾಖೆಗೆ ಹಾಗೂ ಅವರ ಕಛೇರಿಯ ವೆಚ್ಚಗಳನ್ನು ನಿರ್ವಹಿಸಲು ಆಡಳಿತ ಇಲಾಖೆಯಾದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜ್ಯ ಶಿಷ್ಟಾಚಾರ)ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಲೆಕ್ಕ ಶೀರ್ಷಿಕೆ 2205-00-800-0-09-059 (ಇತರೆ ಖರ್ಚು) (ಯೋಜನೆ)ಯಡಿಯಲ್ಲಿ ಒದಗಿಸಿರುವ ರೂ. 100.00 ಲಕ್ಷಗಳಲ್ಲಿ ರೂ. 10.00 ಲಕ್ಷಗಳನ್ನು (ರೂಪಾಯಿ ಹತ್ತು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಹಿಂದೆ ದಿನಾಂಕ 18-12-2008ರಂದು ಈ ಉದ್ದೇಶಕ್ಕಾಗಿ ಹೊರಡಿಸಿದ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996 ದಿನಾಂಕ 10-7-1996ರ ಅನ್ವಯ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹಾಗೂ ಟಿಪ್ಪಣಿ ಸಂಖ್ಯೆ ಇಡಿ 287 ಐಎಫ್ (ಬಿಎ) 2009 ದಿನಾಂಕ 4-2-2009ರಲ್ಲಿ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 582

**ಎಂ.ಕೆ. ಧರ್ಮರಾಜಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

**ವಿಷಯ :** ಕರ್ನಾಟಕ ಗ್ಯಾಸೆಟಿಯರ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆಗಳಿಗೆ 2008-09ನೇ ಸಾಲಿಗೆ ರೂ. 50.00 ಲಕ್ಷಗಳ ಅನುದಾನ ಹಂಚಿಕೆ ಮಾಡುವ ಬಗ್ಗೆ.

**ಓದಲಾಗಿದೆ :**

1. ನಿರ್ದೇಶಕರು, ಕನ್ನಡ ರಾಜ್ಯ ಪತ್ರಾಗಾರ ಇಲಾಖೆ, ಇವರ ಪತ್ರ ಸಂಖ್ಯೆ: ಎ.ಆರ್.ಎಸ್. 20 ಎ.ಡಿ.ಎಂ. 2008, ದಿ: 5-8-2008.
2. ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಇವರ ಪತ್ರ ಸಂಖ್ಯೆ ಕಗ್ಯಾಇ/ಸಿ(1)/ 2008-09/214, ದಿ: 5-8-2008.

**ಪ್ರಸ್ತಾವನೆ :**

ಮೇಲೆ (1)ರಲ್ಲಿ ಓದಲಾದ ನಿರ್ದೇಶಕರು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಅವರ ಪತ್ರದಲ್ಲಿ 2008-09ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪೂರಕ ಅನುದಾನದಲ್ಲಿ ಬಿಡುಗಡೆಯಾಗಿರುವ ರೂ. 1 ಕೋಟಿಗಳಲ್ಲಿ ರೂ. 50 ಲಕ್ಷಗಳನ್ನು ಪತ್ರಾಗಾರ ಇಲಾಖೆಗೆ ಬಿಡುಗಡೆ ಮಾಡಬೇಕೆಂದು ಪ್ರಸ್ತಾವನೆಯಲ್ಲಿ ಸಲ್ಲಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಅವರ ದಿ: 5-8-2008 ಪತ್ರದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯದರ್ಶಿಗಳ ಸಭೆಯ ತೀರ್ಮಾನದಂತೆ ಮೈಸೂರು ಪ್ರಾಂತ್ಯದ ಪರಂಪರೆಯನ್ನು ಬಿಂಬಿಸುವ ಹಲವಾರು ಅಮೂಲ್ಯ ಗ್ರಂಥಗಳನ್ನು ಪುನರ್ ಮುದ್ರಿಸುವುದು ಹಾಗೂ ವಿದೇಶದ ಗ್ರಂಥಾಲಯ ಮತ್ತು ಪತ್ರಾಗಾರಗಳಲ್ಲಿರುವ ಮೈಸೂರು ಪ್ರಾಂತ್ಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿ ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿ ಸಂಶೋಧಕರಿಗೆ ಲಭ್ಯ ಮಾಡುವ ದೃಷ್ಟಿಯಿಂದ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಗೆ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆಗಳಿಗೆ ತಲಾ ರೂ. 50 ಲಕ್ಷಗಳನ್ನು ಆಯವ್ಯಯದಲ್ಲಿ ಮಂಜೂರು ಮಾಡಬೇಕೆಂದು 2008-09ನೇ ಸಾಲಿನಲ್ಲಿ ಗ್ಯಾಸೆಟಿಯರ್ ಇಲಾಖೆಗೆ ಹಂಚಿಕೆ ಮಾಡಲಾಗಿರುವ ರೂ. 1.00 ಕೋಟಿಗಳಲ್ಲಿ ರೂ. 50.00 ಲಕ್ಷಗಳನ್ನು ಗ್ಯಾಸೆಟಿಯರ್ ಇಲಾಖೆಗೆ ಪುನರ್ ಹಂಚಿಕೆ ಮಾಡಿ ಉಳಿದ ರೂ. 50.00 ಲಕ್ಷಗಳನ್ನು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಗೆ ವರ್ಗಾಯಿಸುವಂತೆ ಪ್ರಸ್ತಾವನೆಯಲ್ಲಿ ಸಲ್ಲಿಸಿರುತ್ತಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 10 ರಾಪಸ 2008, ಬೆಂಗಳೂರು, ದಿನಾಂಕ: 8ನೇ ಡಿಸೆಂಬರ್ 2008**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ 2008-09ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 3454-02-110-0-03-059 (ಯೋಜನೆ) ಅಡಿ ಒದಗಿಸಲಾದ ರೂ. 1 ಕೋಟಿ ಅನುದಾನದಲ್ಲಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಗೆ ರೂ. 50.00 ಲಕ್ಷಗಳನ್ನು (ರೂ. ಐವತ್ತು ಲಕ್ಷಗಳು ಮಾತ್ರ) ಲೆಕ್ಕ ಶೀರ್ಷಿಕೆ 3454-02-110-0-01 ಅಡಿ ಹಾಗೂ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಗೆ ರೂ. 50.00 ಲಕ್ಷಗಳು (ರೂಪಾಯಿ ಐವತ್ತು ಲಕ್ಷಗಳು ಮಾತ್ರ) ಲೆಕ್ಕ ಶೀರ್ಷಿಕೆ 2205-00-104-0-01-059 ಇತರೆ ಖರ್ಚುಗಳು (ಯೋಜನೆ) ಯಡಿ ಪುನರ್ ಹಂಚಿಕೆ ಮಾಡಲು ಸರ್ಕಾರವು ಆದೇಶಿಸುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 2017 ವೆಚ್ಚ 5/2008, ದಿ: 24-11-2008ರಡಿ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 142

**ಎಂ.ಕೆ. ಭರ್ಮರಾಜಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ,

ಈ ಅಧಿಸೂಚನೆಯನ್ನು ಕರ್ನಾಟಕ ಟ್ರೆಷರ್ ಟ್ರೋನ್ ಕಾಯ್ದೆ 1967ರ ಕಲಂ 4(ಬಿ) ರಲ್ಲಿ ದತ್ತವಾದ ಅಧಿಕಾರದ ಮೇರೆಗೆ ತುಮಕೂರು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾರಿಗಳಾದ ನಾನು ಈ ಆದೇಶವನ್ನು ಹೊರಡಿಸಿರುತ್ತೇನೆ. ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು ಚಿನಿಗ ಗ್ರಾಮದ ವಾಸಿ ಶ್ರೀ ಲಕ್ಷ್ಮಯ್ಯ ಬಿನ್ ಭೀಮಯ್ಯ ಇವರ ಹಳೆ ಮನೆಯ ಪಾಯ ತೆಗೆಯುತ್ತಿರುವಾಗ ಮಣ್ಣಿನ ಕುಡಿಕೆಯಲ್ಲಿ ದೊರೆತ ಅಲ್ಯೂಮಿನಿಯಂ ಮತ್ತು ತಾಮ್ರದ ಹಳೆಯ ನಾಣ್ಯಗಳು ಒಟ್ಟು 274 ನಾಣ್ಯಗಳು ಸಿಕ್ಕಿದ್ದು ವಿವರಗಳು ಈ ಅಧಿಸೂಚನೆಯಲ್ಲಿ ತೋರಿಸಿರುವಂತೆ ಇರುತ್ತವೆ. ಈ ನಿಧಿಯ ಅಥವಾ ನಿಧಿಯ ಭಾಗದ ಹಕ್ಕನ್ನು ಸಾಧಿಸಲಿಚ್ಛಿಸುವರು ದಿನಾಂಕ:16.11.2009 ರಂದು ಬೆಳಿಗ್ಗೆ 11–00 ಗಂಟೆಗೆ ಹಾಜರಾಗಿ ತುಮಕೂರು ಜಿಲ್ಲಾಧಿಕಾರಿ ಮತ್ತು ಜಿಲ್ಲಾದಂಡಾಧಿಕಾರಿಗಳವರ ಎದುರು ಸೂಕ್ತ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸುವುದು ಈ ದಿನಾಂಕದಂದು ಹಾಜರಾಗಲು ತಪ್ಪಿದ ವ್ಯಕ್ತಿಗಳ ಹಕ್ಕನ್ನು ಪರಿಗಣಿಸಲಾಗುವುದಿಲ್ಲ. ಅಲ್ಲದೆ ಹಕ್ಕನ್ನು ಸ್ಥಾಪಿಸಲಿಚ್ಛಿಸುವವರು ದಿನಾಂಕ:16.11.2009ರ ಒಳಗಾಗಿ ಲಿಖಿತ ಹೇಳಿಕೆಯನ್ನು ಸಹಾ ಈ ಕಛೇರಿಗೆ ಸಲ್ಲಿಸತಕ್ಕದ್ದು.

| ಕ್ರ. ಸಂ. | ಗುರುತಿಸಿರುವವರ ಹೆಸರು ಮತ್ತು ವಿಳಾಸ | ನಿಧಿ ದೊರೆತ ಜಮೀನಿನ ಮಾಲೀಕರು ಸ್ವಾಧೀನದಾರರ ಹೆಸರು ವಿಳಾಸ | ನಿಧಿಯ ಸ್ವರೂಪ ವಿವರಗಳು | ನಿಧಿಯು ದೊರೆತ ಸ್ಥಳ | ನಿಧಿಯ ಮೂಲ ಮತ್ತು ವಿವರ | ವರದಿ ಮಾಡಿದ ಪೋಲೀಸ್ ಅಧಿಕಾರಿಯ ಹುದ್ದೆ ಮತ್ತು ವಿಳಾಸ |
|---|---|---|---|---|---|---|
| 1. | ಶ್ರೀ ಲಕ್ಷ್ಮಯ್ಯ ಬಿನ್ ಭೀಮಯ್ಯ ಚಿನಿಗ ಗ್ರಾಮ, ತುಮಕೂರು ತಾಲ್ಲೂಕು. | ಶ್ರೀ ಲಕ್ಷ್ಮಯ್ಯ ಭೀಮಯ್ಯ ಚಿನಿಗ ಗ್ರಾಮ, ತುಮಕೂರು ತಾ: | 1. 4 ಆಣೆ–12 ನಾಣ್ಯಗಳು<br>2. 1 ರೂ.02. ತಾಮ್ರದ ನಾಣ್ಯಗಳು.<br>3. 1 ಆಣೆ 163 ನಾಣ್ಯಗಳು<br>4. 2 ಆಣೆ 97 ನಾಣ್ಯಗಳು<br>(ಒಟ್ಟು 274 ನಾಣ್ಯಗಳು) | ಚಿನಿಗ ಗ್ರಾಮ ಕೋರಾ ಹೋ. ತುಮಕೂರು ತಾಲ್ಲೂಕು. | ಹಳೆ ಮನೆಯ ಮಣ್ಣು ತೆಗೆಯುವಾಗ ಸಿಕ್ಕಿರುತ್ತದೆ. | ಜಿಲ್ಲಾ ಪೋಲೀಸ್ ಅಧೀಕ್ಷಕರು ತುಮಕೂರು ಜಿಲ್ಲೆ, ತುಮಕೂರು. |

ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾದಂಡಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.

ಪಿ.ಆರ್.689

**ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.6, ಲೋಕೋಪಯೋಗಿ ಇಲಾಖೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ**

**ಸುತ್ತೋಲೆ**

**ದಿನಾಂಕ:5ನೇ ಜೂನ್, 2009**

**ಸಂ:ಸ.ಕಾ.ಇಂ.ಲೋ.ಇ:ಶಿಕಾರಿಪುರ:ಮಾಹಿತಿಹಕ್ಕು. 2009-10/104, ದಿನಾಂಕ:24ನೇ ಜೂನ್, 2009**

ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 5(1)ರ ಅಡಿಯಲ್ಲಿ ಇಲಾಖಾ ಮುಖ್ಯಸ್ಥರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ ಕಛೇರಿಗಳಲ್ಲಿನ ಕಾರ್ಯವಿಧಾನದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು. ಇವರ ಅಧಿಸೂಚನೆ ಸಂಖ್ಯೆ/ ಸಿಬಿಎಸ್/ ಮಾಹಿತಿ ಹಕ್ಕು ಕೈಪಿಡಿ/2005 ಇಎಸ್ಎಲ್/05-06/ದಿನಾಂಕ:19.05.2005ರ ಪ್ರಕಾರ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಾದ ಶ್ರೀ ಎಸ್. ರಮೇಶ್, ನಂ.6, ಲೋ. ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ ಇವರು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ (ಎಸ್.ಪಿ.ಐ.ಓ) ನೇಮಕಗೊಂಡಿದ್ದು ಮಾಹಿತಿ ನೀಡುವ ಪ್ರಕ್ರಿಯೆಯು ಸುಲಲಿತವಾಗಿ ನಡೆಯಲು ಅನುಕೂಲವಾಗುವಂತೆ ಶ್ರೀ ಕೆ.ಬಿ.ಬಾಣದ್, ಕಿರಿಯ ಇಂಜಿನಿಯರ್ (ವಿ.ದ) ನಂ.6, ಲೋಕೋಪಯೋಗಿ ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ ಇವರನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಎಪಿಐಓ) ಯಾಗಿ ನೇಮಕಗೊಳಿಸಲಾಗಿದೆ.

ಈ ಕಛೇರಿಯ ಮಾಹಿತಿಗಳನ್ನು ಸಾರ್ವಜನಿಕರಿಗೆ ನೀಡುವ ಸಲುವಾಗಿ ಮಾಹಿತಿ ಹಕ್ಕು ಕೈಪಿಡಿ 2005ನ್ನು ಈ ಮೂಲಕ ಹೊರಡಿಸಲಾಗಿದೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಶಿಕಾರಿಪುರ.
ದಿನಾಂಕ:05.06.2009

**ಕರ್ತವ್ಯದ ಹಾಜರಾತಿ**

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ- 2005 ರ ಸೆಕ್ಷನ್ 5(1) ರ ಪ್ರಕಾರ ಶ್ರೀ ಎಸ್. ರಮೇಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆದ ನಾನು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿ (ಎಸ್.ಪಿ,ಐ.ಓ)ಯಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ:05.06.2009 ರಿಂದ ಮೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇನೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ನಂ.6, ಲೋ.ಇ.ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಶಿಕಾರಿಪುರ.
ದಿನಾಂಕ:05.06.2009

**ಕರ್ತವ್ಯದ ಹಾಜರಾತಿ**

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ-2005ರ ಸೆಕ್ಷನ್ 5(2) ರ ಪ್ರಕಾರ ಶ್ರೀ ಕೆ.ಬಿ.ಬಾಣದ ಆದ ನಾನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಎ.ಪಿ.ಐ.ಓ.) ಯಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ : 05.06.2009 ರಂದು ಹೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇನೆ.

ಕಿರಿಯ ಇಂಜಿನಿಯರ್ (ವಿಶೇಷ ದರ್ಜೆ)
ನಂ.6, ಲೋ.ಇ.ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ.

**ಸುವರ್ಣ ಕರ್ನಾಟಕ – 2005**

**ಕರ್ನಾಟಕ ಸರ್ಕಾರ**

**(ಲೋಕೋಪಯೋಗಿ ಇಲಾಖೆ)**

**ಮಾಹಿತಿ ಹಕ್ಕು ಕೈಪಿಡಿ 2005**

**ಸೆಕ್ಷನ್ 4(1) (ಬಿ) ಅನ್ವಯ**

ಸಹಾಯಕ ಕಾರ್ಯಪಾಲಕ ಅಭಿಯಂತರರು
ನಂ.6, ಲೋ.ಇ. ಬಂದರು,
ಒಳನಾಡು ಜಲ ಸಾರಿಗೆ ಇಲಾಖೆ,
ಶಿಕಾರಿಪುರ.

**ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಕಛೇರಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ**

**ಪ್ರಕಟಣೆ**

| | |
|---|---|
| 1. | ಮಾಹಿತಿ ಪಡೆಯಲು ಹಕ್ಕು ಅಧಿನಿಯಮ, ನಿಯಮಗಳು 2005 ದಿನಾಂಕ:11.10.2005 ಮತ್ತು ಪರಿಷ್ಕರಣೆ ದಿನಾಂಕ:31.05.2008 ರಲ್ಲಿ ಇದ್ದಂತೆ |
| 2. | ಮಾಹಿತಿ ಕೋರಿಕೆ ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸಬೇಕು. ಅರ್ಜಿ ನಮೂನೆಯನ್ನು ಉಚಿತವಾಗಿ ಈ ಕಛೇರಿಯ ಸಾರ್ವಜನಿಕ ಮಾಹಿತಿ ಹಕ್ಕು ವಿಭಾಗದಿಂದ ಪಡೆಯಬಹುದು. |
| 3. | ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಈ ಕಛೇರಿಯ ಸಾರ್ವಜನಿಕ ಟಪಾಲು ಸ್ವೀಕೃತಿ ವಿಭಾಗದಲ್ಲಿ ಸಲ್ಲಿಸಬೇಕು ಮತ್ತು ಸ್ವೀಕೃತಿಯನ್ನು ತಪ್ಪದೇ ಪಡೆಯಬೇಕು ಮತ್ತು ರೂ.10.00 ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು. |
| 4. | ಅರ್ಜಿಯಲ್ಲಿ ಕೋರಿದ ಮಾಹಿತಿಯನ್ನು ಒದಗಿಸಲು ಅವಕಾಶವಿದ್ದಲ್ಲಿ ಸಂದಾಯ ಮಾಡಬೇಕಾದ ಶುಲ್ಕದ ಮಾಹಿತಿಯನ್ನು ನಿಮಗೆ 7 ದಿನಗಳ ಒಳಗೆ ತಿಳಿಸಲಾಗುವುದು. |
| 5. | ಶುಲ್ಕ ಪಾವತಿಸಿದ ದಿನಾಂಕದಿಂದ 30 ದಿನಗಳೊಳಗೆ ಕೋರಿದೆ ಮಾಹಿತಿಯನ್ನು ಒದಗಿಸಲಾಗುತ್ತದೆ. |
| 6. | ಅರ್ಜಿಯಲ್ಲಿ ಕೋರಿದ ಮಾಹಿತಿಯನ್ನು ಒದಗಿಸಲು ಅವಕಾಶವಿದ್ದಲ್ಲಿ 15 ದಿನಗಳೊಳಗೆ ತಿಳಿಸಲಾಗುವುದು. |
| 7. | ನಿಗಧಿತ ಕಾಲಾವಧಿಯಲ್ಲಿ ಮಾಹಿತಿ ಅಥವಾ ಸೂಚನೆ ನೀಡದಿದ್ದಲ್ಲಿ ಅಥವಾ ಆದೇಶದಿಂದ ಅರ್ಜಿದಾರರು ಬಾಧಿತರಾಗಿದ್ದಲ್ಲಿ 30 ದಿನಗಳೊಳಗೆ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಬಹುದು. |
| 8. | ಮಾಹಿತಿ ನೀಡಲು ಸಹಾಯಕ ಕಾರ್ಯಪಾಲಕ ಅಭಿಯಂತರು, ಶಿಕಾರಿಪುರ ಇವರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ. |
| 9. | ಮೇಲ್ಮನವಿ ಸಲ್ಲಿಸಲು ಅಧೀಕ್ಷಕ ಅಭಿಯಂತರರು ಲೋ.ಇ. ಶಿವಮೊಗ್ಗ ವೃತ್ತ, ಶಿವಮೊಗ್ಗ. ಇವರು ಮೇಲ್ಮನವಿ ಪ್ರಾಧಿಕಾರಿಯಾಗಿರುತ್ತಾರೆ. |
| 10. | ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. |

ದಿನಾಂಕ:05.06.2008
ಸ್ಥಳ : ಶಿಕಾರಿಪುರ

ಸಹಾಯಕ ಕಾರ್ಯಪಾಲಕ ಅಭಿಯಂತರರು
ನಂ.6, ಲೋ.ಇ.ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ.

**ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.6, ಲೋ. ಇ.ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ಶಿಕಾರಿಪುರ**

**ಸುತ್ತೋಲೆ ದಿನಾಂಕ:05.06.2009**

2005 ರ ಮಾಹಿತಿ ಹಕ್ಕು ಅಧಿನಿಯಮ (2005 ರ ಕೇಂದ್ರ ಕಾಯ್ದೆ 22) ಅಡಿಯಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ) ಬೆಂಗಳೂರು ಕಛೇರಿಯನ್ನು ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿಸಿ ಸದರಿ ಅಧಿನಿಯಮದ ಸೆಕ್ಷನ್ 5(1) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸೆಕ್ಷನ್ 5(2) ರಡಿಯಲ್ಲಿ ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ ಮತ್ತು ಸೆಕ್ಷನ್ 19(1) ರ ಅಡಿಯಲ್ಲಿ ' ಮೇಲ್ಮನವಿ ಪ್ರಾಧಿಕಾರ' ಎಂದು ನೇಮಕ ಮಾಡಲಾಗಿದೆ.

| ಕ್ರ. ಸಂ. | ಕಛೇರಿ ವಿಳಾಸ | ಸಾರ್ವಜನಿಕ ಮಾಹಿತಿ ಅಧಿಕಾರಿ ಸೆಕ್ಷನ್ 5(1) | ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ ಸೆಕ್ಷನ್ 5(2) | ಮೇಲ್ಮನವಿ ಪ್ರಾಧಿಕಾರ ಸೆಕ್ಷನ್ 19(1) |
|---|---|---|---|---|
| 1. | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.6 ನೇ ಲೋ. ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ. | ಎಸ್.ರಮೇಶ್ ಸ.ಕಾ.ಇಂ. ನಂ.6, ಉಪವಿಭಾಗ, ಶಿಕಾರಿಪುರ. | ಕೆ.ಬಿ.ಬಾಣದ್, ಕಿರಿಯ ಇಂಜಿನಿಯರ್ (ವಿ.ದ) ನಂ.6, ಲೋ. ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ. | ಅಧೀಕ್ಷಕ ಅಭಿಯಂತರರು ಲೋ. ಬಂದರು, ಒಳನಾಡು ಜಲಸಾರಿಗೆ ಇಲಾಖೆ, ಶಿವಮೊಗ್ಗ ವೃತ್ತ ಶಿವಮೊಗ್ಗ. |

**ಎಸ್. ರಮೇಶ್**
ಸಹಾಯಕ ಕಾರ್ಯಪಾಲಕ ಅಭಿಯಂತರರು
ನಂ.6, ಲೋ.ಇ.ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ.

ದಿನಾಂಕ:05.06.2009

**ಲೋಕೋಪಯೋಗಿ ಇಲಾಖೆ, ನಂ.6, ಉಪವಿಭಾಗ, ಶಿಕಾರಿಪುರ.**

**ಮಾಹಿತಿ ಹಕ್ಕು ಕೈಪಿಡಿ – 2005 ಸೆಕ್ಷನ್ 4(1) (ಬಿ) ಅನ್ವಯ**

I. **ಸಂಸ್ಥೆಯ ಬಗ್ಗೆ ವಿವರಗಳು, ಕಾರ್ಯಗಳು ಮತ್ತು ಕರ್ತವ್ಯಗಳು :–**

ಅ) ಸಂಸ್ಥೆಯ ಹೆಸರು : ಲೋಕೋಪಯೋಗಿ ಇಲಾಖೆ, ನಂ.6, ಉಪವಿಭಾಗ, ಶಿಕಾರಿಪುರ.

ಆ) ರಚನೆ :

**ಸಹಾಯಕ ಕಾರ್ಯಪಾಲಕ ಇಂಜಿನಿಯರ್ – 1**

| ತಾಂತ್ರಿಕ ಶಾಖೆ | ಪ್ರವಾಸಿ ಮಂದಿರದ ಸಿಬ್ಬಂದಿ | ಆಡಳಿತ ಶಾಖೆ |
|---|---|---|
| ಸಹಾಯಕ ಇಂಜಿನಿಯರ್ – 1 | ಮೇಟಿ–1 | ಪ್ರಥಮ ದರ್ಜೆ ಸಹಾಯಕರು –1 |
| ಕಿರಿಯ ಇಂಜಿನಿಯರ್ –5 | ವಾಟರ್ ಬಾಯ್–1 | ದ್ವಿತೀಯ ದರ್ಜೆ ಸಹಾಯಕರು–2 |
| ಕಿರಿಯ ಕೆಲಸದ ನಿರೀಕ್ಷಕರು –1 | ಸ್ವಚ್ಛಕ–1 | ಜವಾನರು –2 |
| | | ಚಾಲಕರು –1 |

ಸಹಾಯಕ ಕಾರ್ಯಪಾಲಕ ಅಭಿಯಂತರರು
ನಂ.6, ಲೋ.ಇ.ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ.

**ಇ) ಕಾರ್ಯಗಳು ಮತ್ತು ಕರ್ತವ್ಯಗಳು:**

ಶಿಕಾರಿಪುರ ತಾಲ್ಲೂಕು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳು, ರಸ್ತೆಗಳು ಹಾಗೂ ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ಸಂಬಂಧಿಸಿದ ಆಡಳಿತಾತ್ಮಕ, ಆರ್ಥಿಕ ಹಾಗೂ ಸೇವೆಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ ಹಾಗೂ ಶಿಕಾರಿಪುರ ತಾಲ್ಲೂಕಿಗೆ ಸಂಬಂಧಿಸಿದಂತೆ ಒಳಗೊಂಡಿರುತ್ತದೆ.

**II) ಅಧಿಕಾರಿಗಳು ಮತ್ತು ಸಿಬ್ಬಂದಿ : ಅಧಿಕಾರ ಮತ್ತು ಕರ್ತವ್ಯಗಳು:**

**1) ಸಹಾಯಕ ಕಾರ್ಯಪಾಲಕ ಇಂಜಿನಿಯರ್ :**

ಶಿಕಾರಿಪುರ ತಾಲ್ಲೂಕು ಲೋ.ಇ. ಉಪವಿಭಾಗದ ವ್ಯಾಪ್ತಿಗೆ ಒಳಗೊಂಡಂತೆ ಶಿಕಾರಿಪುರ ತಾಲ್ಲೂಕಿಗೆ ಅಧಿಕೃತ ಮುಖ್ಯಸ್ಥರಾಗಿದ್ದು ಸರ್ಕಾರಿ ನಿಯಮಗಳ ಚೌಕಟ್ಟಿನಲ್ಲಿ ಹಾಗೂ ಕರ್ನಾಟಕ ಸರ್ಕಾರಿ (ವ್ಯವಹಾರ ನಿರ್ವಹಣೆ) ನಿಯಮಾವಳಿಗೆ ಒಳಪಟ್ಟ ಪ್ರಕರಣಗಳ ವಿಲೇವಾರಿ ಮತ್ತು ಎಲ್ಲಾ ವ್ಯವಹಾರದ ಜವಾಬ್ದಾರಿ ಹೊಂದಿರುತ್ತಾರೆ ಹಾಗೂ ಅಧೀನ ಸಿಬ್ಬಂದಿಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಅಧಿಕಾರ ಹೊಂದಿರುತ್ತಾರೆ.

**2) ಸಹಾಯಕ ಇಂಜಿನಿಯರ್:**

ಶಿಕಾರಿಪುರ ತಾಲ್ಲೂಕಿನ ಉಡುಗಣೆ ಮತ್ತು ತಾಳಗುಂದ ಹೋಬಳಿಗಳ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ಕಾಮಗಾರಿಗಳು, ರಸ್ತೆ, ಕಟ್ಟಡ ಸೇತುವೆ ಇತ್ಯಾದಿಗಳ ಉಸ್ತುವಾರಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಗಳನ್ನು ತಯಾರಿಸುವುದು. ಅಂದರೆ ದಾಖಲೆಗಳನ್ನು ಸಿದ್ದಪಡಿಸುವುದು. ನಿಯತಕಾಲಿಕ ವರದಿಗಳನ್ನು ಉಪವಿಭಾಗ ಕಛೇರಿಗೆ ಸಲ್ಲಿಸುವುದು ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವಹಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು. ಗುತ್ತಿಗೆದಾರರ ಬಿಲ್ಲುಗಳನ್ನು ಸಿದ್ದಪಡಿಸುವುದು ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸುವುದು ಇತ್ಯಾದಿ.

**3) ಕಿರಿಯ ಇಂಜಿನಿಯರ್–1:**

ಶಿಕಾರಿಪುರ ತಾಲ್ಲೂಕಿನ ಸಾಲೂರು, ಅಂಜನಾಪುರ ಹೋಬಳಿಗಳ ವ್ಯಾಪ್ತಿಗೆ ಬರುವ ಲೋಕೋಪಯೋಗಿ ಇಲಾಖೆ ಕಾಮಗಾರಿಗಳು : ರಸ್ತೆ ಕಟ್ಟಡ ಸೇತುವೆ ಇತ್ಯಾದಿಗಳ ಉಸ್ತುವಾರಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಅಂದಾಜು ಪಟ್ಟಿಗಳ ಸಲ್ಲಿಕೆ, ಟೆಂಡರ್ ದಾಖಲೆಗಳನ್ನು ಸಿದ್ದಪಡಿಸುವುದು, ನಿಯತಕಾಲಿಕ ವರದಿಗಳನ್ನು ಉಪವಿಭಾಗ ಕಛೇರಿಗೆ ಸಲ್ಲಿಸುವದು ಗುತ್ತಿಗೆದಾರರ ಬಿಲ್ಲುಗಳನ್ನು ಸಿದ್ದಪಡಿಸುವುದು, ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿ ಪಾವತಿಗಾಗಿ ಸ.ಕಾ.ಇಂ. ರವರಿಗೆ ಸಲ್ಲಿಸುವುದು. ಅದಲ್ಲದೆ ಸ.ಕಾ.ಇಂ. ರವರು ರಚಿಸಿದ ಇತರೆ ಕೆಲಸಗಳು.

**4) ಕಿರಿಯ ಇಂಜಿನಿಯರ್ –2:**

ಶಿಕಾರಿಪುರ ತಾಲ್ಲೂಕಿನ ಹೊಸೂರು ಹೋಬಳಿ ವ್ಯಾಪ್ತಿಗೆ ಬರುವ ಲೋಕೋಪಯೋಗಿ ಇಲಾಖೆ ಕಾಮಗಾರಿಗಳು : ರಸ್ತೆ, ಕಟ್ಟಡ ಸೇತುವೆ ಇತ್ಯಾದಿಗಳ ಉಸ್ತುವಾರಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಅಂದಾಜು ಪಟ್ಟಿಗಳ ಸಲ್ಲಿಕೆ, ಟೆಂಡರ್ ದಾಖಲೆಗಳನ್ನು ಸಿದ್ದಪಡಿಸುವುದು, ನಿಯತಕಾಲಿನ ವರದಿಗಳನ್ನು ಉಪವಿಭಾಗ ಕಛೇರಿಗೆ ಸಲ್ಲಿಸುವುದು ಗುತ್ತಿಗೆದಾರರ ಬಿಲ್ಲುಗಳನ್ನು ಸಿದ್ದಪಡಿಸುವುದು, ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿ ಪಾವತಿಗಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಸಲ್ಲಿಸುವುದು ಅದಲ್ಲದೆ ಸ.ಕಾ.ಇಂ. ರವರು ವಹಿಸಿದ ಇತರೆ ಕೆಲಸಗಳು :

**5) ಕಿರಿಯ ಇಂಜಿನಿಯರ್-3:**

ಶಿಕಾರಿಪುರ ತಾಲ್ಲೂಕಿನ ಕಸಬಾ ಹೋಬಳಿ, ಕೇಂದ್ರ ಸ್ಥಾನಿಕ ಕಾಮಗಾರಿಗಳು ಪ್ರವಾಸಿ ಮಂದಿರದ ನಿರ್ವಹಣೆ, ಲೋ.ಇ. ಸಿಬ್ಬಂದಿ ವಸತಿ ಗೃಹಗಳು ಮತ್ತು ಕಛೇರಿ ನಿರ್ವಹಣೆ, ಮೆಕಾನಿಕಲ್ ಸೆಕ್ಷನ್‌ನ ನಿರ್ವಹಣೆ ಇತ್ಯಾದಿ ಪ್ರವಾಸಿ ಮಂದಿರದ ಸಿಬ್ಬಂದಿಯ ಮೇಲ್ವಿಚಾರಣೆ, ಪ್ರವಾಸಿ ಮಂದಿರದ ಕೊಠಡಿಗಳನ್ನು ಕಾಯ್ದಿರಿಸುವಿಕೆ.

**6) ಕಿರಿಯ ಇಂಜಿನಿಯರ್-4:**

ಶಿಕಾರಿಪುರ ತಾಲ್ಲೂಕಿನ ತಾಳಗುಂದ ಹೋಬಳಿ, ರಸ್ತೆ ಕಟ್ಟಡ ಸೇತುವೆಗಳ ಕಾಮಗಾರಿಗಳ ಮತ್ತು ಅಂದಾಜು ಪಟ್ಟಿ ತಯಾರಿಸುವುದು ಮತ್ತು ಬಿಲ್ಲುಗಳ ತಯಾರಿಕೆ ಮತ್ತು ಸದಸ್ಯರುಗೂ ಶಿಕಾರಿಪುರ ಕೇಂದ್ರ ಸ್ಥಾನದಲ್ಲಿ ಐ.ಟಿ.ಐ. ಕಟ್ಟಡ ಕೋರ್ಟ್ ಕಟ್ಟಡ ಜೂನಿಯರ್ ಬಾಲಕಿಯರ ಪದವಿ ಪೂರ್ವ ಕಾಲೇಜು ಕಟ್ಟಡ ಇತ್ಯಾದಿ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ ಅದಕ್ಕೆ ಸಂಬಂಧಿಸಿದ ಅಂದಾಜು ಪಟ್ಟಿ ಬಿಲ್ಲುಗಳ ತಯಾರಿಕೆ ಮತ್ತು ಸಲ್ಲಿಸುವುದು.

**7) ಕಿರಿಯ ಇಂಜಿನಿಯರ್-5:**

ಶಿಕಾರಿಪುರ ತಾಲ್ಲೂಕಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳು ಉಸ್ತುವಾರಿ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನೀಯರು ವಹಿಸಿದ ಕೆಲಸಗಳನ್ನು ನಿರ್ವಹಿಸುವುದು ಮತ್ತು ಅಂದಾಜು ಪಟ್ಟಿಗಳನ್ನು ತಯಾರಿಸುವುದು.

**8) ಪ್ರಥಮ ದರ್ಜೆ ಸಹಾಯಕರು:-1**

ಸಾಮಾನ್ಯ ನಗದು ಪುಸ್ತಕ, ವರ್ಕ ಕ್ಯಾಷ್ ಬುಕ್ ನಿರ್ವಹಣೆ ವಾರ್ಷಿಕ ಆಡಳಿತ ವರದಿ ಸಲ್ಲಿಕೆ, ಆಡಳಿತ ಶಾಖೆಗೆ ಸಂಬಂಧಿಸಿದ ಕಡತಗಳ ವಿಲೇವಾರಿ ಸ.ಕಾ.ಇ. ರವರು ವಹಿಸಿದ ಇತರೆ ಕೆಲಸಗಳು.

**9) ದ್ವಿತೀಯ ದರ್ಜೆ ಸಹಾಯಕರು:-1**

ಉಗ್ರಾಣ ಶಾಖೆಗೆ ಸಂಬಂಧಿಸಿದ ವ್ಯವಹಾರ, ಮಾಸಿಕ ಲೆಕ್ಕ ಪತ್ರ ಸದ್ಯಕ್ಕೆ ಅರ್ಧವಾರ್ಷಿಕ, ವಾರ್ಷಿಕ ವರದಿ ಸಲ್ಲಿಕೆ, ಉಗ್ರಾಣ ಶಾಖೆಗೆ ಸಂಬಂಧಿಸಿದ ಇತರೆ ಕಡತಗಳ ವಿಲೇವಾರಿ ಕಾಮಗಾರಿಗೆ ಸಂಬಂಧಿಸಿದ ಪತ್ರ ವ್ಯವಹಾರ.

**10) ದ್ವಿತೀಯ ದರ್ಜೆ ಸಹಾಯಕರು-2**

ಸಿಬ್ಬಂದಿ/ ಅಧಿಕಾರಿ/ ವೇತನ ಬಿಲ್ಲು ತಯಾರಿಕೆ ಹಾಗೂ ಸಲ್ಲಿಕೆ ಆಮದು ಮತ್ತು ರವಾನೆ ವಹಿ ನಿರ್ವಹಣೆ ಸ್ಟಾಂಪ್ ವಹಿ ನಿರ್ವಹಣೆ ಇತ್ಯಾದಿ.

**11) ಜವಾನರು-1:**

ಕಡತ: ಟಪಾಲು ಇತ್ಯಾದಿಗಳನ್ನು ಶಾಖೆಯ ಒಳಗೆ ಹಾಗೂ ಹೊರಗೆ ಸಂಬಂಧಪಟ್ಟವರಿಗೆ ಸಲ್ಲಿಸುವುದು.

**12) ಜವಾನರು-2:**

ಕಡತ: ಟಪಾಲು ಇತ್ಯಾದಿಗಳನ್ನು ಶಾಖೆಯ ಒಳಗೆ ಹಾಗೂ ಹೊರಗೆ ಸಂಬಂಧಪಟ್ಟವರಿಗೆ ಸಲ್ಲಿಸುವುದು.

**13) ಚಾಲಕರು -1:**

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಜೀಪನ್ನು ನಡೆಸುವುದು ಹಾಗೂ ಜೀಪನ್ನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದು.

**14) ಕಿರಿಯ ಕೆಲಸದ ನಿರೀಕ್ಷಕರು-1:**

ಶಿಕಾರಿಪುರ ತಾಲ್ಲೂಕಿನಲ್ಲಿ ನಡೆಯುವ ಕಾಮಗಾರಿಗಳನ್ನು ನೋಡಿಕೊಳ್ಳುವುದು. ಸ.ಕಾ,ಇ. ರವರು ವಹಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು.

**15) ಮೇಟಿ-1:**

ಪ್ರವಾಸಿ ಮಂದಿರದ ಸ್ವಚ್ಛತೆ, ನಿರ್ವಹಣೆ, ಕೊಠಡಿಗಳನ್ನು ಕಾಯ್ದಿರಿಸುವುದು ಇತ್ಯಾದಿ.

**16) ವಾಟರ್ ಬಾಯ್ -1:**

ಪ್ರವಾಸಿ ಮಂದಿರದಲ್ಲಿ ತಂಗಿರುವವರಿಗೆ ಊಟ, ತಿಂಡಿ ವ್ಯವಸ್ಥೆ ಮತ್ತು ಕೊಠಡಿಗಳ ಶುಚಿತ್ವದ ಕೆಲಸ ಹಾಗೂ ಪ್ರವಾಸಿ ಮಂದಿರದ ಆವರಣದಲ್ಲಿರುವ ಗಾರ್ಡನ್‌ಗೆ ನೀರು ಹಾಯಿಸುವುದು ಮತ್ತು ಇತರೆ ವಹಿಸಿದ ಕೆಲಸ.

**17) ಸ್ವಚ್ಛಗಾರರು -1:**

ಪ್ರವಾಸಿ ಮಂದಿರದ ಸ್ವಚ್ಛತೆ, ಶೌಚಾಲಯ ಸ್ವಚ್ಛತೆ ಕೆಲಸ.

**4. ಕಾರ್ಯನಿರ್ವಹಿಸುವವರಿಗೆ ಅನುಸರಿಸುವ ಮಾನದಂಡಗಳು:**

ಕೆ.ಪಿ. ಡಬ್ಲ್ಯು.ಡಿ. ಕೋಡ್ ಮತ್ತು ಕೆ.ಪಿ.ಡಬ್ಲ್ಯೂ.ಡಿ.ಎ. ಕೋಡ್ ಕರ್ನಾಟಕ ಆಕ್ಟ್ 2002 ರಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ನು ಅನುಸರಿಸುವುದು.

**5. ಕಾರ್ಯಗಳನ್ನು ನಿರ್ವಹಿಸುವಲ್ಲಿ ಇಲಾಖೆಯ ಸಿಬ್ಬಂದಿ ಹೊಂದಿರುವ ಅಥವಾ ಉಪಯೋಗಿಸುವ ನಿಯಮಗಳು:** ನಿಬಂಧನೆಗಳು ಸೂಚನೆಗಳು ಕೈಪಿಡಿ ಮತ್ತು ದಾಖಲೆಗಳು

ಅ) ಕರ್ನಾಟಕ ನಾಗರೀಕಾ ಸೇವಾ ನಿಯಮಗಳು 1958

ಆ) ಕರ್ನಾಟಕ ಆರ್ಥಿಕ ಸಂಹಿತೆ ನಿಯಮ

ಇ) ಖಜಾನೆ ಸಂಹಿತೆ

ಈ) ಸಾದಿಲ್ವಾರು ವೆಚ್ಚದ ಕೈಪಿಡಿ

ಉ) ಕೆ.ಪಿ.ಡಬ್ಲ್ಯೂ. ಡಿ.ಎ.ಕೋಡ್

ಊ) ಕೆ.ಪಿ.ಡಬ್ಲ್ಯೂ. ಡಿ .ಕೋಡ್

ಋ) ಕರ್ನಾಟಕ ನಾಗರೀಕರ ಸೇವೆಗಳು (ನಡತೆ ನಿಯಮಗಳು 1966)

ಎ) ಕರ್ನಾಟಕ ನಾಗರೀಕರ ಸೇವೆಗಳು (ಸಿಸಿಎ) ನಿಯಮಗಳು 1957

ಏ) ಕರ್ನಾಟಕ ಸರ್ಕಾರಿ ವಸತಿ ಗೃಹಗಳು ಕಂಡಿಕೆ ನಿಯಮಗಳು 1986

ಐ) ಕಾರ್ಯಾಲಯ ಕೈಪಿಡಿ

ಒ) ಉಗ್ರಾಣದ ಕೈಪಿಡಿ

ಓ) ಆರ್ಥಿಕ ಅಧಿಕಾರ ಪ್ರತ್ಯಾ ಯೋಜನೆಯ ನಿಯಮಗಳು (ಆದೇಶ 02-02-2001)

ಔ) ಸೇವಾ ನಿಯಮಗಳು ಇತ್ಯಾದಿ ವಿಚಾರದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆ, ಲೋ.ಇ. ಹೊರಡಿಸಿದ ಆದೇಶದ ಸುತ್ತೋಲೆ ಸೂಚನೆಗಳು.

ಅಂ) ಇಲಾಖೆ ಮುಖ್ಯಸ್ಥರು ಹೊರಡಿಸಿದ ಸುತ್ತೋಲೆ ಮತ್ತು ಆದೇಶಗಳು

**6) ಇಲಾಖೆಯು ಹೊರಡಿಸಿರುವ ದಸ್ತಾವೇಜುಗಳ ಪಟ್ಟಿ:**

1) ವಿಷಯ ವಹಿ : ಸಿಬ್ಬಂದಿ ವಹಿ
2) ನಗದು ಪುಸ್ತಕ (ಸಾಮಾನ್ಯ)
3) ವರ್ಕ್ ಕ್ಯಾಷ್ ಬುಕ್
4) ಉಗ್ರಾಣ ದಾಸ್ತಾನು ಸ್ವೀಕೃತಿ ವಹಿ
5) ಉಗ್ರಾಣ ದಾಸ್ತಾನು ನೀಡಿಕೆ ವಹಿ
6) ಟಿ ಅಂಡ್ ಪಿ ಸ್ವೀಕೃತಿ ವಹಿ
7) ಟಿ ಅಂಡ್ ಪಿ ನೀಡಿಕೆ ವಹಿ
8) ಅರ್ಧವಾರ್ಷಿಕ ದಾಸ್ತಾನು ವಹಿ
9) ವಾರ್ಷಿಕ ಟಿ ಅಂಡ್ ಪಿ ವಹಿ
10) ಎನ್‌ಕ್ಯಾಷ್‌ಮೆಂಟ್ ರಿಜಿಸ್ಟರ್
11) ಚೆಕ್ ಬರೆಯುವ ಆದೇಶದ ವಹಿ
12) ಚೆಕ್ ಪುಸ್ತಕ ಕಾವಲು ವಹಿ
13) ಸೇವಾ ಪುಸ್ತಕ ಕಾವಲು ವಹಿ
14) ವಸತಿ ಗೃಹ ಬಾಡಿಗೆ ವಹಿ
15) ಸಾರ್ವಜನಿಕ ಕಟ್ಟಡ ವಹಿ
16) ಸಿ.ಡಿ. ಸೇತುವೆ ವಹಿ
17) ರಸ್ತೆ ವರ್ಗವಾರು ಬಾರ್ ಚಾರ್ಟ್
18) ತುಂಡು ಗುತ್ತಿಗೆ ಪ್ರಸ್ತಾವನೆ ಸಲ್ಲಿಕೆ ವಹಿ
19) ಎಸ್.ಬಿ.ಆರ್. ವಹಿ
20) ಕಛೇರಿ ಆದೇಶ ವಹಿ
21) ನೌಕರರ ಸೇವಾ ಪುಸ್ತಕಗಳು
22) ಆಮದು ವಹಿ
23) ರವಾನೆ ವಹಿ
24) ಸ್ಟ್ಯಾಂಪ್ ವಹಿ

**7) ನೀತಿ ನಿಯಮಗಳನ್ನು ರೂಪಿಸಲು ಸಾರ್ವಜನಿಕರೊಂದಿಗೆ ಸಮಾಲೋಚಿಸಲು ಅಸ್ತಿತ್ವದಲ್ಲಿರುವ ಕಾರ್ಯವಿಧಾನದ ವಿವರಗಳು:**

ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ಉಪವಿಭಾಗದ ಮುಖ್ಯಸ್ಥರಾದ ಶ್ರೀ ಎಸ್. ರಮೇಶ್ ಸ.ಕಾ.ಇಂ. ರವರನ್ನು ಮತ್ತು ಸಹಾಯಕ ಮಾಹಿತಿ ಅಧಿಕಾರಿಯನ್ನಾಗಿ ಶ್ರೀ ಕೆ.ಬಿ. ಬಾಣದ್ ಕಿರಿಯ ಇಂಜಿನಿಯರ್ (ವಿ.ದ) ರವರನ್ನು ನೇಮಕ ಮಾಡಲಾಗಿದೆ. ಇವರು ಸಂಬಂಧಿಸಿದ ಸಾರ್ವಜನಿಕ ವ್ಯಾಪ್ತಿಗಳಿಂದ ದೂರು ಆಕ್ಷೇಪಣೆಗಳನ್ನು ಆಹ್ವಾನಿಸಿ ಪರಿಶೀಲಿಸುತ್ತಾರೆ.

8) ಸರ್ಕಾರದ ಒಂದು ಭಾಗವಾಗಿ ಅಥವಾ ಸಲಹೆಗಳನ್ನು ಪಡೆಯುವ ಎರಡು ಅಥವಾ ಹೆಚ್ಚು ವ್ಯಾಪ್ತಿಗಳನ್ನೊಳಗೊಂ ಮಂಡಳಿ, ಪರಿಷತ್ತು ಸಮಿತಿ ಮತ್ತು ಇತರೆ ಅಂಗಗಳು ಮತ್ತು ಅವುಗಳ ಸಭೆಗಳು ಸಾರ್ವಜನಿಕ ಪ್ರದೇಶ ಮುಕ್ತವಾಗಿದೆಯೆ ಅಥವಾ ಈ ಸಭಾ ನಡವಳಿಗಳು ಸಾರ್ವಜನಿಕರಿಗೆ ದೊರಕುತ್ತಿವೆಯೇ ಎಂಬ ಬಗ್ಗೆ ವಿವರಣೆ.

ಯಾವುದೂ ಇರುವುದಿಲ್ಲ.

**9) ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ನಿರ್ದೇಶನ:**

| ಕ್ರ. ಸಂ | ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ | ಕಛೇರಿ ವಿಳಾಸ | ದೂರವಾಣಿ ಸಂಖ್ಯೆ (ಕಛೇರಿ) |
|---|---|---|---|
| 1. | ಎಸ್.ರಮೇಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋ.ಇ. ನಂ.6, ಉಪವಿಭಾಗ, ಒಳನಾಡು ಬಂದರು, ಜಲಸಾರಿಗೆ ಇಲಾಖೆ, ಶಿಕಾರಿಪುರ. | 222406 |
| 2. | ಕೆ.ಬಿ.ಬಾಣದ್ | ಕಿರಿಯ ಇಂಜಿನಿಯರ್ (ವಿ.ದ) | 222406 |
| 3. | ಜಗನ್ನಾಥ್ ಎಂ. ಜಂಗಮಶೆಟ್ಟಿ | ಸಹಾಯಕ ಇಂಜಿನಿಯರ್ | 233645 |
| 4. | ಎಂ.ಆರ್. ತೀರ್ಥಪ್ರಸಾದ್ | ಕಿರಿಯ ಇಂಜಿನಿಯರ್ | 222406 |
| 5. | ಕೆ.ಹೆಚ್. ಲೋಕೇಶ್ | ಕಿರಿಯ ಇಂಜಿನಿಯರ್ | 222406 |
| 6. | ಸಿ.ಜಿ. ಬಸಪ್ಪ | ಕಿರಿಯ ಇಂಜಿನಿಯರ್ | 222406 |
| 7. | ಶ್ರೀ ಮಿಥುನ್ ಕುಮಾರ್ | ಕಿರಿಯ ಇಂಜಿನಿಯರ್ | 222406 |
| 8. | ಹೆಚ್.ವಿ. ಶ್ರೀಧರಮೂರ್ತಿ | ಪ್ರಥಮ ದರ್ಜೆ ಸಹಾಯಕರು | 222406 |
| 9. | ಬಸವರಾಜ | ದ್ವಿತೀಯ ದರ್ಜೆ ಸಹಾಯಕರು | 222406 |
| 10. | ಮಂಜುನಾಥ | ದ್ವಿತೀಯ ದರ್ಜೆ ಸಹಾಯಕರು | 222406 |
| 11. | ಎಲ್. ಧನರಾಜ್ | ಜವಾನರು | 222406 |
| 12 | ಖಾಲಿ | ಜವಾನರು | 222406 |
| 13. | ಎ.ಲಕ್ಷ್ಮೀನಾರಾಯಣ | ಕಿರಿಯ ಕೆಲಸದ ನಿರೀಕ್ಷಕರು | 222406 |
| 14. | ರಂಗನಾಥ | ವಾಟರ್ ಬಾಯ್ | 222406 |
| 15. | ಉಮೇಶ | ಚಾಲಕರು | 222406 |
| 16. | ಶ್ರೀ ಮಹಮದ್‌ಫಾರೋಕ್ | ಮೇಟಿ | 222406 |
| 17. | ಶ್ರೀ ಕರಿಹನುಮಯ್ಯ | ಸ್ವೀಪರ್ | 222406 |

| ಕ್ರ. ಸಂ | ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ | ಕಛೇರಿ ವಿಳಾಸ | ವೇತನ ಶ್ರೇಣಿ | ಮೂಲ ವೇತನ |
|---|---|---|---|---|
| 1. | ಎಸ್.ರಮೇಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋ.ಇ. ನಂ.6, ಉಪವಿಭಾಗ, ಒಳನಾಡು ಬಂದರು, ಜಲಸಾರಿಗೆ ಇಲಾಖೆ, ಶಿಕಾರಿಪುರ. | 14050–25050 | 25050 |
| 2. | ಕೆ.ಬಿ.ಬಾಣದ್ | ಕಿರಿಯ ಇಂಜಿನಿಯರ್ (ವಿ.ದ) | 11400–21600 | 16800 |
| 3. | ಜಗನ್ನಾಥ್ ಎಂ. ಜಂಗಮಶೆಟ್ಟಿ | ಸಹಾಯಕ ಇಂಜಿನಿಯರ್ | 11400–21650 | 12650 |
| 4. | ಎಂ.ಆರ್. ತೀರ್ಥಪ್ರಸಾದ್ | ಕಿರಿಯ ಇಂಜಿನಿಯರ್ | 8825–16000 | 11700 |
| 5. | ಕೆ.ಹೆಚ್. ಲೋಕೇಶ್ | ಕಿರಿಯ ಇಂಜಿನಿಯರ್ | 8825–16000 | 9050 |
| 6. | ಸಿ.ಜಿ. ಬಸಪ್ಪ | ಕಿರಿಯ ಇಂಜಿನಿಯರ್ | 8825–16000 | 11100 |
| 7. | ಶ್ರೀ ಮಿಥುನ್ ಕುಮಾರ್ | ಕಿರಿಯ ಇಂಜಿನಿಯರ್ | 8825–16000 | 88052 |
| 8. | ಹೆಚ್.ವಿ. ಶ್ರೀಧರಮೂರ್ತಿ | ಪ್ರಥಮ ದರ್ಜೆ ಸಹಾಯಕರು | 7275–13350 | 9205 |
| 9. | ಬಸವರಾಜ | ದ್ವಿತೀಯ ದರ್ಜೆ ಸಹಾಯಕರು | 7275–13350 | 14050 |

| ಕ್ರ. ಸಂ | ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ | ಕಛೇರಿ ವಿಳಾಸ | ವೇತನ ಶ್ರೇಣಿ | ಮೂಲ ವೇತನ |
|---|---|---|---|---|
| 10. | ಮಂಜುನಾಥ | ದ್ವಿತೀಯ ದರ್ಜೆ ಸಹಾಯಕರು | 7275–13350 | 10500 |
| 11. | ಎಲ್. ಧನರಾಜ್ | ಜವಾನರು | 4800–7275 | 6800 |
| 12 | ಖಾಲಿ | ಜವಾನರು | 4800–7275 | 4800 |
| 13. | ಎ.ಲಕ್ಷ್ಮೀನಾರಾಯಣ | ಕಿರಿಯ ಕೆಲಸದ ನಿರೀಕ್ಷಕರು | 7275–13350 | 13700 |
| 14. | ರಂಗನಾಥ | ವಾಟರ್ ಬಾಯ್ | 4800–7275 | 6125 |
| 15. | ಉಮೇಶ | ಚಾಲಕರು | 5800–10500 | 7275 |
| 16. | ಶ್ರೀ ಮಹಮದ್‌ಫಾರೋಕ್ | ಮೇಟಿ | 4800–7275 | 4900 |
| 17. | ಶ್ರೀ ಕರಿಹನುಮಯ್ಯ | ಸ್ವೀಪರ್ | 4800–7275 | 6125 |

11) 2007–08 ನೇ ಸಾಲಿನಲ್ಲಿ ಲೋಕೋಪಯೋಗಿ ಉಪವಿಭಾಗಕ್ಕೆ ಆಯ ವ್ಯಯ ಕಟ್ಟಡ ಕಾಮಗಾರಿಗಳಿಗೆ ಒದಗಿಸಲಾದ ಅನುದಾನದ ವಿವರ

1) 4202 ಉನ್ನತ ಶಿಕ್ಷಣ 35.00

2) 4059 ನ್ಯಾಯಾಂಗ 179.00

**2008–09 ನೇ ಸಾಲಿನಲ್ಲಿ ಲೋ.ಇ. ಉ. ವಿಭಾಗಕ್ಕೆ ಆಯ ವ್ಯಯ ಸೇತುವೆ ಕಾಮಗಾರಿಗಳಿಗೆ ಒದಗಿಸಲಾದ ಅನುದಾನದ ವಿವರ.**

1) 5054 ಅಭಿವೃದ್ಧಿ ಹಾಗೂ ಡಾಂಬರೀಕರಣ 150.00

2) 5054 ಸೇತುವೆಗಳ ನಿರ್ಮಾಣ 123.00

3) 5054 ನಬಾರ್ಡ್‌ನ ಯೋಜನೆ 80.00

4) 3054 ಸಿಓ ಆನ್ ರಸ್ತೆ ಮತ್ತು ಸೇತುವೆ ಯೋಜನೆ 24.00

**12) ಸಹಾಯಧನ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ವಿಭಾಗ ಅದಕ್ಕಾಗಿ ನಿಗದಿಗೊಳಿಸಲಾದ ಮೊತ್ತ ಮತ್ತು ಫಲಾನುಭವಿಗಳ ವಿವರ :**

ಯಾವುದೂ ಇರುವುದಿಲ್ಲ.

**13) ರಿಯಾಯತಿಗಳನ್ನು ಪಡದವರ ಅಧಿಕಾರ ಪತ್ರಗಳನ್ನು ಮಂಜೂರು ಮಾಡಿದ ಬಗ್ಗೆ .**

ಯಾವುದೂ ಇರುವುದಿಲ್ಲ.

**14) ವಿದ್ಯುದಮಾನ ವ್ಯವಸ್ಥೆಯಲ್ಲಿ ಲಭ್ಯವಿರುವ ಮಾಹಿತಿಗಳ ವಿವರ**

ಯಾವುದೂ ಇರುವುದಿಲ್ಲ.

15) ಸಾರ್ವಜನಿಕ ಉಪಯೋಗಕ್ಕಾಗಿ ಪುಸ್ತಕ ಭಂಡಾರ ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದರೆ ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಅಲ್ಲಿ ದೊರೆಯುವ ಸೌಲಭ್ಯಗಳ ಮತ್ತು ಕೆಲಸದ ಅವಧಿಯ ವಿವರಗಳು.

ಯಾವುದೂ ಇರುವುದಿಲ್ಲ.

**16) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಹುದ್ದೆ ಇತ್ಯಾದಿ ವಿವರಗಳು :**

ಮಾಹಿತಿ ಹಕ್ಕು ಅಧಿನಿಯಮ 2005 (ಕೇಂದ್ರ ಅಧಿನಿಯಮ ನಂ.22)ರ ಸೆಷನ್ 5(1) 5(2)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಲೋ.ಇ.ಗೆ ಸಂಬಂಧಿಸಿದಂತೆ ಉಪವಿಭಾಗ ಕಚೇರಿಯಲ್ಲಿ ಕೆಳಕಂಡ ಅಧಿಕಾರಿಗಳನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ನೇಮಕಾತಿ ಮಾಡಲಾಗಿದೆ.

1) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸೆಕ್ಷನ್ 5(1) ರಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ.

2) ಕಿರಿಯ ಇಂಜಿನಿಯರ್ (ವಿ.ದ) ಸೆಕ್ಷನ್–5(2) ರಂತೆ – ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ.

**17) ನಿಗದಿಗೊಳಿಸಲಾಗುವ ಇತರೆ ಮಾಹಿತಿಗಳು:**

ಸರ್ಕಾರಿ ಮಾಹಿತಿ ಪಡೆಯುವ ಹಕ್ಕು ಅಧಿನಿಯಮಗಳಾಗಿ ರಚಿಸಿದ ನಂತರ ಅದರಲ್ಲೇ ಬೇರೆ ಯಾವುದಾದರೂ ಮಾಹಿತಿಗಳನ್ನು ನಿಗದಿಗೊಳಿಸಿದ್ದಲ್ಲಿ ಅದನ್ನು ಅಳವಡಿಸಲಾಗುವುದು.

**ಎಸ್. ರಮೇಶ್**

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ.6, ಲೋಕೋಪಯೋಗಿ ಇಲಾಖೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ, ಶಿಕಾರಿಪುರ.

ಪಿ.ಆರ್.580

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ಕರ್ನಾಟಕ ಮಾಹಿತಿ ಹಕ್ಕು ನಿಯಮಗಳು 2005

(ಕೇಂದ್ರ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1) ಬಿ ಅಡಿಯಲ್ಲಿ ಹೊರಡಿಸಲಾದ ಕೈಪಿಡಿ

ಕಛೇರಿಗೆ ಸಂಬಂಧಿಸಿದ ಮಾಹಿತಿಗಳು

ವಾಣಿಜ್ಯ ತೆರಿಗೆ ಅಧಿಕಾರಿಯವರ ಕಛೇರಿ (ವಸೂಲಿ) ಗುಲ್ಬರ್ಗಾ,

ಅಧಿಸೂಚನೆ-1

**ಸಂಖ್ಯೆ: ವಾತೆಅ(ಮ) 09-10, ದಿನಾಂಕ:19ನೇ ಜೂನ್, 2009**

ಕೇಂದ್ರ ಮಾಹಿತಿ ಹಕ್ಕು ಅಧಿನಿಯಮ, 2005ರ ಸೆಕ್ಷನ್ 4(1)(ಬಿ) ಅಡಿಯಲ್ಲಿ ನಮೂದಾಗಿರುವ 17 ಅಂಶಗಳ ಮೇಲೆ ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ) ಗುಲ್ಬರ್ಗಾ ಕಛೇರಿಗೆ ಸಂಬಂಧಪಟ್ಟ ಈ ಕೆಳಕಾಣಿಸಿದ ವಿಷಯಗಳ ಸಂಪೂರ್ಣ ಮಾಹಿತಿಯನ್ನು ಅನುಬಂಧದಲ್ಲಿ ಸದರಿ ಮಾಹಿತಿಯನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

| ಕ್ರ. ಸಂ. | ವಿಷಯ |
|---|---|
| 1. | ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ) ಗುಲ್ಬರ್ಗಾ ರೂಪುರೇಷೆ |
| 2. | ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಅಧಿಕಾರ, ಜವಾಬ್ದಾರಿ ಮತ್ತು ಕರ್ತವ್ಯಗಳು |
| 3. | ತೀರ್ಮಾನ ತೆಗೆದುಕೊಳ್ಳುವ ವಿಷಯದಲ್ಲಿ ಅನುಸರಿಸುವ ವಿಧಾನ, ಮೇಲ್ವಿಚಾರಣೆಯ ಹಂತಗಳು ಮತ್ತು ಹೊಣೆಗಾರಿಕೆ |
| 4. | ಕಛೇರಿಯ ಕರ್ತವ್ಯ ನಿರ್ವಹಣೆಗಾಗಿ ನಿಗದಿಪಡಿಸಿರುವ ಸೂತ್ರಗಳು |
| 5. | ಕಛೇರಿಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ಕರ್ತವ್ಯ ನಿರ್ವಹಣೆಗಾಗಿ ಪಾಲಿಸಬೇಕಾದ ನಿಯಮಗಳು, ಸುತ್ತೋಲೆಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು |
| 6. | ಕಛೇರಿಯ ನಿಯಂತ್ರಣದಲ್ಲಿರುವ ವಿವಿಧ ದಾಖಲೆಗಳ ಪಟ್ಟಿ |
| 7. | ಕಛೇರಿಯ ಕಾರ್ಯನೀತಿಯ ಬಗ್ಗೆ ಸಾರ್ವಜನಿಕ ಪ್ರತಿನಿಧಿಗಳ ಪಾಲ್ಗೊಳ್ಳುವ ವಿಷಯ ಸಂಬಂಧ ಇರುವ ವ್ಯವಸ್ಥೆಯ ವಿವರ |
| 8. | ಕಛೇರಿಯ ಆಡಳಿತಕ್ಕಾಗಿ ಸಲಹಾರೂಪ ಮಂಡಳಿ, ಪರಿಷತ್ತು ಅಥವಾ ಎರಡು ಅಥವಾ ಹೆಚ್ಚಿನ ಸದಸ್ಯರನ್ನೊಳಗೊಂಡ ಸಮಿತಿಗಳ ಸಭೆಗಳಲ್ಲಿ ಸಾರ್ವಜನಿಕರು ಪಾಲ್ಗೊಳ್ಳಬಹುದಾದ ಅಥವಾ ಸಭೆಯ ನಡಾವಳಿಗಳು ಸಾರ್ವಜನಿಕರಿಗೆ ನೀಡಬಹುದಾದ ವ್ಯವಸ್ಥೆಯ ವಿವರಗಳು |
| 9. | ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿವರ್ಗದವರ ಪಟ್ಟಿ |
| 10. | ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿವರ್ಗದವರ ಮಾಸಿಕ ವೇತನಗಳ ವಿವರ |
| 11. | ಆಯವ್ಯಯದ ವಿವರ |
| 12. | ಕಛೇರಿಯಿಂದ ಸಹಾಯಧನ ಪಡೆಯುವ ಕಾರ್ಯಯೋಜನೆಗಳು ಹಾಗೂ ಫಲಾನುಭವಿಗಳ ವಿವರ |
| 13. | ರಿಯಾಯಿತಿಗಳನ್ನು ಪಡೆಯುವ ಕಾರ್ಯಯೋಜನೆಗಳ ಅನುಷ್ಠಾನದ ವಿಧಾನ ಸಹಾಯಧನದ ಮೊತ್ತ ಹಾಗೂ ಫಲಾನುಭವಿಗಳ ವಿವರ |
| 14. | ವಿದ್ಯುನ್ಮಾನ ವ್ಯವಸ್ಥೆಗೆ ಅಳವಡಿಸಿದ ಕಛೇರಿಯ ಮಾಹಿತಿಗಳು |
| 15. | ನಾಗರೀಕರು ಮಾಹಿತಿಯನ್ನು ಪಡೆಯಲು, ವಾಚನಾಲಯದ ವ್ಯವಸ್ಥೆಯನ್ನು ಸೇರಿ, ಇರುವ ವ್ಯವಸ್ಥೆಗಳ ವಿವರ ಹಾಗೂ ಕೆಲಸದ ವೇಳೆ |
| 16. | ಸಾರ್ವಜನಿಕ ಸಂಪರ್ಕಾಧಿಕಾರಿಗಳ ಹೆಸರು, ಪದನಾಮ ಮತ್ತಿತರ ವಿವರಗಳು |
| 17. | ನಿಗದಿಪಡಿಸಲಾಗಿರುವ ಇತರ ಯಾವುದೇ ಮಾಹಿತಿ |

**ಶ್ರೀಮತಿ ಪಾಟೀಲ ಶಿವಲಿಂಗಮ್ಮ**

ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ) ಗುಲ್ಬರ್ಗಾ.


## ಅನುಬಂಧ

## ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ 2005

### ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ) ಗುಲ್ಬರ್ಗಾ ಕಛೇರಿಗೆ ಸಂಬಂಧಿಸಿದ ಮಾಹಿತಿಗಳು

| ಕ್ರ. ಸಂ. | ಸೂಚಿಕೆ ವಿಷಯ | ಪುಟ ಸಂಖ್ಯೆ |
|---|---|---|
| 1. | ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ) ಗುಲ್ಬರ್ಗಾ ರೂಪುರೇಷೆ | |
| 2. | ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಅಧಿಕಾರ, ಜವಾಬ್ದಾರಿ ಮತ್ತು ಕರ್ತವ್ಯಗಳು | |
| 3. | ತೀರ್ಮಾನ ತೆಗೆದುಕೊಳ್ಳುವ ವಿಷಯದಲ್ಲಿ ಅನುಸರಿಸುವ ವಿಧಾನ, ಮೇಲ್ವಿಚಾರಣೆಯ ಹಂತಗಳು ಮತ್ತು ಹೊಣೆಗಾರಿಕೆ | |
| 4. | ಕಛೇರಿಯ ಕರ್ತವ್ಯ ನಿರ್ವಹಣೆಗಾಗಿ ನಿಗದಿಪಡಿಸಿರುವ ಸೂತ್ರಗಳು | |
| 5. | ಕಛೇರಿಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ಕರ್ತವ್ಯ ನಿರ್ವಹಣೆಗಾಗಿ ಪಾಲಿಸಬೇಕಾದ ನಿಯಮಗಳು, ಸುತ್ತೋಲೆಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು | |
| 6. | ಕಛೇರಿಯ ನಿಯಂತ್ರಣದಲ್ಲಿರುವ ವಿವಿಧ ದಾಖಲೆಗಳ ಪಟ್ಟಿ | |
| 7. | ಕಛೇರಿಯ ಕಾರ್ಯನೀತಿಯ ಬಗ್ಗೆ ಸಾರ್ವಜನಿಕ ಪ್ರತಿನಿಧಿಗಳ ಪಾಲ್ಗೊಳ್ಳುವ ವಿಷಯ ಸಂಬಂಧ ಇರುವ ವ್ಯವಸ್ಥೆಯ ವಿವರ | |
| 8. | ಕಛೇರಿಯ ಆಡಳಿತಕ್ಕಾಗಿ ಸಲಹಾರೂಪ ಮಂಡಳಿ, ಪರಿಷತ್ತು ಅಥವಾ ಎರಡು ಅಥವಾ ಹೆಚ್ಚಿನ ಸದಸ್ಯರನ್ನೊಳಗೊಂಡ ಸಮಿತಿಗಳ ಸಭೆಗಳಲ್ಲಿ ಸಾರ್ವಜನಿಕರು ಪಾಲ್ಗೊಳ್ಳಬಹುದಾದ ಅಥವಾ ಸಭೆಯ ನಡಾವಳಿಗಳು ಸಾರ್ವಜನಿಕರಿಗೆ ನೀಡಬಹುದಾದ ವ್ಯವಸ್ಥೆಯ ವಿವರಗಳು | |
| 9. | ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿವರ್ಗದವರ ಪಟ್ಟಿ | |
| 10. | ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿವರ್ಗದವರ ಮಾಸಿಕ ವೇತನಗಳ ವಿವರ | |
| 11. | ಆಯವ್ಯಯದ ವಿವರ | |
| 12. | ಕಛೇರಿಯಿಂದ ಸಹಾಯಧನ ಪಡೆಯುವ ಕಾರ್ಯಯೋಜನೆಗಳು ಹಾಗೂ ಫಲಾನುಭವಿಗಳ ವಿವರ | |
| 13. | ರಿಯಾಯಿತಿಗಳನ್ನು ಪಡೆಯುವ ಕಾರ್ಯಯೋಜನೆಗಳ ಅನುಷ್ಠಾನದ ವಿಧಾನ ಸಹಾಯಧನದ ಮೊತ್ತ ಹಾಗೂ ಫಲಾನುಭವಿಗಳ ವಿವರ | |
| 14. | ವಿದ್ಯುನ್ಮಾನ ವ್ಯವಸ್ಥೆಗೆ ಅಳವಡಿಸಿದ ಕಛೇರಿಯ ಮಾಹಿತಿಗಳು | |
| 15. | ನಾಗರೀಕರು ಮಾಹಿತಿಯನ್ನು ಪಡೆಯಲು, ವಾಚನಾಲಯದ ವ್ಯವಸ್ಥೆಯನ್ನು ಸೇರಿ, ಇರುವ ವ್ಯವಸ್ಥೆಗಳ ವಿವರ ಹಾಗೂ ಕೆಲಸದ ವೇಳೆ | |
| 16. | ಸಾರ್ವಜನಿಕ ಸಂಪರ್ಕಾಧಿಕಾರಿಗಳ ಹೆಸರು, ಪದನಾಮ ಮತ್ತಿತರ ವಿವರಗಳು | |
| 17. | ನಿಗದಿಪಡಿಸಲಾಗಿರುವ ಇತರ ಯಾವುದೇ ಮಾಹಿತಿ | |

### 1) ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ) ಗುಲ್ಬರ್ಗಾದ ರೂಪುರೇಷೆ



2) ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಅಧಿಕಾರ, ಜವಾಬ್ದಾರಿ ಮತ್ತು ಕರ್ತವ್ಯಗಳು

**ಎ) ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ)**

ವಾಣಿಜ್ಯ ತೆರಿಗೆ ಅಧಿಕಾರಿ ನಿಗದಿತ ವರ್ತಕರಿಗೆ ಹಾಗೂ ನಿರ್ದಿಷ್ಟ ಕ್ಷೇತ್ರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕರನಿರ್ಧಾರಣಾ ಅಧಿಕಾರಿಯಾಗಿರುತ್ತಾರೆ. ಮತ್ತು ವರ್ತಕರಿಂದ ಹಳೆ ಬಾಕಿಯ ವಸೂಲಿ ಕಾರ್ಯ ಕೈಗೊಳ್ಳುವುದು.

ಇವರು ಮನೋರಂಜನಾ ತೆರಿಗೆ ಅಧಿಕಾರಿಯು ಆಗಿರುತ್ತಾರೆ. ಆಡಳಿತಾಧಿಕಾರಿ ಮತ್ತು ಕರನಿರ್ಧಾರಣಾ ಅಧಿಕಾರಿಯಾಗಿರುತ್ತರೆ. ಚಲನಚಿತ್ರ ಮಂದಿರದ ತಪಾಸಣೆ ಕೈಗೊಳ್ಳುವ, ರಾಜಿ ದಂಡಕ್ಕೆ ಒಪ್ಪುವ ಮತ್ತು ಪರವಾನಿಗೆ ಪತ್ರ ನೀಡುವ ಅಧಿಕಾರವುಳ್ಳವರಾಗಿರುತ್ತಾರೆ. ಇವರು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರಿಗೆ ನೇರವಾಗಿ ಅಧೀನರಾಗಿರುತ್ತಾರೆ.

**ಬಿ) ವಾಣಿಜ್ಯ ತೆರಿಗೆ ನಿರೀಕ್ಷಕರು**

ವಾಣಿಜ್ಯ ತೆರಿಗೆ ನಿರೀಕ್ಷಕರು ಇವರು ಮಹಾಲೇಖಾಪಾಲಕರ ಲೆಕ್ಕ ಪರಿಶೋಧನಾ ವರದಿ ಮತ್ತು ಮೇಲಾಧಿಕಾರಿಗಳು ನಡೆಸಿರುವ ತಪಾಸಣಾ ವರದಿಗಳಿಗೆ ಅನುವರ್ತನೆ ಮಂಡಿಸಬೇಕು. ಹಾಗೂ ಸಿಬ್ಬಂದಿ ವರ್ಗದವರ ಮೇಲ್ವಿಚಾರಣೆ ನೋಡಿಕೊಳ್ಳಬೇಕು. ಹಳೆ ಬಾಕಿ ವಸೂಲಾತಿ ಕೈಗೊಳ್ಳುವುದು ಅಧಿಕಾರಿಯವರ ಮಾರ್ಗದರ್ಶನದಲ್ಲಿ ಹಳೆ ಬಾಕಿ ವಸೂಲಾತಿಗೆ ಕ್ರಮ ಕೈಗೊಳ್ಳುವುದು.

ಕರ ನಿರ್ಧಾರಣಾ ಕಛೇರಿಗಳಲ್ಲಿ ಕೆಲಸ ನಿರ್ವಹಿಸುವ ವಿಷಯ ನಿರ್ವಾಹಕರು, ಕರ ನಿರ್ಧಾರಣಾ ಕಡತಗಳು, ವಹಿಗಳು, ಡಿಸಿಬಿ, ಧನಾದೇಶ ಪತ್ರಗಳು ಮತ್ತು ಇನ್ನಿತರ ಕಾರ್ಯನಿಯೋಜನೆಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಬೇಕು.

**ಸಿ) ಪ್ರಥಮ ದರ್ಜೆ ಸಹಾಯಕರು**

ಪ್ರಥಮ ದರ್ಜೆ ಸಹಾಯಕರು ಸಂಬಳ ಬಿಲ್ಲು ತಯಾರಿಕೆ ಹಾಗೂ ನಿರ್ವಹಣೆ ಸಂಬಳದ ಬಾಕಿ, ಡಿ.ಸಿ. ಬಿಲ್ಲುಗಳು ನಗದು ವಹಿ, ಅಂಚೆ ಚೀಟಿ ವಹಿ, ಗ್ರಂಥಾಲಯ ವಹಿ, ಜಡ ಸರಕು ವಹಿ ಮುಂತಾದವುಗಳನ್ನು ನಿರ್ವಹಿಸುವುದು. ವರ್ತಕರಿಂದ ಸಂಗ್ರಹಿಸಲಾದ ಮೊತ್ತವನ್ನು 'ಹೆಚ್' ವಹಿಯಲ್ಲಿ ಬರೆದು ಕಛೇರಿಯ ಕರವಸೂಲಿಗಾರನಿಗೆ ನೀಡುವುದು. ಇವರಿಗೆ ಹಂಚಿಕೆಯಾದ ಕರನಿರ್ಧಾರಣಾ ಕಡತಗಳ ನಿರ್ವಹಣೆ ಮತ್ತು ಹಳೆ ಬಾಕಿ ವಸೂಲಿಗೆ ಕ್ರಮಕೈಗೊಳ್ಳುವುದು.

**ಡಿ) ದ್ವಿತೀಯ ದರ್ಜೆ ಸಹಾಯಕರು**

ಆಗಮನ ಮತ್ತು ನಿರ್ಗಮನ ವಹಿ ನಿರ್ವಹಣೆ, ವರ್ತಕರಿಂದ ಪಡೆದ ಧನಾದೇಶ ಪತ್ರಗಳನ್ನು 'ಎಂ' ವಹಿಯಲ್ಲಿ ನಮೂದಿಸಿ ಬ್ಯಾಂಕಿಗೆ ಸಂದಾಯ ಮಾಡಲು ಕರ ವಸೂಲಿಗಾರನಿಗೆ ನೀಡುವುದು ಮತ್ತು ಹಳೆ ಬಾಕಿ ಕಡತಗಳನ್ನು ನಿರ್ವಹಿಸುವುದು. ಇವರಿಗೆ ಹಂಚಿಕೆಯಾದ ಕರನಿರ್ಧಾರಣಾ ಕಡತಗಳ ನಿರ್ವಹಣೆ ಮತ್ತು ಹಳೆ ಬಾಕಿ ವಸೂಲಿಗೆ ಕ್ರಮ ಕೈಗೊಳ್ಳುವುದು.

**ಇ) ಬೆರಳಚ್ಚುಗಾರ**

ಕಛೇರಿಯ ವಿಷಯ ನಿರ್ವಾಹಕರು ನೀಡಲಾದ ಪತ್ರಗಳನ್ನು ಬೆರಳಚ್ಚು ಮಾಡುವುದು ಮನೋರಂಜನಾ ತೆರಿಗೆ ಅಡಿಯಲ್ಲಿ ಚಿತ್ರ ಮಂದಿರಗಳು, ವಿಡಿಯೋ ಥೇಟರ್ ಮತ್ತು ಕೇಬಲ್ ಆಪರೇಟರ್‌ಗಳ ಕಡತ ನಿರ್ವಹಣೆ, ಮನೋರಂಜನಾ ತೆರಿಗೆ ಅಡಿಯಲ್ಲಿ ಮರು ಹೊಂದಾಣಿಕೆ ಕಾರ್ಯ ನಿರ್ವಹಿಸುವುದು (ಖಜಾನೆಯಿಂದ ಬಂದ) ತಗಾದೆ, ವಸೂಲಿ ಮತ್ತು ಬಾಕಿ ತಃಖ್ತೆ ನಿರ್ವಹಣೆ ಸದರಿ ಅಡಿಯಲ್ಲಿ 'ಎಂ' ವಹಿಯಲ್ಲಿ ಬರೆದು ಧನಾದೇಶ ಪತ್ರಗಳನ್ನು ಬ್ಯಾಂಕಿಗೆ ಸಂದಾಯ ಮಾಡಲು ಕರ ವಸೂಲಿಗಾರನಿಗೆ ನೀಡುವುದು. ಕ.ಮಾ.ತೆ ಅಡಿಯಲ್ಲಿ ಇವರಿಗೆ ಹಂಚಿಕೆಯಾದ ಕರನಿರ್ಧಾರಣಾ ಕಡತಗಳ ನಿರ್ವಹಣೆ ಮತ್ತು ಹಳೆ ಬಾಕಿ ವಸೂಲಿಗೆ ಕ್ರಮ ಕೈಗೊಳ್ಳುವುದು.

**ಎಫ್) ಕರ ವಸೂಲಿಗಾರ**

ತಗಾದೆ ಮತ್ತು ಇತರೆ ಸೂಚನೆಗಳನ್ನು ವರ್ತಕರ ಮೇಲೆ ಜಾರಿ ಮಾಡುವುದು. ತೆರಿಗೆ ಬಾಕಿ ವಸೂಲಿ ಮಾಡುವುದು. ಕಛೇರಿಯಲ್ಲಿ ಸ್ವೀಕರಿಸಿದ ನಗದು ಪಾವತಿಗಳ ಹಾಗೂ ಧನಾದೇಶಗಳನ್ನು ಬ್ಯಾಂಕಿನಲ್ಲಿ ಜಮೆ ಮಾಡುವುದು.

3) ತೀರ್ಮಾನ ತೆಗೆದುಕೊಳ್ಳುವ ವಿಷಯದಲ್ಲಿ ಅನುಸರಿಸುವ ವಿಧಾನ, ಮೇಲ್ವಿಚಾರಣೆಯ ಹಂತಗಳು ಮತ್ತು ಹೊಣೆಗಾರಿಕೆ

4) ಕಛೇರಿಯ ಕರ್ತವ್ಯ ನಿರ್ವಹಣೆಗಾಗಿ ನಿಗದಿಪಡಿಸಿರುವ ಸೂತ್ರಗಳು

| ಕ್ರ. ಸಂ. | ಕಾರ್ಯ ವಿವರ | ಕಾಲಮಿತಿ |
|---|---|---|
| 1. | ನೊಂದಣಿ ಪ್ರಮಾಣ ಪತ್ರ ರದ್ದುಗೊಳಿಸುವಿಕೆ | ಅರ್ಜಿ ಸ್ವೀಕರಿಸಿ ಆರು ತಿಂಗಳೊಳಗಾಗಿ |
| 2. | ಪಾವತಿಗಳ ಪರಿಶೀಲನೆ | ಕರದಾತರು ಅರ್ಜಿ ಸಲ್ಲಿಸಿದ ಒಂದು ವಾರದೊಳಗಾಗಿ ಕಡತಗಳು ವರ್ಗಾವಣೆಯಾಗಿದ್ದಲ್ಲಿ ಏಕಕಾಲದಲ್ಲಿ ಅಥವಾ ಒಂದು ತಿಂಗಳ ಒಳಗಾಗಿ |
| 3. | ಶಾಸನಬದ್ಧ ನಮೂನೆಗಳನ್ನು ನೀಡುವಿಕೆ | ಪ್ರತಿ ದಿನ 3.00 ಗಂಟೆಯ ನಂತರ ನೀಡುವುದು. |

| ಕ್ರ. ಸಂ. | ಕಾರ್ಯ ವಿವರ | ಕಾಲಮಿತಿ |
|---|---|---|
| 4. | ಮರುಪಾವತಿ | ಅರ್ಹ ಪ್ರಕರಣಗಳಲ್ಲ ವಹಿವಾಟು ವರದಿ ಸಲ್ಲಿಸಬೇಕಾದ ನಿಗದಿತ ದಿನಾಂಕದಿಂದ 35 ದಿನಗಳೊಳಗಾಗಿ, ಅಥವಾ ವರದಿಯನ್ನು ತಡವಾಗಿ ಸಲ್ಲಿಸಿದಲ್ಲಿ ಸಲ್ಲಿಸಿದ 15 ದಿನಗಳೊಳಗಾಗಿ ಅಥವಾ ಅಂತಿಮ ವರದಿಯನ್ನು ಸಲ್ಲಿಸಿದ 35 ದಿನದೊಳಗಾಗಿ ಉಳಿದ ಪ್ರಕರಣಗಳಲ್ಲಿ ಪ್ರತಿ ಆರ್ಥಿಕ ವರ್ಷ ಮುಗಿದ 35 ದಿನಗಳೊಳಗಾಗಿ. |
| 5. | ಮೇಲ್ಮನವಿ ಅಧಿಕಾರಿಗಳು ಹಿಂದಕ್ಕೆ ಕಳುಹಿಸಿದ ಪ್ರಕರಣಗಳು/ ನ್ಯಾಯಾಲಯಗಳು ಹೊಸ ವಿಲೇವಾರಿಗೆ ಕಳುಹಿಸಿದ ಪ್ರಕರಣಗಳು | ಕಛೇರಿಗೆ ಕಡತಗಳು ಸ್ವೀಕೃತಿಯಾದ ದಿನದಿಂದ 3 ತಿಂಗಳ ಒಳಗೆ |
| 6. | ತೆರಿಗೆ, ದಂಡ, ನೋಂದಣಿ ಶುಲ್ಕ, ರಾಜಿ ದಂಡ ಮುಂತಾದವುಗಳ ಬಗ್ಗೆ ಸ್ವೀಕರಿಸಿದ ಧನಾದೇಶಗಳು | ಬ್ಯಾಂಕುಗಳಿಗೆ ಅದೇ ದಿನ ಅಥವಾ ಮುಂದಿನ ಕೆಲಸದ ದಿನ ಕಳುಹಿಸುವುದು. |
| 7. | ಯಾವುದೇ ನೋಟೀಸು ಜಾರಿ ಮಾಡುವ ಬಗ್ಗೆ | ವ್ಯಾಪಾರ ಸ್ಥಳ ನಗರದಲ್ಲಿದ್ದರೆ 7 ದಿನದೊಳಗಾಗಿ ನಗರದಿಂದ ಹೊರಗೆ ಇರುವ ವ್ಯಾಪಾರಸ್ಥರಿಗೆ 14 ದಿನದೊಳಗಾಗಿ ಜಾರಿ ಮಾಡತಕ್ಕದ್ದು. |
| 8. | ಬಾಕಿ ಇರುವ ಎಲ್ಲ ತೆರಿಗೆಗಳ ವಸೂಲಾತಿ | ಸಂಬಂಧಪಟ್ಟ ಕಲಂ ಅಡಿಯಲ್ಲಿ ಬಾಕಿ ಇರುವ ದಿನದಿಂದ 45 ದಿನಗಳ ಒಳಗಾಗಿ ಕ್ರಮ ತೆಗೆದುಕೊಳ್ಳಬೇಕು. |
| 9. | ಗು.ವಾ. ವಿಭಾಗದಿಂದ ಬಂದ ವರದಿಗಳನ್ನೊಳಗೊಂಡ ಕರನಿರ್ಧಾರಣಾ ಕಡತಗಳ ವಿಲೇವಾರಿ. | (ಆನ್ ಟಾಪ್ ಪ್ರೈಯಾರಿಟಿ) ಪ್ರಮುಖ ಆದ್ಯತೆ ಕೊಟ್ಟು ವಿಲೇವಾರಿ ಮಾಡತಕ್ಕದ್ದು. |
| 10. | ತಪಾಸಣೆ ವರದಿಗೆ ಅನುವರ್ತನೆ ಸಲ್ಲಿಸುವಿಕೆ | ಅ) ತಪಾಸಣಾ ವರದಿಯು ಬಂದ 1 ತಿಂಗಳ ಒಳಗಾಗಿ ಮೊದಲನೇ ಅನುವರ್ತನೆಯನ್ನು ಸಲ್ಲಿಸಬೇಕು.<br>ಆ) ಮೊದಲನೇ ಅನುವರ್ತನೆಯನ್ನು ಕಳುಹಿಸಿದ ನಂತರದ 3 ತಿಂಗಳ ಒಳಗಾಗಿ 2ನೇ ಹಾಗೂ ಕೊನೆಯ ಅನುವರ್ತನೆಯನ್ನು ಸಲ್ಲಿಸಬೇಕು. |

**5) ಕಛೇರಿಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ಕರ್ತವ್ಯ ನಿರ್ವಹಣೆಗಾಗಿ ಪಾಲಿಸಬೇಕಾದ ನಿಯಮಗಳು, ಸುತ್ತೋಲೆಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು.**

1) Karnataka commercial taxes Manual 1998

2) circular issued by commissioner of commercial taxes from time to time.

3) The central sales tax rules 1956

4) The Karnataka tax on profession, trades, calling & employment rules 1976.

5) The Karnataka tax on entry of goods act, 1979.

**6) ಕಛೇರಿಯ ನಿಯಂತ್ರಣದಲ್ಲಿರುವ ವಿವಿಧ ದಾಖಲೆಗಳ ಪಟ್ಟಿ**

ಎ) ಈ ಕಛೇರಿಯ ಕರದಾತರ ಮಾಹಿತಿ.

ಬಿ) ಈ ಕಛೇರಿಯ ರಾಜಸ್ವ ಸಂಗ್ರಹಣೆಯ ವಿವರಗಳು

**7) ಕಛೇರಿಯ ಕಾರ್ಯನೀತಿಯ ಬಗ್ಗೆ ಸಾರ್ವಜನಿಕ ಪ್ರತಿನಿಧಿಗಳ ಪಾಲ್ಗೊಳ್ಳುವ ವಿಷಯ ಸಂಬಂಧ ಇರುವ ವ್ಯವಸ್ಥೆಯ ವಿವರ ಮತ್ತು**

**8) ಕಛೇರಿಯ ಆಡಳಿತಕ್ಕಾಗಿ ಸಲಹಾರೂಪ ಮಂಡಳಿ, ಪರಿಷತ್ತು ಅಥವಾ ಎರಡು ಅಥವಾ ಹೆಚ್ಚಿನ ಸದಸ್ಯರನ್ನೊಳಗೊಂಡ ಸಮಿತಿಗಳ ಸಭೆಗಳಲ್ಲಿ ಸಾರ್ವಜನಿಕರು ಪಾಲ್ಗೊಳ್ಳಬಹುದಾದ ಅಥವಾ ಸಭೆಯ ನಡಾವಳಿಗಳು ಸಾರ್ವಜನಿಕರಿಗೆ ನೀಡಬಹುದಾದ ವ್ಯವಸ್ಥೆಯ ವಿವರಗಳು:**

ವಿಭಾಗ ಮಟ್ಟದ ಸಮಾಲೋಚನಾ ಸಮಿತಿಗಳನ್ನು ರಚಿಸಿದ್ದು, ಅದರಲ್ಲಿ ವಿಭಾಗದ ಹಿರಿಯ ಅಧಿಕಾರಿಗಳು, ವ್ಯಾಪಾರ ಸಂಘ ಸಂಸ್ಥೆಗಳ ಮಾನ್ಯತೆ ಪಡೆದ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಪದಾಧಿಕಾರಿಗಳು ಇರುತ್ತಾರೆ.

9) ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿವರ್ಗದವರ ಪಟ್ಟಿ

ಮತ್ತು

10) ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿವರ್ಗದವರ ಮಾಸಿಕ ವೇತನಗಳ ವಿವರ ಮೇ 09 ತಿಂಗಳ ಮಾಹೆಯ ಸಂಬಳ ವಿವರಗಳು ಈ ಕೆಳಗಿನಂತೆ ಇದೆ.

| ಕ್ರ. ಸಂ. | ಅಧಿಕಾರಿ ಮತ್ತು ಸಿಬ್ಬಂದಿಯವರ ಹೆಸರು | ಹುದ್ದೆ | ಪಡೆದ ವೇತನ |
|---|---|---|---|
| 1. | ಶ್ರೀಮತಿ ಪಾಟೀಲ ಶಿವಲಿಂಗಮ್ಮ | ವಾಣಿಜ್ಯ ತೆರಿಗೆ ಅಧಿಕಾರಿ | 15630–00 |
| 2. | ಅನಂತರಾಜ | ಪ್ರಥಮ ದರ್ಜೆ ಸಹಾಯಕರು | 9685–00 |
| 3. | ಸುನೀಲ ಶಿಲ್ಪಿ | ದ್ವಿತೀಯ ದರ್ಜೆ ಸಹಾಯಕರು | 7931–00 |
| 4. | ಅನಿರುದ್ಧ ಜೋಶಿ, | ದ್ವಿತೀಯ ದರ್ಜೆ ಸಹಾಯಕರು | 6402–00 |
| 5. | ಡಿ. ಮಲ್ಲೇಶಪ್ಪ | ದ್ವಿತೀಯ ದರ್ಜೆ ಸಹಾಯಕರು | 8270–00 |
| 6. | ಹುಲಗಪ್ಪ ಸುರಪೂರ | ಬೆರಳಚ್ಚುಗಾರ | 7549–00 |
| 7. | ಆಂಜನೇಯ | ಕರವಸೂಲಿಗಾರ | 6021–00 |
| 8. | ಮಶಾಖ ಖಾನ | ಜವಾನ | 8143–00 |
| 9. | ಶ್ರೀಮತಿ ಮಲ್ಲಮ್ಮ | ಜವಾನ | 5654–00 |

**11) ಆಯವ್ಯಯದ ವಿವರ**

ಆಯವ್ಯಯದ ವಿವರಗಳನ್ನೊಳಗೊಂಡ ಪಟ್ಟಿಯು ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿಯಲ್ಲಿರುವ ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ವಾರ್ತಾಧಿಕಾರಿಗಳ ಹತ್ತಿರ ಲಭ್ಯವಿದೆ.

**12) ಕಛೇರಿಯಿಂದ ಸಹಾಯ ಧನ ಪಡೆಯುವ ಕಾರ್ಯಯೋಜನೆಗಳು ಹಾಗೂ ಫಲಾನುಭವಿಗಳ ವಿವರ:** ಸಹಾಯಧನ ನೀಡುವ ವ್ಯವಸ್ಥೆ ಇರುವುದಿಲ್ಲ.

**13) ರಿಯಾಯಿತಿಗಳನ್ನು ಪಡೆಯುವ ಕಾರ್ಯ ಯೋಜನೆಗಳ ಅನುಷ್ಟಾನದ ವಿಧಾನ ಸಹಾಯಧನದ ಮೊತ್ತ ಹಾಗೂ ಫಲಾನುಭವಿಗಳ ವಿವರ**

ಎ) ಕರ್ನಾಟಕ ಸರ್ಕಾರದ ಔದ್ಯೋಗಿಕ ನೀತಿ 2001 (ಸರ್ಕಾರಿ ಆದೇಶ ಸಂಖ್ಯೆ: ಸಿಐ167. ಎಸ್.ಪಿ.ಐ. 2001, ಬೆಂಗಳೂರು ದಿನಾಂಕ:30.06.2001)

ಬಿ) ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್.ಡಿ.161/ಸಿಇಟಿ 2001(ಐ) ದಿನಾಂಕ:30.11.2001 (ಅತಿ ಸಣ್ಣ/ ಸಣ್ಣ/ ಮಧ್ಯಮ/ ದೊಡ್ಡ/ ಬೃಹತ್/ ಕೈಗಾರಿಕೆಗಳಿಗೆ ಪ್ರವೇಶ ತೆರಿಗೆ ವಿನಾಯಿತಿ ಕುರಿತು)

ಸಿ) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಓಐ 29 ಎಸ್.ಪಿ.ಐ. 2002 ಬೆಂಗಳೂರು ದಿನಾಂಕ:28.06.2003 (ಕೃಷಿ ಆಧಾರಿತ ಆಹಾರ ಪದಾರ್ಥ ಸಂಸ್ಕರಣಾ ಘಟಕಗಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ)

ಡಿ) ಕರ್ನಾಟಕ ಸರ್ಕಾರವು ಮೂಲಭೂತ ಸೌಕರ್ಯ ಯೋಜನೆಗಳನ್ನು ಜೈವಿಕ ವಿಜ್ಞಾನ ಉದ್ಯಮಿಗಳು, ಪ್ರವಾಸೋದ್ಯಮ, ಜವಳಿ ಉದ್ಯಮಗಳು ಹಾಗೂ ಮಾಹಿತಿ ತಂತ್ರಜ್ಞಾನ ಘಟಕಗಳನ್ನು ಪ್ರೋತ್ಸಾಹಿಸುವ ಬಗ್ಗೆ ಹೊರಡಿಸಲಾದ ಹಲವಾರು ಯೋಜನೆಗಳು.

**14) ವಿದ್ಯುನ್ಮಾನ ವ್ಯವಸ್ಥೆಗೆ ಅಳವಡಿಸಿದ ಕಛೇರಿಯ ಮಾಹಿತಿಗಳು**

ಇಲಾಖೆಯ ನಿಯಮಗಳು, ಅಧಿನಿಯಮಗಳು, ಸುತ್ತೋಲೆಗಳು, ಸಿಬ್ಬಂದಿ ವಿವರಗಳು ಮುಂತಾದ ವಿಷಯಗಳ ಬಗ್ಗೆ, ಮಾಹಿತಿಯನ್ನು ಪಡೆಯಬಯಸುವ ನಾಗರೀಕರು ಈ ಕೆಳಕಂಡ ವೆಬ್‌ಸೈಟ್‌ನ್ನು ನೋಡಬಹುದು ಹಾಗೂ ಇ-ಮೇಲ್ ಮೂಲಕ ತಮ್ಮ ಪ್ರಶ್ನೆಗಳನ್ನು ಸಲಹೆಗಳನ್ನು ಅಥವಾ ಸಮಸ್ಯೆಗಳನ್ನು ಕಳುಹಿಸಬಹುದು.

Website:http//kar.nic.in/ctax. Email:cto@kar.nic.in

**15) ನಾಗರೀಕರು ಮಾಹಿತಿಯನ್ನು ಪಡೆಯಲು, ವಾಚನಾಲಯದ ವ್ಯವಸ್ಥೆಯನ್ನು ಸೇರಿ, ಇರುವ ವ್ಯವಸ್ಥೆಗಳ ವಿವರ ಹಾಗೂ ಕೆಲಸದ ವೇಳೆ:**

ನಾಗರೀಕರು ಕಛೇರಿಯ ಬಗೆಗಿನ ಮಾಹಿತಿಯನ್ನು ಸರ್ಕಾರಿ ಕೆಲಸದ ವೇಳೆಯಲ್ಲಿ ಅಂದರೆ ಸಾರ್ವಜನಿಕ ರಜಾ ದಿನಗಳನ್ನು ಹೊರತು ಪಡಿಸಿ ಬೇರೆ ದಿನಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5.30 ರ ವರೆಗೆ ಈ ಕಛೇರಿಯಲ್ಲಿ ಪಡೆಯಬಹುದು. ಈ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ

ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ)

ವಾಣಿಜ್ಯ ತೆರಿಗೆ ಕಾರ್ಯಾಲಯ, ನೆಲಮಹಡಿ ರೈಲ್ವೆಸ್ಟೇಶನ್ ಹತ್ತಿರ, ಗುಲ್ಬರ್ಗಾ, ದೂ.ಸಂ:08472 230156 ಗ್ರಂಥಾಲಯ ವ್ಯವಸ್ಥೆ ಸಾರ್ವಜನಿಕರಿಗೆ ಲಭ್ಯವಿರುವುದಿಲ್ಲ.

**16) ಸಾರ್ವಜನಿಕ ಸಂಪರ್ಕಾಧಿಕಾರಿಗಳ ಹೆಸರು, ಪದನಾಮ ಮತ್ತಿತರ ವಿವರಗಳು.**

ಶ್ರೀಮತಿ ಪಾಟೀಲ ಶಿವಲಿಂಗಮ್ಮ

ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ) ಗುಲ್ಬರ್ಗಾ.

ವಾಣಿಜ್ಯ ತೆರಿಗೆ ಕಾರ್ಯಾಲಯ, ನೆಲಮಹಡಿ ರೈಲ್ವೆಸ್ಟೇಶನ್ ಹತ್ತಿರ, ಗುಲ್ಬರ್ಗಾ.

ದೂರವಾಣಿ ಸಂಖ್ಯೆ: 08472 230156.

**17) ನಿಗದಿ ಪಡಿಸಲಾಗಿರುವ ಇತರ ಯಾವುದೇ ಮಾಹಿತಿ**

ಸಾರ್ವಜನಿಕರು ಕಛೇರಿಯ ಅಧಿಕಾರಿ/ ಸಿಬ್ಬಂದಿ ವರ್ಗದವರಿಂದ ತೊಂದರೆಗೊಳಗಾಗಿದ್ದಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ) ಗುಲ್ಬರ್ಗಾ, ವಾಣಿಜ್ಯ ತೆರಿಗೆ ಕಾರ್ಯಾಲಯ, ನೆಲ ಮಹಡಿ ರೈಲ್ವೆಸ್ಟೇಶನ್ ಹತ್ತಿರ, ಗುಲ್ಬರ್ಗಾ ಇವರಿಗೆ ಬರೆಯಬಹುದು. ಹಾಗೆಯೇ ಕಛೇರಿಯ ಸುಗಮ ಆಡಳಿತಕ್ಕಾಗಿ ಯಾವುದೇ ರೀತಿಯ ಸಲಹೆಗಳನ್ನು ಪತ್ರ ಮುಖೇನ ಬರೆದು ಕಳುಹಿಸಬಹುದು. ದೂರವಾಣಿ ಸಂಖ್ಯೆ: 08472 230156.

**ಶ್ರೀಮತಿ ಪಾಟೀಲ ಶಿವಲಿಂಗಮ್ಮ**

ಪಿ.ಆರ್.547 ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ) ಗುಲ್ಬರ್ಗಾ.

**ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ–1, ಬಳ್ಳಾರಿ**

**ಪ್ರಕರಣ ಸಂಖ್ಯೆ: 147:09, ದಿನಾಂಕ:16ನೇ ಜುಲೈ, 2009**

**ಅರ್ಜಿದಾರರು:**

1) ಶ್ರೀಮತಿ ಎ. ನಜೀರಾ ಗಂ: ಲೇಟ್ ನಾಜಿರ್, ವಯಸ್ಸು:42 ವರ್ಷ, ವೃತ್ತಿ: ಗೃಹಿಣಿ. ವಾಸ: ಅಂದ್ರಾಳ್ ಗ್ರಾಮ, ಬಳ್ಳಾರಿ (ತಾ) (ಜಿ),

2) ಶಹನಾಜ್ ತಂ: ಲೇಟ್ ನಾಜಿರ್, ವಯಸ್ಸು:20 ವರ್ಷ, ವಾಸ: ಅಂದ್ರಾಳ್ ಗ್ರಾಮ, ಬಳ್ಳಾರಿ (ತಾ) (ಜಿ).

**ವಿರುದ್ಧ**

**ಪ್ರತಿವಾದಿಗಳು:**

1) ಶ್ರೀ ಸಲ್ಲಗುನ್ನ ಸೂರಿಬಾಬು ತಂ: ಎಸ್. ಗೋಪಾಲಪ್ಪ, ಮಾಲೀಕರು ಲಾರಿ ವಾಹನ ಸಂಖ್ಯೆ: ಕೆಎ–34:8950, ಸಿಂಧಿಗಿ ಕಾಂಪೌಂಡ್, ಬಳ್ಳಾರಿ.

2) ಶಾಖಾ ವ್ಯವಸ್ಥಾಪಕರು, ಐ.ಸಿ.ಐ.ಸಿ.ಐ. ಲೊಂಬೋರ್ಡ್ ಜನರಲ್ ಇನ್ಸೂರೆನ್ಸ್ ಕಂ.ಲಿ., ಡಬಲ್‌ರೋಡ್, ಬಳ್ಳಾರಿ.

**ಪ್ರಕಟಣೆ**

ಸದರಿ ಅರ್ಜಿದಾರರಾದ ಶ್ರೀಮತಿ ಎ. ನಜೀರಾ ಮತ್ತು ಶಹನಾಜ್‌ರವರು ತಾವು ಮೃತ ಸರ್ಮಾಸ್‌ವಲಿ ತನ್ನ ಮಗ ಹಾಗೂ 2ನೇ ಅರ್ಜಿದಾರಳಿಗೆ ಸಹೋದರನಾಗಬೇಕೆಂದು, ವಾರಸುದಾರರೆಂದು ತಿಳಿಸುತ್ತಾ, 1ನೇ ಪ್ರತಿವಾದಿ ಲಾರಿಯಲ್ಲಿ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದಾಗ ಹಿರೇಹಾಳ್–ಬೊಮ್ಮನಾಳು ರಸ್ತೆ ಮಧ್ಯ ಮಾರ್ಗದಲ್ಲಿ ಅಪರಿಚಿತ ವ್ಯಕ್ತಿಗಳು ಚಾಲಕ ಮತ್ತು ತಮ್ಮ ಮಗ ಕ್ಲೀನರ್‌ನನ್ನು ಕೊಂದುಹಾಕಿ ಗಾಡಿ ತೆಗೆದುಕೊಂಡು ಹೋಗಿರುತ್ತಾರೆಂದು, ಕೂಡಲೇ ಅರ್ಜಿದಾರರು ತಮ್ಮ ಮಗನನ್ನು ಗುರುತಿಸಿ ರಾಯದುರ್ಗ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಶವಪರೀಕ್ಷಾನಂತರ ಶವವನ್ನು ಪಡೆದಿದ್ದೇವೆಂದು, ಈಗ ತಮ್ಮ ಮಗನ ದುಡಿಮೆ ಇಲ್ಲದೆ ತಮ್ಮಗಳ ಜೀವನ ಸಾಗುವುದು ತುಂಬಾ ಕಷ್ಟಕರವಾಗಿರುತ್ತದೆಂದು, ಈ ಅಪಘಾತವು ಕಾರ್ಮಿಕ–ಮಾಲೀಕ ಸಂಬಂಧದಲ್ಲಿ ಉಂಟಾಗಿರುತ್ತದೆಂದು ತಿಳಿಸಿ ನಷ್ಟ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧವಾಗಿ ಸಾರ್ವಜನಿಕರಿಗೆ ಹಾಗೂ ಸಂಬಂಧೀಕರಿಗೆ ತಿಳಿಸುವುದೇನೆಂದರೆ ಈ ಪ್ರಕಟಣೆಯು ಕರ್ನಾಟಕ ಸರ್ಕಾರ ಹೊರವಲಯ ಮುದ್ರಣಾಲಯ ಹಾಗೂ ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಣೆಗೊಂಡ 30 ದಿನಗಳೊಳಗಾಗಿ ಈ ನ್ಯಾಯಾಲಯಕ್ಕೆ ತಮ್ಮ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಲ್ಲಿಸತಕ್ಕದ್ದು. ಅವಧಿಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

**ಸಿ.ಹೆಚ್. ಹಿರೇಗೌಡರ್**

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಉಪವಿಭಾಗ–1, ಬಳ್ಳಾರಿ.

**ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ–1, ಬಳ್ಳಾರಿ**

**ಪ್ರಕರಣ ಸಂಖ್ಯೆ:ಕಾನಪ: 146:09, ದಿನಾಂಕ:16ನೇ ಜುಲೈ, 2009**

**ಅರ್ಜಿದಾರರು:**

1) ಶ್ರೀಮತಿ ಎ. ನಜೀರಾ ಗಂ: ಲೇಟ್ ನಾಜಿರ್, ವಯಸ್ಸು:42 ವರ್ಷ, ವೃತ್ತಿ: ಗೃಹಿಣಿ. ವಾಸ: ಅಂದ್ರಾಳ್ ಗ್ರಾಮ, ಬಳ್ಳಾರಿ (ತಾ) (ಜಿ),

2) ಶಹನಾಜ್ ತಂ: ಲೇಟ್ ನಾಜಿರ್, ವಯಸ್ಸು:20 ವರ್ಷ, ವಾಸ: ಅಂದ್ರಾಳ್ ಗ್ರಾಮ, ಬಳ್ಳಾರಿ (ತಾ) (ಜಿ).

**ವಿರುದ್ಧ**

**ಪ್ರತಿವಾದಿಗಳು:**

1) ಶ್ರೀ ಸಲ್ಲಗುನ್ನ ಸೂರಿಬಾಬು ತಂ: ಎಸ್. ಗೋಪಾಲಪ್ಪ, ಮಾಲೀಕರು ಲಾರಿ ವಾಹನ ಸಂಖ್ಯೆ: ಕೆಎ–34:8950, ಸಿಂಧಿಗಿ ಕಾಂಪೌಂಡ್, ಬಳ್ಳಾರಿ.

2) ಶಾಖಾ ವ್ಯವಸ್ಥಾಪಕರು, ಐ.ಸಿ.ಐ.ಸಿ.ಐ. ಲೊಂಬೋರ್ಡ್ ಜನರಲ್ ಇನ್ಸೂರೆನ್ಸ್ ಕಂ.ಲಿ., ಡಬಲ್‌ರೋಡ್, ಬಳ್ಳಾರಿ.

**ಪ್ರಕಟಣೆ**

ಸದರಿ ಅರ್ಜಿದಾರರಾದ ನಜೀರಾ ಮತ್ತು ಶಹನಾಜ್‌ರವರು ತಾವು ಮೃತ ನಾಜೀರ್‌ರಿಗೆ ಹೆಂಡತಿ ಮತ್ತು ಮಗಳಾಗಬೇಕೆಂದು ದಿನಾಂಕ:04.06.2009ರಂದು ಬಿಂಚುಕಲ್ಲು ಲೋಡ್‌ಮಾಡಿಕೊಂಡು ಬರಲು ಹೋಗುತ್ತಿದ್ದಾಗ ಹಿರೇಹಾಳ್-ಬೊಮ್ಮನಾಳು ರಸ್ತೆ ಮಾರ್ಗದಲ್ಲಿ ಅಪರಿಚಿತ ವ್ಯಕ್ತಿಗಳು ಬಂದು ಚಾಲಕ ಮತ್ತು ಕ್ಲೀನರ್‌ರಾಗಿ ಕೆಲಸ ಮಾಡುತ್ತಿದ್ದ ನನ್ನ ಗಂಡ ಮತ್ತು ಮಗನನ್ನು ಕೊಂದುಹಾಕಿ ಗಾಡಿಯನ್ನು ತೆಗೆದುಕೊಂಡು ಹೋಗಿರುತ್ತಾರೆ. ತಾವು ಮೃತರ ವಾರಸುದಾರರೆಂದು ಹಾಗೂ ಅವಲಂಬಿತರೆಂದು ತಿಳಿಸಿ ನಷ್ಟ ಪರಿಹಾರ ಕೋರಿ ಅರ್ಜಿ ಈ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಈಗ ತಮ್ಮಗಳ ಜೀವನ ಸಾಗುವುದು ತುಂಬಾ ಕಷ್ಟಕರವಾಗಿರುತ್ತದೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಸಾರ್ವಜನಿಕರಿಗೆ ಹಾಗೂ ಸಂಬಂಧೀಕರಿಗೆ ತಿಳಿಸುವುದೇನೆಂದರೆ ಈ ಪ್ರಕಟಣೆಯು ನ್ಯಾಯಾಲಯದ ಸೂಚನಾ ಫಲಕ ಹಾಗೂ ಕರ್ನಾಟಕ ಸರ್ಕಾರ ಹೊರವಲಯ ಮುದ್ರಣಾಲಯ ಪ್ರಕಟಣೆಗೊಂಡ 30 ದಿನಗಳೊಳಗಾಗಿ ಈ ನ್ಯಾಯಾಲಯಕ್ಕೆ ತಮ್ಮ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಲ್ಲಿಸತಕ್ಕದ್ದು. ಅವಧಿಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

**ಸಿ.ಹೆಚ್. ಹಿರೇಗೌಡರ್**
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಉಪವಿಭಾಗ-1, ಬಳ್ಳಾರಿ.

**ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-1, ಬಳ್ಳಾರಿ**
**ಪ್ರಕರಣ ಸಂಖ್ಯೆ: 160:09:ಎಫ್, ದಿನಾಂಕ:16ನೇ ಜುಲೈ, 2009**

| **ಅರ್ಜಿದಾರರು:** | | **ಪ್ರತಿವಾದಿಗಳು:** |
|---|---|---|
| 1) ಕಾಳಿಂಗಪ್ಪ ತಂದೆ: ಲಕ್ಷ್ಮಪ್ಪ, ವಯಸ್ಸು: 35 ವರ್ಷ, ವೃತ್ತಿ, ಕೂಲಿ.<br>2) ಶ್ರೀಮತಿ ಪಾರ್ವತಮ್ಮ ಗಂಡ: ಕಾಳಿಂಗಪ್ಪ, ವಯಸ್ಸು:30 ವರ್ಷ, ವೃತ್ತಿ, ಏನೂ ಇಲ್ಲ.<br>ಇಬ್ಬರ ವಾಸ: ಮೈಲಾಪುರ ಗ್ರಾಮ, ಸಿರುಗುಪ್ಪ (ತಾ), ಬಳ್ಳಾರಿ (ಜಿ). | **ವಿರುದ್ಧ** | 1) ರಾಜಿಗೌಡ ತಂದೆ: ಸಂಡೂರು ನಾಗಪ್ಪ, ವಯಸ್ಸು:40 ವರ್ಷ, ಗುತ್ತಿಗೆದಾರರು, ಮೈಲಾಪುರ ಕ್ಯಾಂಪ್, ಸಿರುಗುಪ್ಪ (ತಾ), ಬಳ್ಳಾರಿ (ಜಿ).<br>2) ಸಾಯಿಬಾಬಾ, ಭೂಮಾಲೀಕರು, ವಾರ್ಡ್ ನಂ.1, ಪೆಟ್ರೋಲ್ ಬಂಕ್ ಎದುರುಗಡೆ, ತೆಕ್ಕಲಕೋಟ ಗ್ರಾಮ, ಸಿರುಗುಪ್ಪ (ತಾ), ಬಳ್ಳಾರಿ ಜಿಲ್ಲೆ. |

**ಪ್ರಕಟಣೆ**

ಸದರಿ ಅರ್ಜಿದಾರರಾದ ಕಾಳಿಂಗಪ್ಪ ತಂ: ಲಕ್ಷ್ಮಪ್ಪ (2) ಶ್ರೀಮತಿ ಪಾರ್ವತಮ್ಮ ಗಂ: ಕಾಳಿಂಗಪ್ಪ ಇವರು ಮೃತ ವೀರೇಶ್‌ನ ತಂದೆ-ತಾಯಿಗಳೆಂದು, 1ನೇ ಪ್ರತಿವಾದಿ ಬಳಿ ದಿನಾಂಕ:07.08.2008ರಂದು 1ನೇ ಪ್ರತಿ ನಿರ್ದೇಶನದ ಮೇರೆಗೆ ಅವರ ಭೂಮಿಯಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿದ್ದಾಗ, ನೀರು ಯಾಕೆ ಇನ್ನೂ ಬಂದಿಲ್ಲ ಎಂದು ಕೆಳಗೆ ಹೋಗಿ ನೋಡುತ್ತಿದ್ದಾಗ ಅದರಲ್ಲಿನ ಕಸ ತೆಗೆಯಲು ಹೋಗಿ ಕರೆಂಟ್ ಶಾಖಿನಿಂದಾಗಿ ಮೃತಪಟ್ಟಿದ್ದು, ಸರ್ಕಾರಿ ಆಸ್ಪತ್ರೆ ಸಿರುಗುಪ್ಪ ವೈದ್ಯರು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ತಿಳಿಸಿದ್ದರು.

ಅರ್ಜಿದಾರನು ಅಪಘಾತ ಪೂರ್ವದಲ್ಲಿ ಆರೋಗ್ಯವಾಗಿದ್ದು, ದುಡಿದು ತಿಂಗಳಿಗೆ 3000-00 ಪಡೆದು ತನ್ನ ಹಾಗೂ ನಮ್ಮಗಳ ಜೀವನ ಸಾಗಿಸುತ್ತಿದ್ದನೆಂದು, ಈಗ ಈತನಿಲ್ಲದೆ ತಮ್ಮಗಳ ಜೀವನ ಸಾಗುವುದು ತುಂಬಾ ಕಷ್ಟಕರವಾಗಿರುತ್ತದೆಂದು ತಿಳಿಸಿ ನಷ್ಟ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಸಾರ್ವಜನಿಕರಿಗೆ ಹಾಗೂ ಸಂಬಂಧೀಕರಿಗೆ ತಿಳಿಸುವುದೇನೆಂದರೆ ಈ ಪ್ರಕಟಣೆಯು ನ್ಯಾಯಾಲಯದ ಸೂಚನಾ ಫಲಕದಲ್ಲಿ ಹಾಗೂ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಈ ನ್ಯಾಯಾಲಯಕ್ಕೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸತಕ್ಕದ್ದು. ಅವಧಿಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

**ಸಿ.ಹೆಚ್. ಹಿರೇಗೌಡರ್**
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಉಪವಿಭಾಗ-1, ಬಳ್ಳಾರಿ.

**ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-1, ಬಳ್ಳಾರಿ**
**ಪ್ರಕರಣ ಸಂಖ್ಯೆ:ಕಾನಪ: 196:09, ದಿನಾಂಕ:21ನೇ ಜುಲೈ, 2009**

| **ಅರ್ಜಿದಾರರು:** | | **ಪ್ರತಿವಾದಿಗಳು:** |
|---|---|---|
| 1) ಶ್ರೀಮತಿ ಅಡಿವಮ್ಮ ಗಂ: ಲೇಟ್ ಗಾದಿಲಿಂಗಪ್ಪ, ವಯಸ್ಸು: 30 ವರ್ಷ, ವೃತ್ತಿ: ಗೃಹಿಣಿ. | **ವಿರುದ್ಧ** | 1) ಶ್ರೀ ಟಿ. ರಾಮಾಂಜನೇಯಲು, ತಂ:ಟಿ. ನರಸಿಂಹಲು, ಲಾರಿ ಮಾಲೀಕರು, ಸಂಖ್ಯೆ: ಸಿಜಿ-04:ಜಿ-3899, ಕೊಟ್ಲಪಲ್ಲಿ ಗ್ರಾಮ, ವಿದಪನಕಲ್ಲು, ಅನಂತಪುರ ಜಿಲ್ಲೆ, ಮತ್ತು ಇತರರು. |

2) ರವಿಚಂದ್ರ ತಂ: ಲೇಟ್ ಗಾದಿಲಿಂಗಪ್ಪ
ವ:11 ವರ್ಷ.
3) ಸುಮಂಗಲಮ್ಮ ತಂ: ಲೇಟ್ ಗಾದಿಲಿಂಗಪ್ಪ,
ವ:09 ವರ್ಷ.
4) ಶ್ರೀದೇವಿ ತಂ: ಲೇಟ್ ಗಾದಿಲಿಂಗಪ್ಪ, ವ:04
ವರ್ಷ, (2 ರಿಂದ 4 ರವರೆಗಿನವರು
ಮೃತನ ಮೈನರ್ ಮಕ್ಕಳು)
5) ಶ್ರೀಮತಿ ರುದ್ರಮ್ಮ ಗಂ: ಲೇಟ್
ಮುದಿಮಲ್ಲಪ್ಪ, ವ:50 ವರ್ಷ.
ಎಲ್ಲರವಾಸ: ಶ್ರೀರಾಂಪುರ ಕಾಲೋನಿ, ಬಳ್ಳಾರಿ.

**ಪ್ರಕಟಣೆ**

ಸದರಿ ಅರ್ಜಿದಾರರಾದ ಅಡಿವಮ್ಮ, ರವಿಚಂದ್ರ, ಸುಮಂಗಲಮ್ಮ, ಶ್ರೀದೇವಿ ಹಾಗೂ ಶ್ರೀಮತಿ ರುದ್ರಮ್ಮರು ಮೃತ ಗಾದಿಲಿಂಗಪ್ಪನ ಹೆಂಡತಿ, ಮಕ್ಕಳು ಹಾಗೂ ತಾಯಿಯಾಗಬೇಕೆಂದು, 1ನೇ ಪ್ರತಿವಾದಿ ಬಳಿ ದಿನಾಂಕ:29.03.2009ರಂದು ಕರ್ತವ್ಯದ ಮೇಲಿದ್ದಾಗ ಅಪಘಾತ ಸಂಭವಿಸಿ ಮೃತಪಟ್ಟಿರುತ್ತಾನೆಂದು ತಿಳಿಸಿ ನಷ್ಟ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಮೃತನು ಅಪಘಾತ ಪೂರ್ವದಲ್ಲಿ ಆರೋಗ್ಯವಾಗಿದ್ದು, ದಿನಕ್ಕೆ 150–00 ರೂ. ಕೂಲಿ ದುಡಿದು ತನ್ನ ಹಾಗೂ ನಮ್ಮಗಳ ಜೀವನ ಸಾಗಿಸುತ್ತಿದ್ದನೆಂದು, ಈಗ ಮೃತನಿಲ್ಲದೆ ತಮ್ಮಗಳ ಜೀವನ ಸಾಗುವುದು ತುಂಬಾ ಕಷ್ಟಕರವಾಗಿರುತ್ತದೆಂದು ತಿಳಿಸಿ ನಷ್ಟ ಪರಿಹಾರ ಕೋರಿರುತ್ತಾರೆ.

ಈ ಸಂಬಂಧವಾಗಿ ಸಾರ್ವಜನಿಕರಿಗೆ ಹಾಗೂ ಸಂಬಂಧೀಕರಿಗೆ ತಿಳಿಸುವುದೇನೆಂದರೆ ಈ ಪ್ರಕಟಣೆಯು ನ್ಯಾಯಾಲಯದ ಸೂಚನಾ ಫಲಕದಲ್ಲಿ ಹಾಗೂ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಈ ನ್ಯಾಯಾಲಯಕ್ಕೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸತಕ್ಕದ್ದು. ಅವಧಿಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

**ಸಿ.ಹೆಚ್. ಹಿರೇಗೌಡರ್**

ಪಿ.ಆರ್.683

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಉಪವಿಭಾಗ-1, ಬಳ್ಳಾರಿ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ಆಯುಕ್ತರು, ಗದಗ ಜಿಲ್ಲೆ, ಗದಗ ಇವರ ನ್ಯಾಯಾಲಯದಲ್ಲಿ**

**ಸಂಖ್ಯೆ: ಕಾಅಗ/ಕಾನಪ:ಎಫ್-44/2009, ದಿನಾಂಕ:15ನೇ ಜುಲೈ, 2009**

**ಅರ್ಜಿದಾರರು:**

1) ಪಾರವ್ವ ಮುದಕಯ್ಯಾ, ಬಾಳೆಹಳ್ಳಿಮಠ
2) ಬಸವರಾಜೇಶ್ವರಿ ಮು.ಬಾಳೆಹಳ್ಳಿಮಠ
3) ಹಾಲೇಶ ಮು. ಬಾಳೆಹಳ್ಳಿಮಠ
4) ಗೌರಮ್ಮ ಶಿ. ಬಾಳೆಹಳ್ಳಿಮಠ
R/o ಡೋಣಿ ತಾ: ಮುಂಡರಗಿ ಜಿ: ಗದಗ.

**ವಿರುದ್ಧ**

**ಪ್ರತಿವಾದಿಗಳು:**

1) ಮಹೇಶ ಎಂ. ಬೂಸ್ಪ
R/o ಬ್ಯಾಂಕ್ ರೋಡ್, ಗದಗ ಜಿ: ಗದಗ.
2) ದಿ ಡಿವಿಜನಲ್ ಮ್ಯಾನೇಜರ್, ನ್ಯಾಶನಲ್ ಇನ್ಸೂರೆನ್ಸ್ ಕಂಪನಿ ಲಿ., ಸುಜಾತಾ ಕಾಂಪ್ಲೆಕ್ಸ್, ಪಿ.ಬಿ. ರೋಡ್, ಹುಬ್ಬಳ್ಳಿ.

**ಪ್ರಕಟಣೆ**

ಅರ್ಜಿದಾರರಾದ (1) ಶ್ರೀಮತಿ ಪಾರವ್ವ ಮುದಕಯ್ಯಾ ಬಾಳೆಹಳ್ಳಿಮಠ (2) ಬಸವರಾಜೇಶ್ವರಿ ಮು. ಬಾಳೆಹಳ್ಳಿಮಠ (2) ಹಾಲೇಶ ಮು. ಬಾಳೆಹಳ್ಳಿಮಠ, (4) ಗೌರಮ್ಮ ಶಿ. ಬಾಳೆಹಳ್ಳಿಮಠ, R/o ಡೋಣಿ ತಾ: ಮುಂಡರಗಿ ಜಿ: ಗದಗ ಇವರು, ತಾವು ಮೃತ ಮುದಕಯ್ಯ, ಸಿದ್ರಾಮಯ್ಯ ಬಾಳೆಹಳ್ಳಿಮಠ, ಇವರ ಹೆಂಡತಿ, ಮಕ್ಕಳು ಮತ್ತು ತಾಯಿ ಎಂದೂ, ಅವರ ಮರಣದಿಂದ ನಷ್ಟಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಮುದಕಯ್ಯ ಸಿ. ಬಾಳೆಹಳ್ಳಿಮಠ ಇವರು ಒಂದನೇ ಪ್ರತಿವಾದಿಗಳಾದ ಮಹೇಶ ಎಂ. ಬೂಸ್ಪ R/o ಬ್ಯಾಂಕ್ ರೋಡ್, ಗದಗ ಇವರಲ್ಲಿ ಚಾಲಕ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲಿ ಅಥವಾ ಬೇರೆ ಯಾರಾದರೂ ಮೃತರ ಕಾನೂನುಬದ್ಧ ಅಶ್ರಿತರೆಂದು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ನಾಮಫಲಕದಲ್ಲಿ

ಪ್ರಕಟಿಸಿದ 30 ದಿನಗಳೊಳಗಾಗಿ ಆಕ್ಷೇಪಣೆಗಳನ್ನಾಗಲಿ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ, ಗದಗ ಜಿಲ್ಲೆ,
ಪಿ.ಆರ್.662 ಗದಗ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾನೂನು
ಅಡಿ ಆಯುಕ್ತರು.

**ಜಿಲ್ಲಾ ಪಂಚಾಯತ್ ತುಮಕೂರು**

**ಉಪನಿರ್ದೇಶಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ) ಜಿಲ್ಲೆ**

**ಜ್ಞಾಪನಾ**

**ಸಂಖ್ಯೆ:ಇ5/ಮೂರು/42/2006-07/1561, ದಿನಾಂಕ:10ನೇ ಜುಲೈ, 2009**

**ವಿಷಯ:** ಶ್ರೀ ಟಿ.ಪಿ. ಭೀಮೇಗೌಡ ಸ.ಶಿ. ಸ.ಕಿ. ಪ್ರಾ.ಶಾಲೆ ಮಾವಿನಕುಂಟೆ ತುಮಕೂರು ತಾ: ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು ಶಾಲಾ ಕೆಲಸಕ್ಕೆ ಗೈರುಹಾಜರಾಗಿರುವ ಕರ್ತವ್ಯ ಲೋಪಗಳ ಬಗ್ಗೆ ಶಿಸ್ತುಕ್ರಮ ಜರುಗಿಸುವ ಕುರಿತು.

**ಉಲ್ಲೇಖ:** 1) ಈ ಕಛೇರಿ ಪತ್ರದ ಸಮಸಂಖ್ಯೆಯ ಪತ್ರದ ದಿನಾಂಕ:14.06.2007.
2) ಈ ಕಛೇರಿ ಪತ್ರದ ಸಮಸಂಖ್ಯೆಯ ಪತ್ರದ ದಿನಾಂಕ:10.12.2008.
3) ವಿಚಾರಣಾಧಿಕಾರಿಗಳ ವರದಿ ದಿನಾಂಕ:02.04.2009.
4) ಈ ಕಛೇರಿಯ 2ನೇ ಕಾರಣ ಕೇಳುವ ನೋಟಿಸ್ ದಿನಾಂಕ:22.05.2009.

**ಪ್ರಸ್ತಾವನೆ:**

ಶ್ರೀ ಟಿ.ಪಿ. ಭೀಮೇಗೌಡ, ಇವರನ್ನು ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು ಇವರ ಜ್ಞಾಪನಾ ಸಂಖ್ಯೆ:ಇ3/ ಪ್ರಾ.ಶಾ.ಶಿ.ನೇ.ಗ್ರಾ.ಕೃ/01/2003-04 ದಿನಾಂಕ:21.11.2003ರಂದು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗೆ ನೇಮಕಾತಿ ಮಾಡಿದ್ದು ದಿನಾಂಕ:01.12.2003ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಪ್ರಸ್ತುತ ಸರ್ಕಾರಿ ಕಿ.ಪ್ರಾ.ಶಾಲೆ ಮಾವಿನಕುಂಟೆ ತುಮಕೂರು ತಾಲ್ಲೂಕು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು ದಿನಾಂಕ:04.06.2006 ರಿಂದ ಈ ದಿನಾಂಕದವರೆಗೆ ಶಾಲಾ ಕೆಲಸಕ್ಕೆ ಅನಧಿಕೃತ ಗೈರುಹಾಜರಿ ಆಗಿ ಶೈಕ್ಷಣಿಕ ಪ್ರಗತಿಗೆ ಧಕ್ಕೆಉಂಟು ಮಾಡಿದ್ದು ಇವರ ವಿರುದ್ಧ ಇರುವ ಆರೋಪಗಳ ಬಗ್ಗೆ ಸಿ.ಸಿ.ಎ. ನಿಯಮದಡಿ ವಿಚಾರಣೆ ಮಾಡಲು ಆರೋಪ ಪಟ್ಟಿಯನ್ನು ಉಲ್ಲೇಖ (1)ರಲ್ಲಿ ಆರೋಪಿ ಶಿಕ್ಷಕರಿಗೆ ಜಾರಿ ಮಾಡಿ ಲಿಖಿತ ರಕ್ಷಣಾ ಹೇಳಿಕೆಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಆರೋಪಿ ಶಿಕ್ಷಕರು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆರೋಪಗಳ ಸತ್ಯಾಸತ್ಯತೆಯನ್ನು ತಿಳಿಯಲು ಉಲ್ಲೇಖ (2)ರಲ್ಲಿ ಶ್ರೀ ಐ.ಎಸ್.ಮಹೇಶ್, ಶಿಕ್ಷಣಾಧಿಕಾರಿಗಳು ಸಾ.ಶಿ.ಇಲಾಖೆ ಉಪನಿರ್ದೇಶಕರ ಕಛೇರಿ ತುಮಕೂರು (ದ) ಜಿಲ್ಲೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಶ್ರೀ ಎಂ.ರಾಜಶೇಖರಯ್ಯ ವ್ಯವಸ್ಥಾಪಕರು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ತುಮಕೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿ ಸಿಸಿಎ ನಿಯಮ 11ರಡಿಯಲ್ಲಿ ವಿಚಾರಣೆ ನಡೆಸಿ ವರದಿಯನ್ನು ನೀಡುವಂತೆ ತಿಳಿಸಲಾಗಿತ್ತು.

**ಆರೋಪ:**

ಶ್ರೀ ಟಿ.ಪಿ. ಭೀಮೇಗೌಡ ಸಹಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮಾವಿನಕುಂಟೆ ತುಮಕೂರು ತಾಲ್ಲೂಕು ಆದ ಇವರು ದಿನಾಂಕ:04.06.2006 ರಿಂದ ಈ ದಿನಾಂಕದವರೆಗೆ ಶಾಲಾ ಕೆಲಸಕ್ಕೆ ಅನಧಿಕೃತವಾಗಿ ಗೈರುಹಾಜರಿ ಆಗಿದ್ದು ಕರ್ತವ್ಯಕ್ಕೆ ಹಾಜರಾಗದ ಆದೇಶ ಪಾಲಿಸದೇ ದೀರ್ಘಕಾಲ ಗೈರುಹಾಜರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಧಕ್ಕೆ ಉಂಟು ಮಾಡುವುದರ ಮೂಲಕ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966ರ ನಿಯಮ 3(1)(2)(3) ನ್ನೂ ಸ್ಪಷ್ಟವಾಗಿ ಉಲ್ಲಂಘಿಸಿರುವ ಆರೋಪಕ್ಕೆ ಗುರಿಯಾಗಿರುತ್ತೀರಿ.

ವಿಚಾರಣಾಧಿಕಾರಿಗಳು ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ಸಾಕ್ಷಿದಾರರ ಮತ್ತು ಆರೋಪಿ ಶಿಕ್ಷಕರು ಸ್ವತಃ ವೈಯಕ್ತಿಕ ಕಾರಣದಿಂದ ಶಾಲಾ ಕೆಲಸಕ್ಕೆ ಗೈರುಹಾಜರಿ ಆಗಿರುವ ಆರೋಪವನ್ನು ಒಪ್ಪಿದ್ದು ಸೇವೆಯಿಂದ ವಜಾ ಮಾಡುವಂತೆ ಹೇಳಿಕೆ ನೀಡಿರುವುದರಿಂದ ಆರೋಪ ಸಾಬೀತಾಗಿದೆ ಎಂದು ವರದಿ ಮಾಡಿರುತ್ತಾರೆ.

ಸದರಿ ವಿಚಾರಣಾ ವರದಿಯನ್ನು ಆರೋಪಿ ಶಿಕ್ಷಕರಿಗೆ ಜಾರಿಗೊಳಿಸಿ ಲಿಖಿತ ರಕ್ಷಣಾ ಹೇಳಿಕೆ ನೀಡಲು ಉಲ್ಲೇಖ (4)ರಲ್ಲಿ ತಿಳಿಸಲಾಗಿತ್ತು. ಆರೋಪಿ ಶಿಕ್ಷಕರ ವಿರುದ್ಧ ಆರೋಪ ಸಾಬೀತಾಗಿರುವ ವರದಿಯನ್ನು ಒಪ್ಪಿದೆ ಹಾಗೂ ಶಿಸ್ತುಪಾಲನೆಯ ಅಗತ್ಯವಾಗಿರುತ್ತದೆ. ಆದರೆ ಆರೋಪಿ ಶಿಕ್ಷಕರು ಇವುಗಳನ್ನು ಪಾಲಿಸದೇ ಕೆಲಸಕ್ಕೆ ಗೈರುಹಾಜರಿ ಆಗಿರುವುದು ಒಬ್ಬ ಉತ್ತಮ ಶಿಕ್ಷಕರ ನಡವಳಿಕೆಗೆ ವಿರುದ್ಧವಾಗಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ ನೀಡಲಾಗಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಶ್ರೀ ಟಿ.ಪಿ. ಭೀಮೇಗೌಡ, ಸಹಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮಾವಿನಕುಂಟೆ ತುಮಕೂರು ತಾಲ್ಲೂಕು ಇವರು ದಿನಾಂಕ:04.06.2006 ರಿಂದ ಈ ದಿನಾಂಕದವರೆಗೆ ಶಾಲಾ ಕೆಲಸಕ್ಕೆ

ಅನಧಿಕೃತ ಗೈರುಹಾಜರಾಗಿ ಶಾಲೆ ಕೆಲಸ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಧಕ್ಕೆ ಉಂಟು ಮಾಡಿ ಶಿಕ್ಷಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವಿಚಾರಣೆಯಲ್ಲಿ ಆಪಾದನೆಗಳು ಸಾಬೀತಾಗಿರುವುದರಿಂದ ಶ್ರೀ ಬಿ.ಎ. ರಾಜಶೇಖರ ಉಪನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ತುಮಕೂರು (ದ) ಜಿಲ್ಲೆ ಆದ ನಾನು ಕರ್ನಾಟಕ ಸರ್ಕಾರಿ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಕೆ.ಸಿ.ಎಸ್.ಆರ್.(ಸಿಸಿಎ) ನಿಯಮ 8(viii)ರ ಪ್ರಕಾರ ಶ್ರೀ ಟಿ.ಪಿ. ಭೀಮೇಗೌಡ ಇವರನ್ನು ಸೇವೆಯಿಂದ ವಜಾ ಮಾಡಿ ಆದೇಶಿಸಿರುತ್ತೇನೆ.

ಕ್ಷೇತ್ರಶಿಕ್ಷಣಾಧಿಕಾರಿಗಳ ತುಮಕೂರು ಇವರು ಈ ಆದೇಶವನ್ನು ನೌಕರರ ಸೇವಾವಹಿಯಲ್ಲಿ ನಮೂದಿಸಿ ಮೇಲಿನ ಆದೇಶದಂತೆ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದೆ.

ಬಿ.ಎ. ರಾಜಶೇಖರ

ಪಿ.ಆರ್.690

ಉಪನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿಗಳು,
ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ).

## ವಾಣಿಜ್ಯ ತೆರಿಗೆ ಇಲಾಖೆ

## ಅಧಿಸೂಚನೆ

**ಸಂಖ್ಯೆ: ಎಂಎಸ್‌ಸಿ/ಐಎ/ಸಿಆರ್-175/06-07, ದಿನಾಂಕ:14ನೇ ಜುಲೈ, 2009**

1) ಮಾಹಿತಿ ಹಕ್ಕು ಅಧಿನಿಯಮ 2005, (2005ರ ಕೇಂದ್ರ ಕಾಯ್ದೆ ಸಂಖ್ಯೆ:22) ಅಡಿ ಈ ಹಿಂದೆ ಹೊರಡಿಸಲಾದ ಅಧಿಸೂಚನೆ ದಿನಾಂಕ:03.01.2007 ಮತ್ತು 07.11.2008ನ್ನು ಮಾರ್ಪಾಡು ಮಾಡಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

2) ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 184 ಸಮಯ/2005, ದಿನಾಂಕ:22.09.2005ರ ಪ್ರಕಾರ ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿತವಾದ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯು ಮಾಹಿತಿ ಹಕ್ಕು ಕಾಯ್ದೆ 2005, (2005ರ ಕೇಂದ್ರ ಕಾಯ್ದೆ ಸಂಖ್ಯೆ:22) ಸೆಕ್ಷನ್ 5(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಾಣಿಜ್ಯ ತೆರಿಗೆಗಳ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಗೆ ಕಾಣಿಸಿದ ಕೋಷ್ಟಕದ ಮೂರನೇ ಕಲಂನಲ್ಲಿ ನಮೂದಿಸಿದ ವಾಣಿಜ್ಯ ತೆರಿಗೆಗಳ ಇಲಾಖೆಯ ವಿವಿಧ ವೃಂದದ ಅಧಿಕಾರಿಗಳನ್ನು ಸಂಬಂಧಪಟ್ಟ ವಿಷಯಗಳಿಗೆ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು "ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ" ನೇಮಕ ಮಾಡಲಾಗಿದೆ.

3) ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 5ರ ಉಪಕಲಂ 2ರನ್ವಯ ವಾಣಿಜ್ಯ ತೆರಿಗೆಗಳ ಇಲಾಖೆಯ ಆಯುಕ್ತರ ಕಛೇರಿಯ ವಾಣಿಜ್ಯ ತೆರಿಗೆ ಅಧಿಕಾರಿ (ವಾರ್ತಾಧಿಕಾರಿ) ಇವರನ್ನು ಆಯುಕ್ತಕರ ಕಛೇರಿಗೆ ಸಂಬಂಧಪಡುವ ವಿಷಯಗಳಿಗೆ ಮಾಹಿತಿ ಕೋರುವ ಅರ್ಜಿಗಳನ್ನು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು "ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ" ನೇಮಕ ಮಾಡಲಾಗಿದೆ.

4) ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 19(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಲು ಈ ಕೆಳಗೆ ಕಾಣಿಸಿದ ಕೋಷ್ಟಕದ ನಾಲ್ಕನೇ ಕಲಂನಲ್ಲಿ ನಮೂದಿಸಿದ ಅಧಿಕಾರಿಗಳನ್ನು ಮೂರನೇ ಕಲಂನಲ್ಲಿ ಕಾಣಿಸಿದ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಆದೇಶಗಳ ಮೇಲೆ ಕಾಯ್ದೆಯಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಲು "ಮೇಲ್ಮನವಿ ಪ್ರಾಧಿಕಾರ" ಎಂದು ನೇಮಕ ಮಾಡಲಾಗಿದೆ.

| ಕ್ರಮ ಸಂಖ್ಯೆ | ಕಛೇರಿ ವ್ಯಾಪ್ತಿ | ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರದ ಅಧಿಕಾರಿ |
|---|---|---|---|
| 1. | ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ. | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು, (ಕೇಂದ್ರ ಕಛೇರಿ-1) | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಹೆಚ್.ಆರ್.ಡಿ.) ಆಯುಕ್ತರ ಕಛೇರಿ. |
| 2. | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು ವಲಯ 1 ಮತ್ತು 2, ಬೆಂಗಳೂರು. | ಆಯಾ ಕಛೇರಿಯಲ್ಲಿನ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು. | ಸಂಬಂಧಪಟ್ಟ ವಲಯದ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರವರು. |
| 3. | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು ಮನವಿ-1 ಬೆಂಗಳೂರು- ಮಂಗಳೂರು, ಧಾರವಾಡ, ಬೆಳಗಾಂ ಮತ್ತು ದಾವಣಗೆರೆ ವಿಭಾಗ. | ಸಂಬಂಧಪಟ್ಟ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು) | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು ವಲಯ 1, ಬೆಂಗಳೂರು. |

| ಕ್ರಮ ಸಂಖ್ಯೆ | ಕಛೇರಿ ವ್ಯಾಪ್ತಿ | ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರದ ಅಧಿಕಾರಿ |
|---|---|---|---|
| (b) | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು ಮನವಿ-2 ಬೆಂಗಳೂರು. -3 ಬೆಂಗಳೂರು. - ಮೈಸೂರು, ಮಲೆನಾಡು ಮತ್ತು ಗುಲ್ಬರ್ಗಾ ವಿಭಾಗ. | ಸಂಬಂಧಪಟ್ಟ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು) | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು ವಲಯ, 2 ಬೆಂಗಳೂರು. |
| 4. | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ಕಛೇರಿಗಳು- ಮೌಲ್ಯವರ್ಧಿತ ತೆರಿಗೆ ವಿಭಾಗ, ಆಡಳಿತ ಮತ್ತು ವಸೂಲಿ ವಿಭಾಗ, ಜಾರಿ ವಿಭಾಗ ಮತ್ತು ಜಾಗೃತಿ ವಿಭಾಗ, ಸಣ್ಣ ಕಾಯ್ದೆಗಳು, ಬೆಂಗಳೂರು.<br>(ಮಂಗಳೂರು ವಿಭಾಗೀಯ ಕಛೇರಿ ವಸೂಲಿ ಹಾಗೂ ಜಾರಿ ವಿಭಾಗಕ್ಕೆ) | ಆಯಾ ವಿಭಾಗೀಯ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂದ್ರ ಸ್ಥಾನ) ಅಥವಾ ಪತ್ರಾಂಕಿತ ವ್ಯವಸ್ಥಾಪಕರು.<br>ಅಧಿಸೂಚನೆ ದಿನಾಂಕ:07.11.2008ರ ಅನ್ವಯ ವಾಣಿಜ್ಯ ತೆರಿಗೆಗಳ ಅಧಿಕಾರಿ (ಜಾರಿ-3), ಮಂಗಳೂರು. | ಸಂಬಂಧಪಟ್ಟ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು<br>ಸಂಬಂಧಪಟ್ಟ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು. |
| 5. | ರಾಜ್ಯದಲ್ಲಿರುವ ಎಲ್ಲಾ: 13 ಮೌಲ್ಯವರ್ಧಿತ ತೆರಿಗೆ ವಿಭಾಗ, ಆಡಳಿತ ಮತ್ತು ವಸೂಲಿ ವಿಭಾಗ, ಜಾರಿ ವಿಭಾಗ ಮತ್ತು ಜಾಗೃತಿ ವಿಭಾಗ ಮತ್ತು ಸಣ್ಣ ಕಾಯ್ದೆಗಳು, ಬೆಂಗಳೂರು. ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಉಪ ಆಯುಕ್ತರು, ಸಹಾಯಕ ಆಯುಕ್ತರು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿ. | ಅವರವರ ಕಛೇರಿಗೆ ಸಂಬಂಧಿಸಿದಂತೆ ಕಾರ್ಯವ್ಯಾಪ್ತಿ ಹೊಂದಿರುವ ಅಧಿಕಾರಿಯವರು | ಸಂಬಂಧಪಟ್ಟ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು. |

**ಪ್ರದೀಪ್ ಸಿಂಗ್ ಖರೋಲ**

ಪಿ.ಆರ್.691 ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ) ಬೆಂಗಳೂರು.

**ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವಭವನ, ಹೈಗ್ರೌಂಡ್ಸ್, ಬೆಂಗಳೂರು-560 001**

**ಪ್ರಕಟಣೆ**

**ಸಂಖ್ಯೆ:ಕರಾಆ/ಆಡಳಿತ/08/2009, ದಿನಾಂಕ:25ನೇ ಜುಲೈ, 2009**

ವಿಷಯ: ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 16(1ಎ) ರಡಿಯಲ್ಲಿ ಕರ್ನಾಟಕ ರಾಜ್ಯ ಆಯೋಗದ ಸದಸ್ಯರ ಆಯ್ಕೆ ಬಗ್ಗೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 09(ಬಿ) ರನ್ವಯ ರಚಿತವಾಗಿರುವ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿನ ಒಂದು ಸದಸ್ಯರ ಸ್ಥಾನವು ದಿನಾಂಕ:11.04.2010ರ ಅಪರಾಹ್ನದಿಂದ ಜಾರಿಗೆ ಬರುವಂತೆ ಖಾಲಿಯಾಗುತ್ತಿದ್ದು, ಸದರಿ ಸ್ಥಾನಕ್ಕೆ ಸೂಕ್ತರಾದವರನ್ನು ಆಯ್ಕೆ ಮಾಡುವ ಸಲುವಾಗಿ ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 16(1)(ಏ), ಮೊದಲನೇ ಪರಂತುಕ ಹಾಗೂ ಅದರೊಂದಿಗೆ ಓದಿಕೊಳ್ಳುವ ವಿವರಣೆಯನ್ವಯ ಕನಿಷ್ಠ ಹತ್ತು ವರ್ಷಗಳ ಅವಧಿಯಲ್ಲಿ ಜಿಲ್ಲಾ ಮಟ್ಟದ ನ್ಯಾಯಾಂಗ ಅಥವಾ ಟ್ರಿಬ್ಯೂನಲ್‌ಗೆ ಸರಿಸಮಾನವಾದ ನ್ಯಾಯಾಲಯದಲ್ಲಿ ಪೀಠಾಧಿಕಾರಿಗಳು ಅಥವಾ ಜಿಲ್ಲಾ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿ ಅನುಭವ ಹೊಂದಿರುವ, ಅರ್ಹರು ಮತ್ತು ಸೂಕ್ತರಾದವರಿಂದ ಅರ್ಜಿಯನ್ನು ಈ ಮೂಲಕ ನಿಗದಿತ ನಮೂನೆಯಲ್ಲಿ ಆಹ್ವಾನಿಸಲಾಗಿದೆ.

ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು, ಅರ್ಜಿ ನಮೂನೆಯನುಸಾರ ಅಗತ್ಯ ದಾಖಲೆಗಳ ೃಢೀಕೃತ ಪ್ರತಿಯೊಂದಿಗೆ ಲಕೋಟೆಯಲ್ಲಿರಿಸಿ, ಸಂಬಂಧಪಟ್ಟ ಲಕೋಟೆಯ ಮೇಲ್ಭಾಗದಲ್ಲಿ "ರಾಜ್ಯ ಆಯೋಗದ ಸದಸ್ಯರ ್ಥಾನಕ್ಕೆ ಅರ್ಜಿ" ಎಂದು ದಪ್ಪ ಅಕ್ಷರಗಳಲ್ಲಿ ಬರೆದು **ದಿನಾಂಕ:11ನೇ ಸೆಪ್ಟೆಂಬರ್ 2009ರ ಶುಕ್ರವಾರ ಸಂಜೆ 5-00 ಗಂಟೆಯೊಳಗೆ ರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು-01,** ಇಲ್ಲಿಗೆ ಸಲ್ಲಿಸುವುದು.

ನಿಗದಿತ ಅರ್ಜಿ ನಮೂನೆಯು ಕರ್ನಾಟಕ ರಾಜ್ಯ ಆಯೋಗದ ವೆಬ್‌ಸೈಟ್ http://kscdrc.kar.nic.in ರಲ್ಲಿ ಲಭ್ಯವಿದ್ದು, ಸಂಬಂಧಪಟ್ಟ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಿಂದ ಅರ್ಜಿಯನ್ನು ನೇರವಾಗಿ ಪಡೆದುಕೊಳ್ಳಬಹುದಾಗಿದೆ ಅಥವಾ ಸಂಬಂಧಪಟ್ಟ ಜಿಲ್ಲಾ ವೇದಿಕೆಯಲ್ಲಿ ಅಥವಾ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಒಂದು ಅರ್ಜಿಗೆ ರೂ.10-00 ರಂತೆ ಶುಲ್ಕವನ್ನು ಪಾವತಿ ಮಾಡಿ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 16(1ಎ) ರಡಿಯಲ್ಲಿನ ಆಯ್ಕೆ
ಸಮಿತಿಯ ಅಧ್ಯಕ್ಷರ ಆದೇಶಾನುಸಾರ

ಪಿ.ಆರ್.696

**ಎಸ್.ಎ.ಹಿದಾಯತ್‌ಉಲ್ಲಾ ಷರೀಫ್**
ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ,
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು.

**ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವಭವನ, ಹೈಗ್ರೌಂಡ್ಸ್, ಬೆಂಗಳೂರು-560 001**

**ಪ್ರಕಟಣೆ**

**ಸಂಖ್ಯೆ:ಕರಾಆ/ಆಡಳಿತ/08/2009, ದಿನಾಂಕ:25ನೇ ಜುಲೈ, 2009**

**ವಿಷಯ:** ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 10(1ಎ) ರಡಿಯಲ್ಲಿ ಜಿಲ್ಲಾ ವೇದಿಕೆಯ ಸದಸ್ಯರ ಆಯ್ಕೆ ಬಗ್ಗೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 09(ಎ) ರನ್ವಯ ರಚಿತವಾಗಿರುವ (1) ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರ, 1ನೇ ಅಪರ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕಯ ಸದಸ್ಯರ (ಮಹಿಳೆ) ಸ್ಥಾನವು ದಿನಾಂಕ:09.03.2010ರ ಅಪರಾಹ್ನದಿಂದ, (2) ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ (ಮಹಿಳೆ) ಸ್ಥಾನವು ದಿನಾಂಕ:23.03.2010ರ ಅಪರಾಹ್ನದಿಂದ, (3) ಬಿಜಾಪುರ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಸ್ಥಾನವು ದಿನಾಂಕ:15.04.2010ರ ಅಪರಾಹ್ನದಿಂದ, (4) ಧಾರವಾಡ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಸ್ಥಾನವು ದಿನಾಂಕ:14.04.2010ರ ಅಪರಾಹ್ನದಿಂದ ಮತ್ತು (5) ಹಾಸನ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಸ್ಥಾನವು ದಿನಾಂಕ:27.04.2010ರ ಅಪರಾಹ್ನದಿಂದ ಜಾರಿಗೆ ಬರುವಂತೆ ಖಾಲಿಯಾಗುತ್ತಿದ್ದು, ಸದರಿ ಸದಸ್ಯರ (ಮಹಿಳೆ) ಮತ್ತು ಸದಸ್ಯರ ಸ್ಥಾನಕ್ಕೆ ಸೂಕ್ತರಾದವರನ್ನು ಆಯ್ಕೆ ಮಾಡುವ ಸಲುವಾಗಿ ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 10(1)(ಬಿ) ರನ್ವಯ 35 ವರ್ಷ ವಯಸ್ಸಾಗಿರುವವರು, ಅಂಗೀಕೃತ ವಿಶ್ವವಿದ್ಯಾಲಯದ ಪದವೀಧರರಾಗಿರುವವರು ಮತ್ತು ನ್ಯಾಯ, ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಹೊಂದಿರುವುದರ ಜೊತೆಗೆ ಕಾನೂನು, ಹಣಕಾಸು ವಾಣಿಜ್ಯ, ಲೆಕ್ಕ, ಕೈಗಾರಿಕೆ, ಸಾರ್ವಜನಿಕ ವ್ಯವಹಾರಗಳು ಮತ್ತು ಸಾರ್ವಜನಿಕ ಆಡಳಿತ ಇವುಗಳಲ್ಲಿ ಕನಿಷ್ಟ ಹತ್ತು ವರ್ಷಗಳ ಅನುಭವ ಹೊಂದಿರುವವರು ಜಿಲ್ಲಾ ವೇದಿಕೆಯ ಸದಸ್ಯರಾಗಲು ಅರ್ಹರಿರುವಂತಹವರಾಗಿರುತ್ತಾರೆ.

'ಮೇಲಿನ ಅರ್ಹತೆಯನ್ನು ಹೊಂದಿರುವಂತಹ ಅಭ್ಯರ್ಥಿಗಳು ಯಾವ ಜಿಲ್ಲಾ ವೇದಿಕೆಯಲ್ಲಿ ಕಾರ್ಯನಿರ್ವಹಿಸಲು ಇಚ್ಚಿಸುತ್ತಾರೆಯೋ ಅಂತಹ ಜಿಲ್ಲಾ ವೇದಿಕೆಯ ಹೆಸರನ್ನು ನಿಗದಿತ ಅರ್ಜಿ ನಮೂನೆಯಲ್ಲಿ ನಮೂದಿಸಿ, ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಹಾಗೂ ಅಗತ್ಯ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಲಕೋಟೆಯಲ್ಲಿರಿಸಿ, ಲಕೋಟೆಯ ಮೇಲ್ಭಾಗದಲ್ಲಿ **"......... (ಜಿಲ್ಲಾ ವೇದಿಕೆಯ ಹೆಸರು ಬರೆದು) ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಹುದ್ದೆಗೆ ಅರ್ಜಿ" ಎಂದು ದಪ್ಪ ಅಕ್ಷರಗಳಲ್ಲಿ ಬರೆದು."** ದಿನಾಂಕ: **11ನೇ ಸೆಪ್ಟೆಂಬರ್ 2009ರ ಶುಕ್ರವಾರ ಸಂಜೆ 5-00 ಗಂಟೆಯೊಳಗಾಗಿ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು-01,** ಇಲ್ಲಿಗೆ ಸಲ್ಲಿಸುವುದು.

ನಿಗದಿತ ಅರ್ಜಿ ನಮೂನೆಯು ಕರ್ನಾಟಕ ರಾಜ್ಯ ಆಯೋಗದ ವೆಬ್‌ಸೈಟ್ http://kscdrc.kar.nic.in ರಲ್ಲಿ ಲಭ್ಯವಿದ್ದು, ಸಂಬಂಧಪಟ್ಟ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಿಂದ ಅರ್ಜಿಯನ್ನು ನೇರವಾಗಿ ಪಡೆದುಕೊಳ್ಳಬಹುದಾಗಿದೆ ಅಥವಾ ಸಂಬಂಧಪಟ್ಟ ಜಿಲ್ಲಾ ವೇದಿಕೆಯಲ್ಲಿ ಒಂದು ಅರ್ಜಿಗೆ ರೂ.10-00 ರಂತೆ ಶುಲ್ಕವನ್ನು ಪಾವತಿ ಮಾಡಿ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 10(1ಎ) ರಡಿಯಲ್ಲಿನ ಆಯ್ಕೆ
ಸಮಿತಿಯ ಅಧ್ಯಕ್ಷರ ಆದೇಶಾನುಸಾರ

ಪಿ.ಆರ್.697

**ಎಸ್.ಎ.ಹಿದಾಯತ್‌ಉಲ್ಲಾ ಷರೀಫ್**
ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ,
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು.

## ಸಹಕಾರ ಇಲಾಖೆ

## ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವೃತ್ತ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇವರ ನಡವಳಿಕೆಗಳು

**ವಿಷಯ:** ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು ಇವರ ಅಮಲ್ಜಾರಿ ಅರ್ಜಿ ಸಂಖ್ಯೆ: ಜೆಆರ್‌ಡಿ/ ಯುಬಿಎಫ್/ಟಿ2744/05-06 (ಸಿಇಪಿ ಸಂಖ್ಯೆ: ಎಆರ್ 44/359/07-08) ಸಂಬಂಧಪಟ್ಟಂತೆ ಸ್ಥಿರಾಸ್ತಿಯನ್ನು 1960ನೇ ಸಹಕಾರ ಸಂಘಗಳ ನಿಯಮಗಳ ನಿಯಮ 38(5) (ಎ) ರನ್ವಯ ಮಾರಾಟ ಸ್ಥಿರೀಕರಣಗೊಳಿಸುವ ಬಗ್ಗೆ.

**ಉಲ್ಲೇಖ:** 1) ದಾವಾ ಸಂಖ್ಯೆ: ಜೆಆರ್‌ಡಿ/ಯುಬಿಎಫ್/ಟಿ2744/05-06.
2) ಅಮಲ್ಜಾರಿ ಅರ್ಜಿ ಸಂಖ್ಯೆ: 359/07-08.
3) ಮಾರಾಟಾಧಿಕಾರಿಯವರ ವರದಿ ದಿನಾಂಕ:11.02.2009.

**ಪ್ರಸ್ತಾವನೆ:**

ಶ್ರೀ ಎಂ. ರಮೇಶ್ ಬಿನ್ ಮಾಯಣ್ಣ, ನಂ.68, ಹಳೇ ನಂ.1, 1ನೇ ದೇವಸ್ಥಾನದ ರಸ್ತೆ, ಮಲ್ಲಿಕಾರ್ಜುನಪುರ, ಮಲ್ಲೇಶ್ವರಂ ಬೆಂಗಳೂರು-560 003 ಇವರು ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು ಈ ಬ್ಯಾಂಕಿನಿಂದ ದಿನಾಂಕ:28.07.2003ರಂದು ರೂ.27,30,000/- (ರೂಪಾಯಿ ಇಪ್ಪತ್ತೇಳು ಲಕ್ಷ ಮೂವತ್ತು ಸಾವಿರಗಳು ಮಾತ್ರ) ಗಳನ್ನು ಸ್ಥಿರಾಸ್ತಿ ಅಡಮಾನ ಮಾಡಿ ಸಾಲವಾಗಿ ಪಡೆದು ಬ್ಯಾಂಕಿನ ಸಾಲ ಮಂಜೂರಾತಿಯ ಷರತ್ತು ಮತ್ತು ನಿಯಮಗಳ ಪ್ರಕಾರ ಸಾಲವನ್ನು ಮರುಪಾವತಿಸಲು ವಿಫಲರಾಗಿ ಸುಸ್ತಿದಾರರಾದ ಕಾರಣ ಸಾಲ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರನ್ವಯ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, (ನಿ-441) ದಾವಾ ಪಂಚಾಯ್ತಿ ನ್ಯಾಯಾಲಯ, ಕ.ರಾ.ಸ.ಪ. ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಇವರ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ: ಜೆಆರ್‌ಡಿ/ಯುಬಿಎಫ್/ಟಿ2744/05-06ರಂತೆ ದಾವಾ ಹೂಡಿ ಆದೇಶ ಪಡೆದಿದ್ದರೂ ಸಾಲದ ಬಾಕಿ ವಸೂಲಾತಿಯಾಗಿರುವುದಿಲ್ಲ.

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು (ನಿ-441) ದಾವಾ ಪಂಚಾಯ್ತಿ ನ್ಯಾಯಾಲಯ, ಕ.ರಾ.ಸ.ಪ. ಬ್ಯಾಂಕು ಮ. ನಿಯಮಿತ, ಬೆಂಗಳೂರು ಇವರ ನ್ಯಾಯಾಲಯದಿಂದ ಪಡೆದ ಡಿಕ್ರಿ ಆದೇಶದನ್ವಯ ದಿ ಮಲ್ಲೇಶ್ವರಂ ಸಹಕಾರ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 34(1) ರನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, 1ನೇ ವಲಯ, ಮಲ್ಲೇಶ್ವರಂ, ಬೆಂಗಳೂರು-03 ಇವರ ಕಛೇರಿಯಲ್ಲಿ ಸಿಇಪಿ ಸಂಖ್ಯೆ: 359/07-08 ರಂತೆ ಅಮಲ್ಜಾರಿ ಅರ್ಜಿ ದಾಖಲು ಮಾಡಲಾಗಿತ್ತು. ಸದರಿ ಅಮಲ್ಜಾರಿ ಅರ್ಜಿಯನ್ನು ಬ್ಯಾಂಕಿನ ಮಾರಾಟಾಧಿಕಾರಿಯವರಿಗೆ ವಹಿಸಲಾಗಿತ್ತು. ಸದರಿ ಮಾರಾಟಾಧಿಕಾರಿಯವರು ಅಂತಿಮವಾಗಿ ಅಮಲ್ಜಾರಿ ಕ್ರಮಕೈಗೊಂಡು ಸಾಲಕ್ಕೆ ಬ್ಯಾಂಕಿನ ಆಧಾರ ಮಾಡಿದ್ದ ಈ ಕೆಳಗೆ ಕಾಣಿಸಿದ ಸ್ಥಿರಾಸ್ತಿಯನ್ನು ದಿನಾಂಕ:11.02.2009 ರಂದು ಸಾರ್ವಜನಿಕ ಹರಾಜಿಗೆ ತರಲಾಗಿತ್ತು. ಸದರಿ ದಿನ ನಡೆಸಿದ ಹರಾಜಿನಲ್ಲಿ 6 ಜನ ಬಿಡ್ಡುದಾರರು ಭಾಗವಹಿಸಿದ್ದು, ಈ ಪೈಕಿ ಶ್ರೀ ಎಸ್. ಪ್ರತಾಪ್‌ಕುಮಾರ್ ಪಾಂಡೆ ಬಿನ್ ಕೆ. ಸೂರ್ಯನಾರಾಯಣ ಪಾಂಡೆ ಮತ್ತು ಶ್ರೀಮತಿ ಎಸ್. ಶ್ರೀವನಿತ ಕೋಂ ಎಸ್. ಪ್ರತಾಪ್‌ಕುಮಾರ್ ಪಾಂಡೆ, ನಂ.70, 2ನೇ ಮಹಡಿ, 'ಪಾರಿಜಾತ' ವೆಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03 ಇವರು ರೂ.70,60,000/- (ರೂಪಾಯಿ ಎಪ್ಪತ್ತು ಲಕ್ಷ ಅರವತ್ತು ಸಾವಿರಗಳು ಮಾತ್ರ) ಗಳಿಗೆ ಬಿಡ್ಡು ಮಾಡಿದ್ದು. ಅತೀ ಹೆಚ್ಚು ಬಿಡ್ಡುದಾರರಾಗಿರುತ್ತಾರೆ.

ಡಿಕ್ರಿ ಆದೇಶ ಮತ್ತು ಅಮಲ್ಜಾರಿ ಅರ್ಜಿಯನ್ವಯ ಅಸಲು ರೂ.27,30,000/-ಗಳು ಬಡ್ಡಿ ಮತ್ತು ಇತರೆ ವೆಚ್ಚಗಳು ರೂ.22,36,325/- ಒಟ್ಟು ರೂ.49,66,325/-ಗಳು ಬ್ಯಾಂಕಿಗೆ ಬರಬೇಕಾಗಿರುತ್ತದೆ. ರೂ.70,60,000/-ಗಳ ಅತೀ ಹೆಚ್ಚಿನ ಬಿಡ್ಡುದಾರರಾದ ಶ್ರೀ ಎಸ್. ಪ್ರತಾಪ್‌ಕುಮಾರ್ ಪಾಂಡೆ ಮತ್ತು ಶ್ರೀಮತಿ ಎಸ್. ಶ್ರೀವನಿತ ರವರು ಬಿಡ್ಡಿನ ಮೊತ್ತದ ಶೇಕಡಾ 1 ರಷ್ಟು ರೂ.10,59,000/- ಗಳನ್ನು ಹರಾಜಿನ ಸ್ಥಳದಲ್ಲಿಯೇ ಬ್ಯಾಂಕಿಗೆ ಪಾವತಿ ಮಾಡಿರುತ್ತಾರೆ. ಉಳಿಕೆ ಮೊತ್ತ ಮತ್ತು ನೊಂದಣಿ ಶುಲ್ಕ ಸೇರಿ ರೂ.66,01,000/-ಗಳನ್ನು ದಿನಾಂಕ:24.03.2009ರಂದು ಪಾವತಿ ಮಾಡಿರುತ್ತಾರೆ.

ದಿ ಮಲ್ಲೇಶ್ವರಂ ಸಹಕಾರ ಬ್ಯಾಂಕಿನ ಮಾರಾಟಾಧಿಕಾರಿಯವರು ದಿನಾಂಕ:11.02.2009ರಂದು ನಡೆಸಿದ ಸಾರ್ವಜನಿಕ ಹರಾಜನ್ನು ಕರ್ನಾಟಕ ಸಹಕಾರ ಸಂಘಗಳ ಕಾನೂನು ಮತ್ತು ನಿಯಮಗಳನ್ನು ಪಾಲಿಸಿ ಹರಾಜು ಕ್ರಮವನ್ನು ನಡೆಸಿರುವುದಾಗಿ ಹಾಗೂ ಬ್ಯಾಂಕಿನ ಬಾಕಿದಾರರಾದ ಶ್ರೀ ಎಂ. ರಮೇಶ್ ಬಿನ್ ಮಾಯಣ್ಣ ರವರ ಸ್ಥಿರಾಸ್ತಿಯನ್ನು ಶ್ರೀ ಎಸ್. ಪ್ರತಾಪ್‌ಕುಮಾರ್ ಪಾಂಡೆ ಮತ್ತು ಶ್ರೀಮತಿ ಎಸ್. ಶ್ರೀವನಿತ ರವರಿಗೆ ಮಾರಾಟ ಮಾಡಿರುವ ಆಸ್ತಿಯ ಹರಾಜನ್ನು ಖಾಯಂಗೊಳಿಸಬೇಕೆಂದು ಉಲ್ಲೇಖ (3)ರಂತೆ ಈ ಕಛೇರಿಗೆ ಸವಿಸ್ತಾರವಾದ ವರದಿಯನ್ನು ಸಲ್ಲಿಸಿರುತ್ತಾರೆ.

ದಿನಾಂಕ:11.02.2009ರಂದು ನಡೆಸಿದ ಸ್ಥಿರಾಸ್ತಿ ಬಹಿರಂಗ ಹರಾಜಿನ ನಡವಳಿಕೆಯನ್ನು ಪರಿಶೀಲಿಸಿದಾಗ ಸದರಿ ಸ್ಥಿರಾಸ್ತಿ ಬಹಿರಂಗ ಹರಾಜಿನಲ್ಲಿ ಒಟ್ಟು 6 ಜನ ಬಿಡ್ಡುದಾರರು ಭಾಗವಹಿಸಿದ್ದು ಈ ಪೈಕಿ ಅತ್ಯಧಿಕ ಬಿಡ್ಡುದಾರರಾದ

ಶ್ರೀ ಎಸ್. ಪ್ರತಾಪ್‌ಕುಮಾರ್ ಪಾಂಡೆ ಮತ್ತು ಶ್ರೀಮತಿ ಎಸ್. ಶ್ರೀವನಿತ ಇವರಿಗೆ ರೂ.70,60,000/- ಗಳಿಗೆ ಮಾರಾಟ ಮಾಡಿರುವುದು ದಾಖಲೆಗಳಿಂದ ತಿಳಿದುಬಂದಿರುತ್ತದೆ. ಬಹಿರಂಗ ಹರಾಜು ನಡೆದ 30 ದಿನಗಳೊಳಗೆ ಬಾಕಿದಾರರು ವಾದಿ ಬ್ಯಾಂಕಿಗೆ ಬರಬೇಕಾದ ಸಾಲವನ್ನು ಮರುಪಾವತಿ ಮಾಡದಿರುವುದರಿಂದ ಮತ್ತು ಈ ಬಗ್ಗೆ ಯಾವುದೇ ಆಕ್ಷೇಪಣೆ ಸಲ್ಲಿಸದೇ ಇರುವುದರಿಂದ ದಿನಾಂಕ:11.02.2009 ರಂದು ನಡೆಸಲಾದ ಸ್ಥಿರಾಸ್ತಿ ಹರಾಜನ್ನು ಖಾಯಂಗೊಳಿಸಬಹುದೆಂದು ಮಾರಾಟಾಧಿಕಾರಿಯವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ಮಾರಾಟಾಧಿಕಾರಿಯವರು ಕೈಗೊಂಡ ಕ್ರಮಗಳು ಕಾನೂನುಬದ್ಧವಾಗಿದೆ ಎಂದು ಕಂಡುಬಂದಿರುವುದರಿಂದ ಈ ಕೆಳಗಿನ ಸ್ಥಿರೀಕರಣ ಆದೇಶ ಹೊರಡಿಸಲಾಗಿದೆ.

**ಆದೇಶ**

**ಕ್ರ.ಸಂ. ಎಆರ್‌ಬಿ 44/ಮಾ.ಸ್ಥಿರೀಕರಣ/02/2009-10, ದಿನಾಂಕ:18ನೇ ಜೂನ್, 2009**

ಶ್ರೀ ಅಶ್ವಥನಾರಾಯಣ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವೃತ್ತ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಆದ ನಾನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 38(6)(ಎ) ರನ್ವಯ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಅಮಲ್ಜಾರಿ ಅರ್ಜಿ ಸಂಖ್ಯೆ: 359/07-08 ಶ್ರೀ ಎಂ. ರಮೇಶ್ ಬಿನ್ ಮಾಯಣ್ಣ ಇವರಿಗೆ ಸೇರಿದ ಸ್ಥಿರಾಸ್ತಿಯನ್ನು ದಿನಾಂಕ:11.02.2009 ರಂದು ವಾದಿ ಬ್ಯಾಂಕಿನ ಮಾರಾಟಾಧಿಕಾರಿಯವರು ಮಾಡಿದ ಬಹಿರಂಗ ಹರಾಜಿನಲ್ಲಿ ಶ್ರೀ ಎಸ್. ಪ್ರತಾಪ್‌ಕುಮಾರ್ ಪಾಂಡೆ ಬಿನ್ ಕೆ. ಸೂರ್ಯನಾರಾಯಣ ಪಾಂಡೆ ಮತ್ತು ಶ್ರೀಮತಿ ಎಸ್. ಶ್ರೀವನಿತ ಕೋಂ ಎಸ್. ಪ್ರತಾಪ್‌ಕುಮಾರ್ ಪಾಂಡೆ, ನಂ.70, 2ನೇ ಮಹಡಿ, 'ಪಾರಿಜಾತ' ವೆಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03, ಇವರಿಗೆ ರೂ.70,60,000/- ಗಳಿಗೆ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಬಹಿರಂಗವಾಗಿ ಹರಾಜು ಮೂಲಕ ಮಾರಾಟ ಮಾಡಿರುವುದನ್ನು ಖಾಯಂಗೊಳಿಸಿ ಸ್ಥಿರೀಕರಿಸಿರುತ್ತೇನೆ.

**ಸ್ಥಿರಾಸ್ತಿಯ ವಿವರ**

ಬೆಂಗಳೂರು ಮಹಾನಗರ ಪಾಲಿಕೆ, ಮಲ್ಲೇಶ್ವರಂ ವಲಯ. 5ನೇ ವಾರ್ಡ್‌ಗೆ ಸೇರಿದ ಬೆಂಗಳೂರು ಸಿಟಿ, ಮನೆ ನಂ.68, ಹಳೇ ನಂ.1, 1ನೇ ದೇವಸ್ಥಾನದ ರಸ್ತೆ, ಮಲ್ಲಿಕಾರ್ಜುನಪುರ, ಮಲ್ಲೇಶ್ವರಂ. ಬೆಂಗಳೂರು--03 ರಲ್ಲಿರುವ ಪೂರ್ವಕ್ಕೆ:29.6 ಅಡಿಗಳು, ಪಶ್ಚಿಮಕ್ಕೆ: 30 ಅಡಿಗಳು, ಉತ್ತರಕ್ಕೆ:54 ಅಡಿಗಳು, ದಕ್ಷಿಣಕ್ಕೆ:54 ಅಡಿಗಳು ಇದರ ಚಕ್ಕುಬಂದಿ:

ಪೂರ್ವಕ್ಕೆ: ಬೇರೆಯವರ ಸ್ವತ್ತು

ಪಶ್ಚಿಮಕ್ಕೆ: ರಸ್ತೆ

ಉತ್ತರಕ್ಕೆ: ಬೇರೆಯವರ ಸ್ವತ್ತು

ದಕ್ಷಿಣಕ್ಕೆ: ಕಾಮನ್ ಪ್ಯಾಸೇಜ್ ಮತ್ತು ಬೇರೆಯವರ ಸ್ವತ್ತು.

ಈ ಸ್ವತ್ತಿನ ಪೈಕಿ ದಿನಾಂಕ:10.11.2008ರ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಡಬ್ಲ್ಯೂ.ಪಿ ನಂ.13623/2007 (ಸಿ.ಎಸ್.-ಡಿ.ಎ.ಎಸ್) ಇದರ ಅನ್ವಯ 1200 ಚದರಡಿ ನೆಲ ಅಂತಸ್ತು ಮತ್ತು ನಿವೇಶನದಲ್ಲಿ 1/3 ಅವಿಭಾಜ್ಯ ಪಾಲು ಶ್ರೀ ದೇವರಾವ್ ಬಿನ್ ಲೇಟ್ ಜಿ.ಎಲ್. ಆನಂದ್‌ರಾವ್ ರವರಿಗೆ ಸೇರಿದ ಸ್ವತ್ತನ್ನು ಹೊರತುಪಡಿಸಿ ಉಳಿಕೆ ಸ್ವತ್ತು ಈ ಮಾರಾಟ ಸ್ಥಿರೀಕರಣಕ್ಕೆ ಒಳಪಟ್ಟಿರುತ್ತದೆ.

ಮಾರಾಟದ ಮೊಬಲಗು: ರೂ.70,60,000/-

ಮಾರಾಟ ಮಾಡಿದ ದಿನಾಂಕ:11.02.2009

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:18.06.2009ರಂದು ನೀಡಲಾಗಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವೃತ್ತ,

ಪಿ.ಡಿ.43 ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.

**ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ, ವಿಜಾಪುರ**

**ಪ್ರಕಟಣೆ**

**ನಂ.ಜಿ.ಸಕ/ಲೆಕ್ಕ/ಸಿಆರ್/2009-10, ದಿನಾಂಕ:13ನೇ ಜುಲೈ, 2009**

ಸಮಾಜ ಕಲ್ಯಾಣ ಇಲಾಖೆಯಿಂದ ಸನ್ 2009-10ನೇ ಸಾಲಿಗಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟವರ್ಗದ ಕಾನೂನು ಪದವೀಧರರು ಈ ಕೆಳಕಂಡ ಅರ್ಹತೆ ಮತ್ತು ದಾಖಲೆಗಳನ್ನು ಹೊಂದಿದವರು ದಿನಾಂಕ:31.07.2009ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

1) ಈ ಯೋಜನೆಯಡಿ ಅರ್ಜಿದಾರರು ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟವರ್ಗದ ಜಾತಿಗೆ ಸೇರಿದವರಾಗಿರಬೇಕು (ದೃಢೀಕೃತ ಜಾತಿ ಪ್ರಮಾಣ ಪತ್ರ ಲಗತ್ತಿಸಬೇಕು) ಹಾಗೂ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಎರಡು ವರ್ಷದಿಂದಾ

ಈಚೆಗೆ ಕಾನೂನು ಪದವಿಯಲ್ಲಿ ಉತ್ತೀರ್ಣರಾಗಿರಬೇಕು. ಅಂದರೆ ದಿನಾಂಕ:10.07.2007 ರಿಂದ 10.07.2009ರಲ್ಲಿ ಅಂತಿಮ ಪದವಿ ಪಾಸಾಗಿರಬೇಕು.

2) ವಕೀಲ ವೃತ್ತಿಯನ್ನು ನಡೆಸಲು ಅರ್ಹತೆ ಪಡೆದಿರುವ ಕಾನೂನು ಪದವೀಧರರು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

3) ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕದಂದು ಅಭ್ಯರ್ಥಿಗಳ ವಯಸ್ಸು 18 ರಿಂದ 35 ವರ್ಷದೊಳಗಿರಬೇಕು.

4) ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ತರಬೇತಿ ಮಧ್ಯದಲ್ಲಿ ಬಿಟ್ಟು ಹೋಗಬಾರದು. ಒಂದು ವೇಳೆ ಬಿಟ್ಟುಹೋದಲ್ಲಿ ಶಿಷ್ಯವೇತನ ಮೊತ್ತವನ್ನು ಕಂದಾಯ ಬಾಕಿ ಅಂತಾ ವಸೂಲಿ ಮಾಡಲಾಗುವುದು.

5) ತರಬೇತಿಯ ಅವಧಿ ನಾಲ್ಕು ವರ್ಷ ಆಗಿದ್ದು ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಪ್ರತಿ ತಿಂಗಳು ರೂ.1000-00 ರಂತೆ ಸ್ಟೈಫಂಡ್ ನೀಡಲಾಗುವುದು.

6) ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್ ಸರ್ಕಾರಿ ವಕೀಲರು ಅಥವಾ 20 ವರ್ಷಕ್ಕೂ ಮೇಲ್ಪಟ್ಟು ವಕೀಲ ವೃತ್ತಿ ನಡೆಸಿದ ಖಾಸಗಿ ವಕೀಲರುಗಳ ಹತ್ತಿರ ತರಬೇತಿಗೆ ನಿಯೋಜಿಸಲಾಗುವುದು.

7) ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಹ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಈ ಕೆಳಕಂಡ ದಾಖಲೆಗಳೊಂದಿಗೆ ದಿನಾಂಕ:31.07.2009ರ ಒಳಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ವಿಜಾಪುರ ಇವರಿಗೆ ಅರ್ಜಿ ಸಲ್ಲಿಸತಕ್ಕದ್ದು.

1) ಜಾತಿ ಪ್ರಮಾಣ ಪತ್ರ.

2) ಆದಾಯ ಪ್ರಮಾಣ ಪತ್ರ.

3) ಜನ್ಮ ದಿನಾಂಕ ದಾಖಲೆಯ ಕುರಿತು ಎಸ್.ಎಸ್.ಎಲ್.ಸಿ. ಅಂಕಪಟ್ಟಿ.

4) ಲಿವ್ವಿಂಗ್ ಸರ್ಟಿಫಿಕೇಟ್.

5) ಬಾರ್ ಅಸೋಸಿಯೇಶನ್ ಸದಸ್ಯತ್ವ ಪ್ರಮಾಣ ಪತ್ರ.

6) ಅಂತಿಮ ಕಾನೂನು ಪಾಸ್ ಮಾಡಿದ ಅಂಕಪಟ್ಟಿ ಮುಂತಾದ ಶೈಕ್ಷಣಿಕ ಅರ್ಹತೆ ಪಡೆದ ದೃಢೀಕರಣ ಪ್ರಮಾಣ ಪತ್ರಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಇತರೆ ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳವರ ಕಾರ್ಯಾಲಯ ಆನಂದ್ ಮಹಲ ಬಿಜಾಪುರ ಇಲ್ಲಿ ಸಂಪರ್ಕಿಸಬಹುದಾಗಿದೆ.

ಪಿ.ಆರ್.698 ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಬಿಜಾಪುರ.

## ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

**ಸಂಖ್ಯೆ: ಆಸಾನಿ: 11: ಆಡಳಿತ-2:2001/525-60, ಬೆಂಗಳೂರು, ದಿನಾಂಕ:2ನೇ ಜುಲೈ, 2009**

**ವಿಷಯ:** ಸರ್ಕಾರದ ಸೇವೆಗೆ ಅನಧಿಕೃತ ಗೈರು ಹಾಜರಾಗುವ ಶ್ರೀ ಪಿ.ಆರ್. ಲೋಕೇಶ್, ಗಣತಿದಾರರು ಇವರನ್ನು ಸರ್ಕಾರದ ಸೇವೆಯಿಂದ ವಜಾಗೊಳಿಸುವ ಕುರಿತು.

**ಉಲ್ಲೇಖ:** 1) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಜ್ಞಾಪನದ ದಿನಾಂಕ:11.03.2009.

2) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಅಂತಿಮ ನೋಟೀಸು ದಿನಾಂಕ:15/18.05.2009.

**ಪ್ರಸ್ತಾವನೆ:**

ಈ ನಿರ್ದೇಶನಾಲಯದ ಗಣತಿದಾರರ ವೃಂದಕ್ಕೆ ಸೇರಿದ ಶ್ರೀ ಪಿ.ಆರ್. ಲೋಕೇಶ್ ಅವರು ದಿನಾಂಕ:22.12.2008 ರಿಂದ ನಿರಂತರವಾಗಿ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿದ್ದರಿಂದ, ಅವರಿಗೆ ಉಲ್ಲೇಖ (1)ರಲ್ಲಿನ ಜ್ಞಾಪನದಲ್ಲಿ, ಈ ಜ್ಞಾಪನವನ್ನು ಸ್ವೀಕರಿಸಿದ 3 ದಿನಗಳ ಒಳಗಾಗಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಗಿತ್ತು. ಈ ಜ್ಞಾಪನವನ್ನು ಸದರಿ ಗಣತಿದಾರರಾದ ಶ್ರೀ ಪಿ.ಆರ್. ಲೋಕೇಶ್ ಅವರು "ಸ್ವೀಕರಿಸಲು ತಿರಸ್ಕರಿಸಿದ್ದಾರೆಂಬ" (addressee refused) ಷರಾದೊಂದಿಗೆ, ಜ್ಞಾಪನವನ್ನೊಳಗೊಂಡ ಅಂಚೆ ಕವರು ಈ ನಿರ್ದೇಶನಾಲಯಕ್ಕೆ ಹಿಂತಿರುಗಿ ಬಂದಿದ್ದರಿಂದ, ಈ ಜ್ಞಾಪನವನ್ನು ಮುದ್ದಾಂ ಆಗಿ, ಅವರ ಮನೆ ವಿಳಾಸಕ್ಕೆ ದಿನಾಂಕ:24.03.2009ರಂದು ಜಾರಿ ಮಾಡಲಾಗಿತ್ತು. ನಂತರ ಸದರಿಯವರು ದಿನಾಂಕ:30.03.2009ರಂದು ಸಲ್ಲಿಸಿದ ಒಂದು ಮನವಿಯಲ್ಲಿ ಕಛೇರಿಗೆ ಹಾಜರಾಗುತ್ತೇನೆಂದು ತಿಳಿಸಿದ್ದರೂ, ಅವರು ಅನಧಿಕೃತ ಗೈರು ಹಾಜರಾತಿಯನ್ನು ನಿರಂತರವಾಗಿ ಮುಂದುವರೆಸಿರುತ್ತಾರೆ. ನಂತರ, ಇದೇ ಕ್ರಮಾಂಕದ ಜ್ಞಾಪನದ ದಿನಾಂಕ:15/18.05.2009ರಲ್ಲಿ ಸದರಿಯವರಿಗೆ, ನೀಡಲಾದ ಅಂತಿಮ ನೋಟೀಸನ್ನು ಅವರು ದಿನಾಂಕ:20.05.2009ರಂದು ಸ್ವೀಕರಿಸಿದ್ದರೂ, ಇಂದಿನವರೆಗೂ ಕಛೇರಿಗೆ ಅನಧಿಕೃತ ಗೈರು ಹಾಜರಾಗಿರುತ್ತಾರೆ.

ಸರ್ಕಾರಿ ನೌಕರನೊಬ್ಬನು ಯಾವುದೇ ಮಾಹಿತಿ ಇಲ್ಲದೇ ನಿರಂತರವಾಗಿ ಅನಧಿಕೃತ ಗೈರು ಹಾಜರಾದ ಪ್ರಕರಣಗಳನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14(ii) ಅನ್ವಯ ಪರಿಶೀಲಿಸಲಾಗಿ, "ಆತನು ತಲೆಮರೆಸಿಕೊಂಡಿದ್ದಾನೆಂದು" ಪರಿಗಣಿಸಿ, ಇಲಾಖಾ ವಿಚಾರಣೆ ನಡೆಸದೇ ದಂಡನೆ ವಿಧಿಸಬಹುದಾಗಿದೆ ಹಾಗೂ ಅದೇ ನಿಯಮಗಳ ನಿಯಮ: 28(2)ರ ಅನ್ವಯ ಉಲ್ಲೇಖ (2)ರಲ್ಲಿನ ಅಂತಿಮ ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಅದನ್ನು ದಿನಾಂಕ:20.05.2009ರಂದು ಆತನು

ಸ್ವೀಕರಿಸಿದ್ದು, ಹಾಗೂ ಅದೇ ನಿಯಮಗಳ ಅನ್ವಯ, ಕಛೇರಿ ನೋಟಿಸ್ ಬೋರ್ಡಿನ ಮೇಲೆ ಅದರ ಒಂದು ಪ್ರತಿಯನ್ನು ಅಂಟಿಸಲಾಗಿತ್ತು. ಸದರಿ ಶ್ರೀ ಪಿ.ಆರ್. ಲೋಕೇಶ್, ಗಣತಿದಾರರು ಈ ಹಿಂದೆ ದಿನಾಂಕ:02.06.2007 ರಿಂದ 30.10.2007ರ ವರೆಗೆ ಹಾಗೂ ದಿನಾಂಕ:26.12.2007 ರಿಂದ 22.02.2008ರ ವರೆಗಿನ ಅವರ ಅನಧಿಕೃತ ಗೈರು ಹಾಜರಾತಿಯನ್ನು ಕೆಸಿಎಸ್‌ಆರ್ ನಿಯಮ 106ರ ಅನ್ವಯ ಅನಧಿಕೃತ ಗೈರು ಹಾಜರಾತಿ ಎಂದು ಪರಿಗಣಿಸಲಾಗಿತ್ತು. ಹಾಗೂ ಸದರಿಯವರು ಸರ್ಕಾರದ ಸೇವೆಗೆ ವರದಿ ಮಾಡಿಕೊಂಡ ನಂತರ ಅನಧಿಕೃತ ಗೈರು ಹಾಜರಾಗುವ ಪ್ರವೃತ್ತಿಯನ್ನು ನಿರಂತರವಾಗಿ ಮುಂದುವರೆಸಿದ್ದರು. ಪ್ರಸ್ತುತ ಪ್ರಕರಣದಲ್ಲಿ ಸದರಿಯವರು ದಿನಾಂಕ:22.12.2008 ರಿಂದ ಇಂದಿನವರೆಗೂ ಕರ್ತವ್ಯಕ್ಕೆ ಅನಧೀಕೃತ ಗೈರು ಹಾಜರಾಗಿದ್ದು ಅವರಿಗೆ ಹೊರಡಿಸಲಾಗಿದ್ದ ಅಂತಿಮ ಜ್ಞಾಪನವನ್ನು ಸ್ವೀಕರಿಸಿದ ನಂತರವೂ ಹಾಗೂ ಅದನ್ನು ಕಛೇರಿಯ ನೋಟೀಸ್ ಬೋರ್ಡಿಗೆ ಅಂಟಿಸಿದ ನಂತರವೂ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಇದ್ದುದರಿಂದ, ಆತನು ತಲೆ ತಪ್ಪಿಸಿಕೊಂಡಿದ್ದಾನೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಕಛೇರಿ ಆದೇಶದ ಸಂಖ್ಯೆ: ಆಸಾನಿ: ಆಡಳಿತ:176, 2009-10**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಶ್ರೀ ಪಿ.ಆರ್. ಲೋಕೇಶ್, ಗಣತಿದಾರರಿಗೆ ಸರ್ಕಾರದ ಕರ್ತವ್ಯದಲ್ಲಿ ಆಸಕ್ತಿ ಇಲ್ಲದೆ ಮೇಲಿಂದ ಮೇಲೆ ಗೈರು ಹಾಜರಾಗುವ ಪ್ರವೃತ್ತಿ ಹೊಂದಿದ್ದು, ಈ ಪ್ರಸ್ತುತ ಶ್ರೀ ಪಿ.ಆರ್. ಲೋಕೇಶ್, ಗಣತಿದಾರರು, ಯಾವುದೇ ಪ್ರಬಲ ಕಾರಣಗಳಿಲ್ಲದೆ ಸರ್ಕಾರದ ಕರ್ತವ್ಯಕ್ಕೆ ದಿನಾಂಕ:22.12.2008 ರಿಂದ ಅನಧಿಕೃತ ಗೈರು ಹಾಜರಾಗಿರುವುದು ತೀವ್ರ ತೆರನಾದ ದುರ್ವರ್ತನೆಯಾಗಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ:14(ii)ರ ಅನ್ವಯ ಆತನು ತಲೆಮರೆಸಿಕೊಂಡಿದ್ದಾನೆಂದು ಪರಿಗಣಿಸಿ, ಅದೇ ನಿಯಮಾವಳಿ ನಿಯಮ:11ರ ಅನ್ವಯ ಇಲಾಖಾ ವಿಚಾರಣೆ ಏರ್ಪಡಿಸದೇ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ:8(viii)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಆದ ನಾನು ಶ್ರೀ ಪಿ.ಆರ್. ಲೋಕೇಶ್, ಗಣತಿದಾರರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕೇಂದ್ರ ಕಛೇರಿ, ಬೆಂಗಳೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ನಿರ್ದೇಶನಾಲಯದ ಸೇವೆಯಿಂದ ವಜಾ ಮಾಡಿ ಆದೇಶಿಸಿದ್ದೇನೆ.

**ಹೆಚ್.ಇ. ರಾಜಶೇಖರಪ್ಪ**

ಪಿ.ಆರ್.613

ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ,
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ.

**ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ**

**ಸಂಖ್ಯೆ: ಆಸಾಂನಿ:248:ಆಡಳಿತ-2:2008-09/15001-15045, ಬೆಂಗಳೂರು, ದಿನಾಂಕ:20ನೇ ಜುಲೈ, 2009**

**ವಿಷಯ:** ಶ್ರೀ ಎ. ರಾಜೇಂದ್ರ ಹಿಂದಿನ ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರನ್ನು ಸರ್ಕಾರದ ಸೇವೆಗೆ ಪುನರ್ ಸ್ಥಾಪಿಸುವ ಕುರಿತು.

**ಉಲ್ಲೇಖ:** 1) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಜಿಸಂಸಂ/ದಾವ/ ಆಡಳಿತ/ ಸಾಂನಿ/ದಾವ/2008-09, ದಿನಾಂಕ:09.01.2009 ಮತ್ತು ಅದರೊಂದಿಗೆ ಲಗತ್ತಿಸಲಾದ 76 ಪುಟಗಳ ದಾಖಲಾತಿಗಳು.

2) ಆ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ದಿನಾಂಕ:24.01.2009.

3) ನೌಕರರ ಮನವಿ ದಿನಾಂಕ:29.06.2009.

**ಪ್ರಸ್ತಾವನೆ:**

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಇವರ ಉಲ್ಲೇಖ (1) ರ ವರದಿಯಲ್ಲಿನ ಮೊದಲನೆಯ ಅಂಶದಲ್ಲಿ ಇನ್ನಿತರ ವಿಷಯಗಳೊಂದಿಗೆ ಶ್ರೀಮತಿ ಉಮಾದೇವಿ ಎಂಬುವವರು ಜಗಳೂರು ತಾಲ್ಲೂಕು, ಯರ್ಲಕಟ್ಟೆಯಲ್ಲಿ ದಿನಾಂಕ:20.06.1988 ರಂದು ವಾಸ್ತವವಾಗಿ ಜನನವಾಗಿದ್ದರೂ, ಶ್ರೀ ಎ. ರಾಜೇಂದ್ರ, ಸಾಂಖ್ಯಿಕ ನಿರೀಕ್ಷಕರು ಇವರು ಶ್ರೀಮತಿ ಉಮಾದೇವಿ ಇವರ ತಾಯಿ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ನವೆಂಬರ್ 1986ನೇ ಇಸವಿಯ ನಿಟ್ಟುವಳ್ಳಿ ಗ್ರಾಮ. ದಾವಣಗೆರೆ ತಾಲ್ಲೂಕು ಜನನ ಮತ್ತು ಮರಣ ನೋಂದಣಿಯ ರಿಜಿಸ್ಟರ್‌ನ ಹಳೆಯ ದಾಖಲೆಗಳನ್ನು ತೆಗೆದುಕೊಂಡು ಶ್ರೀಮತಿ ಎಂ.ಜಿ. ಉಮಾದೇವಿಯವರ ಹುಟ್ಟಿದ ದಿನಾಂಕವನ್ನು ಅನಧಿಕೃತವಾಗಿ ಸುಳ್ಳು ದಿನಾಂಕವನ್ನು ನಮೂದಿಸಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದೂ, ಎರಡನೆಯ ಅಂಶದಲ್ಲಿ ಸದರಿ ಸಾಂಖ್ಯಿಕ ನಿರೀಕ್ಷಕರಾದ ಶ್ರೀ ಎ.ರಾಜೇಂದ್ರ, ಇವರು ಈ ಘಟನೆ ಜರುಗಿದ ದಿನಾಂಕಗಳಂದು ಪ್ರವಾಸದಲ್ಲಿದ್ದುದಾಗಿ ಹೇಳಿದ್ದರೂ, ಆ ದಿನಗಳಂದು ಕಛೇರಿಯಲ್ಲಿ ಇದ್ದು ಸದರಿ ಅವರೇ ಜನನ ಪ್ರಮಾಣ ಪತ್ರದ ನಕಲನ್ನು ಹಾಗೂ ನಮೂನೆ-II ರ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ತಯಾರಿಸಿದ್ದಾಗ್ಯೂ ಸದರಿ ಪ್ರಮಾಣ ಪತ್ರದ ನಕಲನ್ನು ತಯಾರಿಸುವಾಗ ಮೂಲ ದಾಖಲೆಯಾದ ನಮೂನೆ-II ರಲ್ಲಿನ ವ್ಯತ್ಯಾಸದ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲವೆಂದೂ ಹಾಗೂ ವರದಿಯ 3ನೇ ಅಂಶದಲ್ಲಿ ಸದರಿ

ಸಾಂಖ್ಯಿಕ ನಿರೀಕ್ಷಕರು ಅವರಿಗೆ ವಹಿಸಲಾದ ಸರ್ಕಾರದ ಕರ್ತವ್ಯಗಳ ನಿರ್ವಹಣೆಯಲ್ಲಿಯೂ ಸಹ ನಿರ್ಲಕ್ಷತೆಯನ್ನು ಪ್ರದರ್ಶಿಸಿರುವುದಕ್ಕೆ ಸಂಬಂಧಿಸಿದಂತೆ ಹಾಗೂ ತಾಲ್ಲೂಕು ಕಛೇರಿಗಳಲ್ಲಿ ಮತ್ತು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಏರ್ಪಡಿಸಲಾಗುವ ಮಾಸಿಕ ಪ್ರಗತಿ ಪರಿಶೀಲನಾ ಸಭೆಗಳಿಗೆ ಅನುಮತಿ ಪಡೆಯದೇ ಗೈರು ಹಾಜರಾಗಿರುವುದಕ್ಕೆ ಮತ್ತು ಪ್ರತಿ ತಿಂಗಳು ದಿನಚರಿ ನೀಡದೇ ಇರುವುದಕ್ಕೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ನೀಡಿದ ಕಾರಣ ಕೇಳುವ ಜ್ಞಾಪನಗಳ ಕುರಿತು ವಿವರಿಸಿ, ಸದರಿ ಸಾಂಖ್ಯಿಕ ನಿರೀಕ್ಷಕರು ಸರ್ಕಾರದ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರ್ಲಕ್ಷತೆ ಮನೋಭಾವನೆಯನ್ನು ಬೆಳೆಸಿಕೊಂಡಿರುವುದಲ್ಲದೆ ಕರ್ತವ್ಯ ಲೋಪವೆಸಗಿರುತ್ತಾರೆಂದು ನಮೂದಿಸಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಕೋರಿದ್ದರಿಂದ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಇವರ ಪ್ರಸ್ತಾವನೆಯಲ್ಲಿ ಒಳಗೊಂಡಿರುವ ಮೇಲೆ ತಿಳಿಸಲಾದ ಅಂಶಗಳನ್ನು ಹಾಗೂ ವರದಿಗಳೊಂದಿಗೆ ಒದಗಿಸಲಾದ ದಾಖಲಾತಿಗಳನ್ನು ಪರಿಶೀಲಿಸಿ ಶ್ರೀ ಎ. ರಾಜೇಂದ್ರ ಸಾಂಖ್ಯಿಕ ನಿರೀಕ್ಷಕರನ್ನು ಸರ್ಕಾರದ ಸೇವೆಯಿಂದ ಉಲ್ಲೇಖ (2) ರ ಆದೇಶದಲ್ಲಿ ಅಮಾನತ್ತುಗೊಳಿಸಲಾಗಿತ್ತು.

ಸದರಿ ಅಮಾನತ್ತಿನಲ್ಲಿದ್ದ ಸಾಂಖ್ಯಿಕ ನಿರೀಕ್ಷಕರ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರು ಒದಗಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಅದೇ ವಿಷಯಕ್ಕೆ ಸಂಬಂಧಿಸಿದಂತೆ, ಮೇಲೆ ತಿಳಿಸಲಾದ ಶ್ರೀಮತಿ ಉಮಾದೇವಿ, ಇವರು ಶ್ರೀ ರಾಜೇಂದ್ರ, ಸಾಂಖ್ಯಿಕ ನಿರೀಕ್ಷಕರು ಇವರ ವಿರುದ್ಧ ಅದೇ ಆರೋಪಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಲೋಕಾಯುಕ್ತರ ಮುಂದೆ ದೂರೊಂದನ್ನು ಸಲ್ಲಿಸಿದ್ದರಿಂದ, ಆ ದೂರು ಕುರಿತು ಪೊಲೀಸ್, ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರು ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇಲ್ಲಿಗೆ ಒಂದು ವರದಿಯನ್ನು ದಿನಾಂಕ:22.06.2009ರಂದು ಸಲ್ಲಿಸಿದ್ದರಿಂದ ಲೋಕಾಯುಕ್ತ ಕಛೇರಿಯಿಂದ ಅಥವಾ ಈ ನಿರ್ದೇಶನಾಲಯದಿಂದ, ಸದರಿ ಸಾಂಖ್ಯಿಕ ನಿರೀಕ್ಷಕರ ವಿರುದ್ಧ ಇಲಾಖಾ ವಿಚಾರಣೆಯನ್ನು ಏರ್ಪಡಿಸುವುದನ್ನು ಕಾಯ್ದಿರಿಸಿ ಹಾಗೂ ಉಲ್ಲೇಖ (3)ರಲ್ಲಿನ ಸದರಿ ಸಾಂಖ್ಯಿಕ ನಿರೀಕ್ಷಕರ ಕೋರಿಕೆಯನ್ನು ಪರಿಗಣಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಕಛೇರಿ ಆದೇಶ ಸಂಖ್ಯೆ: ಆಡಳಿತ:209: 2009-10**

ಪ್ರಸ್ತಾವನೆಯಲ್ಲಿ ವಿವರಿಸಲಾದ ಎಲ್ಲಾ ಅಂಶಗಳನ್ನು ಪರಿಗಣಿಸಿ, ಶ್ರೀ ಎ. ರಾಜೇಂದ್ರ, ಹಿಂದಿನ ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ದಾವಣಗೆರೆ (ದಾವಣಗೆರೆ ಜಿಲ್ಲೆ) ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಏರ್ಪಡಿಸುವುದನ್ನು ಕಾಯ್ದಿರಿಸಿ ಸರ್ಕಾರದ ಸೇವೆಗೆ ಪುನರ್ ಸ್ಥಾಪಿಸಿ ತಾಲ್ಲೂಕು ಕಛೇರಿ, ಹೊನ್ನಾಳಿ, (ದಾವಣಗೆರೆ ಜಿಲ್ಲೆ) ಕಛೇರಿಯಲ್ಲಿ ಖಾಲಿ ಇರುವ ಸಾಂಖ್ಯಿಕ ನಿರೀಕ್ಷಕರ ಹುದ್ದೆಗೆ ನೇಮಕಾತಿ ಮಾಡಲಾಗಿದೆ.

**ಹೆಚ್.ಇ. ರಾಜಶೇಖರಪ್ಪ**

ಪಿ.ಆರ್.705 ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ**

**ಸಂಖ್ಯೆ: ಡಬ್ಲ್ಯೂಸಿಎ:ಎಫ್:ಎಸ್ಆರ್-20:2009, ದಿನಾಂಕ:20ನೇ ಜುಲೈ, 2009**

**ಅರ್ಜಿದಾರರು:**

1) ಶ್ರೀಮತಿ ಜಯಲಕ್ಷ್ಮಿ ಕೋಂ ಅಮಾಸೇಗೌಡ (ಲೇಟ್)
2) ಶ್ವೇತ ಬಿನ್ ಲೇಟ್ ಅಮಾಸೇಗೌಡ
3) ರವಿಕುಮಾರ್ ಬಿನ್ ಲೇಟ್ ಅಮಾಸೇಗೌಡ
4) ಜವರಮ್ಮ ಕೋಂ ಸಣ್ಣಚಿಕ್ಕೇಗೌಡ,
ವಾಸ: ಮಳಲಿ ಗ್ರಾಮ, ಹಳೇಕೋಟೆ ಹೋಬಳಿ, ಹೆಚ್.ಎನ್. ಪುರ ತಾಲ್ಲೂಕು.

ವಿರುದ್ಧ

**ಪ್ರತಿವಾದಿಗಳು:**

1) ಶ್ರೀ ಅರುಣ್‌ಕುಮಾರ್ ಬಿನ್ ಬಸವರಾಜು, ಕಿರಗಂಡೂರು ಗ್ರಾಮ ಮತ್ತು ಅಂಚೆ, ಸೋಮವಾರಪೇಟೆ ತಾಲ್ಲೂಕು.
2) ದಿ ಓರಿಯಂಟಲ್ ಇನ್‌ಶೂರೆನ್ಸ್ ಕಂ.ಲಿ., ಸುಭಾಷ್ ಚೌಕ, ಹಾಸನ.

**ಪ್ರಕಟಣೆ**

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಅಮಾಸೇಗೌಡ ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:24.04.2009 ರಂದು ಸಾವನ್ನಪ್ಪಿರುತ್ತಾರೆ. ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಅವರ ಅವಲಂಬಿತರು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರು: ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸದೊಳಗಾಗಿ

ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

**ಹೆಚ್.ಎಲ್. ಗುರುಪ್ರಸಾದ್**
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ**
**ಸಂಖ್ಯೆ: ಡಬ್ಲ್ಯೂಸಿಎ:ಎಫ್:ಎಸ್‌ಆರ್-21:2009, ದಿನಾಂಕ:20ನೇ ಜುಲೈ, 2009**

**ಅರ್ಜಿದಾರರು:**
1) ಶ್ರೀ ಜವರೇಗೌಡ ಬಿನ್ ಪುಟ್ಟಸ್ವಾಮಿಗೌಡ
2) ಶ್ರೀಮತಿ ಗಿರಿಯಮ್ಮ ಕೋಂ ಜವರೇಗೌಡ
3) ಗಿರೀಶ ಬಿನ್ ಜವರೇಗೌಡ,
ವಾಸ: ಸಿಗರನಹಳ್ಳಿ ಗ್ರಾಮ, ಹರಹರಪುರ ಅಂಚೆ, ಹಳೇಕೋಟೇ ಹೋಬಳಿ, ಹೆಚ್.ಎನ್.ಪುರ್. ತಾಲ್ಲೂಕು.

**ವಿರುದ್ಧ**

**ಪ್ರತಿವಾದಿಗಳು:**
1) ಶ್ರೀ ಲಕ್ಷ್ಮಣ ಬಿನ್ ವೆಂಕಟೇಗೌಡ, ಹೆಚ್.ಕೆ. ಹೊಸೂರು, ಕಸಬಾ ಹೋಬಳಿ, ಹಾಸನ ತಾಲ್ಲೂಕು.
2) ವ್ಯವಸ್ಥಾಪಕರು, ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂ.ಲಿ., ಹಾಸನ.

**ಪ್ರಕಟಣೆ**

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಪ್ರಕಾಶ ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:11.01.2009 ರಂದು ಸಾವನ್ನಪ್ಪಿರುತ್ತಾರೆ. ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಅವರ ಅವಲಂಬಿತರು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರು: ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸದೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

**ಹೆಚ್.ಎಲ್. ಗುರುಪ್ರಸಾದ್**
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ**
**ಸಂಖ್ಯೆ: ಡಬ್ಲ್ಯೂಸಿಎ:ಎಫ್:ಎಸ್‌ಆರ್-22:2009, ದಿನಾಂಕ:20ನೇ ಜುಲೈ, 2009**

**ಅರ್ಜಿದಾರರು:**
1) ಶ್ರೀಮತಿ ಭಾರತಿ ಕೋಂ ಲೇಟ್ ಹನುಮೇಗೌಡ (ಅ) ಹನುಮಂತು,
2) ಸುರೇಶ ಬಿ.ಹೆಚ್. ಬಿನ್ ಲೇಟ್ ಹನುಮೇಗೌಡ,
3) ಹೆಚ್. ಆಶಾ ಬಿನ್ ಲೇಟ್ ಹನುಮೇಗೌಡ.
4) ಹನುಮೇಗೌಡ ಬಿನ್ ಲೇಟ್ ಹನುಮಂತೇಗೌಡ.
5) ಚೌಡಮ್ಮ ಕೋಂ ಹನುಮೇಗೌಡ
ವಾಸ: ಹಲಗೇನಹಳ್ಳಿ, ಗಂಡಸಿ ಹೋಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

**ವಿರುದ್ಧ**

**ಪ್ರತಿವಾದಿಗಳು:**
1) ಶ್ರೀ ಹನುಮೇಗೌಡ ಬಿನ್ ಲೇಟ್ ಸಣ್ಣಹನುಮೇಗೌಡ, ಬಿಲವತ್ತಳ್ಳಿ ಗ್ರಾಮ, ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು.
2) ದಿ ನ್ಯಾಷನಲ್ ಇನ್‌ಶೂರೆನ್ಸ್ ಕಂ.ಲಿ., ಹಾಸನ.

**ಪ್ರಕಟಣೆ**

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಹನುಮೇಗೌಡ (ಅ) ಹನುಮಂತು ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:03.03.2009 ರಂದು ಸಾವನ್ನಪ್ಪಿರುತ್ತಾರೆ. ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಅವರ ಅವಲಂಬಿತರು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರು: ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸದೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

**ಹೆಚ್.ಎಲ್. ಗುರುಪ್ರಸಾದ್**
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ**

**ಸಂಖ್ಯೆ: ಡಬ್ಲ್ಯೂಸಿಎ:ಎಫ್:ಎಸ್ಆರ್-23:2009, ದಿನಾಂಕ:20ನೇ ಜುಲೈ, 2009**

**ಅರ್ಜಿದಾರರು:**
1) ಶ್ರೀ ಚಂದ್ರಶೇಖರಯ್ಯ ಬಿನ್ ಸೋಮಶೇಖರಯ್ಯ.
2) ಶ್ರೀಮತಿ ಪಾರ್ವತಮ್ಮ ಕೋಂ ಚಂದ್ರಶೇಖರಯ್ಯ.
ವಾಸ: ಕುಪ್ಪೆಗ್ರಾಮ, ಹಳ್ಳಿ ಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು.

**ವಿರುದ್ಧ**

**ಪ್ರತಿವಾದಿಗಳು:**
1) ಶ್ರೀ ಹೆಚ್.ಜಿ.ಕೆ. ನಟರಾಜೇಗೌಡ ಬಿನ್ ಪುಟ್ಟರಂಗೇಗೌಡ, ರಂಗನಾಥನಿಲಯ, 5ನೇ ಕ್ರಾಸ್, ಹುಣಸಗೇರಿ.
2) ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂ.ಲಿ., ಹಾಸನ.

**ಪ್ರಕಟಣೆ**

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಮಹದೇವ್ ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:27.04.2009 ರಂದು ಸಾವನ್ನಪ್ಪಿರುತ್ತಾರೆ. ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಅವರ ಅವಲಂಬಿತರು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರು: ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸದೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

**ಹೆಚ್.ಎಲ್. ಗುರುಪ್ರಸಾದ್**
ಪಿ.ಆರ್.693
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

**ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ, ಬೆಂಗಳೂರು**

**ಪ್ರಕಟಣೆ**

**ಸಂಖ್ಯೆ: ಡಿಬಿಸಿಎಂ/ಬೆಂಗ್ರಾ/ಕಾ.ತ/ಸಿಆರ್-1/2009-10, ದಿನಾಂಕ:21ನೇ ಜುಲೈ, 2009**

**ವಿಷಯ:** 2009-10ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಿಂದುಳಿದ ವರ್ಗಗಳ ಕಾನೂನು ಪದವೀಧರರನ್ನು ನ್ಯಾಯಾಂಗ ಆಡಳಿತ ಹಾಗೂ ವಕೀಲ ವೃತ್ತಿಯ ತರಬೇತಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:** 1) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 60 ಎಸ್.ಇ.ಡಬ್ಲ್ಯೂ89, ದಿನಾಂಕ:02.11.1990.
2) ಸರ್ಕಾರಿ ಆದೇಶ ಸಂಖ್ಯೆ: ಸಕಇ 116, ಬಿಎಂಎಸ್ 99, ದಿನಾಂಕ:07.10.1999.
3) ಸರ್ಕಾರಿ ಆದೇಶ ಸಂಖ್ಯೆ: ಸಕಇ 446. ಬಿಎಂಎಸ್ 2005, ಬೆಂಗಳೂರು, ದಿನಾಂಕ:01.12.2005.

2009-10ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ (ವರ್ಗ-1, 2ಎ, 3ಎ ಮತ್ತು 3ಬಿ) ಕಾನೂನು ಪದವೀಧರರಿಂದ ನ್ಯಾಯಾಂಗ ಆಡಳಿತದಲ್ಲಿ 4 ವರ್ಷಗಳ ಅವಧಿಗೆ ತರಬೇತಿಗೆ ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಈ ಕಛೇರಿಯಲ್ಲಿ ನಿಗದಿತ

ಅವಧಿಯೊಳಗೆ ಕಛೇರಿ ವೇಳೆಯಲ್ಲಿ ಪಡೆಯಬಹುದು. ಭರ್ತಿ ಮಾಡಲಾದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ:ಅಂಬೇಡ್ಕರ್ ಬೀದಿ, ಬೆಂಗಳೂರು, ಇಲ್ಲಿಗೆ ದಿನಾಂಕ:21.08.2009ರೊಳಗೆ ಕಛೇರಿ ವೇಳೆಯಲ್ಲಿ ಸಲ್ಲಿಸುವುದು.

ನಿಬಂಧನೆಗಳು:

1) ಅಭ್ಯರ್ಥಿಯು ಕಾನೂನು ಪದವೀಧರರಾಗಿದ್ದು, ಈ ತರಬೇತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯು ಕಾನೂನು ಪದವಿಯನ್ನು ಮುಗಿಸಿ 2 (ಎರಡು) ವರ್ಷಗಳು ಮೀರಿರಬಾರದು.

2) ಅಭ್ಯರ್ಥಿಗಳು ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ:30.03.2002ರ ಆದೇಶದ ಅನುಸಾರ ಹಿಂದುಳಿದ ವರ್ಗ-1, 2ಎ, 3ಎ ಮತ್ತು 3ಬಿ ವರ್ಗೀಕರಣಕ್ಕೆ ಒಳಪಟ್ಟಿರಬೇಕು. ಹಾಗೂ ಮೇಲ್ಕಂಡ ವರ್ಗಗಳಿಗೆ ನಿಗದಿಪಡಿಸಲಾದ ಜಾತಿ ಆದಾಯ ಪ್ರಮಾಣ ಪತ್ರಗಳೊಂದಿಗೆ ವಿವರಗಳನ್ನು ಭರ್ತಿ ಮಾಡಿ, ಭರ್ತಿ ಮಾಡಲಾದ ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

3) ಪ್ರವರ್ಗ-1 ನ್ನು ಹೊರತುಪಡಿಸಿ ಇತರೆ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ರೂ.15,000/-ಗಳ ವಾರ್ಷಿಕ ಆದಾಯ ಮಿತಿಯನ್ನು ನಿಗದಿಪಡಿಸಿದೆ.

4) ಅಭ್ಯರ್ಥಿಗಳು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿರಬೇಕು (ಪ್ರತಿ ಲಗತ್ತಿಸಬೇಕು)

5) ಭರ್ತಿ ಮಾಡಲಾದ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳ ವಯಸ್ಸು 30 ವರ್ಷಗಳನ್ನು ಮೀರಿರಬಾರದು. ಅಂದರೆ ವರ್ಗ-1ರ ಅಭ್ಯರ್ಥಿಗಳಿಗೆ 1 ವರ್ಷ ರಿಯಾಯಿತಿ ಇದ್ದು, ಅವರ ವಯಸ್ಸು 31 ವರ್ಷಗಳು ಮೀರಿರಬಾರದು.

6) ಆಯ್ಕೆಯಾದ ಅಭ್ಯರ್ಥಿಗಳಿಗೆ 4 ವರ್ಷಗಳ ತರಬೇತಿ ಅವಧಿ ಇದ್ದು, ಈ ಅವಧಿಯೊಳಗೆ ತರಬೇತಿಯನ್ನು ಬಿಡಲು ಅವಕಾಶವಿರುವುದಿಲ್ಲ. ಹಾಗೂ ಅಭ್ಯರ್ಥಿಯು ಸುಳ್ಳು ಮಾಹಿತಿ/ ದಾಖಲಾತಿಗಳನ್ನು ನೀಡಿದ್ದಲ್ಲಿ ಅಥವಾ ತರಬೇತಿ ಅವಧಿಯ ಮಧ್ಯದಲ್ಲಿ ತರಬೇತಿಯಿಂದ ಬಿಟ್ಟುಹೋದಲ್ಲಿ ಸರ್ಕಾರ ಅವರಿಗಾಗಿ ಖರ್ಚು ಮಾಡಿದ ಹಣವನ್ನು ವರ್ಷಕ್ಕೆ ಶೇ.10ರ ಬಡ್ಡಿಯೊಂದಿಗೆ ಭೂ ಕಂದಾಯದ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲಾಗುವುದು. ಆದರೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿ ಹೊಂದಿದ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲ.

7) ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ತಿಂಗಳಿಗೆ ರೂ.1000/-ಗಳ ತರಬೇತಿ ಭತ್ಯೆಯನ್ನು ದಿನಚರಿ ಆಧಾರದ ಮೇರೆಗೆ ನೀಡಲಾಗುವುದು.

8) ಆಯ್ಕೆಯಾದ ಅಭ್ಯರ್ಥಿಗಳಿಗೆ ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್/ ಸರ್ಕಾರಿ ವಕೀಲರು ಅಥವಾ 20 ವರ್ಷಗಳಿಗಿಂತ ಹೆಚ್ಚಿನ ವರ್ಷಗಳು ವಕೀಲ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ವಕೀಲರಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಕಾನೂನು ತರಬೇತಿ ಪಡೆಯುವ ಸಲುವಾಗಿ ತರಬೇತಿಗೆ ನಿಯೋಜಿಸಲಾಗುವುದು.

9) ಆಯ್ಕೆಯಾದ ಅಭ್ಯರ್ಥಿಯು ಈ ಇಲಾಖೆಯ ನಿಬಂಧನೆಗಳು ಹಾಗೂ ಕಾಲಕಾಲಕ್ಕೆ ಹೊಂದಿರುವ ಸರ್ಕಾರದ ಆದೇಶಗಳಿಗೆ ಬದ್ಧನಾಗಿರುತ್ತೇನೆಂದು ಮುಚ್ಚಳಿಕೆಯನ್ನು ಬರೆದುಕೊಡಬೇಕು.

10) ಹೆಚ್ಚಿನ ಮಾಹಿತಿಯನ್ನು ಅಭ್ಯರ್ಥಿಗಳು ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು ಇವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

11) ಅರ್ಹ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲು ಸಂದರ್ಶನದ ದಿನಾಂಕ ಹಾಗೂ ಸ್ಥಳವನ್ನು ತಿಳಿಸಲಾಗುವುದು ಹಾಗೂ ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

12) ಅಭ್ಯರ್ಥಿಗಳು ಭರ್ತಿ ಮಾಡಲಾದ ಅರ್ಜಿಯೊಂದಿಗೆ ಅವಶ್ಯಕ ಮಾಹಿತಿಗಳಾದ ಕಾನೂನು ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ದೃಢೀಕರಣ ಪ್ರತಿ ಹಾಗೂ ಜನ್ಮ ದಿನಾಂಕದ ಆಧಾರಕ್ಕಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಟಿ.ಸಿ. ದೃಢೀಕೃತ ಪ್ರತಿ, ವಾಸಸ್ಥಳದ ಬಗ್ಗೆ ಆಹಾರ ಪಡಿತರ ಚೀಟಿ ಅಥವಾ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ದೃಢೀಕರಣ ಪತ್ರ ಲಗತ್ತಿಸುವುದು.

13) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:21.08.2009.

ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ
ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ, ಬೆಂಗಳೂರು.

## ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ, ಬೆಂಗಳೂರು

### ಪ್ರಕಟಣೆ

**ಸಂಖ್ಯೆ: ಡಿಬಿಸಿಎಂ/ಬೆಂಗ್ರಾ/ಕಾ.ತ/ಸಿಆರ್-2/2009-10, ದಿನಾಂಕ:29ನೇ ಜುಲೈ, 2009**

ವಿಷಯ: 2009-10ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮತೀಯ ಅಲ್ಪಸಂಖ್ಯಾತರ ಕಾನೂನು ಪದವೀಧರರನ್ನು ನ್ಯಾಯಾಂಗ ಆಡಳಿತ ಹಾಗೂ ವಕೀಲ ವೃತ್ತಿಯ ತರಬೇತಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:** 1) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 68 ಎಸ್.ಇ.ಡಬ್ಲ್ಯೂ89, ದಿನಾಂಕ:02.11.1990.

2) ಸರ್ಕಾರಿ ಆದೇಶ ಸಂಖ್ಯೆ: ಸಕಇ 205, ಬಿಎಂಎಸ್ 99, ದಿನಾಂಕ:07.10.1999.

3) ಸರ್ಕಾರಿ ಆದೇಶ ಸಂಖ್ಯೆ: ಸಕಇ 446, ಬಿಎಂಎಸ್ 2005, ಬೆಂಗಳೂರು, ದಿನಾಂಕ:01.12.2005.

2009-10ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿರುವ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಭೌದ್ದರು, ಸಿಖ್ಖರು ಹಾಗೂ ಪಾರ್ಸಿ ಸಮುದಾಯಕ್ಕೆ ಸೇರಿದ ಕಾನೂನು ಪದವೀಧರರಿಂದ ನ್ಯಾಯಾಂಗ ಆಡಳಿತದಲ್ಲಿ 4 ವರ್ಷಗಳ ಅವಧಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಮತೀಯ ಅಲ್ಪಸಂಖ್ಯಾತರಿಗೆ ಸೇರಿದ ಈ ಕೆಳಕಂಡ ನಿಬಂದನೆಗಳನ್ನು ಪಾಲಿಸಬಲ್ಲ ಕಾನೂನು ಪದವೀಧರ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಈ ಕಛೇರಿಯಲ್ಲಿ ನಿಗದಿತ ಅವಧಿಯೊಳಗೆ ಕಛೇರಿ ವೇಳೆಯಲ್ಲಿ ಪಡೆದು ಭರ್ತಿ ಮಾಡಲಾದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು, ಕಾನೂನು ಪದವೀಧರರ ಆಯ್ಕೆ ಸಮಿತಿ ಹಾಗೂ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ:ಅಂಬೇಡ್ಕರ್ ಬೀದಿ, ಬೆಂಗಳೂರು, ಇಲ್ಲಿಗೆ ದಿನಾಂಕ:21.08.2009ರೊಳಗೆ ಕಛೇರಿ ವೇಳೆಯಲ್ಲಿ ಸಲ್ಲಿಸುವುದು.

**ನಿಬಂಧನೆಗಳು:**

1) ಅಭ್ಯರ್ಥಿಯು ಕಾನೂನು ಪದವೀಧರರಾಗಿದ್ದು, ಈ ತರಬೇತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯು ಕಾನೂನು ಪದವಿಯನ್ನು ಮುಗಿಸಿ 2 (ಎರಡು) ವರ್ಷಗಳು ಮೀರಿರಬಾರದು.

2) ಅಭ್ಯರ್ಥಿಗಳು ಮತೀಯ ಅಲ್ಪಸಂಖ್ಯಾತರ ಸಮುದಾಯವಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು, ಸಿಖ್ಖರು, ಪಾರ್ಸಿ ಹಾಗೂ ಬೌದ್ಧರು ಇವುಗಳಿಗೆ ಸೇರಿರಬೇಕು. ಹಾಗೂ ಸರ್ಕಾರದಿಂದ ನಿಗದಿಪಡಿಸಲಾದ ಜಾತಿ ಆದಾಯ ಪರಿಶೀಲನಾ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

3) ಅಭ್ಯರ್ಥಿಗಳು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿರಬೇಕು.

4) ಭರ್ತಿ ಮಾಡಲಾದ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳ ವಯಸ್ಸು 30 ವರ್ಷಗಳನ್ನು ಮೀರಿರಬಾರದು.

5) ಅಭ್ಯರ್ಥಿಯ ಕೌಟುಂಬಿಕ ವಾರ್ಷಿಕ ವರಮಾನ 15,000/-ಕ್ಕೆ ಮೀರಿರಬಾರದು. ಆಯ್ಕೆಯಾದ ಅಭ್ಯರ್ಥಿಗಳಿಗೆ 4 ವರ್ಷಗಳ ತರಬೇತಿ ಅವಧಿ ಇದ್ದು, ಈ ಮಧ್ಯದಲ್ಲಿ ತರಬೇತಿಯನ್ನು ಬಿಡಲು ಅವಕಾಶವಿರುವುದಿಲ್ಲ. ಆದರೆ ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರದಲ್ಲಿ ನೇಮಕಾತಿ ಹೊಂದಿರುವ ಅಭ್ಯರ್ಥಿಗಳಿಗೆ ಈ ಷರತ್ತು ಅನ್ವಯಿಸುವುದಿಲ್ಲ.

6) ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ತಿಂಗಳಿಗೆ ರೂ.1000/-ಗಳ ತರಬೇತಿ ಭತ್ಯೆಯನ್ನು ನೀಡಲಾಗುವುದು.

7) ಆಯ್ಕೆಯಾದ ಅಭ್ಯರ್ಥಿಗಳಿಗೆ ಜಿಲ್ಲಾ ಸಮಿತಿಯು ಪಬ್ಲಿಕ್ ಪ್ರಾಸಿಕ್ಯೂಟರ್/ ಸರ್ಕಾರಿ ವಕೀಲರು ಅಥವಾ 20 (ಇಪ್ಪತ್ತು) ವರ್ಷಗಳಿಗಿಂತ ಹೆಚ್ಚಿನ ವರ್ಷಗಳು ವಕೀಲ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ವಕೀಲರಲ್ಲಿ ಕಾನೂನು ತರಬೇತಿ ಪಡೆಯುವ ಸಲುವಾಗಿ ತರಬೇತಿಗೆ ಕಳುಹಿಸಿಕೊಡಲಾಗುವುದು.

8) ಆಯ್ಕೆಯಾದ ಅಭ್ಯರ್ಥಿಯು ಈ ಇಲಾಖೆಯ ನಿಬಂಧನೆಗಳು ಹಾಗೂ ಸರ್ಕಾರದ ಆದೇಶಗಳಿಗೆ ಬದ್ದನಾಗಿರುತ್ತೇನೆಂದು ಮುಚ್ಚಳಿಕೆಯನ್ನು ಬರೆದುಕೊಡಬೇಕು.

9) ಆಯ್ಕೆಯಾದ ಅಭ್ಯರ್ಥಿಯು ಸುಳ್ಳು ಮಾಹಿತಿ/ ದಾಖಲೆಗಳನ್ನು ನೀಡಿದ್ದಲ್ಲಿ ಅಥವಾ ತರಬೇತಿ ಅವಧಿಯ ಮಧ್ಯದಲ್ಲಿ ತರಬೇತಿಯಿಂದ ಬಿಟ್ಟುಹೋದಲ್ಲಿ ಸರ್ಕಾರ ಅವನಿಗಾಗಿ ಖರ್ಚು ಮಾಡಿದ ಹಣವನ್ನು ವರ್ಷಕ್ಕೆ ಶೇ.10ರ ಬಡ್ಡಿಯೊಂದಿಗೆ ಭೂ ಕಂದಾಯದ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲಾಗುವುದು.

(10) ಹೆಚ್ಚಿನ ಮಾಹಿತಿಯನ್ನು ಅಭ್ಯರ್ಥಿಗಳು ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು ಇವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

11) ಅರ್ಹ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲು ಸಂದರ್ಶನದ ದಿನಾಂಕ ಹಾಗೂ ಸ್ಥಳವನ್ನು ತಿಳಿಸಲಾಗುವುದು ಹಾಗೂ ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

12) ಅಭ್ಯರ್ಥಿಗಳು ಭರ್ತಿ ಮಾಡಲಾದ ಅರ್ಜಿಯೊಂದಿಗೆ ಅವಶ್ಯಕ ಮಾಹಿತಿಗಳಾದ ಕಾನೂನು ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ದೃಢೀಕರಣ ಪ್ರತಿ ಹಾಗೂ ಜನ್ಮ ದಿನಾಂಕದ ಆಧಾರಕ್ಕಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಟಿ.ಸಿ. ದೃಢೀಕೃತ ಪ್ರತಿ, ವಾಸಸ್ಥಳದ ಬಗ್ಗೆ ಆಹಾರ ಪಡಿತರ ಚೀಟಿ ಅಥವಾ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ದೃಢೀಕರಣ ಪತ್ರ ಲಗತ್ತಿಸುವುದು.

13) ಅಪೂರ್ಣ ಮಾಹಿತಿಗಳಿಂದ ಕೂಡಿದ ಅರ್ಜಿಗಳನ್ನು ಹಾಗೂ ನಿಗದಿತ ದಿನಾಂಕ, ವೇಳೆ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

14) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:21.08.2009.

ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು
ಪಿ.ಆರ್.711 ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ
ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ, ಬೆಂಗಳೂರು.

**ನೋಂದಣಿ ಪ್ರಾಧಿಕಾರಿ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು (ಉತ್ತರ), ಯಶವಂತಪುರ, ಬೆಂಗಳೂರು-22, ಇವರ ಕಛೇರಿ ನಡಾವಳಿ**

**ಉಪಸ್ಥಿತರು:** ಶ್ರೀ ಅಶ್ವಾಕ್ ಅಹಮದ್, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ನೋಂದಣಿ ಪ್ರಾಧಿಕಾರಿ, ಬೆಂಗಳೂರು (ಉತ್ತರ).

**ವಿಷಯ:** ವಾಹನ ಸಂಖ್ಯೆ: KA-01-G-946 (Jeep) ರ ನೋಂದಣಿ ರದ್ಧತಿ ಬಗ್ಗೆ.

**ಉಲ್ಲೇಖ:** 1) ಮಾಲೀಕರ ಅರ್ಜಿ ದಿನಾಂಕ:19.11.2008.

2) ಮೋಟಾರು ವಾಹನ ನಿರೀಕ್ಷಕರ ವರದಿ ದಿನಾಂಕ:20.09.2008.

**ಪ್ರಸ್ತಾವನೆ:**

ವಾಹನ ಸಂಖ್ಯೆ: ಕೆಎ-01-ಜಿ-946 ರ ಮಾಲೀಕರಾದ The Registrar of Co-Operative Societies in Karnataka, Bangalore Rural District, Malleshwaram Co-Operative Society Building, Bangalore, ರವರು ದಿನಾಂಕ:19.11.2008 ರಂದು ಈ ಕಛೇರಿಗೆ ಅರ್ಜಿ ಸಲ್ಲಿಸಿ ಸದರಿ ವಾಹನವು ಹಳೆಯದಾಗಿದ್ದು, ರಸ್ತೆಯಲ್ಲಿ ಸಂಚರಿಸಲು ಯೋಗ್ಯವಾಗಿಲ್ಲದ ಹಾಗೂ ದುರಸ್ತಿ ಮಾಡಿಸಲಾರದ ಸ್ಥಿತಿಯಲ್ಲಿರುವುದರಿಂದ ಅದರ ನೋಂದಣಿ ರದ್ದುಪಡಿಸಲು ಅನುಮತಿ ಕೋರಿರುತ್ತಾರೆ. ಈ ಕಛೇರಿಯ ಮೋಟಾರು ವಾಹನ ನಿರೀಕ್ಷಕರು ತಮ್ಮ ವರದಿ ದಿನಾಂಕ:20.09.2008 ರಲ್ಲಿ ವಾಹನದ ನೋಂದಣಿಯನ್ನು ರದ್ಧುಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ. ವಾಹನಕ್ಕೆ ದಿನಾಂಕ:31.01.2010 ವರೆಗೆ ತೆರಿಗೆ ವಿನಾಯಿತಿ ನೀಡಲಾಗಿದೆ. ಈ ಮೇಲ್ಕಂಡ ಕಾರಣಗಳಿಂದ ಮೋಟಾರು ವಾಹನ ಸಂಖ್ಯೆ: KA-01-G-946 ರ ನೋಂದಣಿಯನ್ನು ರದ್ಧುಮಾಡಲು ಈ ಕೆಳಗಿನಂತೆ ಆದೇಶಿಸಿರುತ್ತೇನೆ.

**ಆದೇಶ ಸಂಖ್ಯೆ: ಸ.ಪ್ರಾ.ಸಾ.ಅ./ಬೆಂ.(ಉ)/KA-01-G-946/09-10, ದಿನಾಂಕ:23ನೇ ಜೂನ್, 2009**

1988ರ ಕೇಂದ್ರ ಮೋಟಾರು ವಾಹನ ಕಾಯ್ದೆ ಅಧಿನಿಯಮ 55(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಅಶ್ವಾಕ್ ಅಹಮದ್, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ನೋಂದಣಿ ಪ್ರಾಧಿಕಾರಿ ಆದ ನಾನು ಮೇಲ್ಕಂಡ ಕಾರಣಗಳಿಂದಾಗಿ ಮೋಟಾರು ವಾಹನ ಸಂಖ್ಯೆ: KA-01-G-946 (Jeep) ರ ಮೇಲೆ ಏನಾದರೂ ತೆರಿಗೆ, ಆಡಿಟ್, ಇಲಾಖಾ ಪ್ರಕರಣಗಳು ಬಾಕಿ ಇರುವುದು ಕಂಡುಬಂದರೆ ಅದನ್ನು ವಾಹನದ ಮಾಲೀಕರೇ ಕಟ್ಟಬೇಕೆಂಬ ನಿಬಂಧನೆಯೊಂದಿಗೆ ನೋಂದಣಿಯನ್ನು ರದ್ದು ಮಾಡಿರುತ್ತೇನೆ.

**ವಾಹನದ ವಿವರಗಳು**

| | | |
|---|---|---|
| 1. | ಮೋಟಾರು ವಾಹನ ಸಂಖ್ಯೆ | KA-01-G-946 |
| 2. | ವಾಹನದ ನೋಂದಣಿ ದಿನಾಂಕ | 18.02.1993 |
| 3. | ವಾಹನದ ತಯಾರಕನ ಹೆಸರು | Bajaj Auto Ltd., |
| 4. | ವಾಹನ ತಯಾರಾದ ವರ್ಷ | 1992 |
| 5. | ವಾಹನದ ವರ್ಗ | LMV Jeep |
| 6. | ಆಸನ ಸಾಮರ್ಥ್ಯ | 5+1=6 in all |
| 7. | ಅಶ್ವಶಕ್ತಿ | 2399 CC |
| 8. | ಚಾಸೀಸ್ ಸಂಖ್ಯೆ | TX 907743 |

| | | |
|---|---|---|
| 9. | ಇಂಜಿನ್ ಸಂಖ್ಯೆ | 616969 070361 |
| 10. | ಮಾಲೀಕರ ಹೆಸರು ಮತ್ತು ವಿಳಾಸ | The Registrar of Co-Operative Societies in Karnataka, B'lore Rural District, Malleshwaram Co-Operative Society Building, Bangalore. |

**ಅಶ್ವಾಕ್ ಅಹಮದ್**
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ,
ಬೆಂಗಳೂರು (ಉತ್ತರ).

ಪಿ.ಆರ್.695

**ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ-4, ಬೆಂಗಳೂರು**

**ಸಂಖ್ಯೆ: ಪಿಜಿಎ/ಎಸ್.ಆರ್-238/2006-07,**

**ಅರ್ಜಿದಾರರು:**

1) ಶ್ರೀ ಟಿ.ಆರ್. ಚನ್ನೇಗೌಡ ಬಿನ್ ಲೇಟ್ ರಾಮನರಸಿಂಹಯ್ಯ
2) ಶ್ರೀ ಟಿ.ಆರ್. ಚಿಕ್ಕಣ್ಣ ಬಿನ್ ಲೇಟ್ ರಾಮನರಸಿಂಹಯ್ಯ
3) ಶ್ರೀ ಟಿ.ಆರ್. ನರಸಿಂಹಮೂರ್ತಿ ಬಿನ್ ಲೇಟ್ ರಾಮನರಸಿಂಹಯ್ಯ.
4) ಶ್ರೀ ಟಿ.ಆರ್. ಗೋಪಾಲಕೃಷ್ಣ ಬಿನ್ ಲೇಟ್ ರಾಮನರಸಿಂಹಯ್ಯ.

ನಂ.5, 1ನೇ ಮುಖ್ಯರಸ್ತೆ, 4ನೇ ಕ್ರಾಸ್, ನೇತ್ರಾವತಿ ಟೆಂಟ್ ರಸ್ತೆ, ಕನಕನಗರ, ಯಳಚೇನಹಳ್ಳಿ, ಜೆ.ಪಿ.ನಗರ ಅಂಚೆ, ಬೆಂಗಳೂರು-560 078.

**ವಿರುದ್ಧ**

**ಪ್ರತಿವಾದಿಗಳು:**

ದಿ ಚೀಫ್ ಟ್ರಾಫಿಕ್ ಮ್ಯಾನೇಜರ್, ಬಿ.ಎಂ.ಟಿ.ಸಿ. ಕೇಂದ್ರೀಯ ವಿಭಾಗ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-27.

**ಪ್ರಕಟಣೆ**

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:04.03.2009ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅವರ ತಂದೆ ಲೇಟ್ ಟಿ.ಸಿ. ರಾಮನರಸಿಂಹಯ್ಯ ಇವರು ಪ್ರತಿವಾದಿ ಸಂಸ್ಥೆಯಲ್ಲಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿ, ದಿನಾಂಕ:30.06.1996ರಂದು ಸೇವೆಯಿಂದ ನಿವೃತ್ತಿ ಹೊಂದಿ, ತದನಂತರ ದಿನಾಂಕ:17.12.2008ರಂದು ಮರಣ ಹೊಂದಿದ್ದಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ವ್ಯತ್ಯಾಸದ ಉಪಧನವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:20.07.2009

**ಎ.ಹೆಚ್. ಉಮೇಶ**
ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ನಿಯಂತ್ರಣಾಧಿಕಾರಿಗಳು,
ಉಪಧನ ಪಾವತಿ ಕಾಯ್ದೆ, ವಿಭಾಗ-4, ಬೆಂಗಳೂರು.

ಪಿ.ಆರ್.699

**ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ-4, ಬೆಂಗಳೂರು**

**ಸಂಖ್ಯೆ: ಪಿಜಿಎ/ಎಸ್.ಆರ್-06/2007-08,**

**ಅರ್ಜಿದಾರರು:**

ಶ್ರೀಮತಿ ಭದ್ರಮ್ಮ ಕೋಂ ಲೇಟ್ ಕೆ. ನರಸಿಂಹಯ್ಯ, ನಂ.11, 3ನೇ ಕ್ರಾಸ್, ಚೈತನ್ಯ ನಿಲಯ, ಪೈಪ್‌ಲೈನ್ ರಸ್ತೆ, ವಿಜಯನಗರ, ಬೆಂಗಳೂರು-23.

**ವಿರುದ್ಧ**

**ಪ್ರತಿವಾದಿಗಳು:**

ದಿ ಎಕ್ಸಿಕ್ಯೂಟೀವ್ ಇಂಜಿನಿಯರ್ ಕೆ.ಎಸ್.ಆರ್.ಟಿ.ಸಿ. ಸೆಂಟ್ರಲ್ ಇಂಜಿನಿಯರಿಂಗ್ ಡಿವಿಜನ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560 027.

**ಪ್ರಕಟಣೆ**

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:03.04.2007ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅವರ ಪತಿ ಲೇಟ್ ಕೆ. ನರಸಿಂಹಯ್ಯ ಇವರು ಪ್ರತಿವಾದಿ ಸಂಸ್ಥೆಯಲ್ಲಿ ತಮ್ಮ 31 ವರ್ಷಗಳ ಕಾಲ ಸೇವೆ ಸಲ್ಲಿಸಿ, ಸೇವೆಯಲ್ಲಿದ್ದಾಗಲೇ ದಿನಾಂಕ:30.06.2000ರಂದು ಸೇವೆಯಿಂದ ನಿವೃತ್ತಿ ಹೊಂದಿ, ತದನಂತರ ದಿನಾಂಕ:11.02.2007 ರಂದು ಮರಣ ಹೊಂದಿದ್ದಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ವ್ಯತ್ಯಾಸದ ಉಪಧನವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:20.07.2009 **ಎ.ಹೆಚ್. ಉಮೇಶ**

ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ನಿಯಂತ್ರಣಾಧಿಕಾರಿಗಳು,

ಪಿ.ಆರ್.700 ಉಪಧನ ಪಾವತಿ ಕಾಯ್ದೆ, ವಿಭಾಗ-4, ಬೆಂಗಳೂರು.

**ಸಹಾಯಕ ಕಾರ್ಯಪಾಲಕ ಇಂಜನಿಯರ್, ನಂ.7 ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪವಿಭಾಗ, ಸೊರಬ**

**ನಮೂನೆ**

**ಸಚಿವಾಲಯ** : ಕರ್ನಾಟಕ ಸರ್ಕಾರ

**ಇಲಾಖೆ** : ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ

**ಸಬ್‌ಯೂನಿಟ್** : ಸಹಾಯಕ ಕಾರ್ಯಪಾಲಕ ಇಂಜನೀಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ.7 ಉಪವಿಭಾಗ, ಸೊರಬ, ಶಿವಮೊಗ್ಗ ಜಿಲ್ಲೆ.

**ಸಾರ್ವಜನಿಕ ಪ್ರಾಧಿಕಾರಿ** : ಮುಖ್ಯ ಇಂಜನಿಯರ್, ಸಂಪರ್ಕ ಮತ್ತು ಕಟ್ಟಡ (ದ), ಲೋ.ಬಂ. ಮತ್ತು ಒ.ಜ.ಸಾ. ಇಲಾಖೆ, ಕೆ.ಆರ್. ವೃತ್ತ, ಬೆಂಗಳೂರು-560001.

| ಮೇಲ್ಮನವಿ ಪ್ರಾಧಿಕಾರಿ (ಹೆಸರು/ವಿಳಾಸ/ಫೋನ್ ಇತ್ಯಾದಿ) | ಸಾರ್ವಜನಿಕ ಮಾಹಿತಿ ಅಧಿಕಾರಿ (ಹೆಸರು/ವಿಳಾಸ/ಫೋನ್ ಇತ್ಯಾದಿ) | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಹೆಸರು/ವಿಳಾಸ/ಫೋನ್ ಇತ್ಯಾದಿ) |
|---|---|---|
| ಶ್ರೀ ಜಿ.ಆರ್. ಚಂದ್ರಶೇಖರಪ್ಪ, ಕಾರ್ಯಪಾಲಕ ಇಂಜನಿಯರ್, ಲೋ.ಬಂ. & ಒ.ಜ.ಸಾ.ಇಲಾಖೆ, ಶಿವಮೊಗ್ಗ ವಿಭಾಗ, ಶಿವಮೊಗ್ಗ-577201. | ಶ್ರೀ ಎಸ್.ಡಿ. ವಿಶ್ವನಾಥ, ಸಹಾಯಕ ಕಾರ್ಯಪಾಲಕ ಇಂಜನಿಯರ್, ಲೋ.ಬಂ.& ಒ.ಜ.ಸಾ. ಇಲಾಖೆ, ನಂ.7, ಉಪವಿಭಾಗ, ಸೊರಬ-577429. | ಶ್ರೀ ಅನಿಲ್ ಕುಮಾರ್, ಸಹಾಯಕ ಇಂಜನಿಯರ್, ಲೋ.ಬಂ.& ಒ.ಜ.ಸಾ. ಇಲಾಖೆ, ನಂ.7 ಉಪವಿಭಾಗ, ಸೊರಬ-577429. |
| ಫ್ಯಾಕ್ಸ್: 08182-274942 | ಫ್ಯಾಕ್ಸ್: | ಫ್ಯಾಕ್ಸ್: |
| ಕಛೇರಿ ಫೋನ್: 08182-274942 | ಕಛೇರಿ ಫೋನ್: 08184 272319 | ಕಛೇರಿ ಫೋನ್: 08184 272319 |
| ಇ-ಮೇಲ್: eesmg@kpwd.gov.in | ಇ-ಮೇಲ್: aeesrb@kpwd.gov.in | ಇ-ಮೇಲ್: aeesrb@kpwd.gov.in |

ಸಹಾಯಕ ಕಾರ್ಯಪಾಲಕ ಇಂಜನಿಯರ್,

ನಂ.7 ಲೋ.ಬಂ. ಮತ್ತು ಒ.ಜ.ಸಾ.ಇಲಾಖೆ, ಉಪವಿಭಾಗ, ಸೊರಬ.

**ASSISTANT EXECUTIVE ENGINEER, NO.7 PW P & IWTD, SUB-DIVISION, SORABA-577429**

**FORMAT**

Secretariat : Govt of Karnataka

Department : Public Works Department

Sub Unit : A.E.E. PW. Port & IWT Department. No.7, Sub-Division, Soraba, Shimoga District.

Public Authority: The Chief Engineer, C & B (South), PW P & IWTD, KR Circle, Bangalore-01

III -F3 -(O)

| Applellate Authority (Name/Address/Phone etc.,) | Public Information Officer (Name/Address/Phone etc.,) | Assistant Public Information Officer (Name/Address/Phone etc.,) |
|---|---|---|
| Sri G.R. Chandrashekarappa, Executive Engineer, PW P & IWTD, Shimoga Division, Shimoga-577201PW P & IWTD. | Sri S.D. Vishwanatha, Assistant Executive Engineer, No.7 PW P & IWTD, Sub-Division, Soraba-577429. | Sri Anil Kumar, Assistant Engineer, No.7 PW P & IWTD, Sub-Division, Soraba-577429. |
| Fax: 08182-274942 | Fax: 08184 272319 | Fax: 08184 272319 |
| E-Mail: eesmg@kpwd.gov.in | E-Mail: aeesrb@kpwd.gov.in | E-Mail: aeesrb@kpwd.gov.in |

Assistant Executive Engineer, No.7 PW P & IWTD,
Sub-Division, Soraba-577429.

PR-701

**COMMERCIAL TAXES DEPARTMENT**

**Office of the Asst. Commissioner of Commercial Taxes Local Vat Office-380, Belgaum**

**NOTIFICATION**

**No.LVO-380/BGM/CST/2008-09/B- Dated:17th July, 2009**

**ASSISTANT COMMISSIONER OF COMMERCIAL TAXES, LOCAL VAT OFFICE-130, BANGALORE, Dated:17th July, 2009**

**(Notified Authority Under the Rule 6(i) of the CST (Karnataka) Rules, 1957)**

By virtue of the provisions of Rule 12(2) of the CST (Registration & Turnover) Rules 1957 and Rule 6(e) and 6(i) of the CST (Karnataka) Rules 1957, it is hereby notified for general information that the declaration in Form-C described below declared to be obsolete and invalid.

| Series & Serial Number of Declaration Forms lost/destroyed or Stolen | Name & Address of the dealer to whom declaration forms are issued by the department with date of issue | Registration Certificate No.of the dealer under CST Act, 1956 | The Address of the dealer to whom the declaration was/were sent | Date of issue of Forms by the dealer | Whether 1o0000000 0..0st destroyed or stolen | Remarks |
|---|---|---|---|---|---|---|
| 4887381 | M/s Hinustan Engineers, 341/2, Udyambag.Belgaum.on 14.05.2007. | TIN: 29300115277 | Shanbag Agencies. Belgaum (cst-5105271 | 10.05.2007 | Lost in transit | -- |

Assistant Commissioner of Commercial Taxes,
LVO-380, Belgaum.

PR-702

**COMMERCIAL TAXES DEPARTMENT**

**Office of the Asst. Commissioner of Commercial Taxes Local Vat Office-380, Belgaum**

**NOTIFICATION**

**No.LVO-380/BGM/CST/2008-09/B- Dated:17th July, 2009**

**ASSISTANT COMMISSIONER OF COMMERCIAL TAXES, LOCAL VAT OFFICE-130, BANGALORE, Dated:17th July, 2009**

**(Notified Authority Under the Rule 6(i) of the CST (Karnataka) Rules, 1957)**

By virtue of the provisions of Rule 12(2) of the CST (Registration & Turnover) Rules 1957 and Rule 6(e) and 6(i) of the CST (Karnataka) Rules 1957, it is hereby notified for general information that the declaration in Form-C described below declared to be obsolete and invalid.

| Series & Serial Number of Declaration Forms lost/destroyed or Stolen | Name & Address of the dealer to whom declaration forms are issued by the department with date of issue | Registration Certificate No.of the dealer under CST Act, 1956 | The Address of the dealer to whom the declaration was/were sent | Date of issue of Forms by the dealer | Whether 1o00000000..0 st destroyed or stolen | Remarks |
|---|---|---|---|---|---|---|
| 0993648 | Of Kailastej Engineers.D-78, Angoal Industrial Estate Belgaum Issued on 07.03.2006 | TIN: 29680008027 | Menon Metallics, (p) Ltd., Kolhapur. | 27.05.2006 | Lost in transit | -- |
| 0993651 | -do- | -do- | -do- | 27.05.2006 | Lost in transit | -- |

Assistant Commissioner of Commercial Taxes,
LVO-380, Belgaum.

PR-703

## COMMERCIAL TAXES DEPARTMENT

**Office of the Asst. Commissioner of Commercial Taxes Local Vat Office-380, Belgaum**

**NOTIFICATION**

**No.LVO-380/BGM/CST/2008-09/B- Dated:17th July, 2009**

**ASSISTANT COMMISSIONER OF COMMERCIAL TAXES, LOCAL VAT OFFICE-130, BANGALORE, Dated:17th July, 2009**

**(Notified Authority Under the Rule 6(i) of the CST (Karnataka) Rules, 1957)**

By virtue of the provisions of Rule 12(2) of the CST (Registration & Turnover) Rules 1957 and Rule 6(e) and 6(i) of the CST (Karnataka) Rules 1957, it is hereby notified for general information that the declaration in Form-C described below declared to be obsolete and invalid.

| Series & Serial Number of Declaration Forms lost/destroyed or Stolen | Name & Address of the dealer to whom declaration forms are issued by the department with date of issue | Registration Certificate No.of the dealer under CST Act, 1956 | The Address of the dealer to whom the declaration was/were sent | Date of issue of Forms by the dealer | Whether lost/ destroyed or stolen | Remarks |
|---|---|---|---|---|---|---|
| 0800517 | Shri Ganesh S/o Prabhakar Ajagaonkar. For A.R.P. Ajagaonka. Enterprisas, 702 Raviwar peth, Belgaum, Date of issue 17.12.2005 | TIN: 29550394936 | Ganesh Traders. Mapsa. Goa | 29.12.2005 | Lost in transit | -- |
| 0800521 | -do- | -do- | Ganesh Traders. Mapsa. Goa | 29.12.2005 | Lost in transit | -- |

Assistant Commissioner of Commercial Taxes,
LVO-380, Belgaum.

PR-704

## ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಬೆಂಗಳೂರು ಇವರ ನಡವಳಿಗಳು

ವಿಷಯ: ಶ್ರೀ ಕೆ.ಎಂ. ಶಿವಪ್ರಕಾಶ, ಕೃಷಿ ಸಹಾಯಕರು, ಇವರ ಅನಧಿಕೃತ ಗೈರು ಹಾಜರಿ ಬಗ್ಗೆ ಶಿಸ್ತು ಕ್ರಮ.

ಓದಲಾಗಿದೆ: 1) ಜಂಟಿ ಕೃಷಿ ನಿರ್ದೇಶಕರು, ಶಿವಮೊಗ್ಗ ರವರ ಪತ್ರಸಂಖ್ಯೆ: ಸಿಬ್ಬಂದಿ-1/ಆಸ/ವಿವ/42/2004-05, ದಿನಾಂಕ:19.01.2005.

2) ಇಲಾಖಾ ಪತ್ರ ಸಂಖ್ಯೆ:ಇಎಸ್‌ಟಿ-1/ಐಎನ್‌ಕ್ಯೂ-1/21/2004-05 ದಿನಾಂಕ:17/29.06.2006.

3) ಶ್ರೀ ಕೆ.ಎಂ. ಶಿವಪ್ರಕಾಶ, ಕೃಷಿ ಸಹಾಯಕರು ಇವರ ಸ್ವೀಕೃತಿ ದಿನಾಂಕ:03.07.2006 ಮತ್ತು ಲಿಖಿತ ಹೇಳಿಕೆ ಪತ್ರ ದಿನಾಂಕ:18.07.2006.

4) ಕಛೇರಿ ಆದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-1/21/2004-05, ದಿನಾಂಕ:22.01.2007.

5) ವಿಚಾರಣಾಧಿಕಾರಿಗಳು ದಿನಾಂಕ:16.06.2007 ರಂದು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

6) ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-1/21/2004-05 ದಿನಾಂಕ:20.08.2007, 2ನೇ ಕಾರಣ ಕೇಳುವ ಸೂಚನಾ ಪತ್ರ.

7) ಶ್ರೀ ಕೆ.ಎಂ. ಶಿವಪ್ರಕಾಶ, ಕೃಷಿ ಸಹಾಯಕರು ಇವರ ಲಿಖಿತ ಹೇಳಿಕೆ ದಿನಾಂಕ:27.08.2007.

8) ಸರ್ಕಾರದ ಆದೇಶ ಸಂಖ್ಯೆ: ಕೃತೋಇ/44/ಕೃಪವಿ/2006, ದಿನಾಂಕ:29.06.2007.

9) ಸರ್ಕಾರದ ಪತ್ರ ಸಂಖ್ಯೆ: ಕೃತೋಇ/20/ಕೃವಸೆ/2008, ದಿನಾಂಕ:13.08.2008.

10) ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್/57/ಎಸ್‌ಆರ್‌ಆರ್75/ ದಿನಾಂಕ:05.06.1977.

**ಪ್ರಸ್ತಾವನೆ:**

ಶ್ರೀ ಕೆ.ಎಂ. ಶಿವಪ್ರಕಾಶ, ಕೃಷಿ ಸಹಾಯಕರು, ಹಾಲಿ ರೈತ ಸಂಪರ್ಕ ಕೇಂದ್ರ, ಕಸಬಾ-2 ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಶಿವಮೊಗ್ಗ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ದಿನಾಂಕ:01.09.1993 ರಂದು ರಾಜೀನಾಮೆ ನೀಡಿದ್ದರಿಂದ ಸದರಿ ನೌಕರರ ರಾಜೀನಾಮೆ ಅಂಗೀಕರಿಸುವ ವಿಚಾರವನ್ನು ಬಾಕಿ ಇಟ್ಟು ಸಹಾಯಕ ಕೃಷಿ ನಿರ್ದೇಶಕರು, ಶಿವಮೊಗ್ಗ ಇವರು ದಿನಾಂಕ:31.08.1993ರ (ಅಪರಾಹ್ನ) ದಂದು ಕರ್ತವ್ಯದಿಂದ ಬಿಡುಗಡೆ ಮಾಡಿ ತದನಂತರ ಸಹಾಯಕ ಕೃಷಿ ನಿರ್ದೇಶಕರು, ಶಿವಮೊಗ್ಗ ಇವರು ದಿನಾಂಕ:24.09.1993ರಲ್ಲಿ ಸದರಿ ನೌಕರರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಹೊರಡಿಸಿರುವ ಆದೇಶವನ್ನು ಹಿಂತೆಗೆದುಕೊಂಡು ರಾಜೀನಾಮೆಯು ಕೃಷಿ ನಿರ್ದೇಶಕರಿಂದ ಅಂಗೀಕೃತಗೊಳ್ಳುವವರೆಗೆ ಸದರಿ ಹುದ್ದೆಯಲ್ಲಿ ಮುಂದುವರೆಯಲು ಸೂಚಿಸಿ ಆದೇಶಿಸಿರುತ್ತಾರೆ. ಆದರೆ ನಂತರವೂ ನೌಕರರು ಕಛೇರಿ ಕೆಲಸಕ್ಕೆ ಹಾಜರಾಗಿರುವುದಿಲ್ಲ, ಹಾಗೂ ಸದರಿ ನೌಕರರನ್ನು ಬಿಡುಗಡೆಗೊಳಿಸಿರುವ ಆದೇಶವನ್ನು ಹಿಂತೆಗೆದುಕೊಂಡಿದ್ದರೂ ಸಹ ಯಾವುದೇ ರಜಾ ಅರ್ಜಿಯನ್ನು ಸಲ್ಲಿಸದೆ ದಿನಾಂಕ:01.09.1993 ರಿಂದ 22.02.2004ರ ವರೆಗೂ (ಸುಮಾರು 10 ವರ್ಷಕ್ಕೂ ಮೇಲ್ಪಟ್ಟು) ಅನಧೀಕೃತ ಗೈರು ಹಾಜರಾಗಿ ಕರ್ತವ್ಯ ಚ್ಯುತಿ ಎಸಗಿದ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಅನುಬಂಧ 1 ರಿಂದ 4 ರವರೆಗಿನ ದೋಷಾರೋಪಣಾ ಪಟ್ಟಿ ಕರಡು ತಯಾರಿಸಿ ಮೂಲ ದಾಖಲಾತಿಯೊಂದಿಗೆ ಜಂಟಿ ಕೃಷಿ ನಿರ್ದೇಶಕರು, ಶಿವಮೊಗ್ಗ ರವರು ಓದಲಾದ ಕ್ರಮಸಂಖ್ಯೆ (1)ರಲ್ಲಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಓದಲಾದ ಕ್ರಮಸಂಖ್ಯೆ (2) ರಲ್ಲಿ ಸದರಿ ನೌಕರರ ಕರ್ತವ್ಯ ನಿರ್ಲಕ್ಷ್ಯತೆ ಬಗ್ಗೆ ಇವರ ವಿರುದ್ಧ ಕೆ.ಸಿ.ಎಸ್. (ಸಿಸಿಎ) 1957ರ ನಿಯಮ 11ರ ಅನ್ವಯ ಇಲಾಖಾ ವಿಚಾರಣೆ ನಡೆಸಲು ನಿರ್ಧರಿಸಿ ದೋಷಾರೋಪಣಾ ಪಟ್ಟಿ ಅನುಬಂಧ 1 ರಿಂದ 4ನ್ನು ಪರಿಷ್ಕರಿಸಿ ಸಿದ್ಧಪಡಿಸಿ ಜಾರಿ ಮಾಡಲಾಯಿತು.

ಸದರಿ ನೌಕರರು ದೋಷಾರೋಪಣಾ ಪಟ್ಟಿಯನ್ನು ದಿನಾಂಕ:03.07.2006 ರಂದು ಸ್ವೀಕರಿಸಿ ಓದಲಾದ ಕ್ರಮಸಂಖ್ಯೆ: (3)ರಲ್ಲಿ ಸ್ವೀಕೃತಿ ಹಾಗೂ ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ. ಈ ಹೇಳಿಕೆಯನ್ನು ಪರಿಶೀಲಿಸಲಾಗಿ ಇವರ ವಿರುದ್ಧ ಮಾಡಲಾದ ಆರೋಪಗಳನ್ನು ನಿರಾಕರಿಸಿರುತ್ತಾರೆ. ಈ ಪ್ರಕರಣದಲ್ಲಿನ ಸತ್ಯಾಸತ್ಯತೆಯನ್ನು ತಿಳಿಯಲು ವಿಚಾರಣೆ ನಡೆಸಲು ನಿರ್ಧರಿಸಿ ಓದಲಾದ ಕ್ರಮಸಂಖ್ಯೆ (4)ರಲ್ಲಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ ವಿಚಾರಣಾಧಿಕಾರಿಗಳು ನಿಯಮಾನುಸಾರ ವಿಚಾರಣೆ ಕೈಗೊಂಡು ಓದಲಾದ ಕ್ರಮಸಂಖ್ಯೆ (5)ರಲ್ಲಿ ವಿಚಾರಣಾ ವರದಿಯನ್ನು ಇಲಾಖೆಗೆ ಸಲ್ಲಿಸಿರುತ್ತಾರೆ.

ವಿಚಾರಣಾ ವರದಿಯಲ್ಲಿ ಸದರಿ ನೌಕರರು ಸರ್ಕಾರಿ ಸೇವೆಯಿಂದ ಗೈರು ಹಾಜರಾಗಿರುವ ಬಗ್ಗೆ ಯಾವುದೇ ಸಂಶಯವಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಓದಲಾದ ಕ್ರಮಸಂಖ್ಯೆ (6) ರಲ್ಲಿ ವಿಚಾರಣಾ ವರದಿಯೊಂದಿಗೆ 2ನೇ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಲಾಯಿತು. ಇದನ್ನು ಸ್ವೀಕರಿಸಿ ನೌಕರರು ಓದಲಾದ ಕ್ರಮಸಂಖ್ಯೆ: (7) ರಲ್ಲಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಈ ಹೇಳಿಕೆಯಲ್ಲಿ ಪರಿಗಣಿಸಬಹುದಾದ ಅಂಶಗಳು ಕಂಡುಬರುವುದಿಲ್ಲ.

ಈ ಪ್ರಕರಣದಲ್ಲಿ ಶ್ರೀ ಕೆ.ಜಿ. ಗುರುಬಸಪ್ಪ, ಸಹಾಯಕ ಕೃಷಿ ನಿರ್ದೇಶಕರು, ಶಿವಮೊಗ್ಗ ಇವರ ವಿರುದ್ಧ ಕರ್ತವ್ಯ ಚ್ಯುತಿ ಬಗ್ಗೆ ದೋಷಾರೋಪಣಾ ಪಟ್ಟಿ ಜಾರಿ ಮಾಡಲಾಯಿತು. ಸದರಿಯವರು ದಿನಾಂಕ:22.12.2006 ರಂದು ಮರಣ

ಹೊಂದಿರುವುದರಿಂದ ಓದಲಾದ ಕ್ರಮಸಂಖ್ಯೆ (8) ರಲ್ಲಿ ಇವರ ವಿರುದ್ಧ ಸರ್ಕಾರದ ಮಟ್ಟದಿಂದ ವಿಚಾರಣೆಯನ್ನು ಕೈಬಿಟ್ಟು ಆದೇಶಿಸಿದೆ.

ಓದಲಾದ ಕ್ರಮಸಂಖ್ಯೆ (9)ರ ಪತ್ರದಲ್ಲಿ ಪ್ರಕರಣವನ್ನು ಇತ್ಯರ್ಥಗೊಳಿಸಲು ಸರ್ಕಾರದಿಂದ ಇಲಾಖೆಗೆ ನಿರ್ದೇಶಿತವಾಗಿದೆ. ಅದರಂತೆ ವಿಚಾರಣಾ ವರದಿಯಲ್ಲಿ ಇವರ ಗೈರು ಹಾಜರಿ ಆರೋಪ ಸಾಭೀತಾಗಿರುವುದರಿಂದ ಹಾಗೂ ಓದಲಾದ ಕ್ರಮಸಂಖ್ಯೆ (10) ರಲ್ಲಿನ ಪರಿವೀಕ್ಷಣಾ ನಿಯಮ 1977 ಅಧಿಸೂಚನೆಯನ್ವಯ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಕಚೇರಿ ಆದೇಶ ಸಂಖ್ಯೆ: ಇಎಸ್‌ಟಿ-1/ಐಎನ್‌ಕ್ಯೂ-1/21/2004-05, ದಿನಾಂಕ:21ನೇ ಜುಲೈ, 2009**

ಈ ಕೆಳಗೆ ಸಹಿ ಮಾಡಿರುವ ಡಾ: ಬಾಬುರಾವ್ ಮುಡಬಿ, ಭಾ.ಆ.ಸೇ. ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಬೆಂಗಳೂರು ಆದ ನಾನು ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಶ್ರೀ ಕೆ.ಎಂ. ಶಿವಪ್ರಕಾಶ, ಕೃಷಿ ಸಹಾಯಕರು, ರೈತ ಸಂಪರ್ಕ ಕೇಂದ್ರ, ಕಸಬಾ-2, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಶಿವಮೊಗ್ಗ ಇವರ ವಿರುದ್ಧದ (ಸುಮಾರು 10 ವರ್ಷಕ್ಕೂ ಮೇಲ್ಪಟ್ಟು ಅನಧಿಕೃತ ಗೈರು ಹಾಜರಿ) ಆರೋಪವು ವಿಚಾರಣಾ ವರದಿಯಲ್ಲಿ ಸಾಭೀತಾಗಿರುವುದರಿಂದ "ದೋಷಿ" ಎಂದು ಹಾಗೂ ಇಲ್ಲಿಯವರೆಗೂ "ಪರಿವೀಕ್ಷಣಾ ಅವಧಿ" ಘೋಷಣೆಯಾಗದಿರುವುದರಿಂದ ಇವರನ್ನು ಪರಿವೀಕ್ಷಣಾ ನಿಯಮ 1977ರ ಅಧಿಸೂಚನೆಯಂತೆ ಮತ್ತು ಕರ್ನಾಟಕ ನಾಗರೀಕರ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(vii) ರಡಿಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಸೇವೆಯಿಂದ ತೆಗೆದುಹಾಕಲು ಆದೇಶಿಸಿರುತ್ತೇನೆ.

**ಡಾ: ಬಾಬುರಾವ್ ಮುಡಬಿ**

ಪಿ.ಆರ್.706 ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿ.

## ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

## ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಛೇರಿ, ಲೋ.ಬಂ & ಒ.ಜ.ಸಾ.ಇ. ನಂ. 7, ಉಪವಿಭಾಗ, ಸೊರಬ

### ಸುತ್ತೋಲೆ

ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 5(1)ರ ಅಡಿಯಲ್ಲಿ ಇಲಾಖಾ ಮುಖ್ಯಸ್ಥರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ ಕಛೇರಿಗಳಲ್ಲಿನ ಕಾರ್ಯವಿಧಾನದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:ಸಿ.ಬಿ.ಎಸ್./ ಮಾಹಿತಿ ಹಕ್ಕು ಕೈಪಿಡಿ/2005/ಇ.ಎಸ್.ಎಲ್/05-06/ದಿನಾಂಕ:19.09.2005ರ ಪ್ರಕಾರ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಾದ ಶ್ರೀ ಎಸ್.ಡಿ. ವಿಶ್ವನಾಥ, ನಂ.7 ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ ವಿಭಾಗ ಸೊರಬ. ಇವರು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ (ಎಸ್.ಪಿ.ಐ.ಓ) ನೇಮಕಗೊಂಡಿದ್ದು, ಮಾಹಿತಿ ನೀಡುವ ಪ್ರಕ್ರಿಯೆಯು ಸುಲಲಿತವಾಗಿ ನಡೆಯಲು ಅನುಕೂಲವಾಗುವಂತೆ ಶ್ರೀ ಅನಿಲ್ ಕುಮಾರ್, ಸಹಾಯಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ.7ನೇ ಉಪ ವಿಭಾಗ ಸೊರಬ. ಇವರನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಎ.ಪಿ.ಐ.ಒ) ಯಾಗಿ ನೇಮಕಗೊಳಿಸಲಾಗಿದೆ.

ಈ ಕಛೇರಿಯ ಮಾಹಿತಿಗಳನ್ನು ಸಾರ್ವಜನಿಕರಿಗೆ ನೀಡುವ ಸಲುವಾಗಿ ಮಾಹಿತಿ ಹಕ್ಕು ಕೈಪಿಡಿ-2005 ನ್ನು ಈ ಮೂಲಕ ಪರಿಷ್ಕರಿಸಿ ಹೊರಡಿಸಲಾಗಿದೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಸೊರಬ.

### ಕರ್ತವ್ಯದ ಹಾಜರಾತಿ

ದಿನಾಂಕ:01.04.2009

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ-2005 ಸೆಕ್ಷನ್ 5(1) ರ ಪ್ರಕಾರ ಶ್ರೀ ಎಸ್.ಡಿ. ವಿಶ್ವನಾಥ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆದ ನಾನು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿ (ಎಸ್.ಪಿ.ಐ.ಓ) ಯಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ:01.04.2009 ರಿಂದ ಹೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇನೆ.

**ಎಸ್.ಡಿ. ವಿಶ್ವನಾಥ**
ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

**ಕರ್ತವ್ಯದ ಹಾಜರಾತಿ**

ದಿನಾಂಕ:01.04.2009

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ-2005 ಸೆಕ್ಷನ್ 5(2) ರ ಪ್ರಕಾರ ಶ್ರೀ ಅನೀಲ್ ಕುಮಾರ್ ಸಹಾಯಕ ಇಂಜಿನಿಯರ್ ಆದ ನಾನು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿ (ಎ.ಪಿ.ಐ.ಓ) ಯಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ: 01.04.2009 ರಂದು ಹೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇನೆ.

**ಅನೀಲ್ ಕುಮಾರ್**
ಸಹಾಯಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

ಮೇಲಿನ ಅಧಿಕಾರಿಗಳು ಮಾಹಿತಿಯನ್ನು 30 ದಿನಗಳೊಳಗಾಗಿ ನೀಡದಿದ್ದ ಪಕ್ಷದಲ್ಲಿ ಅಥವಾ ಸಹಕರಿಸದಿದ್ದಲ್ಲಿ ದೂರನ್ನು ಮತ್ತು ಮೇಲ್ಮನವಿಯನ್ನು ಈ ಕೆಳಕಂಡ ಅಧಿಕಾರಿಗಳಿಗೆ ನೀಡಬಹುದು.
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಶಿವಮೊಗ್ಗ ವಿಭಾಗ, ಶಿವಮೊಗ್ಗ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

**ಸುವರ್ಣ ಕರ್ನಾಟಕ – 2008**
**ಕರ್ನಾಟಕ ಸರ್ಕಾರ**
**(ಲೋಕೋಪಯೋಗಿ ಇಲಾಖೆ)**
**ಮಾಹಿತಿ ಹಕ್ಕು ಕೈಪಿಡಿ – 2005**
**ಸೆಕ್ಷನ್ 4 (1) (ಬಿ) ಅನ್ವಯ**

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಛೇರಿ –
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ.7, ಉಪ ವಿಭಾಗ
ಸೊರಬ. ಶಿವಮೊಗ್ಗ ಜಿಲ್ಲೆ

**ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ ಸೊರಬ. ಶಿವಮೊಗ್ಗ ಜಿಲ್ಲೆ.**

**ಪ್ರಕಟಣೆ**

| | |
|---|---|
| 1. | ಮಾಹಿತಿ ಪಡೆಯಲು ಹಕ್ಕು ಅಧಿನಿಯಮ, ನಿಯಮಗಳು 2005 ದಿನಾಂಕ:11.10.2005 ಮತ್ತು ಪರಿಷ್ಕರಣೆ ದಿನಾಂಕ:31.05.2009 ರಲ್ಲಿ ಇದ್ದಂತೆ. |
| 2. | ಮಾಹಿತಿ ಕೋರಿಕೆ ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಬೇಕು. ಅರ್ಜಿ ನಮೂನೆಯನ್ನು ಉಚಿತವಾಗಿ ಈ ಕಛೇರಿಯ ಸಾರ್ವಜನಿಕ ಮಾಹಿತಿ ಹಕ್ಕು ವಿಭಾಗದಿಂದ ಪಡೆಯಬಹುದು. |
| 3. | ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಈ ಕಛೇರಿಯ ಸಾರ್ವಜನಿಕ ಟಪಾಲು ಸ್ವೀಕೃತಿ ವಿಭಾಗದಲ್ಲಿ ಸಲ್ಲಿಸಬೇಕು ಮತ್ತು ಸ್ವೀಕೃತಿಯನ್ನು ತಪ್ಪದೇ ಪಡೆಯಬೇಕು ಮತ್ತು ರೂ. 10.00 ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು. |
| 4. | ಅರ್ಜಿಯಲ್ಲಿ ಕೋರಿದ ಮಾಹಿತಿಯನ್ನು ಒದಗಿಸಲು ಅವಕಾಶವಿದ್ದಲ್ಲಿ ಸಂದಾಯ ಮಾಡಬೇಕಾದ ಶುಲ್ಕದ ಮಾಹಿತಿಯನ್ನು ನಿಮಗೆ 7 ದಿನಗಳ ಒಳಗೆ ತಿಳಿಸಲಾಗುವುದು. |
| 5. | ಶುಲ್ಕ ಪಾವತಿಸಿದ ದಿನಾಂಕದಿಂದ 30 ದಿನಗಳೊಳಗೆ ಕೋರಿದ ಮಾಹಿತಿಯನ್ನು ಒದಗಿಸಲಾಗುತ್ತದೆ. |
| 6. | ಅರ್ಜಿಯಲ್ಲಿ ಕೋರಿದ ಮಾಹಿತಿಯನ್ನು ಒದಗಿಸಲು ಅವಕಾಶವಿದ್ದಲ್ಲಿ 15 ದಿನಗಳೊಳಗೆ ತಿಳಿಸಲಾಗುವುದು. |
| 7. | ನಿಗದಿತ ಕಾಲಾವಧಿಯಲ್ಲಿ ಮಾಹಿತಿ ಅಥವಾ ಸೂಚನೆ ನೀಡದಿದ್ದಲ್ಲಿ ಅಥವಾ ಆದೇಶದಿಂದ ಅರ್ಜಿದಾರರು ಬಾಧಿತರಾದಲ್ಲಿ 30 ದಿನಗಳೊಳಗೆ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಬಹುದು. |
| 8. | ಮಾಹಿತಿ ನೀಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ನಂ.7 ಉಪ ವಿಭಾಗ, ಸೊರಬ ಇವರು ಸಕ್ಷಮ ಪ್ರಾಧಿಕಾರಿಯಾಗಿರುತಾರೆ. |
| 9. | ಮೇಲ್ಮನವಿ ಸಲ್ಲಿಸಲು ಅಧೀಕ್ಷಕ ಇಂಜಿನಿಯರ್, ಲೋ.ಇ. ಶಿವಮೊಗ್ಗ ವೃತ್ತ, ಶಿವಮೊಗ್ಗ ಇವರು ಮೇಲ್ಮನವಿ ಪ್ರಾಧಿಕಾರಿಯಾಗಿರುತ್ತಾರೆ. |
| 10. | ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. |

ದಿನಾಂಕ:01.04.2009.
ಸ್ಥಳ: ಸೊರಬ

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.7 ಲೋ.ಬಂ ಮತ್ತು ಒ.ಜ.ಸಾ.ಇಲಾಖೆ, ಸೊರಬ

ದಿನಾಂಕ:

**ಸುತ್ತೋಲೆ**

2005 ರ ಮಾಹಿತಿ ಹಕ್ಕು ಅಧಿನಿಯಮ (2005ರ ಕೇಂದ್ರ ಕಾಯ್ದೆ 22) ಅಡಿಯಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ) ಬೆಂಗಳೂರು ಕಛೇರಿಯನ್ನು ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿಸಿ ಸದರಿ ಅಧಿನಿಯಮದ ಸೆಕ್ಷನ್ 5(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸೆಕ್ಷನ್ 5(2) ರ ಅಡಿಯಲ್ಲಿ ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ ಮತ್ತು ಸೆಕ್ಷನ್ 19(1) ರ ಅಡಿಯಲ್ಲಿ ಮೇಲ್ಮನವಿ ಪ್ರಾಧಿಕಾರ ಎಂದು ನೇಮಕ ಮಾಡಲಾಗಿದೆ.

| ಕ್ರ. ಸಂ. | ಕಛೇರಿ ವಿಳಾಸ | ಸಾರ್ವಜನಿಕ ಮಾಹಿತಿ ಅಧಿಕಾರಿ ಸೆಕ್ಷನ್ 5(1) | ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ ಸೆಕ್ಷನ್ 5(2) | ಮೇಲ್ಮನವಿ ಪ್ರಾಧಿಕಾರ ಸೆಕ್ಷನ್ 19(1) |
|---|---|---|---|---|
| 1 | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.7ನೇ ಲೋ. ಬಂ. ಮತ್ತು ಒ. ಜ. ಸಾ. ಇಲಾಖೆ, ಉಪ ವಿಭಾಗ ಸೊರಬ. | ಎಸ್.ಡಿ ವಿಶ್ವನಾಥ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.7ನೇ ಲೋ. ಬಂ. ಮತ್ತು ಒ. ಜ. ಸಾ. ಇಲಾಖೆ, ಉಪ ವಿಭಾಗ ಸೊರಬ. | ಅನೀಲ್ ಕುಮಾರ್ ಸಹಾಯಕ ಇಂಜಿನಿಯರ್, ನಂ.7ನೇ ಲೋ. ಬಂ. ಮತ್ತು ಒ. ಜ. ಸಾ. ಇಲಾಖೆ, ಉಪ ವಿಭಾಗ ಸೊರಬ. | ಅಧೀಕ್ಷಕ ಅಭಿಯಂತರರು ಲೋ. ಬಂ. ಮತ್ತು ಒ. ಜ. ಸಾ. ಇಲಾಖೆ, ಶಿವಮೊಗ್ಗ ವೃತ್ತ ಶಿವಮೊಗ್ಗ. |

**ಎಸ್.ಡಿ. ವಿಶ್ವನಾಥ**
ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

**ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ**
**ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ**
**ಮಾಹಿತಿ ಹಕ್ಕು ಕೈಪಿಡಿ – 2005 ಸೆಕ್ಷನ್ 4(1) (ಬಿ) ಅನ್ವಯ**

1. ಸಂಸ್ಥೆ ಬಗ್ಗೆ ವಿವರಗಳು – ಕಾರ್ಯಗಳು ಮತ್ತು ಕರ್ತವ್ಯಗಳು
(ಅ) ಸಂಸ್ಥೆಯ ಹೆಸರು – ಲೋ.ಇ.ನಂ.7 ಉಪ ವಿಭಾಗ, ಸೊರಬ.
(ಆ) ರಚನೆ –

ಸಹಾಯಕ ಕಾರ್ಯಪಾಲಕ ಇಂಜಿನಿಯರ್–1

| ತಾಂತ್ರಿಕ ಶಾಖೆ | ಆಡಳಿತ ಶಾಖೆ | ಪ್ರವಾಸಿ ಮಂದಿರದ ಸಿಬ್ಬಂದಿ ಶಾಖೆ |
|---|---|---|
| ಸಹಾಯಕ ಇಂಜಿನಿಯರ್–2 | ಪ್ರ.ದ.ಸ. –1 | ಮೇಟಿ–1 (ಖಾಲಿ ಇದೆ) |
| ಕಿರಿಯ ಇಂಜಿನಿಯರ್–2 | ದ್ವಿ.ದ.ಸ.–2 | ವಾಟರ್‌ಬಾಯ್–1 (ನಿಯೋಜನೆ ಶಿವಮೊಗ್ಗ ವೃತ್ತ ಶಿವಮೊಗ್ಗ) |
| ವರ್ಕ್ ಇನ್ಸ್‌ಪೆಕ್ಟರ್–1 | ಗ್ರೂಪ್ 'ಡಿ'–2 | ಸ್ವೀಪರ್–1 |

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

**ಕಾರ್ಯಗಳು ಮತ್ತು ಕರ್ತವ್ಯಗಳು**

ಸೊರಬ ತಾಲ್ಲೂಕು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳು, ರಸ್ತೆಗಳು ಹಾಗೂ ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ಆರ್ಥಿಕ ಹಾಗೂ ಸೇವೆಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ ಹಾಗೂ ಸೊರಬ ತಾಲ್ಲೂಕಿಗೆ ಸಂಬಂಧಿಸಿದಂತೆ ಒಳಗೊಂಡಿರುತ್ತದೆ.

2. ಅಧಿಕಾರಿಗಳು ಮತ್ತು ಸಿಬ್ಬಂಧಿಯವರ ಕರ್ತವ್ಯಗಳು:

**(1) ಸಹಾಯಕ ಕಾರ್ಯಪಾಲಕ ಇಂಜಿನಿಯರ್–1:**

ಸೊರಬ ತಾಲ್ಲೂಕು ಲೋ.ಇ. ಉಪವಿಭಾಗದ ವ್ಯಾಪ್ತಿಗೆ ಒಳಗೊಂಡಂತೆ ಸೊರಬ ತಾಲ್ಲೂಕಿಗೆ ಅಧಿಕೃತ ಮುಖ್ಯಸ್ಥರಾಗಿದ್ದು, ಸರ್ಕಾರಿ ನಿಯಮಗಳ ಚೌಕಟ್ಟಿನಲ್ಲಿ ಹಾಗೂ ಕರ್ನಾಟಕ ಸರ್ಕಾರಿ (ವ್ಯವಹಾರ ನಿರ್ವಹಣೆ) ನಿಯಮಾವಳಿಗೆ ಒಳಪಟ್ಟ ಪ್ರಕರಣಗಳ ವಿಲೇವಾರಿ ಮತ್ತು ಎಲ್ಲಾ ವ್ಯವಹಾರದ ಜವಾಬ್ದಾರಿ ಹೊಂದಿರುತ್ತಾರೆ ಹಾಗೂ ಅಧೀನ ಸಿಬ್ಬಂದಿಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಅಧಿಕಾರ ಹೊಂದಿರುತ್ತಾರೆ.

**(2) ಸಹಾಯಕ ಇಂಜಿನಿಯರ್–1:**

ಸೊರಬ ತಾಲ್ಲೂಕಿನ ಉಳವಿ ಮತ್ತು ಕಸಬಾ ಹೋಬಳಿಗಳ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆ ಕಾಮಗಾರಿಗಳು, ರಸ್ತೆ, ಕಟ್ಟಡ, ಸೇತುವೆ ಇತ್ಯಾದಿಗಳ ಉಸ್ತುವಾರಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಗಳನ್ನು ತಯಾರಿಸುವುದು. ಅಂದರೆ ದಾಖಲೆಗಳನ್ನು ಸಿದ್ದಪಡಿಸುವುದು. ನಿಯತಕಾಲಿಕ ವರದಿಗಳನ್ನು ಉಪವಿಭಾಗ ಕಛೇರಿಗೆ ಸಲ್ಲಿಸುವುದು ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವಹಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು. ಗುತ್ತಿಗೆದಾರರ ಬಿಲ್ಲುಗಳನ್ನು ಸಿದ್ದಪಡಿಸುವುದು ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸುವುದು.

**(3) ಸಹಾಯಕ ಇಂಜಿನಿಯರ್–2:**

